ಜನವರಿ 1998 ಹೊಸ ವರ್ಷದ ವಿಶೇಷಾಂಕ ರೂ. 10

# ಬಿಸಿಲ ಬದುಕು

• ವಾಣಿಜ್ಯ • ವಿಕಾಸ • ಮಾಹಿತಿ • ಸಂಪರ್ಕ

ಈ ಸಂಚಿಕೆಯೊಂದಿಗೆ

**ಉಚಿತ !**

- ಅತ್ಯಾಕರ್ಷಕ ಕ್ಯಾಲೆಂಡರ್
- ಲಾಭದಾಯಕ ಕೃಷಿ ಪುಸ್ತಕ
- ಐ.ಎ.ಎಸ್. ಅರ್ಜಿ ಫಾರ್ಮ್



## ಮಹಿಳೆಯರ ಉಡುಪುಗಳು

## IAS

ಸಂಪೂರ್ಣ ವಿವರ

ಜನವರಿ ೧೯೯೮ ಸಂಪುಟ ೧ ಸಂಚಿಕೆ ೭

ಬಿಸಿಲ ಬದುಕು ಮಾಸಪತ್ರಿಕೆ

•ವಾಣಿಜ್ಯ •ವಿಕಾಸ •ಮಾಹಿತಿ •ಸಂಪರ್ಕ

ಸಂಪಾದಕ
ಚಂದ್ರಕಾಂತ ವಡ್ಡು

ಸಂಪಾದಕೀಯ ನೆರವು
ಎಚ್.ಎಂ. ಪಂಡಿತಾರಾಧ್ಯ

ನಿರ್ವಹಣೆ
ಸಿ.ಪಿ. ಸುರೇಶ್

ಪ್ರಸಾರ
ವೈ.ಬಿ. ವಿಜಯಕುಮಾರ

ಜಾಹೀರಾತು
ಬಿ.ಎಸ್. ತಿಪ್ಪೇಸ್ವಾಮಿ
ಎಸ್. ಕಿರಣ್


ಅಕ್ಷರ ಜೋಡಣೆ
ಜಿ. ಸುರೇಶ್
ಆಶಾ ರಮೇಶ್

ಲೇಖಕರು :
ಡಾ. ಆರತಿ ವೆಂಕಟೇಶ್
ಡಾ. ಟಿ.ಕೆ.ತಾಪಸ್
ಮಾಧವ ಐತಾಳ್
ಉಷಾ ನವರತ್ನರಾಮ್
ಡಾ. ಎಸ್.ಸಿ. ಶರ್ಮಾ
ಗೋಪಾಲಕೃಷ್ಣ ವಂಡ್ಸೆ
ಡಾ. ಸುನಂದಾ ಕುಲಕರ್ಣಿ
ಉತ್ತನೂರು ವ್ಯಾನ್ಸ್
ಸೂರ್ಯಕಾಂತ ಗುಣಕಿಮಠ
ದೇವಿದಾಸ ಸುವರ್ಣ
ಕ.ಹೊ. ಮಂಜುನಾಥ
ಕೋ. ಚೆನ್ನಬಸಪ್ಪ
ಎನ್.ಕೆ. ಕುಲಕರ್ಣಿ
ಎಚ್. ದಂಡಪ್ಪ
ಪಿ. ಶ್ರೀಕಾಂತ್
ಚಂದ್ರಕಾಂತ ಪೋಕಳೆ
ಸಿದ್ದರಾಜ್ ಕೆಂಧೂಳಿ

ಮುಖಪುಟ ಚಿತ್ರ
ಎಂ. ವಿಶ್ವನಾಥ್

ಮುಖಪುಟ ವಿನ್ಯಾಸ
ಚಂದ್ರಶೇಖರ ಗುಬ್ಬಿ

ವಿಳಾಸ
ಬಿಸಿಲ ಬದುಕು ಮಾಸ ಪತ್ರಿಕೆ
ಅಂಕುರ ಪ್ರಕಾಶನ, ಅಂಚೆ ಪೆಟ್ಟಿಗೆ : 7951
ಬಸವೇಶ್ವರ ನಗರ, ಬೆಂಗಳೂರು- 560 079



## ಲೇಖನಗಳು



## ಸ್ಥಿರ ಶೀರ್ಷಿಕೆಗಳು



## ವಿದ್ಯೆ ಉದ್ಯೋಗ



Printed, Published and Owned by CHANDRAKANTA VADDU, 473, I Cross, I Block, III Stage, Near Water Tank Bus Stop, Basaveshwaranagar, Bangalore - 560 079. Tel : 080 3358198 Fax : 080 5091136. Printed at M.N.S. Enterprises, Bhattarahalli, Old Madras Road, Bangalore - 49 Editor : Chandrakanta Vaddu

# ಟಪಾಲು

### ಅದ್ಭುತ ಪ್ರಯತ್ನ

ನಿಮ್ಮ ಪತ್ರಿಕೆ ನಿಜಕ್ಕೂ ಅದ್ಭುತವಾದ ಪ್ರಯತ್ನ.

**- ಎಚ್.ಎಂ. ವೀರಸ್ವಾಮಿ,** ಹರಪನಹಳ್ಳಿ

◆

ಈ ತಿಂಗಳ 'ಬದುಕು' ಚೆನ್ನಾಗಿ ಮೂಡಿ ಬಂತು. ಪ್ರತಿಯೊಂದು ಲೇಖನವೂ ಅಚ್ಚುಕಟ್ಟಾಗಿದ್ದು ಮನಮಿಡಿದವು. ಇದು ವಿದ್ಯೆ-ಉದ್ಯೋಗಾರ್ಥಿಗಳಿಗೆ ಬಹು ಅಮೂಲ್ಯವಾದ ಪತ್ರಿಕೆ.

**- ಅಮರೇಗೌಡ,** ಗುಲಬರ್ಗಾ

◆

ಕೆ.ಎ.ಎಸ್., ಐ.ಎ.ಎಸ್. ದಂತಹ ಸ್ಪರ್ಧಾತ್ಮಕ ಪರೀಕ್ಷೆಗಳ ಬಗ್ಗೆ ತಿಳಿಸುವ ಮಹಾನ್ ಪತ್ರಿಕೆಯಾದ 'ಬದುಕು'ನಲ್ಲಿ 'ನಮಗೊಬ್ಬಳೇ ಮಗಳು', 'ಕಿಲಕಿಲ'ದಂತಹ ಕ್ಷುಲ್ಲಕ ವಿಷಯಗಳು ಬೇಡ. ಬದಲಾಗಿ ಪ್ರಬಂಧ, ಮಿನಿಕಥೆ ಅಥವಾ ಧಾರಾವಾಹಿ ಪ್ರಕಟಿಸಿ.

**- ಗಿರೀಶ್ ಜ. ಬಡಿಗೇರ,** ಎಂ.ಕೆ. ಹುಬ್ಬಳ್ಳಿ

◆

ಡಿಸೆಂಬರ್ ಸಂಚಿಕೆಯನ್ನು ಮನೆಗೆ ತೆಗೆದುಕೊಂಡು ಹೋದದ್ದೇ ತಡ, ಎಲ್ಲರೂ ಪತ್ರಿಕೆಗಾಗಿ ಕಿತ್ತಾಡಿ ಬಿಟ್ಟರು. ಈ ಪತ್ರಿಕೆ ನಮ್ಮಲ್ಲಿ ಏನೋ ಸೆಳೆತ ಉಂಟುಮಾಡುತ್ತಿದೆ. ಜನವರಿ ಸಂಚಿಕೆಗಾಗಿ ಕಾತರಿಸಿದ್ದೇವೆ.

**- ಜಿ. ಲೋಕೇಶ,** ಗೊಲ್ಲರಹಳ್ಳಿ

◆

'ಬದುಕು' ಮುಖಪುಟಗಳು ಬಹಳ ಚೆನ್ನಾಗಿ ಬರುತ್ತಿವೆ. ವಿಜ್ಞಾನಕ್ಕೆ ಸ್ವಲ್ಪ ಒತ್ತು ಕೊಡಿ. ಪತ್ರಿಕೆ 'ಆಲ್‌ರೌಂಡರ್' ಆಗುವುದರಲ್ಲಿ ಸಂದೇಹವಿಲ್ಲ.

**- ನರೇಂದ್ರಕುಮಾರ್,** ತಾಳೂರು

### 'ಸುವರ್ಣ' ಸುದ್ದಿ

ನಮ್ಮ ಮೆಚ್ಚಿನ 'ಬದುಕು' ಪತ್ರಿಕೆಯಲ್ಲಿ ಮೂಡಿಬಂದ 'ಮಹಿಳೆಯರಿಗೊಂದು 'ಸುವರ್ಣ' ಸುದ್ದಿ' ಲೇಖನ ಆಸಕ್ತಿಕರವಾಗಿತ್ತು. ಇದು ''ಸುವರ್ಣ ವರ್ಷ'' ಎಂಬುದು ನೂರಕ್ಕೆ ನೂರರಷ್ಟು ಸತ್ಯ.

**- ರೇಖಾಕಿರಣ ಚೆಲ್ಲದ,** ಗದಗ

### ಹಿಂದಿ ಕಲಿಸಿರಿ

ಹಲವಾರು ಪತ್ರಿಕೆಗಳು ಇಂಗ್ಲಿಷ್ ಬಗ್ಗೆ ಮಾಹಿತಿ ಕೊಡುತ್ತಿವೆ. 'ಬದುಕು' ಪತ್ರಿಕೆಯಲ್ಲಿ ''ನೀವೂ ಹಿಂದಿ ಕಲಿಯಿರಿ'' ಅಂಕಣ ಪ್ರಕಟವಾಗಿದ್ದರೆ ಚೆನ್ನಾಗಿತ್ತು. ಸಾಧ್ಯವಾದರೆ ಇಂಗ್ಲಿಷ್ ಜತೆಗೆ ಹಿಂದಿಯನ್ನು ಪ್ರಾರಂಭಿಸಿ.

**- ಅಶ್ವತ್ಥನಾರಾಯಣ ಸ್ವಾಮಿ,** ಗುಟ್ಟೇನಹಳ್ಳಿ

### ತಿದ್ದುಪಡಿ

ಸಂಭಾಷಣಾ ರೂಪದಲ್ಲಿರುವ ''ನೀವೂ ಇಂಗ್ಲಿಷ್ ಕಲಿಯಿರಿ'' ಮನಸ್ಸಿಗೆ ತುಂಬಾ ಮುದ ನೀಡಿತು. ಆದರೆ Subject ಮತ್ತು Predicate ವಿಷಯ ಆಲೋಚಿಸುವಂತೆ ಮಾಡಿತು. Janaki learns English ವಾಕ್ಯದಲ್ಲಿ Janaki ಎಂಬುದು Subject ಎಂದಾದರೆ learns English ಎಂಬುದು Predicate ಎಂದಾಗಬೇಕಲ್ಲವೇ?

**- ಐ.ಬಿ. ಗೊಳಸಂಗಿ,** ಬಸವನಬಾಗೇವಾಡಿ

**[ಹೌದು. ಕಣ್ತಪ್ಪಿನಿಂದ ನುಸುಳಿದ ದೋಷಕ್ಕೆ ವಿಷಾದಿಸುತ್ತೇವೆ. - ಸಂ.]**

'ಬಿಸಿಲ ಬದುಕು' ಮಾಸ ಪತ್ರಿಕೆ ಆಕರ್ಷಕವಾಗಿ ಬರುತ್ತಿದ್ದು ಪ್ರತಿ ತಿಂಗಳು ಅದಕ್ಕಾಗಿ ಕಾಯುವಂತೆ ಮಾಡಿದೆ. ಈ ಪತ್ರಿಕೆಯಲ್ಲಿ ನೀವು ಕನ್ನಡದ ಕವಿಗಳು, ನೊಬೆಲ್ ಪ್ರಶಸ್ತಿ ವಿಜೇತರು, ಭಾರತರತ್ನ ಪ್ರಶಸ್ತಿ ವಿಜೇತರ ಹಾಗೂ ಪ್ರಧಾನ ಮಂತ್ರಿಗಳ ಪರಿಚಯದ ಮಾಲಿಕೆಯನ್ನು ಆರಂಭಿಸಿದರೆ ಇನ್ನೂ ಆಕರ್ಷಕವಾಗಿ ಉಪಯುಕ್ತವಾಗಿ ಬರುತ್ತದೆ ಎಂಬ ಅನಿಸಿಕೆ ನನ್ನದು.

**- ಪುಷ್ಪ ಎಸ್. ಕುಮಾರ್,** ತುಮಕೂರು

### ಹಾನಗಲ್ ಎಲ್ಲಿ?

ಪರಿವಿಡಿಯಲ್ಲಿ 'ಹಾನಗಲ್‌ನಲ್ಲಿ ಹಾಯಬಾರದೇ?' ಶೀರ್ಷಿಕೆ ನೋಡಿ ಆತುರದಿಂದ ಒಳಪುಟ ತೆಗೆದರೆ ೭೦ನೇ ಪುಟದಲ್ಲಿ ಲೇಖನ ಇಲ್ಲವೇ ಇಲ್ಲ! ನಾನು ತಮ್ಮ ಪತ್ರಿಕೆಯನ್ನು ಕಣ್ಣಲ್ಲಿ ಕಣ್ಣು ಇಟ್ಟು ಓದುತ್ತೇನೆ. ದಯವಿಟ್ಟು ಹೀಗೆ ನಿರಾಶೆ ಮಾಡಬೇಡಿ.

**- ಕೆ. ಗಣಪತಿ,** ಸಾಗರ

**[ಕಳೆದ ಸಂಚಿಕೆಯ ಸಿದ್ಧತೆಯ ಅಂತಿಮ ಕ್ಷಣದಲ್ಲಿ ಬಿಟ್ಟುಹೋಗಿದ್ದ ಈ ಲೇಖನ ಮುಂದಿನ ಸಂಚಿಕೆಯಲ್ಲಿ ಪ್ರಕಟವಾಗಲಿದೆ. ಅಚಾತುರ್ಯಕ್ಕೆ ಕ್ಷಮಿಸಿ. -ಸಂ]**

### ಹಾಡು-ಕಥೆ ಕಳಿಸಬಹುದೇ?

ನಾನು ಸ್ವತಂತ್ರವಾಗಿ ಹಾಡು ಬರೆದು ಕಳಿಸಬಹುದೇ? ಅವು ದೇವರ ಬಗ್ಗೆ ಇದ್ದರೆ ನಡಿತ್ತೆತಾ? ನಾನು ಈಗಾಗಲೇ ೧೦ ಹಾಡು ರಚಿಸಿದ್ದೇನೆ. ಈ ಬಗ್ಗೆ ಸ್ವಲ್ಪ ಹೇಳಿ.

**- ಶಿವಲೀಲಾ ಸಜ್ಜನ, ಸೂಡಿ**

**['ಬದುಕು' ಪತ್ರಿಕೆಯಲ್ಲಿ ಹಾಡು-ಕಥೆ ಪ್ರಕಟಿಸುವುದಿಲ್ಲ. ದಯವಿಟ್ಟು ಕಳಿಸಬೇಡಿ. -ಸಂ]**

### ಎಂ.ಪಿ. ಪ್ರಕಾಶ್ ಪ್ರತಿಕ್ರಿಯೆ

ಎಂ.ಪಿ. ಪ್ರಕಾಶರ ಪ್ರತಿಕ್ರಿಯೆ ಓದಿ ''ಇದ್ದದ್ದು ಇದ್ದಂಗೆ ಹೇಳಿದ್ರೆ ಎದ್ದು ಬಂದು ಎದೆಗೆ ಒದ್ದಂತೆ'' ಎಂಬ ಗಾದೆ ನೆನಪಾಯ್ತು. ಒಂದಂತೂ ನಿಜ : ನಿಷ್ಪಕ್ಷಪಾತ ಪತ್ರಿಕೆಗೆ, ಬೆದರಿಕೆಗೆ ಹೆದರದ ಲೇಖನಿಗೆ, ವಿಮರ್ಶಾತ್ಮಕ ಓದುಗನ ಕಣ್ಣಿಗೆ ಮಣ್ಣೆರೆಚಲು ಎಂತಹ ವ್ಯಕ್ತಿಗೂ ಅಸಾಧ್ಯ.

**- ಎ.ಎಸ್. ಉದಯ ಪೂಜಾರಿ,** ಅನಗೋಡು

### ಕೊಟ್ರಪ್ಪನವರ ಬಗ್ಗೆ

ನಾನು ಬಲ್ಲಷ್ಟರ ಮಟ್ಟಿಗೆ ಕೆ. ಕೊಟ್ರಪ್ಪನವರು ಪ್ರಾಮಾಣಿಕರು ಹಾಗೂ ಸ್ಪಷ್ಟವಾದಿಗಳು ಇದ್ದಾರೆ.

**- ಶ್ರೀನಿವಾಸ ಹಾವನೂರ,** ಬೆಂಗಳೂರು

ಪ್ರಕಾಶ್ ಬಗ್ಗೆ ಬರೆದ ಲೇಖನ ಅಡ್ಡಿಯಿಲ್ಲ. ಆದರೆ ಕೊಟ್ರಪ್ಪನವರ ಬಗ್ಗೆ ಬರೆವಾಗ ಅವರ ಮಗಳ ನೌಕರಿ ವಿಷಯಕ್ಕೆ ಅಷ್ಟು ಪ್ರಾಮುಖ್ಯ ಕೊಡಬೇಕಾಗಿರಲಿಲ್ಲ.

**- ಸನತ್ ಕುಮಾರ್ ಬೆಳಗಲಿ,** ಬೆಂಗಳೂರು

### ದೀಪದ ಕೆಳಗೆ ಕತ್ತಲು

ಜಿಂದಲ್ ಕಾರ್ಖಾನೆ ಸ್ಥಳೀಯರನ್ನು ನಿರ್ಲಕ್ಷಿಸಿರುವುದು ಸುಳ್ಳಲ್ಲ. ಒಂದು ಕಾರ್ಯಕ್ರಮದಲ್ಲಿ ಪ್ರಕಾಶ್ ಅವರೇ, ''ಎಲ್ಲರೂ ಕೆಲಸ ಬೇಕು ಅಂತಾರೆ. ಆದರೆ ಒಂದು ದೀಪದ ಬೆಳಕು ದೂರ ಬಿದ್ದಿರುತ್ತದೆ, ದೀಪದ ಕೆಳಗೆ ಮಾತ್ರ ಕತ್ತಲು ಇರುತ್ತದೆ. ಹಾಗೆ ಅಕ್ಕಪಕ್ಕದವರಿಗೆ ಕೆಲಸ ದೊರೆಯುವುದಿಲ್ಲ'' ಎಂದು ಹೇಳಿದ್ದರು. ಇದು ಸ್ಥಳೀಯರನ್ನು ದ್ವೇಷಿಸುವ ಮಾತಲ್ಲವೇ?

**- ಅನ್ನಪೂರ್ಣ ಬಸವರಾಜ್,** ಹಂಪಾಪಟ್ಟಣ

ರಾಜಕಾರಣಿಗಳು ಕ್ಷೇತ್ರದ ಅಭಿವೃದ್ಧಿಯಲ್ಲಿ ಪ್ರಾಮಾಣಿಕವಾಗಿ ಕಾರ್ಯ ನಿರ್ವಹಿಸುವಂತೆ ಪ್ರೇರೇಪಿಸುತ್ತಿರುವ ತಮಗೆ ನಮ್ಮೆಲ್ಲರ ಬೆಂಬಲ ನಿರಂತರ.

**- ನಾ. ಅಬಶಿ, ಶಿರಾಲಿ**

ದಯವಿಟ್ಟು ಹೊಲಸು ರಾಜಕೀಯದ ಬಗ್ಗೆ ಆಗಲಿ, ವ್ಯಕ್ತಿ ಬಗ್ಗೆ ಆಗಲಿ, ಪಕ್ಷದ ಬಗ್ಗೆ ಆಗಲಿ ಬರೆಯಬೇಡಿ. ರಾಡಿಗೆ ಏಕೆ ಕಲ್ಲು ಎಸೆಯಬೇಕು?

**- ಎಸ್.ಬಿ. ಕಿಲ್ಲೇದಾರ, ಕೊಪ್ಪಳ**

### ಪ್ರಕಾಶರ ಸಾಧನೆ

ಸಚಿವ ಪ್ರಕಾಶರು ಈ ಹಿಂದೆ ಯಾವ ಶಾಸಕ/ಸಚಿವರೂ ಮಾಡಲಾರದಷ್ಟು ಅಭಿವೃದ್ಧಿ ಕಾರ್ಯ ಮಾಡಿದ್ದಾ

ರೆಂಬುದನ್ನು ಕ್ಷೇತ್ರದ ಪ್ರತಿಯೊಬ್ಬನೂ ಒಪ್ಪಿಕೊಳ್ಳುತ್ತಾನೆ. ಇವರ ಆಶ್ರಯದಲ್ಲಿ ಸ್ವಜಾತೀಯ ಕೆಲವರು ಬೆಳೆದಿದ್ದಾರೆ ಎಂದಿದ್ದೀರಿ. ಇದಕ್ಕೆ ಸಚಿವರಷ್ಟೇ, ವ್ಯವಸ್ಥೆಯೂ ಹೊಣೆಯಾಗಿದೆ.

**- ಕೆ. ರುದ್ರಪ್ಪ**, ಹೂವಿನಹಡಗಲಿ

**ಚಳ್ಳಕೆರೆಯಲ್ಲಿ 'ಬದುಕು' ಇಲ್ಲ!**

ದಿನಾಂಕ ೨೮ ಆದರೂ ಚಳ್ಳಕೆರೆಗೆ 'ಬದುಕು' ಬಂದಿರಲಿಲ್ಲ. ಆದ್ದರಿಂದ ಬಳ್ಳಾರಿಯಿಂದ ಕೊಂಡು ತಂದೆ.

**- ಪರಮೇಶ್ವರ ಕುದರಿ**, ಚಳ್ಳಕೆರೆ

**[ಕೆ. ಮಂಜುನಾಥ ಸ್ವಾಮಿ ಎಂಬ ನಿಮ್ಮೂರಿನ ಏಜೆಂಟರು ಬಾಕಿ ಹಣ ಕಟ್ಟದೆ ಮೋಸ ಮಾಡಿದ್ದರಿಂದ ಸದ್ಯಕ್ಕೆ ಚಳ್ಳಕೆರೆಗೆ ಪತ್ರಿಕೆಯ ಸರಬರಾಜು ನಿಲ್ಲಿಸಲಾಗಿದೆ.**

**-ಸಂ]**

**ಪದಬಂಧ ಪ್ರಕಟಿಸಿ**

ನಾನೊಬ್ಬ 'ಬದುಕು' ಅಭಿಮಾನಿ ಎಂದು ಹೇಳಿಕೊಳ್ಳಲು ಹೆಮ್ಮೆಯಾಗುತ್ತದೆ. ದಯವಿಟ್ಟು 'ಪದಬಂಧ' ಪ್ರಕಟಿಸಿ.

**- ಎಚ್.ಜಿ. ನಟರಾಜ**, ಕೊಪ್ಪ

ನಿಮ್ಮ ಪತ್ರಿಕೆ ಕೆಲವೇ ಸಂಚಿಕೆಗಳಲ್ಲಿ ಅತಿ ಹೆಚ್ಚು ಓದುಗರನ್ನು ಪಡೆಯಲು ಸಫಲವಾಗಿದೆ.

**- ಸಂತೋಷಕುಮಾರ ಚಿತಾಪುರ**, ತಾಳಿಕೋಟೆ

'ಬದುಕು' ಜನಮನ ಕೆರಳಿಸುವುದಿಲ್ಲ; ಅರಳಿಸುತ್ತದೆ. ಬರಿ ಮನರಂಜನೆಯಲ್ಲಿ ದಾರಿತಪ್ಪಿಸುವುದಿಲ್ಲ; ದಾರಿದೀಪದಂತೆ ನೆರವಾಗುತ್ತದೆ.

**- ಕುಂದೂರ ಮಂಜಪ್ಪ**, ಹೊಳೆಸಿರಿಗೇರಿ

**ಕಾದಂಬರಿ ಪ್ರಕಟಿಸಿ**

ತಮ್ಮ ಮಾಸಪತ್ರಿಕೆ ಎಲ್ಲಾ ಬಗೆಯ ಜನರನ್ನು ರಂಜಿಸಿದೆ. ಇದರ ಜೊತೆಯಲ್ಲಿ ಕಾದಂಬರಿಯನ್ನೂ ಪ್ರಕಟಿಸಿದರೆ ಎಲ್ಲರೂ ಓದುತ್ತಾರೆ. ದಯವಿಟ್ಟು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿ.

ಸಬ್‌ಇನ್ಸ್‌ಪೆಕ್ಟರ್ ಹುದ್ದೆಗೆ ಆಯ್ಕೆಯಾಗಬೇಕಾದರೆ ಏನು ಮಾಡಬೇಕು ? ಅದರ ಬಗ್ಗೆ ತಿಳಿಸಿ. ವಾಣಿಜ್ಯ ಅಧಿಕಾರಿಯಾಗುವುದು ಹೇಗೆ ಎಂಬುದನ್ನು ಚೆನ್ನಾಗಿ ತಿಳಿಸಿದ್ದೀರಿ.

**- ಸುಶೀಲಾ ರಾಜಶೇಖರ್**, ಕೆಂಗೇರಿ ಉಪನಗರ

**ಛಾಯಾಚಿತ್ರ**

ಸಾಗರದ ಹನುಮಂತ ಜೋಯಿಸರ ಛಾಯಾಚಿತ್ರಗಳು ಬಹಳ ಚೆನ್ನಾಗಿ ಮೂಡಿ ಬಂದಿವೆ. ಇಂತಹ ಛಾಯಾಚಿತ್ರಗಳನ್ನು ಒದಗಿಸಿದ ಕಲಾವಿದ ಜಿ.ಎಂ. ಹೆಗಡೆಯವರು ಓದುಗರಿಗೆ ಇನ್ನೂ ಒಳ್ಳೆಯ ಚಿತ್ರಗಳನ್ನು ಒದಗಿಸಲು ಮುಂದಡಿಯಿಡುವರೆಂದು ನನ್ನ ಆಸೆ.

**- ಎಂ. ಕೋದಂಡರಾಮ**, ಬಾದನಹಟ್ಟಿ

**ಅನ್ಯಗ್ರಹಗಳಲ್ಲಿ ಜೀವಿ**

ಮುಖ್ಯ ಲೇಖನ ಬಹಳ ಚೆನ್ನಾಗಿ ಬಂದಿದೆ. ನನಗೆ ಅನ್ಯಗ್ರಹಗಳಲ್ಲಿ ಜೀವಿಗಳಿವೆ ಎಂಬುದರ ಬಗ್ಗೆ ಓದುವುದೆಂದರೆ ಬಹಳ ಇಷ್ಟ. ಆದ್ದರಿಂದ ಇಂತಹ ವಿಷಯಗಳನ್ನು ಆದಷ್ಟು ಹೆಚ್ಚು ಪ್ರಕಟಿಸಿ ಮತ್ತು 99ರ ಪ್ರಳಯದ ಬಗ್ಗೆ ತಮ್ಮ ಅನಿಸಿಕೆಯನ್ನು ಬರೆದು ಕಳಿಸಿ. ನಮ್ಮಲ್ಲಿಂದ (ಭೂಮಿಯಿಂದ) ಎಷ್ಟೋ ಜ್ಯೋತಿವರ್ಷ ದೂರದಲ್ಲಿ ವೇಗಾ ಎಂಬ ಒಂದು ಸೌರಮಂಡಲ ಇದೆ ಎಂದು ಓದಿದ್ದೇನೆ. ಅದರ ಬಗ್ಗೆ ಹೆಚ್ಚು ಪ್ರಕಟಿಸಿ.

**-ರವಿರಾಜ ಮ. ನೇಸರಗಿ**, ಸೂಡಿ

ನಾನು ಕೆ.ಪಿ.ಎಸ್.ಸಿ. ಪರೀಕ್ಷೆ ಸಿದ್ಧತೆಗಾಗಿ ಹಲವಾರು ಪತ್ರಿಕೆ ಹುಡುಕುತ್ತಿದ್ದೆ. ಈ ಸಲ ನನ್ನ ನೆಚ್ಚಿನ 'ಬದುಕು' ಪತ್ರಿಕೆಯಲ್ಲೇ ಸ್ಪರ್ಧಾತ್ಮಕ ಪರೀಕ್ಷೆಯ ಸಿದ್ಧತೆಗೆ 'ಆಹಾರ' ಒದಗಿಸಿದ್ದಕ್ಕೆ ಧನ್ಯವಾದಗಳು.

**- ಎಸ್.ಎಂ. ನಾಗರಾಜ,**
ಶಿರಿಗೇರಿ

◆

ರೈತರು ಮಳೆಗಾಗಿ ಕಾದಂತೆ ಓದುಗರು 'ಬದುಕು' ಮಾಸಪತ್ರಿಕೆಗಾಗಿ ಬುಕ್‌ಸ್ಟಾಲ್‌ಗಳ ಬಳಿ ಕಾಯುತ್ತಾರೆ.

**- ಎಸ್.ಎಸ್. ಸೋಮನಕಟ್ಟಿ,**
ಜಕ್ಕಲಿ

◆

ನನಗೆ ಬದುಕು ಬಹಳ ಇಷ್ಟವಾಗಿದೆ. ಮಕ್ಕಳ ಮುಖಪುಟ ಹೊಂದಿದ ಸಂಚಿಕೆಯಂತೂ ಸೊಗಸಾಗಿದೆ.

**- ಅಮೋಲರಾಣಿ ನ್ಯಾಮಗೌಡ,**
ಬೆಂಗಳೂರು

◆

ನಾನು ಸಾಕಷ್ಟು ಪತ್ರಿಕೆ ಓದಿದ್ದೇನೆ. ನಿಮ್ಮಂತಹ ಪತ್ರಿಕೆ ಓದಿರಲಿಲ್ಲ. ಈಗ ಇದು ''ನಂಬರ್ ಒನ್ ಪತ್ರಿಕೆ''.

**- ಎಸ್.ಬಿ. ಹೂಗಾರ,**
ಕಂದಗನೂರು

◆

ಬುಕ್‌ಸ್ಟಾಲ್‌ನಲ್ಲಿ ತೂಗು ಹಾಕಿದ ಹಲವು ಪತ್ರಿಕೆಗಳಲ್ಲಿ 'ಬದುಕು' ಮುಖಪುಟ ಥಟ್ಟನೆ ಗಮನ ಸೆಳೆಯುತ್ತದೆ. ಜನ ಕುತೂಹಲದಿಂದ ಖರೀದಿಸುತ್ತಾರೆ. ನಂತರ ಖಾಯಂ ಓದುಗರಾಗುತ್ತಾರೆ. ಇದು ಮುಖಪುಟದ ಪವಾಡ!

**- ಕೆ. ಅಶೋಕ ಕುಮಾರ,**
ಕೊಟ್ಟೂರು

## ಹಳ್ಳಿಯ ರೈತರಿಗೆ ಬೇಕಾದುದೇನು?

ಈ ಪತ್ರಿಕೆ ಸದಾ ಕಾಲ ಹೀಗೇ ನಮ್ಮ ಪ್ರೀತಿ ಪತ್ರಿಕೆಯಾಗಿರಲಿ ಎಂಬುದು ನಮ್ಮ ಆಶಯ. ಪತ್ರಿಕೆ ನಮ್ಮ ನೋವುಗಳಿಗೆ ಸ್ಪಂದಿಸುತ್ತಿದೆ. ಗೆಳೆಯನಾಗಿ, ಮಾತಾಪಿತೃವಾಗಿ ಪ್ರೀತಿ ನೀಡುತ್ತಿದೆ. ಇಂಥ ಪತ್ರಿಕೆಗೆ ಏನೂ ಆಗದಂತೆ ನೋಡಿಕೊಳ್ಳಬೇಕಾದ್ದು, ಪ್ರತಿಯಾಗಿ ಪ್ರೀತಿ ತೋರಬೇಕಾದ್ದು ನಮ್ಮ ಕರ್ತವ್ಯ. ನಾವು ಹಾಗೆ ಇರಬಯಸುತ್ತೇವೆ.

ಇನ್ನು ಒಂದು ವಿಷಯ : ಕೃಷಿ ಕುರಿತು ಉಪಯುಕ್ತ ಪುಸ್ತಕವನ್ನೇ ನೀಡುತ್ತಿರುವಿರಿ. ಸ್ವಾಗತ. ಆದರೆ, ಕೃಷಿಗೆ ಮುಖ್ಯವಾಗಿ ಬೇಕಾಗಿರುವುದು ನೀರು. ಅದು ಸಿಗುವುದು ಮಳೆಯಿಂದ. ಮಳೆ ಬೇಕೆಂದರೆ ಕಾಡಿರಬೇಕು, ಸಾಕಷ್ಟು ಗಿಡ, ಮರಗಳಿರಬೇಕು. ಹೀಗಿದ್ದರೆ ಕೃಷಿ ಮಾಡುವ ಉತ್ಸಾಹವಿರುತ್ತದೆ. ಆದರೆ, ಮಳೆಯ ಅಭಾವದಿಂದ ಉತ್ಸಾಹ ಕುಂದುತ್ತದೆ. ಹೀಗಾಗಿ ಬೇಸರಗೊಂಡ ಕೃಷಿಕರು ವಲಸೆ ಹೋಗುತ್ತಿದ್ದಾರೆ. ಕೃಷಿ ಮಾಡಲು ಭಯಪಡುತ್ತಾರೆ. ಬರೀ ಖರ್ಚು, ಕಷ್ಟ, ಫಲವಿಲ್ಲವೆಂದರೆ ಅವರು ತಾನೆ ಏನು ಮಾಡಿಯಾರು? ಮಳೆಯ ಕೊರತೆಗೆ ಗಿಡಗಳ ಅಭಾವ ಕಾರಣ. ಇಲ್ಲಿ ಜಾಸ್ತಿ ಇರುವುದು ಜಾಲಿಮುಳ್ಳಿನ ಗಿಡ. ಅದೂ ಅಲ್ಲದೆ, ಒಲೆಗೆ ಮುಳ್ಳುರಹಿತ ಗಿಡಗಳನ್ನು ಮರಗಳನ್ನು ಕಡಿಯುವುದೂ ಹೆಚ್ಚು.

ಇಲ್ಲಿನ ಜನರು ಎಂಥ ಅಜ್ಞಾನಿಗಳೆಂದರೆ ಮರಗಳಿಂದ ಮಳೆ ಎಂದು ತಿಳಿಯರು. ಎರಡು ಕಡಿಯುವವರು ಒಂದು ನೆಡಲಾರರು. ಮಳೆ ಬರಲೆಂದು ಪೂಜೆ ಅಂತ ಹುಚ್ಚುಚ್ಚಾಗಿ ಮಾಡುವುದರ ಬದಲು ಗಿಡ ನೆಟ್ಟರೊಳಿತೆಂದು ತಿಳಿಯರು. ಕೆಲವು ಅಕ್ಷರಸ್ಥರಾದರೂ ನಿಮ್ಮ ಪತ್ರಿಕೆಯ ಮೂಲಕ ಓದಿ, ತಿಳಿದು, ಬೇರೆಯವರಿಗೆ ತಿಳಿಸುವಂತಾಗಲೆಂಬ ಕಾರಣದಿಂದ ಬರೆದಿರುವೆ. ಅದು ನಿಮ್ಮ ಪತ್ರಿಕೆಯಿಂದ ಮಾತ್ರ ಸಾಧ್ಯವಾಗಬಹುದು.

**- ಸೌಮ್ಯ**, ಹುಣಸೆಹಳ್ಳಿ

# ಮಹಿಳೆಯರು ಯಾವಾಗ ಯಾವ ಉಡುಪು ಧರಿಸಬೇಕು?

ನಿಮ್ಮ ದೇಹಕ್ಕೆ ಎಷ್ಟೇ ಅಲಂಕಾರ ಮಾಡಿಕೊಂಡರೂ ನೀವು ನಿಮ್ಮ ಉಡುಗೆಗಳನ್ನು ನಿರ್ಲಕ್ಷ್ಯ ಮಾಡಿದರೆ ನೀವು ಅನಾಕರ್ಷಕವಾಗಿ ಕಾಣುವುದು ಖಂಡಿತ!

○ ಡಾ. ಆರತಿ ವೆಂಕಟೇಶ್ ಚಿತ್ರಗಳು : ಎಂ. ವಿಶ್ವನಾಥ್

ಅಂದವಾದ ಉಡುಗೆತೊಡುಗೆಗಳು ಸೌಂದರ್ಯಕ್ಕೆ ಕಿರೀಟಪ್ರಾಯವಾಗಿ ಶೋಭಿಸುತ್ತದೆ ಎಂಬ ಮಾತು ನೂರಕ್ಕೆ ನೂರು ಸತ್ಯ. ನಿಮ್ಮ ದೇಹಕ್ಕೆ ಎಷ್ಟೇ ಅಲಂಕಾರ ಮಾಡಿಕೊಂಡರೂ ನೀವು ನಿಮ್ಮ ಉಡುಗೆಗಳನ್ನು ನಿರ್ಲಕ್ಷ್ಯ ಮಾಡಿದರೆ ನೀವು ಅನಾಕರ್ಷಕವಾಗಿ ಕಾಣುವುದು ಖಂಡಿತ!

ನಿಮ್ಮ ಆಕಾರ, ಮೈಮಾಟಕ್ಕೆ ಹೊಂದುವಂತಹ ಉಡುಗೆಗಳನ್ನು ಆರಿಸಿಕೊಳ್ಳುವುದು ಮೊದಲನೆಯ ಕರ್ತವ್ಯ. ನಿಮ್ಮ ಗೆಳತಿ ಅಥವಾ ಸಹೋದ್ಯೋಗಿ ಹೊಸ ಮಾದರಿಯ ಉಡುಪು ಧರಿಸಿರುವರೆಂದು ನೀವೂ ಕಣ್ಣು ಮುಚ್ಚಿ ಅದನ್ನೇ ಕೊಳ್ಳಬೇಡಿ! ನಿಮಗೆ ಆ ಉಡುಪು ಹೊಂದಿಕೆಯಾಗುತ್ತದೆಯೇ ಎಂಬುದು ಬಹು ಮುಖ್ಯವಾಗಿ ಗಮನಿಸಬೇಕಾದ ಅಂಶ. ನಿಮಗೆ ಹೊಂದುವುದಾದರೆ ಧಾರಾಳವಾಗಿ ಕೊಂಡು ಧರಿಸಿ. ಹೊಂದುವುದಿಲ್ಲವೇ? ಚಿಂತೆಯೇ ಬೇಡ! ಇದು ಫ್ಯಾಷನ್ ಯುಗ. ಚಿಕ್ಕ ಮಕ್ಕಳಿಂದ ಹಿಡಿದು ಮುದುಕಿಯರವರೆಗೆ ಅಂಗಡಿಗಳಲ್ಲಿ ಸಾವಿರಾರು ಮಾದರಿಯ ಉಡುಗೆ ತೊಡುಗೆಗಳು ದೊರೆಯುತ್ತವೆ. ಅವುಗಳಲ್ಲಿ ಕಡೇ ಪಕ್ಷ ಎರಡು ಬಗೆಯದಾದರೂ ನಿಮಗೆ ಹೊಂದುವ ಸಾಧ್ಯತೆಯಿರುತ್ತದೆ. ಅಲ್ಲವೇ?

ದುಬಾರಿಯಾದ ಉಡುಪುಗಳೇ ಸೊಗಸು, ಬೆಲೆ ಕಡಿಮೆ ಇದ್ದರೆ ನಿಮ್ಮ ಘನತೆಗೆ ಕುಂದು ಎಂಬ ತಾರತಮ್ಯ ನಿಮ್ಮ ಮನಸ್ಸಿನಿಂದ ದೂರವಾಗಲಿ. ಒಂದು ಬೀರುವಿನ ತುಂಬಾ ನಿಮ್ಮ ನಿಲುವಿಗೆ, ಮೈಬಣ್ಣಕ್ಕೆ ಒಪ್ಪದ ದುಬಾರಿ ಬಟ್ಟೆಗಳಿಗಿಂತ ನಿಮ್ಮ ಮೈಮಾಟಕ್ಕೆ, ವ್ಯಕ್ತಿತ್ವಕ್ಕೆ ಮೆರುಗು ನೀಡುವ ಹತ್ತಾರು ಸಾಧಾರಣವಾದ ಬಟ್ಟೆಗಳು ಸಾವಿರ ಪಾಲು ಲೇಸು ಎಂಬ ತತ್ತ್ವ ನಿಮ್ಮದಾಗಿರಲಿ. ರೆಡಿಮೇಡ್ ಬಟ್ಟೆಗಳಿಗಿಂತ ನಿಮ್ಮ ನಿಲುವಿಗೆ ತಕ್ಕಂತಹ ಬಟ್ಟೆಗಳನ್ನು ಹೊಲಿಸಿಕೊಳ್ಳುವುದು ಉತ್ತಮ. ಒಂದು ಪಕ್ಷ ನೀವು ದುಬಾರಿ ದರ್ಜಿಯ ಖರ್ಚನ್ನು ಭರಿಸಲಾರಿರಿ ಎಂದರೆ ಅದಕ್ಕೂ ಪರಿಹಾರವಿದೆ!



ನಿಮ್ಮ ಮನೆಯ ಹತ್ತಿರದಲ್ಲೇ ನಡೆಸುವ 'ಟೈಲರಿಂಗ್ ಕ್ಲಾಸ್'ಗೆ ಸೇರಬಹುದಲ್ಲವೇ? ದರ್ಜಿಗೆ ನೂರಾರು ರೂಪಾಯಿ ಸುರಿಯುವುದಕ್ಕಿಂತ ಅದೇ ಹಣದಲ್ಲಿ ಅಥವಾ ಅದಕ್ಕಿಂತ ಕಡಿಮೆ ಖರ್ಚಿನಲ್ಲಿ ನಿಮಗೆ ಒಪ್ಪುವಂತಹ ಬಣ್ಣ, ವಿನ್ಯಾಸದ ಪೋಷಾಕುಗಳನ್ನು ನೀವೇ ಮನೆಯಲ್ಲಿ ಹೊಲಿದುಕೊಳ್ಳಿ!

ನಮ್ಮ ಭಾರತೀಯ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಉಡುಪಾದ ಸೀರೆ ಪ್ರತಿಯೊಬ್ಬ ಮಹಿಳೆಗೂ ಒಪ್ಪುವ ಉಡುಪು. ಸೀರೆಯಲ್ಲದೇ ಬೇರೆ ಉಡುಪುಗಳನ್ನು ಧರಿಸುವ ಆಸೆಯಿದ್ದರೆ ಮೊದಲಿಗೆ ನಿಮ್ಮ ಶರೀರ ಮಾಟವಾಗಿ ತೆಳ್ಳಗಿರಬೇಕು. ಹಾಗಿಲ್ಲದ ಪಕ್ಷದಲ್ಲಿ ನೀವು ಆ ಆಸೆಯನ್ನೇ ಬಿಟ್ಟುಬಿಡಿ. ಉತ್ತಮ ಉಡುಪುಗಳ ಅಭಿರುಚಿಯಿರುವ ಹೆಣ್ಣು ಎಂದೂ ಫ್ಯಾಷನ್ನಿನ ಗುಲಾಮಳಾಗಿರುವುದಿಲ್ಲ.

### ಕಾಯಕ್ಕೆ ತಕ್ಕಂತೆ

ನೀವು ಕುಳ್ಳಗಿದ್ದರೆ ಸೀರೆಯೇ ನಿಮಗೆ ಸೂಕ್ತ ಉಡುಪು. ಅಗಲವಾದ ಅಂಚು, ಸೆರಗು ಹಾಗೂ ಅಡ್ಡಡ್ಡ ಗೆರೆಗಳಿರುವ ಸೀರೆಯನ್ನು ನೀವು ಉಡಲೇಬೇಡಿ. ಬದಲಾಗಿ ಉದ್ದುದ್ದ ಗೀರುಗಳುಳ್ಳ ತಿಳಿಯಾದ ಬಣ್ಣದ ಸೀರೆ ನಿಮ್ಮ ಎತ್ತರ ಹೆಚ್ಚಿಸುವಂತೆ ತೋರುತ್ತದೆ. ರವಿಕೆ ಮತ್ತು ಸೀರೆ ಒಂದೇ ಬಣ್ಣದ್ದಾಗಿರಬೇಕು. ಆಗ ನೋಡುಗರ ದೃಷ್ಟಿಯಲ್ಲಿ ನಿಮ್ಮ ನಿಲುವು ಇನ್ನೂ ನೀಳವಾಗಿ ಕಾಣುತ್ತದೆ. ನೀವು ಕುಳ್ಳಗಿರುವುದರ ಜೊತೆ ಸ್ಥೂಲವಾಗಿಯೂ ಇದ್ದರೆ ದಟ್ಟ ಬಣ್ಣಗಳನ್ನು, ದೊಡ್ಡ ದೊಡ್ಡ ಛಾಪುಗಳು ಇರುವ ಸೀರೆಗಳನ್ನು ಬಳಸಬೇಡಿ. ಸಣ್ಣ ಅಂಚು, ಸೆರಗಿರುವ ಸೀರೆಗಳೇ ನಿಮಗೆ ಉತ್ತಮ.

ನೀವು ಉದ್ದವಾಗಿ ನೀಳವಾಗಿದ್ದರೆ ಸೀರೆಯಲ್ಲದೇ ಬೇರೆ ಉಡುಗೆ ತೊಡುಗೆಗಳೂ ನಿಮಗೆ ಒಪ್ಪುತ್ತದೆ. ನೀವು ಅಗಲವಾದ ಅಂಚು ಸೆರಗಿರುವ ಸೀರೆಗಳನ್ನು ಧಾರಾಳವಾಗಿ ಉಡಿ. ನಿಮ್ಮ ಕುತ್ತಿಗೆ ನೀಳವಾಗಿದ್ದರೆ ಸಲ್ವಾರ್ ಕಮೀಝ್ ಧರಿಸಿದಾಗ ತೆಳುವಾದ ದುಪ್ಪಟ್ಟಾವನ್ನು ಕುತ್ತಿಗೆಯ ಸುತ್ತಲೂ ಸುತ್ತಿಕೊಂಡರೆ ಕೊರಳು ತುಂಬಾ ಅಂದವಾಗಿ ಕಾಣುತ್ತದೆ.

### ಒಡವೆ ಹೇರಿಕೊಳ್ಳಬೇಡಿ

ಉಡುಪುಗಳ ಜೊತೆ ನೀವು ಧರಿಸುವ ಒಡವೆ, ಚಪ್ಪಲಿ, ಪರ್ಸ್‌ಗಳೂ ಮುಖ್ಯ. ಇದಕ್ಕೆ accessories ಎನ್ನಲಾಗಿದೆ. ಎತ್ತರ ಕಡಿಮೆಯಿರುವ ಹೆಂಗಸರು ಹೆಚ್ಚಾಗಿ ಒಡವೆಗಳನ್ನು ಹೇರಿಕೊಳ್ಳಬೇಡಿ. ನಿಮಗೆ ಒಡವೆಗಳ ಬಗ್ಗೆ ಮೋಹವಿದ್ದರೆ ತೆಳುವಾದ ಚೈನು, ಕೈಗೆ ಎರಡು ಅಥವಾ ನಾಲ್ಕು ಬಳೆಗಳು, ಕಿವಿಗಳಿಗೆ ಪುಟ್ಟ ವಾಲೆ, ಸ್ಟಡ್, ಲೋಲಕ್ಕು ಧರಿಸಿದರೆ ನಿಮಗೆ ಸುಂದರವಾಗಿ ಕಾಣುತ್ತದೆ. ನೀವು ಕಣ್ಣಿಗೆ ರಾಚುವಂತೆ ಮೇಕಪ್ ಮಾಡಿಕೊಳ್ಳದಿರುವುದು ಒಳ್ಳೆಯದು. ತಲೆಗೂದಲನ್ನು ಸರಳವಾದ ವಿನ್ಯಾಸದಲ್ಲಿ ಅಳವಡಿಸಿಕೊಳ್ಳಿ, ಅದರಿಂದ ನಿಮ್ಮ ವ್ಯಕ್ತಿತ್ವಕ್ಕೆ ಶೋಭೆ ನೀಡುವುದಲ್ಲದೇ ನಿಮ್ಮ ಎತ್ತರಕ್ಕೂ ಸಹಾಯವಾಗುತ್ತದೆ. ನಿಮಗೆ ಅಭ್ಯಾಸವಿದ್ದರೆ ಎತ್ತರ ಹಿಮ್ಮಡಿ ಹೊಂದಿರುವ ಚಪ್ಪಲಿಯನ್ನು ಬಳಸಬಹುದು.

ಕುಳ್ಳಗಿರುವ ಮಹಿಳೆಯರಿಗೊಂದು ಸಮಸ್ಯೆಯಾದರೆ, ಎತ್ತರವಾಗಿ, ನೀಳವಾಗಿರುವವರ ಕೊರತೆಯೂ ಹಲವು. ಎಲ್ಲರೂ ತಮ್ಮನ್ನು ಕೊರಳೆತ್ತಿ ನೋಡುವುದು ಅವರಿಗೆ ಕೊಂಚ ಅಸಹನೀಯವಾದ ಸಂಗತಿ ಎನಿಸಬಹುದು. ನಿಮ್ಮ ಎತ್ತರ ತುಸು ತಗ್ಗಿಸಲು ಕೆಲವು ಉಪಾಯಗಳಿವೆ. ನೀವು ಅಗಲ ವಿನ್ಯಾಸದ ದೊಡ್ಡ ಮಾದರಿಯ ಒಡವೆಗಳನ್ನು ಧರಿಸಿ ನೋಡಿ. ದಟ್ಟ ವರ್ಣಗಳ ದೊಡ್ಡ ಪರ್ಸ್‌ಗಳನ್ನು ಉಪಯೋಗಿಸಿ. ಅಗಲವಾದ ವಾಚುಗಳನ್ನು ಹಾಕಿಕೊಳ್ಳಿ, ಮುಖಕ್ಕೆ ಎತ್ತಿ ಕಾಣುವಂತೆ ಅಗಲವಾದ ಬಿಂದಿಯನ್ನು ಧರಿಸಿದರೆ ನಿಮ್ಮ ಎತ್ತರ ಅಷ್ಟಾಗಿ ಕಾಣಿಸದು. ನಿಮ್ಮ ಅಲಂಕಾರವೇ ಇತರರ ಗಮನವನ್ನು ಸೆಳೆಯುವ ಸಾಧ್ಯತೆ ಹೆಚ್ಚಾಗಿರುತ್ತದೆ.

ನೀವು ಯಾವ ವಯಸ್ಸಿನವರೇ ಆಗಿರಲಿ, ಯಾವುದೇ ಕಾರ್ಯಕ್ರಮ, ಸಮಾರಂಭಗಳಲ್ಲಿ ಪಾಲ್ಗೊಂಡರೂ ಒಂದು ಆಭರಣ ಧರಿಸುವುದನ್ನು ಮಾತ್ರ ಮರೆಯಬೇಡಿ. ಆ ಆಭರಣ ಬೇರೇನೂ ಅಲ್ಲ; ಅದು ನಿಮ್ಮ ಮುಗುಳುನಗೆ!




### ಉಡುಪುಗಳ ವರ್ಣ

ನಿಮ್ಮ ಉಡುಪುಗಳ ವರ್ಣವನ್ನು ಆರಿಸುವುದೂ ಮುಖ್ಯ. ಬೆಳಗಿನ ಹೊತ್ತಿನಲ್ಲಿ



ನಿಮ್ಮ ಪತಿ ಸಂಜೆ ದಣಿದು ಮನೆಗೆ ಬಂದಾಗ ನೀವು ಶಿಸ್ತಾಗಿ ಅಲಂಕರಿಸಿಕೊಂಡು ಅವರನ್ನು ಎದುರುಗೊಂಡು ಅವರ ಮನಸ್ಸನ್ನು ಅರಳಿಸಬಾರದೇಕೆ?

ತಿಳಿಯಾದ ಬಣ್ಣವನ್ನು ಉಪಯೋಗಿಸಬೇಕು. ಸಂಜೆ ಅಥವಾ ರಾತ್ರಿಯ ಸಮಯದಲ್ಲಿ ದಟ್ಟ ಬಣ್ಣಗಳನ್ನು ಬಳಸಿದರೆ ಚೆನ್ನಾಗಿರುತ್ತದೆ. ಆದರೆ ಯಾವ ಸಂದರ್ಭದಲ್ಲೂ ಅತಿರೇಕದ ಅಲಂಕಾರ ಮಾಡಿಕೊಳ್ಳಬೇಡಿ! ಸಂದರ್ಭಕ್ಕೆ ತಕ್ಕಂತೆ ಅಲಂಕರಿಸಿಕೊಳ್ಳುವುದೂ ಒಂದು ಕಲೆ. ಅದು ನಿಮಗೆ ಕರತಲಾಮಲಕವಾಗಿರಲಿ. ಯಾರೊಬ್ಬರೂ ನಿಮ್ಮ ಉಡುಗೆ, ತೊಡುಗೆಗಳತ್ತ ಬೆರಳು ಮಾಡಿ ತೋರಿಸದಂತೆ ಎಚ್ಚರ ವಹಿಸುವುದು ನಿಮ್ಮ ಜವಾಬ್ದಾರಿ.

ಹೆಂಗಸರು ಸಾಮಾನ್ಯವಾಗಿ ಹೊರಗೆ ಹೋಗುವ ವೇಳೆಯಲ್ಲಿ ಮಾತ್ರ ತಲೆಯಿಂದ ಕಾಲಿನವರೆಗೂ ಅಲಂಕರಿಸಿಕೊಳ್ಳುವ ಅಭ್ಯಾಸ ಇಟ್ಟುಕೊಂಡಿರುತ್ತಾರೆ. ಮನೆಯಲ್ಲಿರುವ ಸಮಯದಲ್ಲಿ ತಮ್ಮ ಉಡುಪಿನ ಬಗ್ಗೆಯಾಗಲಿ, ಅಲಂಕಾರದ ವಿಷಯದಲ್ಲಾಗಲೀ ಕಿಂಚಿತ್ ಗಮನ ಕೊಡುವುದಿಲ್ಲ. ಈ ತಾರತಮ್ಯ ಖಂಡಿತ ಬೇಡ! ನಿಮ್ಮ ಪತಿ ಸಂಜೆ ದಣಿದು ಮನೆಗೆ ಬಂದಾಗ ನೀವು ಶಿಸ್ತಾಗಿ ಅಲಂಕರಿಸಿಕೊಂಡು ಅವರನ್ನು ಎದುರುಗೊಂಡು ಅವರ ಮನಸ್ಸನ್ನು ಅರಳಿಸಬಾರದೇಕೆ? ಮನೆಯಲ್ಲಿರುವಾಗ ನಿಮ್ಮ ಉಡುಗೆಗಳು ಸರಳವಾಗಿದ್ದರೂ ಶುಚಿಯಾಗಿರಲಿ. ಮನೆಯಲ್ಲಿ ತಮ್ಮನ್ನು ಯಾರೂ ಗಮನಿಸುವವರಿಲ್ಲವೆಂದು ಹಳೆಯ ಮುದುರಾದ ಬಟ್ಟೆಗಳನ್ನು ಮಾತ್ರ ತೊಟ್ಟುಕೊಳ್ಳಬೇಡಿ! ತಲೆಗೂದಲನ್ನು ದಿನಕ್ಕೆರಡು ಬಾರಿ ಬಾಚಿ ಸರಳ ವಿನ್ಯಾಸದಲ್ಲಿ ಹೆರಳು ಹಾಕಿಕೊಳ್ಳಿ. ಮುಖದ ಅಲಂಕಾರ ಮಿತಿಯಾಗಿರಲಿ.

## ಸದಾ ನೈಟಿ ಬೇಡ !

ಇತ್ತೀಚಿನ ಮಾರುಕಟ್ಟೆಗಳಲ್ಲಿ ಸುಲಭವಾಗಿ ಲಭ್ಯವಾಗುವ ನೈಟಿ, ಹೌಸ್‌ಕೋಟ್‌ಗಳನ್ನು ಸಾಮಾನ್ಯವಾಗಿ ಮಹಿಳೆಯರು ಸದಾಕಾಲ ಮನೆಯಲ್ಲಿ ತೊಡುವ ಅಭ್ಯಾಸ ಮಾಡಿಕೊಂಡಿರುವುದನ್ನು ನಾವು ಗಮನಿಸಬಹುದು. ಮನೆಯಲ್ಲಿ ಥಟ್ಟನೆ ಯಾರಾದರೂ ಅತಿಥಿಗಳಾಗಲಿ, ಹಿರಿಯರಾಗಲಿ ಆಗಮಿಸಿದಾಗ ಈ ಪೋಷಾಕು ಗೃಹಿಣಿಗೆ ಸಂಕೋಚ ತರಿಸುವ ವಿಷಯವಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಗೃಹಿಣಿಯರು ನೈಟಿ ಧರಿಸಿ ಅಂಗಡಿಗೆ, ಸಣ್ಣ ಪುಟ್ಟ ಕೆಲಸಗಳಿಗೆ ಹೋಗುವ ಸಂಭವವೂ ಉಂಟು. ಆಗ ನಿಮ್ಮ ಪರಿಚಿತರು ಮಾತಿಗೆ ಸಿಕ್ಕರೆ ನಾಚಿಕೆಯಿಂದ ತಲೆತಗ್ಗಿಸುವಂತಾಗುವುದಿಲ್ಲವೇ? ರಾತ್ರಿ ಮಲಗಲು ಅನುಕೂಲವಾಗಲೆಂದು ಉಪಯೋಗಿಸುವ ನೈಟಿ ಈಗ ದಿನ ಬಳಕೆಯ ಉಡುಪಾಗಿದೆ. ಇದು ಗೃಹಿಣಿಗೆ ಬೇಜವಾಬ್ದಾರಿ, ಆಲಸಿಕೆಯ ಕಳೆ ನೀಡುತ್ತದೆ. ಪ್ರತಿದಿನ ಸಡಿಲವಾದ ನೈಟಿ ಧರಿಸುವುದರಿಂದ ಎಷ್ಟೋ ಮಹಿಳೆಯರಿಗೆ ತಮ್ಮ ದೇಹದ ತೂಕದತ್ತ ಗಮನವಿರುವುದಿಲ್ಲ.

ನೀವು ದಿನನಿತ್ಯ ಮನೆಯಲ್ಲಿರುವ ಗೃಹಿಣಿಯಾದರೆ ಬೆಳಿಗ್ಗೆಯಿಂದ ಸಂಜೆಯವರೆಗೂ ಸೀರೆಯುಟ್ಟರೆ ಸೊಗಸು. ಸೀರೆ ನಿಮಗೆ ಕೆಲಸ ಮಾಡಲು ಅಡಚಣೆ ಎನಿಸಿದರೆ ಚೂಡಿದಾರ್ ಅಥವಾ ಸಲ್ವಾರ್ ಕಮೀಝ್ ಹಾಕಿಕೊಳ್ಳಬಹುದು. ಯಾರಾದರೂ ಮನೆಗೆ ಬಂದಾಗ ದುಪ್ಪಟ್ಟಾ ಹೊದ್ದುಕೊಳ್ಳುವುದನ್ನು ಮಾತ್ರ ಮರೆಯದಿರಿ! ಇದು ಹೆಣ್ಣಿನ ಸುಸಂಸ್ಕೃತತೆ ಹಾಗೂ ಸಭ್ಯತೆಯನ್ನು ತೋರಿಸುತ್ತದೆ.

## ದುಡಿಯುವ ಮಹಿಳೆಯರು

ಇಪ್ಪತ್ತನೆಯ ಶತಮಾನದ ಈ ಆಧುನಿಕ ಯುಗದಲ್ಲಿ ಮಹಿಳೆ ಪುರುಷನ ಸಮವಾಗಿ ಹೊರಗಡೆ ದುಡಿಯುತ್ತಿದ್ದಾಳೆ. ದುಡಿಯುವ ಮಹಿಳೆಯರು ಬಸ್, ಇತರ ವಾಹನಗಳಲ್ಲಿ ಓಡಾಡುವಾಗ ಸೀರೆ ಅಥವಾ ಚೂಡಿದಾರ್ ಧರಿಸಿದರೆ ಸೊಗಸು. ಸಾರ್ವಜನಿಕ ವಾಹನಗಳಲ್ಲಿ ಪ್ರಯಾಣ ಮಾಡುವಾಗ ಇಳಿಕತ್ತಿನ ಅಥವಾ ಪಾರದರ್ಶಕ ಉಡುಪುಗಳನ್ನು ಮಾತ್ರ ಧರಿಸಬೇಡಿ!

ದುಡಿಯುವ ಮಹಿಳೆಯಾಗಲಿ, ಮನೆಯಲ್ಲೇ ಇರುವ ಹೆಣ್ಣಾಗಲಿ ತಮ್ಮ ಉಡುಪು, ಅಲಂಕಾರ, ಸ್ವಚ್ಛತೆಯ ಬಗ್ಗೆ ಸದಾ ಗಮನ ಹರಿಸಬೇಕು. ನಿಮ್ಮ ಡ್ರೆಸ್ ಯಾವಾಗಲೂ ಶುಭ್ರವಾಗಿ ನಯವಾದ ಸುವಾಸನೆಯುಳ್ಳದ್ದಾಗಿರಬೇಕು. ಮನೆಗೆಲಸ ಮಾಡುವಾಗ ಸೀರೆ ಕೊಳೆಯಾಗದಂತೆ 'ಏಪ್ರನ್' ಧರಿಸಬಹುದು. ಕೆಲಸದಿಂದ ಮನೆಗೆ ಹಿಂದಿರುಗಿದ ಕೂಡಲೇ ತಣ್ಣನೆ ನೀರಿನಲ್ಲಿ ಮುಖ ಕೈಕಾಲು ತೊಳೆದು



## ಡಾ. ಆರತಿ ವೆಂಕಟೇಶ್

'ಬದುಕು' ಮಾಸ ಪತ್ರಿಕೆಯಲ್ಲಿ ನಿಯಮಿತವಾಗಿ ಉಪಯುಕ್ತ ಲೇಖನ ಬರೆಯುತ್ತಿರುವ ಡಾ. ಆರತಿ ವೆಂಕಟೇಶ್ ಅವರು ವೃತ್ತಿಯಿಂದ ಆಯುರ್ವೇದ ವೈದ್ಯರು. ಕಳೆದ ಹನ್ನೊಂದು ವರ್ಷಗಳಿಂದ ಕಥೆ-ಕಾದಂಬರಿ ಬರೆಯುತ್ತಿದ್ದಾರೆ. ವೈದ್ಯಕೀಯ ಲೇಖನಗಳಲ್ಲೂ ಕೈ ಆಡಿಸಿದ್ದಾರೆ. ಕರ್ನಾಟಕ ಶಾಸ್ತ್ರೀಯ ಸಂಗೀತ, ಭರತನಾಟ್ಯದಲ್ಲಿ ಪರಿಣತಿ ಪಡೆದಿದ್ದಾರೆ. ಈ ಪ್ರತಿಭಾವಂತ ವೈದ್ಯೆ ಸೌಂದರ್ಯ ತಜ್ಞೆಯೂ ಹೌದು.

'ಬದುಕು' ಬಳಗದ ಜನಪ್ರಿಯ ಲೇಖಕಿ ಉಷಾ ನವರತ್ನರಾಮ್ ಅವರ ಮಗಳಾದ ಡಾ. ಆರತಿ ಬೆಂಗಳೂರಿನಲ್ಲಿ ಸ್ವಂತ ಕ್ಲಿನಿಕ್ ನಡೆಸುತ್ತಿದ್ದಾರೆ. ಬಾಳ ಸಂಗಾತಿ ವೆಂಕಟೇಶ್ ಅವರೂ ಪ್ರಸಿದ್ಧ ವೈದ್ಯರು. ಈ ದಂಪತಿಗೆ ಇಬ್ಬರು ಹೆಣ್ಣು ಮಕ್ಕಳು; ಲಾಸ್ಯ (೮ ವರ್ಷ), ನವ್ಯ (೪ ವರ್ಷ).

ಡಾ. ಆರತಿ ವೆಂಕಟೇಶ್
೩೪೫, ೩೬ನೇ 'ಎ' ಕ್ರಾಸ್, ೯ನೇ ಮೇನ್, ೫ನೇ ಬ್ಲಾಕ್,
ಜಯನಗರ, ಬೆಂಗಳೂರು - ೫೬೦ ೦೪೧

ಬಟ್ಟೆ ಬದಲಾಯಿಸಿ ಹಗುರವಾದ, ತಿಳಿ ಬಣ್ಣದ ಬಟ್ಟೆ ತೊಟ್ಟರೆ ಮನಸ್ಸು ಆಹ್ಲಾದಕರವಾಗಿರುತ್ತದೆ. ನಿಮ್ಮ ಎಲ್ಲಾ ಅಲಂಕಾರವನ್ನು ಮೀರಿಸುವಂತೆ ಯಾವ ಸಂದರ್ಭದಲ್ಲೂ ನಿಮ್ಮ ತುಟಿಗಳಲ್ಲಿ ಮುಗುಳು ನಗೆ ಇರಲಿ!

ಮಹಿಳೆಯರು ಆಯಾ ವಯಸ್ಸಿಗೆ ತಕ್ಕಂತೆ ಪೋಷಾಕು ಧರಿಸುವುದು ಅತ್ಯಗತ್ಯ.

### ಮಕ್ಕಳ ಅಲಂಕಾರ

ನಿಮಗೆ ಹೆಣ್ಣು ಮಗಳು ಹುಟ್ಟಿರುವಳೇ? ಹಾಗಾದರೆ ನಿಮ್ಮ ಪುಟ್ಟ ಮಗಳಿಗೆ ಬಗೆಬಗೆಯ ಉಡುಪುಗಳನ್ನು ಹಾಕಿ ಸಂತೋಷಪಡುವ ಅವಕಾಶ ನಿಮಗಿದೆ! ಮಗುವಿಗೆ ಹತ್ತು ವರುಷ ತುಂಬುವವರೆಗೂ ನೀವು ಮಗಳಿಗೆ ದಿನಕ್ಕೊಂದು ಬಗೆಯ ಅಲಂಕಾರ ಮಾಡಿ ಆನಂದಿಸಿ. ಐದು ವರ್ಷದವರೆಗೂ ಮಕ್ಕಳಿಗೆ ಪುಟ್ಟ ಪುಟ್ಟ ಡಿಸೈನುಗಳ ತಿಳಿಬಣ್ಣದ ಉಡುಪುಗಳು ಬಹಳ ಚೆನ್ನಾಗಿ ಕಾಣುತ್ತದೆ. ಆದಷ್ಟು ನವಿರಾದ ಹತ್ತಿಯ ಬಟ್ಟೆಗಳನ್ನೇ ಉಡುಪುಗಳನ್ನು ಹೊಲೆಯಲು ಬಳಸಿ. ಫ್ರಾಕುಗಳನ್ನು ರೆಡಿಮೇಡ್ ಅಂಗಡಿಗಳಲ್ಲಿ ಕೊಳ್ಳುವುದಕ್ಕಿಂತ ಬಟ್ಟೆ ಕೊಂಡು ಸೂಕ್ತ ಅಳತೆಯಲ್ಲಿ ಹೊಲಿಸುವುದು ಉತ್ತಮ. ನಿಮಗೆ ಮತ್ತೊಂದು ಎಚ್ಚರಿಕೆ-ಉಡುಪುಗಳನ್ನು ಹೊಲೆಸುವಾಗ ಹೆಚ್ಚಿನ ಗುಂಡಿಗಳು, ಫ್ರಿಲ್‌ಗಳು, ಲೇಸುಗಳು ಇರದಿರಲಿ. ಮಕ್ಕಳಿಗೆ ಸುಲಭವಾಗಿ ಓಡನಾಡಲು, ಆಟವಾಡಲು ಇವೆಲ್ಲಾ ಅಡ್ಡಿಯಾಗುತ್ತದೆ. ಅಲ್ಲದೇ ಕೆಲವು ಮಕ್ಕಳಿಗೆ ಗುಂಡಿಗಳನ್ನು ಕಚ್ಚುವ ಅಭ್ಯಾಸ ಇರುವುದರಿಂದ ಆಕಸ್ಮಿಕವಾಗಿ ಅದು ಗಂಟಲಿಗೆ ಸಿಕ್ಕಿಕೊಂಡು ಜೀವಕ್ಕೇ ಅಪಾಯವಾಗಬಹುದು! ಬಗೆಬಗೆಯ ಫ್ರಿಲ್, ಬಣ್ಣ ಬಣ್ಣದ ಗುಂಡಿ ಹೊಂದಿರುವ ಉಡುಪುಗಳಲ್ಲಿ ಮಕ್ಕಳೇನೋ ತುಂಬಾ ಮುದ್ದಾಗೇ ಕಾಣುತ್ತಾರೆ, ನಿಜ. ಆದರೆ ನಮ್ಮ ಖುಷಿಗಾಗಿ ಮಕ್ಕಳ ಜೀವಕ್ಕೆ ಹಾನಿಯಾಗಬಾರದಲ್ಲವೇ? ನಿಮ್ಮ ಮಗಳ ಕೂದಲು ಉದ್ದವಾಗಿದ್ದರೆ ಆಯಾ ಉಡುಪಿಗೆ ಹೊಂದುವ ಬಣ್ಣದ ಹೇರ್‌ಕ್ಲಿಪ್, ರಿಬ್ಬನ್‌ಗಳನ್ನು ಹಾಕಿದರೆ ಚೆನ್ನಾಗಿರುತ್ತದೆ. ಆದರೆ ತಲೆಗೂದಲನ್ನು ಬಿಗಿಯಾಗಿ ಕಟ್ಟಬೇಡಿ. ಇದರಿಂದ ಕೂದಲು ಒಡೆದು ಅದರ ಬೆಳವಣಿಗೆ



ದುಬಾರಿಯಾದ ಉಡುಪುಗಳೇ ಸೊಗಸು, ಬೆಲೆ ಕಡಿಮೆ ಇದ್ದರೆ ನಿಮ್ಮ ಘನತೆಗೆ ಕುಂದು ಎಂಬ ತಾರತಮ್ಯ ನಿಮ್ಮ ಮನಸ್ಸಿನಿಂದ ದೂರವಾಗಲಿ.

# ಕಾಲೇಜು ಹುಡುಗಿಯರಿಗೆ ಒಪ್ಪುವ ಪೋಷಾಕು

ಹೆಣ್ಣು ಮಕ್ಕಳು ಬಾಲ್ಯಾವಸ್ಥೆ ಕಳೆದು ಯೌವನಕ್ಕೆ ಕಾಲಿಡುವ ಅವಧಿ ಬಹಳ ಅಪೂರ್ವ, ಅಮೂಲ್ಯವಾದುದು! ರಂಗುರಂಗಿನ ಉಡುಪು ತೊಟ್ಟ ಕಾಲೇಜಿನ ಕಿಶೋರಿಯರನ್ನು ನೋಡಲು ನಮಗೆ ಎರಡು ಕಣ್ಣುಗಳು ಸಾಲದು. ಈ ವಯಸ್ಸಿನಲ್ಲಿ ಹೆಣ್ಣು ಮಕ್ಕಳು ಯಾವ ಬಗೆಯ ಪೋಷಾಕು ಧರಿಸಿದರೂ ನೋಡಲು ಸೊಗಸು. ಸೀರೆಯಿಂದ ಹಿಡಿದು ಜೀನ್ಸ್‌ವರೆಗೂ ಯಾವ ಉಡುಪಾದರೂ ನಿಮ್ಮ ಎಳೆಯ ದೇಹಕ್ಕೆ ಮೆರುಗು ನೀಡುತ್ತದೆ.

ದಿನನಿತ್ಯ ಕಾಲೇಜಿಗೆ ಹೋಗುವಾಗ ಸಾಮಾನ್ಯವಾಗಿ ಸಲ್ವಾರ್ ಕಮೀಝ್, ಜೀನ್ಸ್ ಟೀ ಶರ್ಟ್, ಸ್ಕರ್ಟ್, ಮಿಡಿ ಮುಂತಾದ ಉಡುಪನ್ನು ಧರಿಸಬಹುದು. ವಾರಕ್ಕೊಂದೆರಡು ಬಾರಿ ಸೀರೆಯುಟ್ಟರೆ ನಿಮ್ಮ ವ್ಯಕ್ತಿತ್ವಕ್ಕೆ ಕಳೆ ಬರುತ್ತದೆ. ಸೀರೆಯಲ್ಲದೆ ಬೇರೆ ಪೋಷಾಕು ಧರಿಸುವಾಗ ನಿಮ್ಮ ದೇಹ ಅತಿ ಸ್ಥೂಲವಾಗಿರದಂತೆ ನೋಡಿಕೊಳ್ಳುವುದು ನಿಮ್ಮ ಜವಾಬ್ದಾರಿ. ತಿಳಿ ಮೈಬಣ್ಣ ಹೊಂದಿರುವ ಅದೃಷ್ಟವಂತರಿಗೆ ಯಾವ ವರ್ಣದ ಉಡುಪಾದರೂ ಒಪ್ಪುತ್ತದೆ. ಹಾಗೆಂದು ಶ್ಯಾಮಲ ವರ್ಣದ ಯುವತಿಯರು ಖಂಡಿತ ನಿರಾಶರಾಗಬೇಡಿ! ದಟ್ಟ ವರ್ಣಗಳು, ಸಣ್ಣ ಡಿಸೈನಿನ ಉಡುಪುಗಳು ನಿಮ್ಮ ಮೈಬಣ್ಣದ ಕುಂದನ್ನು ಮುಚ್ಚುತ್ತವೆ.

ಈಗಿನ ಕಾಲದ ಯುವತಿಯರಿಗೆ ಕಾಲೇಜೊಂದೇ ಪ್ರಪಂಚವಲ್ಲ, ವಿವಿಧ ಬಗೆಯ ಸಮಾರಂಭಗಳಲ್ಲಿ ಪಾಲ್ಗೊಳ್ಳಲು ಹುಡುಗಿಯರು ಆಸಕ್ತಿ ತೋರುತ್ತಿದ್ದಾರೆ. ನೀವು ಮದುವೆಯ ಸಮಾರಂಭದಲ್ಲಿ ಭಾಗವಹಿಸುತ್ತಿದ್ದೀರಾ? ಹಾಗಾದರೆ ಸೀರೆಯೇ ನಿಮಗೆ ಸೂಕ್ತ ಉಡುಪು. ಹದಿಹರೆಯದವರಿಗೆ ಭಾರಿ ಜರಿಯಂಚಿನ ಸೀರೆಗಳು, ಮೈಸೂರು ಸಿಲ್ಕ್ ಕ್ರೇಪ್ ಸೀರೆಗಳು ತುಂಬಾ ಹೊಂದಿಕೆಯಾಗುತ್ತದೆ. ಒಂದೇ ರೀತಿಯ ವಿನ್ಯಾಸ ನಿಮಗೆ ಬೇಸರ ಎನಿಸಿದರೆ ಗುಜರಾತಿ ರೀತಿಯಲ್ಲೂ ನೀವು ಸೀರೆಯುಡಲು ಪ್ರಯತ್ನಿಸಿ. ಕಾಂಟ್ರಾಸ್ಟ್ ಬಾರ್ಡರಿನ ಅಗಲ ಜರಿಯಂಚಿನ ಸೀರೆಗಳು ಈ ಶೈಲಿಗೆ ಸೂಕ್ತವಾಗಿ ಒಪ್ಪುತ್ತದೆ. ನೀವು ಉಡುವ ಸೀರೆ ಸರಳವಾಗಿದ್ದರೆ ಅದಕ್ಕೆ ಹೊಂದಿಕೆಯಾಗುವ ರವಿಕೆ ವಿಭಿನ್ನವಾಗಿರಲಿ. ಕಸೂತಿ, ಕನ್ನಡಿ ಕೆಲಸ ಮಾಡಿರುವ ರವಿಕೆ ಬಟ್ಟೆಗಳು ಈಗ ಅಂಗಡಿಗಳಲ್ಲಿ ಲಭ್ಯವಾಗಿವೆ. ನಿಮಗೆ ಇಷ್ಟವಾಗುವಂತಹ ವಿನ್ಯಾಸದಲ್ಲಿ ಕುತ್ತಿಗೆ, ತೋಳುಗಳ ಭಾಗವನ್ನು ದರ್ಜಿಗೆ ಕೊಟ್ಟು ಹೊಲಿಸಿಕೊಳ್ಳುವ ಸೌಲಭ್ಯವೂ ಇವೆ. ಆದರೆ ಒಂದು ಮಾತು ನೆನಪಿರಲಿ. ಯಾವುದೇ ಸಮಾರಂಭದಲ್ಲಿ ನಿಮ್ಮ ಪೋಷಾಕು ಎದ್ದು ಕಾಣಬೇಕೆಂದರೆ ಸೀರೆ, ರವಿಕೆ ಎರಡೂ ಆಡಂಬರವಾಗಿರದಿರಲಿ. ಸೀರೆ ಜರ್ಬಾಗಿದ್ದರೆ ಅದಕ್ಕೆ ಹೊಂದುವ ಸರಳ ರವಿಕೆ ಸಾಕು. ಸೀರೆ ಸರಳವಾಗಿದ್ದರೆ ಜರಿಯಂಚಿನ ಅಥವಾ ವಿವಿಧ ಕುಸುರಿ ಕೆಲಸ ಮಾಡಿರುವ ರವಿಕೆ ಉತ್ತಮ. ಸೀರೆ, ರವಿಕೆಯೊಡನೆ ತಪ್ಪದೇ ಅದೇ ವರ್ಣದ ಬಳೆಗಳನ್ನು, ಚಿನ್ನದ ಬಳೆಗಳೊಡನೆ ಧರಿಸಿ. ಅದು ನಿಮ್ಮ ವ್ಯಕ್ತಿತ್ವಕ್ಕೆ ಹೆಣ್ತನದ ಕೋಮಲತೆ ನೀಡುತ್ತದೆ. ಮದುವೆಯಂತಹ ಸಮಾರಂಭಗಳಿಗೆ ಸಣ್ಣಗೆ ಬಿಂದಿ ಇಡದೇ ಹಣೆಯಲ್ಲಿ ಎದ್ದು ಕಾಣುವಂಥ ದಟ್ಟ ಬಣ್ಣದ ಬಿಂದಿ ಅಥವಾ ಕುಂಕುಮ ಧರಿಸಿ. ನಿಮ್ಮ ಅಲಂಕಾರ ಹಲವರ ಗಮನ ಸೆಳೆಯುವುದರಲ್ಲಿ ಸಂದೇಹವೇ ಇಲ್ಲ.

ಕುಂಠಿತವಾಗುತ್ತದೆ.

ಹಬ್ಬ ಹರಿದಿನಗಳಲ್ಲಿ ಹೆಣ್ಣು ಮಕ್ಕಳ ಅಲಂಕಾರ ನೋಡುವ ಕಣ್ಣಿಗೇ ಹಬ್ಬ. ಅಂತಹ ಸಂದರ್ಭಗಳಿಗಾಗಿಯೇ ಮಗಳಿಗೆ ಎರಡೋ, ನಾಲ್ಕೋ ನಿಮ್ಮ ಅನುಕೂಲಕ್ಕೆ ತಕ್ಕಂತೆ ಜರಿಯಂಚಿನ ಉದ್ದ ಲಂಗಗಳನ್ನು ಹೊಲೆಯಿಸಿಡಿ. ಕೈ ತುಂಬಾ ಬಳೆಗಳನ್ನು ಧಾರಾಳವಾಗಿ ಹಾಕಿ. ಬಳೆಗಳು ಗಾಜಿನದಾಗಿರಬಾರದು. ಈಗ ಮಾರುಕಟ್ಟೆಯಲ್ಲಿ ಮಕ್ಕಳಿಗಾಗಿ ಎಂದೇ ಬಣ್ಣಬಣ್ಣದ ಬಳೆಗಳು ದೊರೆಯುತ್ತವೆ. ಎಲ್ಲಕ್ಕಿಂತ ಹೆಚ್ಚಾಗಿ ಅವರ ಪುಟ್ಟ ಪಾದಗಳಿಗೆ ಬೆಳ್ಳಿಯ ಗೆಜ್ಜೆಗಳನ್ನು ಹಾಕಲು ಮರೆಯದಿರಿ! ಗೆಜ್ಜೆಯ ನವಿರಾದ ಸದ್ದಿನಿಂದ ಮಕ್ಕಳ ಮನಸ್ಸಿಗೆ ಹೆಚ್ಚು ಆಹ್ಲಾದ ಹಾಗೂ ಉಲ್ಲಾಸ ತುಂಬಿರುತ್ತದೆ.

ಮಕ್ಕಳನ್ನು ಶಾಲೆಗೆ ಸೇರಿಸಿದಾಗ ಪ್ರತಿನಿತ್ಯ ಸಮವಸ್ತ್ರ ಧರಿಸುವುದು ಕಡ್ಡಾಯವಾಗಿ ಬಣ್ಣದ ಉಡುಪುಗಳನ್ನು ಹಾಕಿಕೊಳ್ಳುವ ಅವಕಾಶಗಳು ಕಡಿಮೆಯಾಗುತ್ತದೆ. ನಿಮ್ಮ ಮಕ್ಕಳ ಸಮವಸ್ತ್ರವನ್ನು ಸಾಧಾರಣವಾಗಿ ಮೂರು ದಿನಕ್ಕೊಮ್ಮೆ ಒಗೆಯುವುದು ಸೂಕ್ತ. ಇತ್ತೀಚಿನ ಶಾಲೆಗಳಲ್ಲಿ ಎರಡು ಸೆಟ್ ಸಮವಸ್ತ್ರ ನೀಡುವುದರಿಂದ ನಮ್ಮ ಪೋಷಕರಿಗೆ ಮಕ್ಕಳ ಬಟ್ಟೆಗಳನ್ನು ಶುಭ್ರವಾಗಿಡಲು ಹೆಚ್ಚು ಶ್ರಮವಾಗುವುದಿಲ್ಲ. ಪ್ರತಿದಿನ ನಿಮ್ಮ ಮಗಳು ಇಸ್ತ್ರಿ ಮಾಡಿದ ಶುಚಿಯಾದ ಸಮವಸ್ತ್ರವನ್ನೇ ಧರಿಸುವಂತೆ ನೋಡಿಕೊಳ್ಳಿ, ಇದರಿಂದ ಅವಳಿಗೆ ಆತ್ಮವಿಶ್ವಾಸ ಹೆಚ್ಚಾಗುತ್ತದೆ. ಶೂಸುಗಳನ್ನೂ ಪ್ರತಿದಿನ ಪಾಲಿಶ್ ಮಾಡುವುದು ಒಳ್ಳೆಯದು. ನಿಮ್ಮ ಮಕ್ಕಳು ಐದು ವರ್ಷದ ಮೇಲಿನ ವಯಸ್ಸಿನವರಾಗಿದ್ದರೆ ಶುಚಿತ್ವ, ಶಿಸ್ತಿನ ಬಗ್ಗೆ ನಯವಾಗಿ ತಿಳಿಹೇಳಿ, ಅವರ ಕೈಯ್ಯಲ್ಲೇ ಶೂಸು ಪಾಲಿಶ್ ಮಾಡಿಸಬಹುದು. ಸಮವಸ್ತ್ರಗಳಲ್ಲಿ ಕಿತ್ತು ಹೋದ ಗುಂಡಿಗಳು, ಬಿಚ್ಚಿಹೋದ ಹೊಲಿಗೆಗಳನ್ನು ತಡಮಾಡದೇ ಸೂಕ್ತ ಸಮಯದಲ್ಲೇ ಸರಿಪಡಿಸಿ. "A stitch in time saves nine" ಎನ್ನುವ ಗಾದೆ ಮಾತು ಸದಾ ನಿಮ್ಮ ತತ್ವವಾಗಲಿ.

ತಲೆಗೂದಲನ್ನು ನಯವಾಗಿ ಬಾಚಿ ಹೇರ್‌ಬ್ಯಾಂಡ್ ಹಾಕಬಹುದು. ನಿಮ್ಮ ಮಗಳ ಕೂದಲು ನೀಳವಾಗಿದ್ದರೆ ಎರಡು ಜಡೆಗಳನ್ನು ಹಾಕುವುದೇ ಸೂಕ್ತ. ಶಾಲೆಗೆ ಹೋಗುವಾಗ ಮಕ್ಕಳು ಆದಷ್ಟು ಸರಳವಾದ ಕೇಶವಿನ್ಯಾಸ ಅನುಸರಿಸಿದರೆ ಒಳ್ಳೆಯದು. ಕೂದಲು

ಕೆದರುವಂತೆ ಎಂದೂ ಬಾಚಬೇಡಿ. ತಲೆಗೆ ಎಣ್ಣೆ ಜಿನುಗುವಂತೆ ಹಚ್ಚಬೇಡಿ. ಮಕ್ಕಳ ಕೂದಲಿಗೆ ವಾರಕ್ಕೆರಡು ಬಾರಿ ಎಣ್ಣೆ ಸವರಿದರೆ ಸಾಕು. ಮಗಳ ಕೂದಲಿಗೆ ಹೊಟ್ಟು, ಹಗುರು, ಹೇನು ಬಾರದಂತೆ ಎಚ್ಚರ ವಹಿಸಲು ವಾರಕ್ಕೊಮ್ಮೆ ತಲೆಯನ್ನು ತೊಳೆಯಿರಿ. ಶಾಲೆಗೆ ಮಕ್ಕಳು ಚಿನ್ನದ ಆಭರಣಗಳನ್ನು ಧರಿಸಲು ಎಂದೂ ಅವಕಾಶ ಕೊಡಬೇಡಿ.

ನಿಮ್ಮ ಮಕ್ಕಳನ್ನು ಪಾರ್ಟಿಗಳಿಗೆ ಕರೆದೊಯ್ಯುವ ಅಭ್ಯಾಸ ವಿದೆಯೇ? ಚಿಂತಿಸಬೇಡಿ. ಪಾರ್ಟಿಗೆ ಹೋಗುವ ಎರಡು ದಿನದಿಂದ ನಿಮ್ಮ ಮಕ್ಕಳನ್ನು ಮಾನಸಿಕವಾಗಿ ಸಿದ್ಧಮಾಡಿ. ಪಾರ್ಟಿಯಲ್ಲಿ ಅಪರಿಚಿತರೊಡನೆ ಬೆರೆಯುವ ಬಗೆ, ತಿಂಡಿಗಳನ್ನು ತಿನ್ನುವ ವಿಧಾನ (table manners), ಅತಿಥೇಯರಿಗೆ ತೊಂದರೆಯಾಗದಂತೆ ನಡೆದುಕೊಳ್ಳುವುದನ್ನು ತಪ್ಪದೇ ಹೇಳಿಕೊಡಬೇಕು. ಪಾರ್ಟಿಯ ಹಿಂದಿನ ದಿನ ನಿಮ್ಮ ಪುಟ್ಟ ಮಗಳಿಗೆ ಅಚ್ಚುಕಟ್ಟಾದ 'ಹೇರ್ ಟ್ರಿಮ್ಮಿಂಗ್' (ಕೂದಲಿನ ತುದಿ ಸಮನಾಗಿ ಕತ್ತರಿಸುವುದು) ಮಾಡಿಸಿದರೆ ಕೂದಲ ವಿನ್ಯಾಸ ಸ್ವಚ್ಛವಾಗಿ ಕಾಣುತ್ತದೆ. ಈಗ ಬೇಕಾದರೆ ಮಗಳಿಗೆ ಲೇಸು, ತರತರಹ ಫ್ರಿಲ್ ಹೊಂದಿದ ಫ್ರಾಕ್‌ಗಳನ್ನು ಹಾಕಬಹುದು. ಫ್ರಾಕಿಗೆ ಹೊಂದುವಂತಹ ಬಣ್ಣದ, ಶುಚಿಯಾಗಿ ಮಡಚಿದ ಕರವಸ್ತ್ರವನ್ನು ತಪ್ಪದೇ 'ಪಿನ್' ಮಾಡಬೇಕು. ಅದರಲ್ಲಿ ಬಾಯಿ, ಕೈ ಒರೆಸಿಕೊಳ್ಳಲು ಮಕ್ಕಳಿಗೆ ಉಪಯೋಗವಾಗುತ್ತದೆ.



ಮಕ್ಕಳು ಬೆಲೆ ಬಾಳುವ ಉಡುಪುಗಳನ್ನೇ ಧರಿಸಿ ಆಕರ್ಷಣೆ ಬೀರಬೇಕಿಲ್ಲ. ಸರಳವಾದ ಅಲಂಕಾರ, ಸ್ಫುಟವಾದ ಮಾತುಕತೆ, ಹಿತಮಿತ ನಡವಳಿಕೆ, ಸ್ವಚ್ಛ ಉಡುಪುಗಳಿಂದ ಮಕ್ಕಳು ಎಲ್ಲರನ್ನೂ ಬೇಗನೇ ಸೆಳೆಯುತ್ತಾರೆ! ಮಕ್ಕಳಿಗೆ ಉತ್ತಮ ಅನುಕರಣೆಯ ಸ್ವಭಾವವಿರುತ್ತದೆ. ನಿಮ್ಮ ಗುಣ, ಅಭ್ಯಾಸಗಳನ್ನೇ ನಿಮ್ಮ ಮಗಳು ರೂಢಿಸಿಕೊಳ್ಳುವುದರಲ್ಲಿ ಸಂದೇಹವಿಲ್ಲ. ಇಂದಿನಿಂದ ನಾವೂ ನಮ್ಮ ಅಭ್ಯಾಸಗಳನ್ನು ತಿದ್ದಿಕೊಳ್ಳುವ ಎಚ್ಚರಿಕೆ ವಹಿಸೋಣವೇ?

### ಸಭೆ ಸಮಾರಂಭಗಳಲ್ಲಿ

ನೀವು ಆಗಾಗ ಪಾರ್ಟಿಗಳಲ್ಲಿ ಭಾಗವಹಿಸುವಿರಾ? ಯಾವುದೇ ಸಮಾರಂಭದಲ್ಲಿ ತನ್ನ ಸೌಂದರ್ಯ ಇಮ್ಮಡಿಯಾದಂತೆ ಕಾಣಬೇಕೆಂದು ಪ್ರತಿಯೊಬ್ಬ ಮಹಿಳೆಯೂ ಬಯಸುವುದು ಸ್ವಾಭಾವಿಕ. ಲೇಟ್ ನೈಟ್ ಪಾರ್ಟಿಗಳಾದರೆ ಕಪ್ಪು ವರ್ಣ ಅಥವಾ ಕೆಂಪು ವರ್ಣದ ಉಡುಪನ್ನು ಧರಿಸಿ. ಉಡುಪಿನ ಮೇಲೆ ಕಾಂಟ್ರಾಸ್ಟ್ ಡಿಸೈನ್ (ವಿರುದ್ಧ ರಂಗಿನ ವಿನ್ಯಾಸ) ಎದ್ದು ಕಾಣಲಿ. ಮೈ ತುಂಬಾ ಒಡವೆಗಳನ್ನು ಹೇರಿಕೊಳ್ಳಬೇಡಿ. ನಿಮ್ಮ ಉಡುಪಿಗೆ ಹೊಂದುವಂತಹ ದಪ್ಪ ಬ್ರೇಸ್‌ಲೈಟ್ ಅಥವಾ ಅಡ್ಡಿಕೆಯನ್ನೋ ಧರಿಸಿದರೆ ಅದೇ ನಿಮ್ಮ ಪೋಷಾಕಿನ ಮೇಲೆ ಎದ್ದು ಕಾಣುತ್ತದೆ. ಹದಿಹರೆಯದ ಯುವತಿ ನೀವಾಗಿದ್ದರೆ ನೀವು ಬಳಸಿದ ಮೇಕಪ್‌ನ ಮೇಲೆ ನವಿರಾಗಿ ಚಮಕಿ ಪುಡಿ ಅಥವಾ ನೆಕ್ಕಿಯನ್ನು ಸವರಿಕೊಳ್ಳಿ, ನಿಮ್ಮ ಮುಖ ಕಾಂತಿಯಿಂದ ಮಿರುಗುತ್ತದೆ.

ನೀವು ಯಾವ ವಯಸ್ಸಿನವರೇ ಆಗಿರಲಿ, ಯಾವುದೇ ಕಾರ್ಯಕ್ರಮ, ಸಮಾರಂಭಗಳಲ್ಲಿ ಪಾಲ್ಗೊಂಡರೂ ಒಂದು ಆಭರಣ ಧರಿಸುವುದನ್ನು ಮಾತ್ರ ಮರೆಯಬೇಡಿ. ಆ ಆಭರಣ ಬೇರೇನೂ ಅಲ್ಲ; ಅದು ನಿಮ್ಮ ಮುಗುಳುನಗೆ! ನಗುವಿಲ್ಲದ ಸೌಂದರ್ಯ ಚಂದ್ರನಿಲ್ಲದ ಬಾನಿನಂತೆ ಮಂಕಾಗಿರುತ್ತದೆ. ಮೆಲು ಮಾತು, ಮೃದು ನಗು, ಸಂದರ್ಭಕ್ಕೆ ತಕ್ಕಂತಹ ಉಡುಪು ಸದಾ ನಿಮ್ಮ ವ್ಯಕ್ತಿತ್ವದೊಡನೆ ಹಾಸುಹೊಕ್ಕಾಗಿರಲಿ. ಈ ಪ್ರಪಂಚವನ್ನೇ ಗೆಲ್ಲುವ ಆತ್ಮವಿಶ್ವಾಸ ನಿಮ್ಮದಾಗಿರುತ್ತದೆ.

# ಚೌಚೌ

## ಸಂಸ್ಕೃತಿ ಇಲ್ಲದ ಊರು

ನನ್ನೂರು ಶಿವಮೊಗ್ಗ ಜಿಲ್ಲೆಗೆ ಸೇರಿರುವ ತೀರ್ಥಹಳ್ಳಿ ತಾಲೂಕಿನ ಕೆರೆಹಳ್ಳಿ, ತೀರ್ಥಹಳ್ಳಿಯಿಂದ ೩೦ ಕಿ.ಮೀ. ದೂರವಿದೆ. ಇಲ್ಲಿ ಹಿಂದೂ ಮತ್ತು ಮುಸ್ಲಿಂ ದೇವಸ್ಥಾನಗಳು ಇವೆ.

ಈ ಪ್ರಸಿದ್ಧ ದೇವಸ್ಥಾನದ ಸುತ್ತಲಿನ ವಾತಾವರಣ ತುಂಬಾ ಕೊಳಚೆಮಯವಾಗಿದೆ. ಇಲ್ಲಿ ಯಾವುದೇ ರೀತಿಯ ವ್ಯವಸ್ಥೆ ಇಲ್ಲ. ವಿದ್ಯುತ್ ವ್ಯವಸ್ಥೆ ಇಲ್ಲ. ದೂರವಾಣಿ ಇಲ್ಲ. ಪೋಸ್ಟ್ ಆಫೀಸಿನ ಸ್ಥಾನ ಲಭಿಸಿಲ್ಲ. ಪಶು ಚಿಕಿತ್ಸಾಲಯ ಇಲ್ಲ. ಸಾರ್ವಜನಿಕ ಆಸ್ಪತ್ರೆ ಇಲ್ಲ. ದೇವಸ್ಥಾನಗಳು ಇದ್ದರೂ ನನ್ನೂರಿನ ಜನಕ್ಕೆ ಸಂಸ್ಕೃತಿ ಇಲ್ಲವಲ್ಲ, ಏಕೆ?

**- ರಘುನಾಥ ಎಂ. ನಾಯ್ಕ**
ಕೆರೆಹಳ್ಳಿ

## ಶಾಸಕರು ಎಲ್ಲಿ?

ಅರಸೀಕೆರೆ ತಾಲ್ಲೂಕಿಗೆ (ಹಾಸನ ಜಿಲ್ಲೆ) ಸೇರಿದ ಮುಖ್ಯ ಗ್ರಾಮ ಪಂಚಾಯಿತಿ ಬೆಳಗುಂಬದ ಮುಖಾಂತರ ಹಾದು ಹೋಗುವ ರಸ್ತೆ ಗಂಡಸಿ ತಿಪಟೂರಿಗೆ ಹೋಗಲು ನಮಗೆ ಬಹಳ ಉಪಯೋಗಕರವಾಗಿದೆ.

ಇಂತಹ ಮುಖ್ಯ ರಸ್ತೆಯ ಮೇಲೆ ವಾಹನ ಚಲಿಸುತ್ತಿದ್ದರೆ ಅದು ಭರತನಾಟ್ಯವಾಡುವಂತೆ ಕಾಣುತ್ತದೆ. ಈ ರಸ್ತೆಗೆ ೩ ಬಾರಿ ಡಾಂಬರೀಕರಣಕ್ಕಾಗಿ ಹಣ ಖರ್ಚಾಗಿದೆ! ಈ ಹಣದಿಂದ ಕನಿಷ್ಠ ರಸ್ತೆಯ ಗುಂಡಿಗಳನ್ನು ಸಹ ಮುಚ್ಚಿಸಿಲ್ಲ. ಇನ್ನಾದರೂ ತಾಲ್ಲೂಕಿನ ಶಾಸಕರು ಇತ್ತ ಗಮನಹರಿಸಿ ರಸ್ತೆ ಡಾಂಬರೀಕರಣ ಮಾಡುವರು ಎಂದು ಆಶಿಸೋಣವೇ?

**- ಲೋಕೇಶ ಜಿ.**
ಗೊಲ್ಲರಹಳ್ಳಿ

## ನೀರಿಲ್ಲದ ಸೋಮಲಾಪುರ

ಬಳ್ಳಾರಿ ತಾಲ್ಲೂಕಿನ ಕುರುಗೋಡು ಹೋಬಳಿಯಲ್ಲಿ ನನ್ನೂರು ಸೋಮಲಾಪುರ. ಈ ಊರು ಬಹಳ ವೈವಿಧ್ಯದಿಂದ ಕೂಡಿದೆ. ಊರಿನ ಸುತ್ತಮುತ್ತ ಚಿಕ್ಕ-ಚಿಕ್ಕ ಬೆಟ್ಟಗುಡ್ಡಗಳನ್ನು ಹಸುರಿನ ವನಸಿರಿಯನ್ನು ಹೊಂದಿದೆ. ನಮ್ಮೂರಿಗೆ ಬೇಕಾಗಿರುವ ಸೌಲಭ್ಯಗಳಲ್ಲಿ ಅತಿ ಮುಖ್ಯವಾಗಿರುವುದೆಂದರೆ ನೀರಿನ ಸೌಲಭ್ಯ. ಕಾರಣ ಸಂಬಂಧಪಟ್ಟ ಅಧಿಕಾರಿಗಳಲ್ಲಿ ಇತ್ತ ಗಮನ ಹರಿಸಬೇಕೆಂದು ಊರಿನ ಪರವಾಗಿ ಕೇಳಿಕೊಳ್ಳುತ್ತೇನೆ.

**- ಬಿ. ದೊಡ್ಡಮಾರೆಣ್ಣ**
ಸೋಮಲಾಪುರ

## ಮುಧೋಳದ ಕೊಳಚೆ

ನನ್ನ ಊರು ಬಾಗಲಕೋಟೆ ಜಿಲ್ಲೆಯ ಮುಧೋಳ. ಇದು ರನ್ನನ ಜನ್ಮಸ್ಥಳ. ಊರು ಅನೇಕ ಕೆರೆಗಳಿಂದ ಸುತ್ತುವರಿದಿದ್ದು, ಘಟಪ್ರಭಾ ನದಿಯ ದಂಡೆಯ ಮೇಲೆ ಹಸಿರಿನಿಂದ ತುಂಬಿ ತುಳುಕುತ್ತಿದೆ. ಸಕ್ಕರೆ ನಾಡೆಂದು ಪ್ರಸಿದ್ಧಿ ಪಡೆದಿದೆ. ಇಲ್ಲಿನ ಗಂಜಿ ಶಹೀದ ದರ್ಗಾವು ಹಿಂದು ಮುಸ್ಲಿಂರ ಭಾವೈಕ್ಯದ ಪ್ರತೀಕ.

ಆದರೆ, ಬಸ್-ನಿಲ್ದಾಣದ ಎದುರಿಗೆ ಇರುವ ಉಸುಕಿನ ಮೈದಾನದ ತಿಪ್ಪೆಯರಾಶಿ, ಪ್ರಯಾಣಿಕರಿಗೆ ಮುಜುಗರ ಹುಟ್ಟಿಸುತ್ತದೆ. ಅಯ್ಯೋ ರನ್ನನ ನಾಡಿನಲ್ಲಿ ನರಕಯಾತನೆಯೇ?

ಮಾಜಿ ಎಂ.ಪಿ. ಎಸ್.ಟಿ. ಪಾಟೀಲರ ಭವ್ಯ ಬಂಗಲೆಯ ಹಿಂದುಗಡೆ ಕೊಳಚೆ ನೀರಿನ ಮಾಡು ನೋಡುಗರಿಗೆ ಅಸಹ್ಯ ಬರಿಸುತ್ತದೆ. ನಗರಸಭೆಯವರು ನಿದ್ರಿಸುವರೆ?

**- ರುಜವಾನಾ ಎಂ.ಕೆ**
ಮುಧೋಳ

## ಸ್ವಗತದ ಸಂಕಟ

ನಾನು ದಾವಣಗೆರೆ ಜಿಲ್ಲೆ ಹರಪನಹಳ್ಳಿ ತಾಲ್ಲೂಕಿಗೆ ಸೇರಿದ ಪುಟ್ಟ ಗ್ರಾಮ. ಹೆಸರು ಚಿಕ್ಕಮೇಗಳಗೆರೆ ಅಂತ. ನನ್ನ ಗರ್ಭದಲ್ಲಿ ಮುನ್ನೂರು ಮನೆಗಳು, ಎರಡು ಸಾವಿರ ಮಕ್ಕಳು, ಒಂದು ಸಾವಿರ ಮತದಾರರಿದ್ದಾರೆ. ನಾನು ಜಿಲ್ಲಾ ಕೇಂದ್ರವಾದ ದಾವಣಗೆರೆಯಿಂದ ಕೇವಲ ೧೨ ಕಿ.ಮೀ. ಅಂತರದಲ್ಲಿದ್ದೇನೆ.

ನನ್ನ ಹಾಗೂ ನನ್ನ ಮಕ್ಕಳ ದುರಂತವೆಂದರೆ, ಸುವರ್ಣ ಸ್ವಾತಂತ್ರ್ಯ ಆಚರಿಸುವಷ್ಟು ಸುದೀರ್ಘ ದಿನಕಳೆದರೂ ನನ್ನ ಮೈಮೇಲೊಂದು ಸರಕಾರಿ ಬಸ್ಸು ಹರಿದು ಬಂದಿಲ್ಲ. ಅವು ನನ್ನೆಡೆಗೆ ಓಡಿ ಬರಲು ರಸ್ತೆಗಳಿದ್ದರೆ ತಾನೆ? ವಿಪರ್ಯಾಸವೆಂದರೆ ಸರಕಾರಿ ಕಡತಗಳಲ್ಲಿ ನಿರ್ಮಾಣಗೊಂಡ ಕೆಲವು ಲಕ್ಷ ವೆಚ್ಚದ ರಸ್ತೆಗಳು ನನ್ನಲ್ಲಿ ಕಳುವಾಗಿವೆ. ಕೆಲವೆಡೆ ಬಾವಿಗಳು ಕಳುವಾದಂತೆ!? ನನಗೆ ಕುಡಿವ ನೀರೊದಗಿಸುವ ಕಿರು ನೀರು ಸರಬರಾಜಿನ ಪೈಪುಗಳಲ್ಲಿ ಚರಂಡಿ ನೀರು ನುಗ್ಗುತ್ತಿರುವ ಸತ್ಯ ಗೊತ್ತಿದ್ದರೂ ವಿಧಿ ಇಲ್ಲದೆ ನನ್ನ ಮಕ್ಕಳಿಗೆ ಕುಡಿಸಿ ಲಾಲಿ ಹಾಡುತ್ತೇನೆ.

ನನ್ನ ಅಂಗೈಯಲ್ಲೊಂದು ಸರಕಾರಿ ಶಾಲೆ ಇದೆ. ವಿದ್ಯಾರ್ಥಿಗಳ ಸಂಖ್ಯೆ ಐದುನೂರು, ಕೊಠಡಿಗಳ ಸಂಖ್ಯೆ ಕೇವಲ ಮೂರು! ಇತ್ತೀಚೆಗಷ್ಟೇ ಪ್ರಯಾಸಪಟ್ಟು ಮೇಲೇರಿ ನಿಂತಿರುವ ಕುಡಿವ ನೀರಿನ ಟ್ಯಾಂಕು ಉದ್ಘಾಟನೆಗೊಳ್ಳದೇ ಕುಸಿಯಲು ಸಜ್ಜಾಗಿ ನಿಂತಿದೆ.

ಇಂತಹ ನೂರಾರು ಸಂಕಟಗಳ ಸರಮಾಲೆಯ ಬದುಕು ನನ್ನದು. ಇದನ್ನು ಯಾರಲ್ಲಿ ನಿವೇದಿಸಿಕೊಳ್ಳಲಿ?

- ಇಂತು ನಿಮ್ಮ ನಿರ್ಭಾಗ್ಯ ಗ್ರಾಮ,
ಚಿಕ್ಕಮೇಗಳಗೆರೆ.
ನಿರೂಪಣೆ : ಕಲಿವೀರ ಕಳ್ಳಿಮನಿ

## ಪೆಟ್ರೋಲ್ ಎಲ್ಲಿ?

ಕಳೆದ ವರ್ಷ ಕುತೂಹಲ ಕೆರಳಿಸಿ ಜನರನ್ನು ಬೆಕ್ಕಸ ಬೆರಗಾಗುವಂತೆ ಮಾಡಿದ ತಮಿಳ್ನಾಡಿನ ರಾಮರ್ ಪಿಳ್ಳೈಯ ಗಿಡ ಮೂಲಿಕೆ ಪೆಟ್ರೋಲ್ ಯಾವ ಕಡೆ ಇದೆ ಸ್ವಾಮಿ?

ಸರಕಾರಿ ಅಧಿಕಾರಿಗಳಿಂದ ಹಿಡಿದು ಮುಖ್ಯಮಂತ್ರಿ ತನಕ ಮೂರ್ಖರನ್ನಾಗಿಸಿ ಅವರ ಸಮ್ಮುಖದಲ್ಲೇ ಬುರುಡೆ ಉಪಕರಣಗಳಿಂದ ಅಗ್ಗದ ಪೆಟ್ರೋಲ್ ತಯಾರಿಸಿದ ಮಹಾನುಭಾವನ ಮಾಯದ ಎಣ್ಣೆ ಎಲ್ಲಿ ಹೋಯಿತು? ಇದೆಲ್ಲಾ ಅಗ್ಗದ ಪ್ರಚಾರದ ಸಲುವಾಗಿ ಸರ್ಕಾರದ ಜೊತೆ ಸೇರಿ ಪಿಳ್ಳೈ ನಡೆಸಿದ ನಾಟಕವೇ?

ಜನರ ಕಣ್ಣಿಗೆ ಇಂತಹ ಭ್ರಮೆಗಳನ್ನು ಕಟ್ಟಿ ನಮ್ಮ ದೇಶದ ರಾಜಕಾರಣಿಗಳು ಹೇಗೆ ಲಕ್ಷಾಂತರ ರೂಪಾಯಿ ಹಣವನ್ನು ಲಪಟಾಯಿಸುತ್ತಾರೆಂಬುದಕ್ಕೆ ವೀರಪ್ಪನ್ ಪ್ರಕರಣ ಮುಂತಾದವೆಲ್ಲಾ ಜೀವಂತ ಉದಾಹರಣೆಗಳು. ಇಂತಹ ದಗಾಕೋರರನ್ನು ಜನರೇ ಬೀದಿಯಲ್ಲಿ ಪ್ರಶ್ನಿಸಿ ತಕ್ಕ ಪಾಠ ಕಲಿಸದೇ ಹೋದರೆ ದೇಶದ್ರೋಹಿ ರಾಜಕಾರಣಿಗಳೊಂದಿಗೆ ಪಿಳ್ಳೈಯಂತಹ ಮೋಸಗಾರರು ಸೇರಿ ಜನರನ್ನು ಸದಾ ವಂಚನೆಗೈಯುವುದು ನಡೆದೇ ಇರುತ್ತದೆ.

ದೇಶದ ಅಭಿವೃದ್ಧಿ ಸದಾ ಹಿಂದೆ ಬಿದ್ದೇ ಇರುತ್ತದೆ!

**- ನಾಗೇಶ್ ಎ. ಬಳೆಗಾರ್**
ಶಿರಾಲಿ, ಉ.ಕ.

## ರಣಭೂಮಿ ರುಕ್ಮಾಪುರ

ನಮ್ಮೂರು ರುಕ್ಮಾಪುರ. ಇದು ತಾಲೂಕಾ ಸ್ಥಳವಾದ ಸುರುಪುರದಿಂದ ಮೂರು ಕಿ.ಮೀ. ದೂರವಿದೆ. ನಮ್ಮೂರಿನ ಇತಿಹಾಸ ಕೆದಕುತ್ತಾ ಹೋದರೆ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ (೧೮೫೭) ಬಂದು ನಿಲ್ಲುತ್ತದೆ. ನಮ್ಮೂರ ಬಳಿಯೇ ಸುರುಪುರದ ರಾಜಾ ವೆಂಕಟಪ್ಪನಿಗೂ, ಬ್ರಿಟಿಷರಿಗೂ ಯುದ್ಧವಾಗಿದ್ದು. ದಕ್ಷಿಣ ಭಾರತದ ನಾಯಕತ್ವ ವಹಿಸಿದ ವೆಂಕಟಪ್ಪ ನಾಯಕನಿಗೆ ಉತ್ತರ ಭಾರತದ ಸ್ವಾತಂತ್ರ್ಯ ಯೋಧರಿಂದ ಸಹಾಯ ಬಾರದೆ ಸೋಲಾಯಿತು. ನಂತರ ಸುರುಪುರ ಸಂಸ್ಥಾನ ಬ್ರಿಟಿಷರ ಕೈಗೆ ಹೋಯಿತು. ಈ ಯುದ್ಧಕ್ಕೆ ನಮ್ಮೂರ ಸಮೀಪದ ರಣಭೂಮಿ ಮೂಕಸಾಕ್ಷಿಯಾಗಿ ನಿಂತಿದೆ. ಇವತ್ತು ಇಲ್ಲಿ ಯಾವ ಸ್ಮಾರಕಗಳಿಲ್ಲ. ಜನರಿಗೂ ಇದು ಮರೆತುಹೋದಂತಿದೆ. ಇನ್ನು ಸರಕಾರವಂತೂ ಸರಿಯೇ ಸರಿ!

ಹಾಗೆಯೇ ನಮ್ಮೂರಿನ ವಿಶೇಷವೆಂದರೆ (ವಿಪರ್ಯಾಸ?) ಒಬ್ಬರು ಸತ್ತರೆ, ಅವರ ಹಿಂದೆ ಇಬ್ಬರು ಸಾಯುವುದು! ಇದು ಆಗಾಗ ನಿಜವಾಗಿದೆ!!

ಇಲ್ಲಿ ಸರಕಾರಿ ಹೈಸ್ಕೂಲು, ಗ್ರಂಥಾಲಯಗಳಾದರೆ ಜನರ ಬಹಳ ದಿನದ ಕನಸು ನನಸಾದಂತೆ ಆಗುತ್ತದೆ.

**- ಲೀಲಾಧರ ಮಾ. ಭಂಡಾರಿ**
ರುಕ್ಮಾಪುರ



# ಕೋಚ್ಚೆ ಚಿಂತನ

○ ಕೋ. ಚೆನ್ನಬಸಪ್ಪ
ನಿವೃತ್ತ ನ್ಯಾಯಾಧೀಶರು
೧೨೭, ಪಶ್ಚಿಮ ಕಾರ್ಡ್ ರಸ್ತೆ, ಮಹಾಲಕ್ಷ್ಮೀಪುರ,
ಬೆಂಗಳೂರು - ೫೬೦ ೦೮೬

# ಪೊಲೀಸರ ಹೊಟ್ಟೆಯ ಮೇಲೆ ಹೊಡೆದರು!

**ಪೊ**ಲೀಸರು ಎಂದೊಡನೆ ನಮ್ಮ ಜನರ ಮನಸ್ಸಿನಲ್ಲಿ ಏನೇನೋ ಭಾವನೆಗಳು ಪುಟಿದೇಳುತ್ತವೆ. ಭಯ, ಭೀತಿ, ಜಿಗುಪ್ಸೆ, ಹೇಸಿಕೆ, ತುಚ್ಛೀಕಾರ....ಇನ್ನೂ ಏನೇನೋ ಭಾವನೆಗಳು. ಅವರು ಕರುಣೆಯಿಲ್ಲದ ರಾಕ್ಷಸರು! ನೀತಿಯಿಲ್ಲದ ನೀಚರು! ಲಂಚ ತಿನ್ನುವ ಭ್ರಷ್ಟರು! ಅತ್ಯಾಚಾರ ಮಾಡಲು ಹೇಸದ ವಿಷಯ ಲಂಪಟರು! ಅಪಘಾತದಲ್ಲಿ ಸತ್ತವರ ಹೆಣದ ಮೇಲಿನ ಒಡವೆ ಹಣ ಕಿತ್ತುಕೊಳ್ಳುವ ರಣಹದ್ದುಗಳು... ಇನ್ನೂ ಏನೇನೊ ಇಂಥ ಅನೇಕ ಚಿತ್ರಗಳು. ಅಂತೂ ಅವರ ಬಗ್ಗೆ ಒಳ್ಳೆಯ ಭಾವನೆ ಅತಿವಿರಳ.

ಆದರೆ-

ಬಿಸಿಲು, ಮಳೆ, ಗಾಳಿ, ಛಳಿಯಲ್ಲಿ ಬೆಳಗ್ಗೆ ೮ ರಿಂದ ಮಧ್ಯಾಹ್ನ ೨ರವರೆಗೆ ಮತ್ತೆ ಎರಡನೆ ಪಾಳಿ ೨ ರಿಂದ ರಾತ್ರಿ ೮ರವರೆಗೆ ಸತತ ೬-೬ ಗಂಟೆಗಳ ಕಾಲ ನಿಂತುಕೊಂಡು ಸಂಚಾರ ನಿಯಂತ್ರಣ ಮಾಡುವ ಅವರ ಕಷ್ಟವನ್ನು ಬಲ್ಲಿರಾ? ರಸ್ತೆಯ ಮೇಲೆ ಹಾದು ಹೋಗುವ ಹೊಗೆ ಉಗುಳುವ ವಾಹನಗಳನ್ನು ನಿಯಂತ್ರಿಸುವ ಉಸಿರು ಕಟ್ಟುವ ಕೆಲಸವನ್ನು ನೀವು ನಾವು ಮಾಡಬಲ್ಲೆವೆ? ಹೊಗೆಯನ್ನೆ ಉಸಿರಾಡುವ ಆ ನರಕಸದೃಶ ಪಾಡನ್ನು ಅನುಭವಿಸಲು ಸಾಧ್ಯವೆ? ಅದಿರಲಿ. ದೊಂಬಿ ಆದಾಗ ದೊಂಬಿಕಾರರು ಬೀಸುವ ಕಲ್ಲೇಟುಗಳನ್ನು ತಿನ್ನುವ ದೃಶ್ಯ ನೋಡಿದ್ದೇವೆಯೆ? ಎಲ್ಲಿಗೆ ಅಂದರೆ ಅಲ್ಲಿಗೆ, ಎಷ್ಟು ಹೊತ್ತಿನಲ್ಲಿ ಅಂದರೆ ಅಷ್ಟು ಹೊತ್ತಿನಲ್ಲಿ ತುಟಿಪಿಟಿಕ್ ಎನ್ನದೆ ಮೇಲಾಧಿಕಾರಿ ಹೇಳಿದ ಕಡೆ ಕಾಡಿನಲ್ಲಿಯೋ ಬೆಂಕಿಯಲ್ಲೋ, ಹರಿಯುವ ಹೊಳೆಯಲ್ಲೋ ನುಗ್ಗಬೇಕಾದ ಅಪಾಯವನ್ನು ಯಾರು ಬಲ್ಲರು?

ಯಾರೋ ಪರ ಊರಿನವರು ದಾರಿ ತಪ್ಪಿ ಬರುತ್ತಾರೆ. ಅವರಿಗೆ ಸರಿಯಾದ ದಾರಿ ತೋರಿಸಲು ಪೊಲೀಸರೆ ಬೇಕು. ಯಾರ ಮನೆಯಲ್ಲೋ ಹಾವು, ಬೆಂಕಿ ಕಾಣಿಸಿಕೊಳ್ಳುತ್ತದೆ. ಅದಕ್ಕೆ ಪೊಲೀಸರೆ ಬೇಕು. ಯಾರೊ ಹುಚ್ಚ ಚೀರಾಡಿಕೊಳ್ಳುತ್ತಾ ಓಡುತ್ತಾನೆ. ಅದಕ್ಕೂ ಪೊಲೀಸರೆ ಬೇಕು... ಹೀಗೆ ಎಷ್ಟೋ ಕೆಲಸಗಳಿಗೆಲ್ಲ ಪೊಲೀಸರೇ ಬೇಕು. ಮೇಲಾಗಿ ರಾಜಕಾರಣಿಗಳ ತಾಳಕ್ಕೆ ತಕ್ಕಂತೆ ಕುಣಿಯಬೇಕು!!

ಇಷ್ಟೆಲ್ಲ ಕಷ್ಟಕಾರ್ಪಣ್ಯ ಅನುಭವಿಸಿದರೂ ಪೊಲೀಸ್ ಪೇದೆಗೆ ಅದಕ್ಕಿಂತ ಒಂದೆರಡು ಹಂತ ಮೇಲಿರುವವರಿಗೆ ಕೊಡುವ ಸೌಲಭ್ಯ

**ಆಟೋ ಚಾಲಕ, ತರಕಾರೀ ಮಾರುವ ಬಡ ಹೆಂಗಸು ಮುಂತಾದವರ ಜೇಬು ಕತ್ತರಿಸದೆ ಈ ಪೊಲೀಸ್ ಪೇದೆ ಬದುಕುವಂತೆಯೆ ಇಲ್ಲ.**


(Perks)ಗಳು ಇತರ ಯಾವ ಇಲಾಖೆಗಿಂತಲೂ ಕಡಮೆ. ಕಛೇರಿಯ ನೆರಳಿನಲ್ಲಿ ಕುಳಿತು ಕೆಲಸ ಮಾಡದೆಯೆ ತಣ್ಣಗಿದ್ದು ತಿಂದು ತೇಗುವವರು ಈ ಕಷ್ಟಧಾರಿ ಪೊಲೀಸರಿಗಿಂತ ಹೆಚ್ಚು ಸಂಬಳ, ಗಿಂಬಳ, ಸೌಕರ್ಯ, ಸೌಲಭ್ಯ, ಸವಲತ್ತುಗಳನ್ನು ಹೊಡೆಯುತ್ತಾರೆ.

ಇತ್ತೀಚೆಗೆ ಕೇಂದ್ರ ಸರ್ಕಾರದ ನೌಕರರಿಗೆ ಐದನೆ ವೇತನ ಆಯೋಗದ ಶಿಫಾರಸ್ಸುಗಳನ್ನು ಜಾರಿಗೊಳಿಸಿದ ಮೇಲೆ ಅವರು ಧನ್ಯರಾಗಿ ಹೋದರು. ಅಖಿಲ ಭಾರತೀಯ ಸೇವಾ ಸಿಬ್ಬಂದಿ-ಐ.ಎ.ಎಸ್., ಐ.ಪಿ.ಎಸ್., ಐ.ಎಫ್.ಎಸ್... ಇತ್ಯಾದಿ ದೇವಗಣಕ್ಕೆ ಮೊದಲಿದ್ದ ಸಂಬಳಕ್ಕಿಂತ ನಾಲ್ಕು ಪಟ್ಟು - ತಿಂಗಳಿಗೆ ೨೫ ರಿಂದ ೩೦ ಸಾವಿರದವರೆಗೆ ಸಂಬಳ ಹೆಚ್ಚಿಸಿಕೊಂಡರು. ಕೆಳದರ್ಜೆಯವರೂ ದುಪ್ಪಟ್ಟು, ಮುಪ್ಪಟ್ಟು ಸಂಬಳ ಹೆಚ್ಚಿಸಿಕೊಂಡರು. ರಾಜ್ಯ ಸರ್ಕಾರಗಳ ಸೇವಾ ಸಿಬ್ಬಂದಿ ಮಾತ್ರ ಹಿಂದೆ ಇದ್ದಲ್ಲಿಯೆ ಇದ್ದಾರೆ.

ಹೀಗೆ ಹಿಂದೆ ಇದ್ದ ಸಂಬಳ, ಸವಲತ್ತು (Perks) ಪೊಲೀಸ್ ಸಿಬ್ಬಂದಿಗೆ ಮುಂದುವರಿದಿದ್ದರೆ ಅವರು ದೇವರಿಗೆ ಅಡ್ಡಬಿದ್ದು ಕೈ ಮುಗಿಯುತ್ತಿದ್ದರು. ನಮ್ಮ ರಾಜ್ಯದ ಪೊಲೀಸರಿಗೆ ಹಿಂದೆ ಕೊಡುತ್ತಿದ್ದ ಸವಲತ್ತುಗಳನ್ನು ಕಸಿದು

ಕೊಂಡು ಇನ್ನೂ ದುಃಸ್ಥಿತಿಗೆ ತಳ್ಳಿದ್ದಾರೆ! ಸಬ್ ಇನ್ಸ್‌ಪೆಕ್ಟರ್‌ಗಿಂತ ಕೆಳ ದರ್ಜೆಯ ಪೊಲೀಸ್ ಸಿಬ್ಬಂದಿಗೆ ಮೊಯ್ಲಿ ಸರಕಾರದ ಕಾಲದಿಂದ ಪ್ರತಿ ಕುಟುಂಬಕ್ಕೆ ತಿಂಗಳಿಗೆ ೧೦ ಕೆ.ಜಿ. ಅಕ್ಕಿ, ೩ ಕೆ.ಜಿ. ಸಕ್ಕರೆ, ಮೂರು ಕೆ.ಜಿ. ಗೋಧಿ ಪುಕ್ಕಟೆ ಕೊಡುತ್ತಿದ್ದರು. ಇದು - ಪಡಿತರ ರೂಪದಲ್ಲಿ ಸಂಬಳ ಕೊಡುವುದು-ನಮ್ಮ ದೇಶದಲ್ಲಿ ಹೊಸದಾಗಿ ಕಾಣಬಹುದು. ಚೀನಾದಲ್ಲಿ ಮಾವೋತ್ಸೆ ತುಂಗ್ ಕಮ್ಯುನಿಸ್ಟ್ ಆಡಳಿತೆಯಿದ್ದಾಗ ಸರ್ಕಾರಿ ನೌಕರರು ಸಂಬಳ ಅಥವಾ ಸರಬರಾಜು (Supply) ರೂಪದಲ್ಲಿ ಇಲ್ಲವೆ ಅರ್ಧ ಸಂಬಳ ಇನ್ನರ್ಧ ಸರಬರಾಜು ರೂಪದಲ್ಲಿ ಸಂಭಾವನೆ ಪಡೆಯುತ್ತಿದ್ದರು. ಸರಬರಾಜು ರೂಪದ ಸಂಭಾವನೆಯನ್ನು 'ಕೂಪನ್' ರೂಪದಲ್ಲಿ ಪಡೆದು ಆ ಕೂಪನ್‌ಗಳನ್ನು ಕೊಟ್ಟು ಬೇಕಾದ ವಸ್ತುಗಳನ್ನು - ಬಟ್ಟೆ, ಮೊಟ್ಟೆ, ಎಣ್ಣೆ, ಅಕ್ಕಿ ಇ.... ಪಡೆಯಬಹುದಾಗಿತ್ತು. ಇದರಿಂದ ಜೀವನಾವಶ್ಯಕ ವಸ್ತುಗಳ ಬೆಲೆ ಏರಲಿ, ಇಳಿಯಲಿ ಅದರಿಂದ ಸರ್ಕಾರಿ ನೌಕರರಿಗೆ ಬಾಧಕವಿರಲಿಲ್ಲ.

ಪೊಲೀಸರಿಗೆ ದೊರೆಯುತ್ತಿದ್ದ ಉಚಿತ ಅಕ್ಕಿ, ಗೋಧಿ, ಸಕ್ಕರೆಯ ಸೌಲತ್ತನ್ನು ರಾಜ್ಯದ ಬೊಕ್ಕಸಕ್ಕೆ ಹೊರೆಯೆಂದು ನಮ್ಮ ಮಿತವ್ಯಯ ಸರಳ ಜೀವನ ಪ್ರತಿಪಾದಕ ಮಂತ್ರಿಗಳು, ಶಾಸಕರು ರದ್ದುಪಡಿಸಿದ್ದಾರೆ - ಇದೇ ಅಕ್ಟೋಬರ್ ೧೪ರ ಸರ್ಕಾರಿ ಆಜ್ಞೆಯ ಪ್ರಕಾರ, ವಿಶೇಷ ಕಾರ್ಯಾಚರಣೆಯಲ್ಲಿ ತೊಡಗಿದ್ದ ಪೊಲೀಸರಿಗೆ ತಮ್ಮ ಸಂಬಳದ ಶೇ. ೩೩ರಷ್ಟು ಹೆಚ್ಚು ಸಂಬಳ, ತುಟ್ಟಿಭತ್ತೆ ಇತ್ಯಾದಿ ಸೌಲತ್ತುಗಳನ್ನೂ ನಿಲ್ಲಿಸಲಾಗಿದೆ. ಹಾಗೆಯೆ ಸಬ್‌ಇನ್ಸ್‌ಪೆಕ್ಟರ್‌ಗಿಂತ ಕೆಳ ದರ್ಜೆಯ ಪೊಲೀಸರಿಗೆ ವರ್ಷಕ್ಕೆ ಒಂದು ತಿಂಗಳ ಸಂಬಳವನ್ನು ಅಂದರೆ ೧೨ ತಿಂಗಳು ಕೆಲಸ ಮಾಡಿದರೂ ೧೩ ತಿಂಗಳ ಸಂಬಳ, ಸೌಲತ್ತುಗಳನ್ನು ಕೊಡುತ್ತಿದ್ದುದನ್ನು ನಿಲ್ಲಿಸಲಾಗಿದೆ. ಅದಕ್ಕಿಂತ ಮೇಲ್ದರ್ಜೆಯವರಿಗೆ ೧೫ ದಿನಗಳ ಹೆಚ್ಚಿನ ಸಂಬಳ ಕೊಡುತ್ತಿದ್ದರು ಅದನ್ನೂ ನಿಲ್ಲಿಸಲಾಗಿದೆ!




ಮಿತವ್ಯಯದ ನೆವದಿಂದ ನಮ್ಮ ಬಡ ಮಂತ್ರಿಗಳು ಶಾಸಕರು ಪೊಲೀಸರ ಹೊಟ್ಟೆಯ ಮೇಲೆ ಹೊಡೆದಿದ್ದಾರೆ. ಶ್ರೀಮಂತ ಪೊಲೀಸರ ಸೌಲತ್ತುಗಳನ್ನು ರದ್ದುಪಡಿಸಿದ ಒಂದೆರಡು ದಿನಗಳ ನಂತರ ಪತ್ರಿಕೆಗಳಲ್ಲಿ ಒಂದು ಸುದ್ದಿ ಬಂದಿತ್ತು. ಅತಿಮುಖ್ಯ ಮನುಷ್ಯರ (VVIP) ವೈದ್ಯಕೀಯ ಶುಶ್ರೂಷೆಗಾಗಿ ಕೋಟ್ಯಾಂತರ - ಹೌದು ಕೋಟ್ಯಾಂತರ ರೂಪಾಯಿಗಳು ರಾಜ್ಯ ಬೊಕ್ಕಸದಿಂದ ಹರಿದು ಹೋಗಿತ್ತಂತೆ. ಸೀತಾರಾಂ ಕೇಸರಿಯವರ ಅಮೆರಿಕಾದಲ್ಲಿನ ವೈದ್ಯಕೀಯ ಶುಶ್ರೂಷೆಗಾಗಿ ಭಾರತ ಸರ್ಕಾರ ರೂ. ೯.೭೩ ಲಕ್ಷ ಖರ್ಚು ಮಾಡಿದೆ. ಅರ್ಜುನಸಿಂಗ್‌ಗಾಗಿ ಸುಮಾರು ರೂ. ೮.೯೯ ಲಕ್ಷಗಳ ಖರ್ಚಾದವಂತೆ. ಹೀಗೆಯೆ ನ್ಯಾಯಮೂರ್ತಿ ನಯ್ಯಾರ್, ಪಾಂಡಿಚೇರಿ ಉಪರಾಜ್ಯಪಾಲ ಡಾ. ರಾಜೇಂದ್ರಕುಮಾರಿ, ಕೇಂದ್ರದ ಮಾಜಿಮಂತ್ರಿ ಸುಖರಾಮ್ ರೂ. ೩೦.೩೮ ಲಕ್ಷ ರೂ.ಗಳನ್ನು, ಜಾಫರ್ ಷರೀಫ್ ೩೧ ಲಕ್ಷ, ಅಜಿತ್‌ಕುಮಾರ್ ಪಂಜಾ ೫೬ ಲಕ್ಷ, ತರುಣ್ ಗಾಗೋಲ್ ಹತ್ತು ಲಕ್ಷ, ಜೈಪಾಲ್‌ರೆಡ್ಡಿ ೧೪ ಲಕ್ಷ, ಪಿ.ವಿ. ನರಸಿಂಹರಾವ್ ಹತ್ತು ಲಕ್ಷ - ವಿದೇಶೀ ವೈದ್ಯಕೀಯ ಶುಶ್ರೂಷೆಗಾಗಿ ಸರ್ಕಾರಿ ಖಜಾನೆಗೆ ಕನ್ನ ಹಾಕಿದ್ದಾರೆ. ಇವರೆಲ್ಲರ ರೋಗವನ್ನು ಇಲ್ಲಿಯೇ ಗುಣಪಡಿಸಬಹುದಾಗಿತ್ತೆ ಇಲ್ಲವೆ ಎಂಬುದನ್ನು ತಿಳಿಸಬೇಕೆಂದು ದೆಹಲಿ ಉಚ್ಚ ನ್ಯಾಯಾಲಯ ಪರಿಣತ ವೈದ್ಯರನ್ನು ಕೇಳಿದೆ!!

ಈ ವೈದ್ಯಕೀಯ ವೆಚ್ಚಕ್ಕೆ ಹಣವುಂಟು. ನಮ್ಮ ಬಡ ಪೇದೆಗಳಿಗೆ ಉಚಿತವಾಗಿ ಹತ್ತು ಕೆ.ಜಿ. ಅಕ್ಕಿ ಕೊಡುವುದಕ್ಕೆ ಖಜಾನೆಯಲ್ಲಿ ದುಡ್ಡಿಲ್ಲ.

ಅಲ್ಲಿ ಉತ್ತರದ ಆ ರಾಜಕಾರಣಿಗಳನ್ನೇಕೆ ದೂರಬೇಕು? ಇದೇ ಆಗಸ್ಟ್ ೧೫ರಂದು - ಸ್ವಾತಂತ್ರ್ಯ ದಿನಾಚರಣೆಯ ದಿನವೇ - ಪತ್ರಿಕೆಗಳಲ್ಲಿ ಕರ್ನಾಟಕದ ಮಂತ್ರಿಗಳ ವಿದೇಶ ಪ್ರವಾಸಕ್ಕಾಗಿ ನಾಲ್ಕು ಕೋಟಿ ರೂಪಾಯಿಗಳು ಸೋರಿ ಹೋಗಿತ್ತೆಂದು ಪ್ರಕಟವಾಗಿತ್ತು. ಮುಖ್ಯಮಂತ್ರಿಗಳು ಬಿಜೆಪಿ ಶಾಸಕ ಎನ್. ಯೋಗೀಶ್ ಭಟ್ ಅವರಿಗೆ ಕೊಟ್ಟ ಲಿಖಿತ ಉತ್ತರದಲ್ಲಿ ೧೯೯೬-೯೭ ಜೂನ್‌ವರೆಗೆ ಮಂತ್ರಿಗಳ ವಿದೇಶ ಪ್ರವಾಸಕ್ಕಾಗಿ ಮೂರು ಕೋಟಿ ಹದಿನಾಲ್ಕು ಲಕ್ಷ ಏಳು ಸಾವಿರದ ತೊಂಬತ್ತೂರು ರೂಪಾಯಿ ಅದೇ ಕಾಲಾವಧಿಯಲ್ಲಿ ಅತಿಥಿ ಸತ್ಕಾರಕ್ಕೆಂದು ರೂ. ೧೫,೩೫,೮೮೦, ತಮ್ಮ ಮನೆಗಳನ್ನು ಅಚ್ಚುಕಟ್ಟಾಗಿ ಇಟ್ಟುಕೊಳ್ಳಲು ರೂ. ೨೮,೬೦,೦೦೦ ಗಳನ್ನು ಖರ್ಚು ಮಾಡಲಾಗಿತ್ತಂತೆ!! ೪೪ ಜನ ಮಂತ್ರಿಗಳು ಒಬ್ಬೊಬ್ಬರು ಎಷ್ಟೆಷ್ಟು ಖರ್ಚು ಮಾಡಿದರೆಂಬುದರ ವಿವರವನ್ನು ಮುಖ್ಯಮಂತ್ರಿಗಳು ಬರೆದುಕೊಟ್ಟಿದ್ದಾರೆ. ಮಂತ್ರಿಗಳ ಮೋಜಿನ ವಿದೇಶ ಯಾತ್ರೆಗೆ ರಾಜ್ಯದ ಬಡ ಬೋರೇಗೌಡನ ಬೊಕ್ಕಣಕ್ಕೆ ಕನ್ನ ಹೊಡೆಯಬಹುದು. ಆದರೆ ಮಳೆಗಾಳಿ ಛಳಿ ಬಿಸಿಲು ಎನ್ನದೆ ದಿನಕ್ಕೆ ೧೮ ಘಂಟೆ ನಿಂತೇ ಕೆಲಸ ಮಾಡಲು ಪೊಲೀಸರಿಗೆ ಸೌಲತ್ತು ಕೊಡಲು ಬೊಕ್ಕಸದಲ್ಲಿ ಹಣವಿಲ್ಲ!

ಇನ್ನು ಮಂತ್ರಿಗಳ ಟೆಲಿಫೋನ್ ಖರ್ಚು ಎಷ್ಟಾಯಿತೆಂಬುದನ್ನು ದಿ. ೯.೭.೯೬ರಂದು ಅದೇ ಮುಖ್ಯಮಂತ್ರಿಗಳು ವಿಧಾನಸಭೆಯಲ್ಲಿ ಉತ್ತರ ಕೊಟ್ಟಿದ್ದಾರೆ. ೧೯೯೪ನೇ ಡಿಸೆಂಬರ್‌ನಿಂದ ೧೯೯೬ನೇ ಏಪ್ರಿಲ್‌ವರೆಗೆ ಮಂತ್ರಿಗಳ ದೂರವಾಣಿ ವೆಚ್ಚ ರೂ. ೨,೬೪,೮೨,೫೨೪ (ಎರಡುಕೋಟಿ ಅರವತ್ತನಾಲ್ಕು ಲಕ್ಷ ಚಿಲ್ಲರೆ)! ಅಂದರೆ ೧೮ ತಿಂಗಳಲ್ಲಿ ಇಷ್ಟು ಹಣ ದೂರವಾಣಿಯ ತಂತಿ ಮೂಲಕ ದೇಶ ವಿದೇಶಕ್ಕೂ ಹರಿದು ಹೋಯಿತು! ಹಾಗಾದರೆ ನಮ್ಮ ಬಡ ಪೇದೆಗಳಿಗೆ ಉಚಿತವಾಗಿ ಅಕ್ಕಿ, ಸಕ್ಕರೆ, ಗೋಧಿ ಕೊಡಲು ಬೊಕ್ಕಸದಲ್ಲಿ ಹಣ ಎಲ್ಲಿ ಉಳಿದೀತು?

ಈ ಬಾಬುಗಳ ವೆಚ್ಚ ಮಂತ್ರಿಗಳಿಗೇ ಸೀಮಿತವಲ್ಲ. ನಮ್ಮ ೨೨೪ ಜನ ವಿಧಾನ ಸಭಾ ಸದಸ್ಯರು ೭೫ ಜನ ವಿ. ಪರಿಷತ್ತಿನ ಸದಸ್ಯರೇನು ಕಡಿಮೆ? ಅವರ ಸಂಬಳ, ಗಿಂಬಳ, ಸೌಲಭ್ಯ, -ಸೌಲತ್ತು, ವೈದ್ಯಕೀಯ ವೆಚ್ಚ ಹೆಚ್ಚಾಗುತ್ತಲೆ ಇದೆ. ೧೯೫೨ರಲ್ಲಿ ತಿಂಗಳಿಗೆ ರೂ. ೧೫೦ ಸಂಬಳ ಪಡೆಯುತ್ತಿದ್ದ ಶಾಸಕರು ೧೯೯೨ರ ಹೊತ್ತಿಗೆ ರೂ. ೧೦೦೦ ಸಂಬಳಕ್ಕೆ ತಲುಪಿದರು.

೧೯೯೪ರಲ್ಲಿ ಆ ಸಂಬಳ ತಿಂಗಳಿಗೆ ೨೦೦೦ ರೂ. ಆಯಿತು ೧೯೯೬ರಲ್ಲಿ ಅದು ರೂ. ೨೫೦೦ ಗಳಿಗೆ ಏರಿತು!! ಅಂದರೆ ೧೯೫೨ರಿಂದ ೧೯೯೬ರ ಕಾಲಾವಧಿಯಲ್ಲಿ ಶಾಸಕರ ಸಂಬಳ ೧೬ಪಟ್ಟು ಹೆಚ್ಚಾಯಿತು! ಅದೇ ಕಾಲಾವಧಿಯಲ್ಲಿ ನಮ್ಮ ಸಾರ್ವಜನಿಕ ಸೇವಾ ಸಿಬ್ಬಂದಿ - ಅದರಲ್ಲೂ ಪೊಲೀಸರ ಸಂಬಳ ಎಷ್ಟು ಹೆಚ್ಚಾಯಿತು! ಹಾಗೆ ವಿಪರೀತ ಹೆಚ್ಚಾಯಿತೆಂದು ನಮ್ಮ ಘನ ಸರ್ಕಾರ ಅಕ್ಟೋಬರ್ ೧೪ರ ಕಡಿತ ಆಜ್ಞೆ ಹೊರಡಿಸಿತು-ನಮ್ಮ ಬಡ ಬೋರೇಗೌಡನ ಬೊಕ್ಕಸ ಉಳಿಯಲೆಂದು.

ರಾಜ್ಯ ಸರ್ಕಾರದ ಬೊಕ್ಕಸವನ್ನು ಕರ್ನಾಟಕ ವಿಧಾನಮಂಡಲ ಸಂಬಳ, ಪಿಂಚಣಿ ಮತ್ತು ಸೌಲಭ್ಯಗಳ ಕಾಯಿದೆ ೧೯೫೬ರ ಶಾಸನದ ರಕ್ಷಣೆಯಿಂದ ಹೀಗೆ ಹಾಡು ಹಗಲೆ ದೋಚುತ್ತಿರುವವರು ಮಂತ್ರಿಗಳು ಮತ್ತು ಶಾಸಕರೆ ಮಾತ್ರವಲ್ಲ. ಮಂತ್ರಿಗಳ ಸ್ಥಾನಮಾನಕ್ಕೆ ಸರಿಸಮಾನರಾದ ಪ್ರಾಧಿಕಾರ, ನಿಗಮ, ಮಂಡಲಿಗಳ ಅಧ್ಯಕ್ಷರೂ-ಕಾಂಟೆಸ್ಸಾ ಕಾರು, ಡ್ರೈವರ್, ಪ್ರವಾಸ ಭತ್ತೆ, ಉಚಿತ ವಸತಿ...ಇ...ಸಕಲ ರಾಜ ಮರ್ಯಾದೆಯನ್ನೂ (ಅಂತ್ಯ ಕ್ರಿಯೆಯ ಕಾಲದಲ್ಲಿ ರಾಜಭಟರು ಸಮವಸ್ತ್ರದಲ್ಲಿ ಗಾಳಿಯಲ್ಲಿ ಗುಂಡು ಹಾರಿಸಿ ತಲೆಗೆಳಗಾದ ಶಸ್ತ್ರ ಹಿಡಿದು ಅಂತ್ಯ ಕಹಳೆ ಊದುವುದರ ಸಹಿತ) ಅನುಭವಿಸುತ್ತಾರೆ. ಅಂಥ ಎಷ್ಟೋ ನಿಗಮ ಪ್ರಾಧಿಕಾರಗಳನ್ನು ನಮ್ಮ ಸರ್ಕಾರ ಇಂಥ ಗೂಳಿಗಳನ್ನು ಮೇಯಿಸಲಿಕ್ಕಾಗಿಯೆ ಸ್ಥಾಪಿಸಿದೆ. ಅಂಥವರ ಒಂದು ದಂಡೇ ಇದೆ! ಅವರೆಲ್ಲರಿಗೂ ಸರ್ಕಾರದ ಬೊಕ್ಕಸ ಸಂಬಳ ಗಿಂಬಳ ಸೌಲಭ್ಯಗಳನ್ನು ವೈದ್ಯಕೀಯ ವೆಚ್ಚವನ್ನು ಹರಿಸುತ್ತಿದೆ. ಅಂದ ಮೇಲೆ ಹಗಲೆಲ್ಲ, ಪಾಳಿಯ ಮೇಲೆ ರಾತ್ರಿಯೂ ಕೆಲಸ ಮಾಡುವ ಈ ಪೊಲೀಸರಿಗೆ ಅಕ್ಕಿ, ಗೋಧಿ, ಸಕ್ಕರೆ ಒದಗಿಸಲು ಸರ್ಕಾರಕ್ಕೆ ಹಣ ಎಲ್ಲಿದೆ?

ಮಂತ್ರಿ ಮತ್ತು ಶಾಸಕರ ಸ್ಥಾನಮಾನ ಇಲ್ಲಿಗೇ ನಿಲ್ಲುವುದಿಲ್ಲ. ನಮ್ಮ ಜಿಲ್ಲಾ ಪಂಚಾಯ್ತಿ ಅಧ್ಯಕ್ಷರಿಗೂ ವಿಸ್ತರಿಸಿದೆ! ಅವರು ಮೊದಲು ೨೦ ಜನರಿದ್ದರು. ಈಗ ೨೬ ಜನರಾಗಿದ್ದಾರೆ. ಅವರಿಗೂ ಸಕಲ ರಾಜ ಮರ್ಯಾದೆ. ಅವರಿಗೆ ಆ ಸ್ಥಾನಮಾನ ಇಲ್ಲದಿದ್ದರೆ ಐ.ಎ.ಎಸ್., ಅಧಿಕಾರಿ (ಕಾರ್ಯದರ್ಶಿ) ಅವರ ಮಾತನ್ನು ಕೇಳಿಯಾರೆ? ಮೊನ್ನೆ ತಾನೆ ೨-೧೨-೯೬ರಂದು ಪಂಚಾಯ್ತಿ ರಾಜ್

**ಮಂತ್ರಿಗಳ ಮೋಜಿನ ವಿದೇಶ ಯಾತ್ರೆಗಾಗಿ ರಾಜ್ಯದ ಬಡ ಬೋರೇಗೌಡನ ಬೊಕ್ಕಣಕ್ಕೆ ಕನ್ನ ಹೊಡೆಯಬಹುದು. ಆದರೆ ಮಳೆಗಾಳಿ ಛಳಿ ಬಿಸಿಲು ಎನ್ನದೆ ದಿನಕ್ಕೆ ೧೭ ಘಂಟೆ ನಿಂತೇ ಕೆಲಸ ಮಾಡಲು ಪೊಲೀಸರಿಗೆ ಸೌಲತ್ತು ಕೊಡಲು ಬೊಕ್ಕಸದಲ್ಲಿ ಹಣವಿಲ್ಲ!**

ಮಂತ್ರಿಗಳ ಘನ ನೇತೃತ್ವದಲ್ಲಿ ಜಿ. ಪಂಚಾಯ್ತಿ ಅಧ್ಯಕ್ಷ ಉಪಾಧ್ಯಕ್ಷರ ಸಮ್ಮೇಳನ ಜರುಗಿತು. ಅದಕ್ಕೆ ರಾಜ್ಯದ ಎಲ್ಲ ಜಿ.ಪಂ. ಅಧ್ಯಕ್ಷರು ಉಪಾಧ್ಯಕ್ಷರು ಬಂದು ಇಲ್ಲಿ ಭರ್ಜರಿ ಸಭೆ ಮಾಡಿದರು. ವಿಧಾನಸೌಧದ ಸುತ್ತ ನಾಲ್ಕೂ ದಿಕ್ಕಿನಲ್ಲಿ ನಿಂತಿದ್ದ ಕಾರುಗಳ ಮನಮೋಹಕ ದೃಶ್ಯದಿಂದ ಬಿಸಿಲಿನಲ್ಲಿ ಸಂಚಾರ ನಿಯಂತ್ರಣ ಮಾಡುತ್ತಿದ್ದ ಪೊಲೀಸರ ಹೊಟ್ಟೆ ತಣ್ಣಗಾಗಿರಬೇಕು! ಅಕ್ಕಿ, ಗೋಧಿ, ಸಕ್ಕರೆ ಕಡಿತವಾದರೆ ಅವರಿಗೇಕೆ ಸಂಕಟ!!

ಹೀಗೆ ನಮ್ಮನ್ನಾಳುವ ಬಡ ಖಾದೀಧಾರೀ ಚುನಾಯಿತ ಮತ್ತು ನಾಮಕರಣ ಪ್ರಭುಗಳು ದೇಶಕ್ಕಾಗಿ ಬೆವರು ಸುರಿಸಿ ದುಡಿಯುತ್ತಿದ್ದಾರೆ! ಒಂದು ಕಡ್ಡಿಯನ್ನು - ಸೀಸದ ಕಡ್ಡಿಯನ್ನು ಸಹಿತ ಅತ್ತಿಂದ ಇತ್ತ ಎತ್ತಿ ಇಡದ ಹೊರೆಯ ಕೆಲಸ ಹೊತ್ತಿದ್ದಾರೆ! ಅವರಿಗೆ ತಮ್ಮ ಜೀವಿತ ಕಾಲದಲ್ಲಿಯೆ ಮಾತ್ರವಲ್ಲದೆ, ಸತ್ತ ಮೇಲೆ ತಮ್ಮ ಪತ್ನಿಗೂ ಕೆಲಕಾಲ ಪಿಂಚಣಿ ದೊರೆಯುವಂತೆ ಕಾನೂನು ಮಾಡಿಕೊಂಡಿದ್ದಾರೆ. ಅವರಿಗೆಲ್ಲ ಸುಖ ಸಂಪತ್ತು ಸೌಭಾಗ್ಯಗಳು ದೊರೆತ ಮೇಲೆ ಪೊಲೀಸರಿಗೆ ಕೊಡಲು ಏನು ಉಳಿಯುತ್ತದೆ? ನಮ್ಮ ಪೊಲೀಸರು 'ಪ್ರಾಮಾಣಿಕ'ರಾದ್ದರಿಂದ ಪ್ರಭುಗಳ ಆಜ್ಞೆಯನ್ನು ಶಿರಸಾವಹಿಸಿ, ಎದೆ ಸೆಟೆದು ಸೆಲ್ಯೂಟ್ ಮಾಡುತ್ತಾರೆ. ಬಿಹಾರ್‌ನಲ್ಲಿ ಸಂಪು ಹೂಡಿದಂತೆ ಇಲ್ಲಿ ಸಂಪು ಹೂಡುವ ಧೈರ್ಯ ಇವರಿಗಿಲ್ಲ. ಇಲ್ಲಿಗೆ ಬಂದ ಎಲ್ಲ ದೇಶ ವಿದೇಶೀಯರಿಗೂ ಕರ್ನಾಟಕ ಪೊಲೀಸ್ ರಕ್ಷಣೆ ಕೊಡುತ್ತದೆ!

ಇಂಥ ಪೊಲೀಸರಿಗೆ ಸಿಗುವ ಮರ್ಯಾದೆ ಏನು? ಅವರ ಟೋಪಿಯ ಮೇಲೆ ಅಂಗಿ ಗುಂಡಿಯ ಮೇಲೆ ರಾಜ್ಯ ಲಾಂಛನ ರಾರಾಜಿಸುತ್ತದೆ. ರಾಷ್ಟ್ರಪತಿಯಿಂದ ಹಿಡಿದು ಭಾರತದ ಶ್ರೇಷ್ಠ ನ್ಯಾಯಮೂರ್ತಿಗಳಿಗೂ ಸಹಿತ ರಸ್ತೆಯ ಮೇಲೆ ಹೋಗುವಾಗ ಸಂಚಾರೀ ಸಂಜ್ಞೆಯ ಮೂಲಕ ಆಜ್ಞೆ ಕೊಡುವ ಅಧಿಕಾರವುಳ್ಳ ನಮ್ಮ ನಡೆದಾಡುವ ರಾಜ್ಯಶಕ್ತಿ (State Power)ಸಾರ್ವಭೌಮ ಅಧಿಕಾರ (Sovereign authority) ಒಬ್ಬ ಯಃಕಶ್ಚಿತ ರಾಜಕೀಯ ಪುಢಾರಿಯ ಬೈಗುಳನ್ನೂ ಕೇಳಬೇಕು! ಆ ಸಮವಸ್ತ್ರದ ಒಳಗೆ ತಳಮಳಿಸುವ ಹಸಿದ ಹೊಟ್ಟೆ ಏನು ಮಾಡಬೇಕು? ಆಟೋ ಚಾಲಕ, ತರಕಾರಿ ಮಾರುವ ಬಡ ಹೆಂಗಸು ಮುಂತಾದವರ ಜೇಬು ಕತ್ತರಿಸದೆ ಈ ಪೊಲೀಸ್ ಪೇದೆ ಬದುಕುವಂತೆಯೆ ಇಲ್ಲ. ಮತ್ತೆ ಅವನೆ ಎಲ್ಲದಕ್ಕೂ ಬೇಕು. ಎಲ್ಲರಿಂದಲೂ ಛೀಮಾರಿ ಹಾಕಿಸಿಕೊಳ್ಳುವವನೂ ಅವನೆ!



## ಮಿಂಚು

ನಕ್ಷತ್ರಗಳು
ಮಿಂಚುವಂತೆ
ಆಕಾಶದಲಿ
ನನ್ನವಳ
ರೂಪ-ನೆನಪು
ಮಿಂಚುತ್ತವೆ
ಕನಸ್ಸಿನ ಆಗಸದಲಿ!

**- ಅಶೋಕ ಉಮರಾಣಿಕರ**
ಸೊಲ್ಲಾಪುರ

# ಕ್ಲಾಸ್ ರೂಂ

## ಯು.ಕೆ.ಪಿ

ಹತ್ತನೇ ತರಗತಿಯಲ್ಲಿ ಓದುತ್ತಿದ್ದಾಗ ಒಮ್ಮೆ ನಮ್ಮ ಶಾಲೆಗೆ ಮೇಲ್ವಿಚಾರಕರು ಬಂದಿದ್ದರು. ಅವರು ಕೇಳಿದ ಒಂದು ಪ್ರಶ್ನೆ: ಯು.ಕೆ.ಪಿ.ಯ ಲಾಂಗ್ ಫಾರ್ಮ್ ಏನು? ಯಾರಿಗೂ ಹೇಳಲು ಬರಲಿಲ್ಲ. ಮುಖ್ಯೋಪಾಧ್ಯಾಯರು ಪೆಚ್ಚಾದರು.

ಮರುದಿನ ಕ್ಲಾಸಿಗೆ ಬಂದ ಮುಖ್ಯೋಪಾಧ್ಯಾಯರು ಒಬ್ಬ ಹುಡುಗಿಯನ್ನು ಎಬ್ಬಿಸಿ, ''ನಿಮ್ಮ ತಂದೆಯವರು ಇಂಜನಿಯರು. ನಿನಗೆ ಯು.ಕೆ.ಪಿ. ಲಾಂಗ್ ಫಾರ್ಮ್ ಗೊತ್ತಿಲ್ಲವೇ?'' ಎಂದರು. ಆ ಹುಡುಗಿ, ''ಇವತ್ತು ಹೇಳ್ತೀನೆ ಸಾರ್. ಅಪ್ಪರ್ ಕೃಷ್ಣಾ ಪ್ರಾಜೆಕ್ಟ್'' ಎಂದು ಉತ್ತರಿಸಿದಳು. ನಾನು ಎದ್ದು ನಿಂತು ಯು.ಕೆ.ಪಿ. ಎಂದರೆ 'ಊರಿಲ್ಲ ಕೇರಿಲ್ಲ ಪರದೇಶಿ' ಎಂದು ತಿದ್ದಿದೆ! ಆ ಹುಡುಗಿ ನನ್ನನ್ನು ನೋಡಿದರೆ ಈಗಲೂ ಮೂಗು ಮುರಿಯುತ್ತಾಳೆ.

**- ಗುಡದಪ್ಪ ಎಂ. ಲಿಂಗಸೂರು,**
ಸಗರ

## ಹೆಡ್‌ಮಾಸ್ಟರ್ ತಲೆ!

ನಾನು ಕನ್ನಡ ಮೀಡಿಯಂ ೫ನೇ ತರಗತಿ ಓದುತ್ತಿದ್ದೆ. ನಮಗೆ ಇಂಗ್ಲಿಷ್ ಪಾಠವನ್ನು ಹೆಡ್ ಮಾಸ್ಟರ್ ಮಾಡುತ್ತಿದ್ದರು. A, B, C, D ಎಲ್ಲಾ ಹೇಳಿಕೊಟ್ಟ ನಂತರ ಕೆಲವು ಇಂಗ್ಲೀಷ್ ಶಬ್ದವನ್ನು ಹೇಳಿಕೊಟ್ಟಿದ್ದರು. (Head = ತಲೆ, My=ನನ್ನ, My Head = ನನ್ನ ತಲೆ ಹೀಗೆ.....)

ಒಮ್ಮೆ ನಮ್ಮ ಶಾಲೆಗೆ ಇನ್ಸ್‌ಪೆಕ್ಷನ್‌ಗೆ ಬಂದಿದ್ದರು. ಅವರು ವಿದ್ಯಾರ್ಥಿಗಳಿಗೆ ಕೆಲವು ಪ್ರಶ್ನೆಗಳನ್ನು ಕೇಳಿದರು. ಎಲ್ಲರೂ ಚೆನ್ನಾಗಿಯೇ ಉತ್ತರ ಹೇಳಿದರು. ಅವರಿಗೂ ಹೆಡ್‌ಮಾಸ್ತರರಿಗೂ ತುಂಬಾ ಖುಷಿಯಾಯಿತು. ಆಗ ಅವರು ವಿದ್ಯಾರ್ಥಿಗಳ ಕುರಿತು ನೀವು ತುಂಬಾ ಬುದ್ಧಿವಂತರು ಅದಕ್ಕೆ ಹೆಚ್ಚಿಗೆ ಪ್ರಶ್ನೆ ಕೇಳೋಲ್ಲ, ಕೊನೆಯದಾಗಿ ಈ ಪ್ರಶ್ನೆ ಎಂದು ಒಬ್ಬ ಹುಡುಗನಿಗೆ My Head ಅಂದರೆ ಏನು? ಅಂತ ಕೇಳಿದರು. ಆಗ ಆ ಹುಡುಗ ತುಂಬಾ ಖುಷಿಯಲ್ಲಿಯೇ ಎದ್ದು ನಿಂತು ಕೈಕಟ್ಟಿ My Head ಎಂದರೆ ಹೆಡ್ ಮಾಸ್ತರ್ ತಲೆ ಎಂದು ಜೋರಾಗಿಯೇ ಹೇಳಿದ.

**- ಪಿ.ಜಿ.ಆರ್. ವಂಡ್ಸೆ,**
ಕುಂದಾಪುರ

## ಮುಗಿಲು ಅಂದ್ರೆ ಹೆಂಚು

ಸರಿ ಸುಮಾರು ೨೫ ವರ್ಷಗಳ ಹಿಂದಿನ ಘಟನೆ. ನಮ್ಮ ಅಜ್ಜನ ಮನೆಯು ತುಂಬಾ ಕಾಡು ಪ್ರದೇಶ ಮತ್ತು ನಾಲ್ಕು ದಿನಕ್ಕೊಮ್ಮೆ ಒಂದು ಬಸ್ಸು ಹೋಗುತ್ತಿತ್ತು. ಆ ಊರಿನಲ್ಲೇ ನಮ್ಮ ತಾತ ದೊಡ್ಡ ಶ್ರೀಮಂತ. ಹಾಗಾಗಿ ಒಂದು ಶಾಲೆ ತೆರಸಿದರು.

ಆಗ ನಮ್ಮ ಅಮ್ಮ-ಚಿಕ್ಕಮ್ಮ ಹೀಗೆ ಅನೇಕ ವಿದ್ಯಾರ್ಥಿಗಳು ಏನೂ ತಿಳಿಯದ ಮುಗ್ಧ ಮಕ್ಕಳು. ಶಿಕ್ಷಕರಿಗೋ ತಲೆ ನೋವೇ ಬರ್‍ತಾ ಇತ್ತು. ಏನೊಂದೂ ಅರ್ಥವೇ ಆಗ್ತಿರಲಿಲ್ಲ. ಒಬ್ಬರೇ ಶಿಕ್ಷಕರು ಒಟ್ಟು ಕ್ಲಾಸನ್ನ ತೆಗೆದುಕೊಳ್ತಾ ಇದ್ರು. ಒಮ್ಮೆ ಮೇಲ್ವಿಚಾರಕರು ಮಕ್ಕಳ ಬುದ್ಧಿಮತ್ತೆಯನ್ನ ಪರೀಕ್ಷೆ ಮಾಡೋದಿಕ್ಕೆ ಅಂತ ಬಂದ್ರು. ಆಗ ನಮ್ಮ ಅಜ್ಜನನ್ನೂ ಕರೆಸ್ತಿದ್ರು. ಮೇಲ್ವಿಚಾರಕರು, ಮಕ್ಕಳಿಗೆ ಒಂದು ಪ್ರಶ್ನೆ ಕೇಳಿದ್ರು. ''ಮುಗಿಲು'' ಅಂದ್ರೆ ಏನು? ಒಬ್ಬನೂ ಈ ಪ್ರಶ್ನೆಗೆ ಉತ್ತರಿಸಲೇ ಇಲ್ಲ. ಆಗ ನಮ್ಮ ತಾತ ಕಣ್‌ಸನ್ನೆಯಲ್ಲೇ ಕಣ್ಣನ್ನ ಮೇಲೆ ಮಾಡಿ ತೋರಿಸಿದ್ರಂತೆ. ಆಗ ನಮ್ಮ ಚಿಕ್ಕಮ್ಮ ಎದ್ದು ನಿಂತದ್ದೇ ತಡ ''ಹೆಂಚು'' ಅಂದ್ರಂತೆ. ಇದನ್ನು ಕೇಳಿದ ನಮ್ಮ ಮೇಷ್ಟ್ರು ಮತ್ತು ನಮ್ಮ ತಾತಂಗೆ ಹೇಗಾಗ್ಬೇಡ ಹೇಳಿ?

**- ಜಯಲಕ್ಷ್ಮಿ ಭಟ್ ಪೊಟೋಲಿ**
ಜೋಯಿಡಾ

## ಕ್ರಿಯಾಪದ

ನಾನು Ist P.U.C. ಓದುತ್ತಿದ್ದೆ. ಇಂಗ್ಲೀಷ್ ಉಪನ್ಯಾಸಕರು grammerನಲ್ಲಿ ಕ್ರಿಯಾ ಮತ್ತು ನಾಮಪದದ ಬಗ್ಗೆ ಹೇಳುತ್ತಿದ್ದರು. ನೋಡಿದ್ದೆಲ್ಲಾ ನಾಮಪದ, ಮಾಡಿದ್ದೆಲ್ಲಾ ಕ್ರಿಯಾಪದ ಎಂದು ಹೇಳಿದರು. ಆಗ ಒಬ್ಬ ಹುಡುಗನನ್ನು ಎಬ್ಬಿಸಿ ಮರ ಯಾವ ಪದ ಆಗುತ್ತೆ ಎಂದು ಕೇಳಿದರು. ಅವನು ನಾಮಪದ ಎಂದು ಹೇಳಿದ. Table ಯಾವ ಪದ ಎಂದು ಕೇಳಿದರು. ಕ್ರಿಯಾಪದ ಎಂದು ಹೇಳಿದ. ಅದು ಹೇಗೆ ಕ್ರಿಯಾಪದ ಆಗುತ್ತೆ ಎಂದು ಕೇಳಿದರು. ಆಗ ಅವನು Table ಮಾಡಿದ್ದಲ್ಲಾ ಹಾಗಾಗಿ ಅದು ಕ್ರಿಯಾಪದ ಎಂದು ಹೇಳಿದನು.

**- ಪ್ರತಿಮಾ ಜಿ.ಎಸ್.,**
ಗೊರಕೋಡು

## ಕಂಪ್ಯೂಟರ್‌ನ ಜಾತಿ!

ನಾನಾಗ ಗುಲ್ಬರ್ಗಾದಲ್ಲಿ ಶರಣ ಬಸವೇಶ್ವರ ವಿಜ್ಞಾನ ಕಾಲೇಜಿನಲ್ಲಿ ಬಿ.ಎಸ್ಸಿ. ಓದುತ್ತಿದ್ದೆ. ಆ ಸಮಯದಲ್ಲಿ ಕಂಪ್ಯೂಟರ್ ಬಗ್ಗೆ ಮಾಹಿತಿ ನೀಡಲು ಬೆಂಗಳೂರಿನಿಂದ ವಿಜ್ಞಾನಿಗಳೊಬ್ಬರನ್ನು ಕರೆಸಲಾಗಿತ್ತು.

''ಮಂಡಲ ಚಳುವಳಿಯ'' ಬಿಸಿ ಇದ್ದ ಕಾಲವದು. ಪರ-ವಿರೋಧ ಸಂಘಟನೆಗಳು 'ಬಂದ್'ಗಳನ್ನು ನಡೆಸಿದ್ದವು.

ವಿಜ್ಞಾನಿಗಳು ಉತ್ಸಾಹದಿಂದ ಲೆಕ್ಚರ್ ಆರಂಭಿಸಿ, ಮುಗಿಸಿದರು. ನಮಗೇನಾದರೂ ಸಮಸ್ಯೆಯಿದ್ದರೆ ಕೇಳಬಹುದು ಎಂದರು. ನಾನು ಕುತೂಹಲದಿಂದ "What is cost of Computer?" (ಕಂಪ್ಯೂಟರ್‌ನ ಬೆಲೆ ಎಷ್ಟು?) ಎಂದು ಕೇಳಿದೆ. ಎಲ್ಲ ವಿದ್ಯಾರ್ಥಿಗಳು ನನ್ನತ್ತ ತಿರುಗಿ ನೋಡ ಹತ್ತಿದರು. ನಾನೇನು ತಪ್ಪು ಮಾಡಲಿಲ್ಲವಷ್ಟೆ ಎಂದು ಗೊಂದಲಗೊಳಗಾದೆ. ಆದರೆ, ವಿಜ್ಞಾನಿಗಳು ನಿರ್ಲಿಪ್ತರಾಗಿ ಉತ್ತರ ಹೇಳಿದರು.

ನಂತರ ಹೊರಬಂದಾಗ ಎಲ್ಲರೂ ನನ್ನತ್ತ ನೋಡಿದರೇಕೆಂದು ಸ್ನೇಹಿತನನ್ನು ಕೇಳಿದೆ. ಆತ ನಗುತ್ತ ''ನೀನು cost ಎಂದುದನ್ನು ಬಹಳ ಜನ cast (ಜಾತಿ) ಎಂದು ಅರ್ಥ ಮಾಡಿಕೊಂಡಿದ್ದಕ್ಕಾಗಿ ನಿನ್ನತ್ತ ತಿರುಗಿ ನೋಡಹತ್ತಿದ್ದರು'' ಎಂದ.

ಕಂಪ್ಯೂಟರ್ ಬೆಲೆ ಎಷ್ಟು ಎನ್ನುವದರ ಬದಲು ಕಂಪ್ಯೂಟರಿನ ಜಾತಿ ಯಾವುದು ಎಂದು ಆಭಾಸ ಮಾಡಿಕೊಂಡಿದ್ದರು ಅಲ್ಲಿ ಕುಳಿತವರು!

**- ಲೀಲಾಧರ ಮಾ. ಭಂಡಾರಿ**
ರುಕ್ಮಾಪುರ



೩೬ ಮತ್ತು ೪೦ನೇ ವಾರದಲ್ಲಿ ಬದಲಾವಣೆ

# ಗರ್ಭವತಿಯಲ್ಲಾಗುವ ಬದಲಾವಣೆ

○ ಡಾ. ಸುನಂದ ಕುಲಕರ್ಣಿ

ಮಗುವೆಂಬ ಸಣ್ಣಜೀವ ತಾಯ ಗರ್ಭದಲ್ಲಿ ಬೆಳೆಯುತ್ತಿರುವಾಗ ತಾಯಿಯ ದೇಹದಲ್ಲಿ ಹಲವಾರು ಬದಲಾವಣೆಯಾಗುತ್ತದೆ. ಈ ಹೊಸ ಜೀವಿ ತಾಯಿಯ ಉದರದಲ್ಲಿ ಇರುವವರೆಗೆ ಅದರ ಹೊಟ್ಟೆಗೆ ಆಹಾರ, ಪ್ರಾಣವಾಯು ನೀರು ಮುಂತಾದುವುಗಳು ಬೇಕಾಗುತ್ತವೆ.

ಮಗುವು ಗರ್ಭಾಶಯದಲ್ಲಿ ಬೆಳೆಯುತ್ತಿರುವಾಗ, ಗರ್ಭಾಶಯ ದೊಡ್ಡದಾಗುತ್ತಾ ಹೋಗುತ್ತದೆ. ಮೂರು ತಿಂಗಳು ಮುಗಿಯುವ ಹೊತ್ತಿಗೆ, ಅದು ಕಟಿ ಪ್ರದೇಶದಿಂದ ಬೆಳೆದು ಹೊಟ್ಟೆಯನ್ನು ಅದುಮಿದರೆ, ಕೈಗೆ ತಾಕುತ್ತದೆ. ಬರಬರುತ್ತ ಅದು ಇನ್ನೂ ಬೆಳೆದು ಎಲ್ಲರಿಗೂ ಕಾಣುವಂತೆ ಬೆಳೆಯುತ್ತದೆ. ಇದೇ ತರಹ ಹೊಟ್ಟೆಯ ಮೇಲೂ ಕೆಲವು ಬದಲಾವಣೆ ಕಂಡು ಬರುತ್ತವೆ. ಹೊಟ್ಟೆಯ ಸ್ನಾಯುಗಳು ಹೀಚಿ, ನಂತರ ಅಲ್ಲಲ್ಲಿ ಕೆಂಪು ಬಣ್ಣದ ಸ್ಥಿತಿಸ್ಥಾಪಕತ್ವ (Elastic) ಗುಣ ಕಳೆದುಕೊಂಡ ಗುರುತಿನ ಚರ್ಮವನ್ನು ನೋಡಬಹುದು. ಈ ತರಹದ ಬದಲಾವಣೆ ಕೇವಲ ಹೊಟ್ಟೆಯ ಮೇಲೆ ಮಾತ್ರವಲ್ಲ, ಎದೆಯ ಮೇಲೆ ತೊಡೆಗಳ ಮೇಲೂ ನೋಡಬಹುದು. ಹೊಕ್ಕುಳದ ಪಕ್ಕದ ಸ್ನಾಯುಗಳೆರಡೂ ಸಹಿತ ಕೆಲವರಲ್ಲಿ (ಅಂದರೆ ಯಾರಲ್ಲಿ ಸ್ನಾಯುಗಳು ಬಲಯುತವಾಗಿಲ್ಲವೋ ಅವರಲ್ಲಿ ಮಾತ್ರ) ಗರ್ಭಾಶಯ ಬೆಳೆದಂತೆ ಸರಿದುಕೊಳ್ಳಬಹುದು. ತೀರ ಕಡಿಮೆ ಸಂದರ್ಭದಲ್ಲಿ ಗರ್ಭಾಶಯ ಈ ಎರಡೂ ಸ್ನಾಯುಗಳ ಮಧ್ಯೆ ತೂರಿಕೊಂಡು ಕಾಣಿಸಿಕೊಳ್ಳಬಹುದು.

ಬಸಿರು ಇರುವಾಗ ಹೊಕ್ಕುಳ ಕೆಳಗಡೆ ಮಧ್ಯರೇಖೆಯು ಕಪ್ಪಾಗಿಯೋ ಕಂದು ಬಣ್ಣದ್ದಾಗಿಯೋ ಕಾಣಬಹುದು. ಕೆಲವು ಸಲ ಇದೇ ಬಣ್ಣವನ್ನು ಗಲ್ಲಗಳಮೇಲೂ, ಕುತ್ತಿಗೆಯ ಮೇಲೂ ನೋಡಬಹುದು. ಈ ಬಣ್ಣ ಹೆರಿಗೆಯಾದ ನಂತರ ಕಡಿಮೆಯಾಗುತ್ತದೆ. ಈ ಬದಲಾವಣೆಯು ಕಪ್ಪು ವರ್ಣವನ್ನು ವೃದ್ಧಿಸುವ ರಸದೂತಗಳಿಂದ ಆಗುತ್ತದೆ. ಇದೂ ಅಲ್ಲದೆ ದೇಹದ ಮೇಲೆ ಸಣ್ಣ ರಕ್ತನಾಳಗಳು ಕೆಂಪಾಗಿ ಕಾಣಿಸುತ್ತವೆ. ಕೈಗಳೆರಡೂ ಸಹಿತ ಕೆಂಪಗಾಗಿ ಕಾಣಿಸಬಹುದು. ಇದು ಹೆಚ್ಚಾಗಿ ಬೆಳ್ಳಗಿನ ಹೆಂಗಸರಲ್ಲಿ ಕಾಣಿಸುತ್ತವೆ. ಇವೂ ಸಹಿತ ಹೆರಿಗೆಯಾದ ನಂತರ ಹೋಗಿ ಬಿಡುತ್ತವೆ.

ಎದೆಯ ಪ್ರಮಾಣವು ಸಹಿತ ದೊಡ್ಡದಾಗಿ ಎರಡನೆಯ ತಿಂಗಳಿನಿಂದ ದೊಡ್ಡದಾಗಲು ಶುರುವಾಗುತ್ತದೆ. ನರಗಳು ಸಹಿತ ಉಬ್ಬಿಕಾಣಿಸಲು ಶುರುವಾಗುತ್ತವೆ. ಎದೆಯ ತೊಟ್ಟು ದೊಡ್ಡದಾಗುತ್ತದೆ. ತೊಟ್ಟನ್ನು ತೀಡಿದರೆ ಹಳದಿವರ್ಣದ ಹಾಲು ಬರುತ್ತದೆ. ತೊಟ್ಟಿನ ಸುತ್ತಲೂ ಕಪ್ಪು ಭಾಗ ದೊಡ್ಡದಾಗುತ್ತದೆ. ಆ ಭಾಗದಲ್ಲಿ ಗುಳ್ಳೆ ಗುಳ್ಳೆ ತರಹದ ಚರ್ಮ ಎದ್ದು ಬರುತ್ತದೆ. ಇವಕ್ಕೆ "ಮೊಂಟಿಗೊಮೆರಿಯ ಟ್ಯುಬರಿಕಲ್ಸ್" ಅನ್ನುತ್ತಾರೆ. ಎದೆಯ ಪರಿಪೂರ್ಣ ವಿಕಾಸ, ಬೆಳವಣಿಗೆ ಬಸಿರಾಗಿದ್ದಾಗಲೇ ಆಗುತ್ತದೆ.

ಸ್ತ್ರೀ ಗರ್ಭವತಿಯಿದ್ದಾಗ ಅವಳ ತೂಕ ಏರಲು ಶುರುವಾಗುತ್ತದೆ. ೯ ರಿಂದ ೧೧ ಕೆ.ಜಿ. ಸಾಮಾನ್ಯವಾಗಿ ಆಗಬೇಕು. ಆದರೆ ನಮ್ಮ ದೇಶದ ಎಲ್ಲ ಸ್ತ್ರೀಯರ ತೂಕ ಇಷ್ಟು ಏರುವುದಿಲ್ಲ. ಮೊದಲ ತ್ರೈಮಾಸಿಕದಲ್ಲಿ ೧ ಕೆ.ಜಿ ಏರಿದರೆ ಹೆಚ್ಚು. ಎಷ್ಟೋಸಲ ಹಸಿವಾಗದೇ, ತಿಂದರೂ ಮಳಮಳವಾಗಿ ವಾಂತಿಯಿಂದ ಏನನ್ನೂ ತಿಂದರೂ ಹೊಟ್ಟೆಯಲ್ಲಿ ಉಳಿಯದೇ ಉಪವಾಸವಿದ್ದು. ತೂಕ ಏರುವುದಿಲ್ಲ. ೨ನೇಯ ಹಾಗೂ ೩ನೇಯ ತ್ರೈಮಾಸಿಕದಲ್ಲಿ ತಲಾ ೫ ಕೆ.ಜಿ.ಯಂತೆ ತೂಕ ಸಾಮಾನ್ಯವಾಗಿ ಏರಬೇಕು. ಬಸಿರು ಇರುವಾಗ ದೇಹದಲ್ಲಿ ೬ ೧/೨ ಕೆ.ಜಿ. ಯಷ್ಟು ನೀರೂ ಸೇರಿಕೊಂಡಿರುತ್ತದೆ. ಈ ನೀರಿನ ಪ್ರಮಾಣ ಸಹ ಹಡೆದ ನಂತರ ಮೂತ್ರದಲ್ಲಿ ಹೋಗಿ ಸ್ತ್ರೀಯು ಮತ್ತೆ ತೆಳ್ಳಗೆ ಕಾಣುತ್ತಾಳೆ. ತೂಕ ಏರದಿದ್ದರೆ ಮಗುವು ಸಣ್ಣದಾಗಿ ಹುಟ್ಟಬಹುದು.

ಇದೇ ರೀತಿ ನಾಡಿಯ ಹೊಡೆತ ಪ್ರತಿ ಮಿನಿಟಿಗೆ ೧೦ ರಂತೆ ಜಾಸ್ತಿಯಾಗುತ್ತದೆ. ರಕ್ತದೊತ್ತಡವೂ ಸಾಮಾನ್ಯವಾಗಿ ಕಡಿಮೆಯಾಗ ಬೇಕು, ಇಲ್ಲವೆ ಅಷ್ಟೇ ಉಳಿಯಬೇಕು. ಯಾವ ಕಾಲಕ್ಕೂ ಅದು ಏರುವುದು ಒಳ್ಳೆಯದಲ್ಲ. ಮಗುವಿಗೂ ಪೂರೈಕೆಯಾಗಲು ಬೇಕಾಗುವುದರಿಂದ ರಕ್ತ ಹಿಗ್ಗುತ್ತದೆ. ಇದರಿಂದ ರಕ್ತವೃದ್ಧಿಸಲು ಕಬ್ಬಿಣದಂಶ ದೇಹಕ್ಕೆ ಬೇಕಾಗುತ್ತದೆ. ಇದೇ ರೀತಿ ಬಿಳಿಯಗೋಲಕಗಳ ಸಂಖ್ಯೆ ಹೆಚ್ಚಾಗುತ್ತದೆ. ರಕ್ತವನ್ನು ಹೆಪ್ಪು ಗಟ್ಟಿಸುವ ಕಣಗಳೂ ಸಹಿತ ಹೆಚ್ಚಾಗುತ್ತವೆ. ಹೆರಿಗೆಯಲ್ಲಿ, ನಂತರ ಬಾಣಂತನದಲ್ಲಿ ಅಷ್ಟಷ್ಟು ರಕ್ತ ಹೋಗುವುದರಿಂದ ದೇಹದಲ್ಲಿ


ತಾಯಿಗೆ ರಕ್ತವನ್ನು ಉಳಿಸಿಕೊಡಲು ಮಾಡಿದ ಈ ನೈಸರ್ಗಿಕ ಕ್ರಿಯೆಯಿಂದ ತಾಯಿ ಬದುಕಲು ಸಾಧ್ಯ. ಬಿಳಿಗೋಲಕಗಳು ಮುಂಬರುವ ನಂಜನ್ನು ಹೊಡೆದೋಡಿಸುವ ಸೈನಿಕರಂತಾದರೆ, ಹಿಗ್ಗಿದ ರಕ್ತದ ಪ್ರಮಾಣ ತಾಯಿಯನ್ನು ರಕ್ತಸ್ರಾವವಾದರೂ ಸಹಿತ ಉಳಿಸುತ್ತದೆ.

ಮೂತ್ರಪಿಂಡ, ಮೂತ್ರಾಶಯ, ಮೂತ್ರನಾಳಗಳಲ್ಲಿಯೂ ಸಹ ಬದಲಾವಣೆಯಾಗುತ್ತದೆ. ಮೊದಲ ತ್ರೈಮಾಸಿಕದಲ್ಲಿ ಗರ್ಭಾಶಯ ಮೂತ್ರಾಶಯವನ್ನು ಒತ್ತುವುದರಿಂದ ಮೇಲಿಂದ ಮೇಲೆ ಮೂತ್ರವಿಸರ್ಜನೆಗೆ ಹೋಗಬೇಕಾಗುತ್ತದೆ. ಹಾಗೆಯೇ ಕೊನೆಯ ತ್ರೈಮಾಸಿಕದಲ್ಲಿಯೂ ಸಹ ಮಗುವಿನ ತಲೆ ಮೂತ್ರಾಶಯಕ್ಕೆ ಒತ್ತುವುದರಿಂದ ಇದೇ ರೀತಿ ತೊಂದರೆಯಾಗುತ್ತದೆ. ಇದೇ ರೀತಿ ನಿರ್ನಾಳ ಗ್ರಂಥಿಗಳಲ್ಲಿ, ಶ್ವಾಸಕೋಶಗಳಲ್ಲಿಯೂ ಸಹ ಹಲವಾರು ಬದಲಾವಣೆಗಳನ್ನು ಕಾಣಬಹುದು.

ಗರ್ಭ ಬೆಳೆದಂತೆ ಬಾಯಲ್ಲಿ ಜೊಲ್ಲು ಸುರಿಸುವಿಕೆ, ಜಠರದಲ್ಲಿ ಆಮ್ಲಹೆಚ್ಚಾಗಿ ಎದೆಯುರಿವಿಕೆ, ಕರುಳಿನ ಸ್ನಾಯುಗಳ ಪ್ರಸರಣದಿಂದ ಮಲಬದ್ಧತೆ ಮುಂತಾದವುಗಳು ಸಾಮಾನ್ಯ. ಕೆಲವರಲ್ಲಿ ಒಸಡುಗಳು ಬೆಳೆದು ಹಲ್ಲುಜ್ಜುವಾಗ ರಕ್ತಸ್ರಾವವಾಗಬಹುದು.

ಗರ್ಭ ಬೆಳೆದಂತೆ ಹೊಟ್ಟೆ ಮುಂದೆ ಬಂದು ಬೆನ್ನು ಹಿಂದೆ ಬಾಗಿ ನಡೆಯುವ (ಪದ್ಧತಿ) ರೀತಿಯೇ ಬೇರೆ ಕಾಣಬಹುದು. ಇದಕ್ಕೆ ಕೀಲುಗಳು ಸಡಿಲವಾಗಿದ್ದುದೂ ಒಂದು ಕಾರಣ ಎನ್ನಬಹುದು. ಇದೂ ಅಲ್ಲದೆ ಕೈಗಳಲ್ಲಿ ಮರಗಟ್ಟುವಂತೆ ಅಂದರೆ ಜೋಮು ಹಿಡಿದಂತೆ ಅನಿಸಬಹುದು. ಹೊಟ್ಟೆ ಮುಂದು ಬಂದದ್ದಕ್ಕೆ ಕುತ್ತಿಗೆಯನ್ನು ಬಗ್ಗಿಸುವುದರಿಂದ ಭುಜಗಳು ಇಳಿಬಿದ್ದು ಕೈಗಳಲ್ಲಿ ಈ ಪರಿಣಾಮ ಕಂಡುಬರಬಹುದು.

ಇದೇ ರೀತಿ ತಲೆಯಲ್ಲಿಯ ವಿಚಾರಗಳೂ ಸಹಿತ




ಗರ್ಭದ ಬೆಳವಣಿಗೆ ಹಂತಗಳು

# ಪ್ರಸೂತಿ ಪೂರ್ವದ ಸಲಹೆಗಳು

ಬಸಿರು ಇರುವಾಗ ಗರ್ಭಸ್ಥ ಸ್ತ್ರೀಗೆ ಹಲವಾರು ವಿಷಯಗಳ ಬಗ್ಗೆ ತಿಳುವಳಿಕೆ ನೀಡಿ ಅವಳು ಯಾವುದನ್ನು ಮಾಡಬೇಕು, ಯಾವುದನ್ನು ಮಾಡಬಾರದು, ಯಾವಾಗ್ಗೆ ಆಸ್ಪತ್ರೆಗೆ ಬರಬೇಕು, ತ್ವರಿತವಾಗಿ ಯಾವುದಕ್ಕೆ ಚಿಕಿತ್ಸೆ ನೀಡಬೇಕು ಮುಂತಾದವುಗಳನ್ನು ತಿಳಿಸಿ ಹೇಳಬೇಕಾಗುತ್ತವೆ. ಅವೆಲ್ಲ ಈ ಕೆಳಗಿನಂತಿವೆ.

೧. ಗರ್ಭಸ್ಥ ಸ್ತ್ರೀ ದಿನಕ್ಕೆ ೧೦ ತಾಸುಗಳಷ್ಟು ಕಾಲ ವಿಶ್ರಾಂತಿ ತೆಗೆದುಕೊಳ್ಳಬೇಕು. ೮ ತಾಸು ರಾತ್ರಿ ಮಲಗಿದರೆ, ೧-೨ ತಾಸು ಮಧ್ಯಾಹ್ನ ವಿಶ್ರಾಂತಿ ತೆಗೆದುಕೊಳ್ಳಬೇಕು. ಕೆಲಸಮಾಡುವ ಹೆಂಗಸಿಗೆ ಆಫೀಸಿನಲ್ಲಿ ವಿಶ್ರಾಂತಿ ಕೊಠಡಿಯಿದ್ದರೆ ಒಳಿತು. ಬಸಿರು ಹೆಂಗಸು ತನ್ನ ದೈನಂದಿಕ ಕೆಲಸಮಾಡಬೇಕು. ಆದರೆ; ಗರ್ಭಪಾತವಾಗುವ ಚಿನ್ಹೆವಿದ್ದಾಗ ಮಾತ್ರ ವಿಶ್ರಾಂತಿ ಅತ್ಯಗತ್ಯ. ಕೆಲಸದಲ್ಲಿರುವ ಹೆಂಗಸರಿಗೆ ೬ ವಾರ ರಜೆ ಸಿಗುತ್ತವೆ.

೨. ಬಸಿರು ಇರುವಾಗ ಮಲಬದ್ಧತೆಯಾಗುವುದು ಸಹಜವಿರುವುದರಿಂದ ಆಗಾಗ್ಗೆ ಬಾಳೆಹಣ್ಣು, ಸೊಪ್ಪಿನಪಲ್ಯ, ಸಾರು ತೆಗೆದುಕೊಳ್ಳಬೇಕು. ಸಾಕಷ್ಟು ನೀರು ಕುಡಿಯಬೇಕು. ಮಲಬದ್ಧತೆಯನ್ನು ನೀಗಲು ತೀಕ್ಷ್ಣ ರೇಚಕಗಳನ್ನು ಉಪಯೋಗಿಸಬಾರದು. ಇದರಿಂದ ಅಕಾಲ ಹೆರಿಗೆಯಾಗಬಹುದು.

೩. ಎತ್ತರ ಹಿಮ್ಮಡಿಯಿರುವ ಚಪ್ಪಲಿ, ಜಾರುವ ಸಂಭವವಿರುವುದರಿಂದ ಹಾಕಬಾರದು. ಎತ್ತರ ಹಿಮ್ಮಡಿಯಿಂದ ಬೆನ್ನು ನೋವು ಬಸಿರಿರುವಾಗ ಜಾಸ್ತಿಯಾಗಬಹುದು. ಕಾಲು ಜಾರಿದರೆ ಗರ್ಭಕ್ಕೆ ಪೆಟ್ಟುಬಿದ್ದು ಮಗುವಿಗೂ ತಾಯಿಗೂ ಅಪಾಯ ತಟ್ಟಬಹುದು.

೪. ಸಡಿಲವಾದಂಥ ಬಟ್ಟೆಗಳನ್ನು ಧರಿಸಬೇಕು. ಹೊಟ್ಟೆಗೆ ಬಾಧಕವಾಗುವ ಹೊಟ್ಟೆಯನ್ನು ಹಿಚುಕುವ ಬಟ್ಟೆಯು ಬೇಡ. ಬೆವರನ್ನು ಹೀರುವ, ಸಡಿಲವಾದ ಹಗುರ ಬಟ್ಟೆ ಇದ್ದರೆ ಉತ್ತಮ.

೫. ಹಲ್ಲಿನ ತೊಂದರೆ ಇದ್ದವರು ಎರಡನೇಯ ತ್ರೈಮಾಸಿಕದಲ್ಲಿ ಹಲ್ಲು ಕೀಳಿಸಿಕೊಳ್ಳಬಹುದು. ಹಲ್ಲಿನ ತೊಂದರೆಗೆ, ರಕ್ತಸ್ರಾವಕ್ಕೆ (ಒಸಡಿನ) ವೈದ್ಯರನ್ನು ಕಾಣಬೇಕು.

೬. ಎದೆಯ ತೊಟ್ಟು ಒಳಸೇರಿದ್ದರೆ, ಚಪ್ಪಟೆಯಾಗಿದ್ದರೆ. ಅವನ್ನು ಎಳೆದೆಳೆದು ಹೊರತೆಗೆಯಬೇಕು. ಒಳಸೇರಿದ್ದರೆ ವೈದ್ಯರಿಗೆ ತೋರಿಸಿ ಹೊರತೆಗೆಯಿಸಿಕೊಳ್ಳಬೇಕು. ಸ್ನಾನ ಮಾಡುವಾಗ ಅವಕ್ಕೆ ಸಾಬೂನಿನಿಂದ ಸ್ವಚ್ಛವಾಗಿ ತೊಳೆದು ದಿನಾಲೂ ಜಗ್ಗಬೇಕು.

೭. ದೂರದೂರದ ಪ್ರವಾಸ ಒಳ್ಳೆಯದಲ್ಲ. ಬಸ್ಸಿನ ಕುಲುಕಾಟ, ರಿಕ್ಷಾದಲ್ಲಿ ತಗ್ಗು-ದಿನ್ನೆಯ ಅಲೆದಾಟ, ಇವುಗಳಿಂದ ಸ್ತ್ರೀಗೆ ಪರದಾಟವಾಗುತ್ತದೆ. ರೈಲು ಪ್ರಯಾಣ ಒಳ್ಳೆಯದು. ಆದಷ್ಟು ಮೊದಲ ಹಾಗು ಕೊನೆಯ ತ್ರೈಮಾಸಿಕದಲ್ಲಿ ದೂರದ ಪ್ರಯಾಣವನ್ನು ಬಿಡಬೇಕು. ವಿಮಾನ ಪ್ರಯಾಣ ಒಳ್ಳೆಯದಾದರೂ ಮೇಲೆ ಮೇಲೆ ಹೋದಂತೆ ಪ್ರಾಣವಾಯುವಿನ ಕೊರತೆ ಕೆಲವು ಸಲ ಆಗಬಹುದು.

೮. ತಲೆನೋವಿಗೆ, ಜ್ವರಕ್ಕೆ, ನೆಗಡಿಗೆ, ಹೀಗೆ ಸಿಕ್ಕ ಸಿಕ್ಕ ಗುಳಿಗೆಗಳನ್ನು ವೈದ್ಯರ ಅನುಮತಿಯಿಲ್ಲದೆ ತೆಗೆದುಕೊಳ್ಳಲಾಗದು. ಸಿಗರೇಟು, ಮದ್ಯಪಾನ ಮುಂತಾದ ವ್ಯಸನ ಹಾಗು ಮಾದಕದ ಮಾತ್ರೆಗಳು ಬಸಿರಿರುವಾಗ ಎಂದೆಂದಿಗೂ ವರ್ಜ್ಯ. ಇವೆಲ್ಲವುಗಳಿಂದ ಹುಟ್ಟುವ ಮಗುವಿಗೆ, ಗರ್ಭಸ್ಥ ಸ್ತ್ರೀಗೆ ಅಪಾಯ. ವಿಕೃತ ಮಗು, ಸಣ್ಣತೂಕದ ಕೂಸು ಇಲ್ಲವೆ ಅಪಕ್ವ ಮಗುವು ಹುಟ್ಟುವ ಸಂಭವವಿದೆ.


೯. ಲಸಿಕೆಗಳು : ವಿಷಮಶೀತಜ್ವರ, ಹಳದಿಯಜ್ವರ (Yellow fever) ಕಾಲರಾ ಮುಂತಾದವುಗಳ ಲಸಿಕೆಗಳನ್ನು ವೈದ್ಯರ ನೇತೃತ್ವದಲ್ಲಿ ಅವರ ಅಪ್ಪಣೆಯಂತೆ ತೆಗೆದುಕೊಳ್ಳಬೇಕು.

೧೦. ಮೊದಲು ತ್ರೈಮಾಸಿಕದಲ್ಲಿ ಯಾವುದೇ ತರಹದ ಮಾತ್ರೆ, ಚುಚ್ಚುಮದ್ದುಗಳನ್ನು ಆದಷ್ಟು ತೆಗೆದುಕೊಳ್ಳಬಾರದು. ಟಾನಿಕ್ಕಿನ ಮಾತ್ರೆ ಸಹ ಈ ತ್ರೈಮಾಸಿಕದಲ್ಲಿ ವರ್ಜ್ಯವಿದ್ದರೆ ಒಳಿತು. ಬೇಕೆಂದರೆ, ವೈದ್ಯರ ಅಪ್ಪಣೆಯಂತೆ ಮಾಡಬೇಕು.

ಬದಲಾವಣೆಯಾಗುತ್ತವೆ. ಹುಳಿ, ವಗರು ತಿನ್ನಬೇಕೆನಿಸುವುದು, ಅಪರೂಪದ ತಿಂಡಿಗಳಿಗೆ ಆಸೆ ಪಡುವುದು ಮುಂತಾದವುಗಳು. ಇಟ್ಟಿಗೆ, ಮಣ್ಣು, ಖಡು ಮುಂತಾದವುಗಳನ್ನು ಬಸಿರಾಗಿರುವ ಹೆಂಗಸರು ಈ ಮೊದಲು ತಿನ್ನುತ್ತಿದ್ದರು. ಅದು ಸತುವಿನಂಶದ ಕೊರತೆಯಿಂದ ಎಂದು ಕಂಡು ಬಂದಿದೆ. ಈಗೀಗ ಕಲಿತ ಹುಡುಗಿಯರು ಜ್ಞಾನಿಗಳಾಗಿರುವುದರಿಂದ ಈ ತರಹದವುಗಳನ್ನು ತಿನ್ನುವುದಿಲ್ಲ.

ದೇಹದಲ್ಲಿಯ ಈ ಎಲ್ಲ ಬದಲಾವಣೆಗಳು ಒಂದು ಮಗು ತಾಯಿಯ ಗರ್ಭದಲ್ಲಿ ಬೆಳೆಯುತ್ತಿರುವಾಗ, ಅದಕ್ಕೆ ಬೇಕಾಗುವಂತೆ ನಿಸರ್ಗಮಾಡುವ ಕ್ರಿಯೆ. ಹಡೆದ ನಂತರ ತಾಯಿ ಮತ್ತೆ ತಿರುಗಿ ತನ್ನ ತೂಕ, ಬಣ್ಣ ಎಲ್ಲವನ್ನೂ ಪಡೆಯುತ್ತಾಳೆ.

●




### ಬಾಣ

ಸಿಟ್ಟಿನ ಭರದಲ್ಲಿ
ಕೊಡಬೇಕೆಂದರೆ
ನನ್ನವಳಿಗೊಂದು
ಏಟು
ನೆನಪಿಸುತ್ತಾಳೆ
ತಾ ಕೊಟ್ಟ
ವರದಕ್ಷಿಣೆಯ
ರೇಟು !

– ಶಿ.ಕಾ. ಬಡಿಗೇರ




# ದೀಪಾವಳಿ ವಿಶೇಷಾಂಕಗಳು
ದೀಪಾವಳಿ ವಿಶೇಷಾಂಕಗಳು
ದೀಪಾವಳಿ ವಿಶೇಷಾಂಕಗಳು
ದೀಪಾವಳಿ ವಿಶೇಷಾಂಕಗಳು
ದೀಪಾವಳಿ ವಿಶೇಷಾಂಕಗಳು
ದೀಪಾವಳಿ ವಿಶೇಷಾಂಕಗಳು
ದೀಪಾವಳಿ ವಿಶೇಷಾಂಕಗಳು




ದೀಪಾವಳಿ ವಿಶೇಷಾಂಕಗಳು

## ಹೇಗಿವೆ? ಹೇಗಿರಬೇಕು?



ವರ್ಷಕ್ಕೊಮ್ಮೆ ಪ್ರಕಟವಾಗುವ ದೀಪಾವಳಿ ವಿಶೇಷಾಂಕಗಳು ಹಬ್ಬ ಹರಿದಿನಗಳಂತೆಯೇ ಬಹಳಷ್ಟು ಓದುಗರ ಬದುಕಿನ ಭಾಗವಾಗಿವೆ. ಆದರೆ ಸಾಂಪ್ರದಾಯವೆಂಬಂತೆ ದೀಪಾವಳಿಗೊಮ್ಮೆ ಹೊರಗೆ ಬರುವ ಈ ವಿಶೇಷಾಂಕಗಳ ಬಗ್ಗೆ ಓದುಗರು, ಪತ್ರಿಕೆಗಳು ಹಾಗೂ ಬರಹಗಾರರ ನಡುವೆ ಅಭಿಪ್ರಾಯ ವಿನಿಮಯ ಸಾಧ್ಯವಾಗುವುದೇ ಇಲ್ಲ. ಈ ನಿರ್ವಾತವನ್ನು ಗಮನದಲ್ಲಿರಿಸಿಕೊಂಡು ದೀಪಾವಳಿ ವಿಶೇಷಾಂಕಗಳ ಕುರಿತು ರಚನಾತ್ಮಕ ಚರ್ಚೆ ಸಾಧ್ಯವಾಗಿಸಲು 'ಬದುಕು' ಪ್ರಯತ್ನಿಸಿದೆ.



ಕೆಲವು ಆಹ್ವಾನಿತ ಬರಹಗಳೊಂದಿಗೆ ಓದುಗರ ವೈವಿಧ್ಯಮಯ ಅಭಿಪ್ರಾಯಗಳೂ ಇಲ್ಲಿ ಬೆಳಕು ಕಂಡಿವೆ. ಇತರ ಭಾಷೆಗಳಲ್ಲಿ ರೂಪುಗೊಳ್ಳುವ ಹಲವು ವಿಶೇಷಾಂಕಗಳೊಂದಿಗೆ ಕನ್ನಡದ ಪ್ರಕಟಣೆಗಳನ್ನು ತುಲನೆ ಮಾಡುವ ಯತ್ನವೂ ನಡೆದಿದೆ. ಕನ್ನಡ ಪತ್ರಿಕೋದ್ಯಮದಲ್ಲಿ ಹಿಂದೆಂದೂ ಇಂಥ ಪ್ರಯೋಗ ನಡೆದಿರಲಿಲ್ಲವೆಂಬುದನ್ನು ವಿನಮ್ರವಾಗಿ ನಿವೇದಿಸಲು ಬದುಕು ಬಳಗಕ್ಕೆ ಹೆಮ್ಮೆ ಎನ್ನಿಸುತ್ತದೆ.

## ಕನ್ನಡ ವಿಶೇಷಾಂಕಗಳು

# ಅದೇ ಜಾಡು ಅದೇ ಹಾಡು!


ಓ ಎಚ್. ದಂಡಪ್ಪ

ಕನ್ನಡದ ಪ್ರಮುಖ ದಿನ ಪತ್ರಿಕೆಗಳಾದ ಪ್ರಜಾವಾಣಿ, ಉದಯವಾಣಿ, ಕನ್ನಡಪ್ರಭ; ವಾರಪತ್ರಿಕೆಗಳಾದ ಲಂಕೇಶ್ ಪತ್ರಿಕೆ, ಕರ್ಮವೀರ ಹಾಗೂ ಮುಂಬಯಿವಾಣಿ ಈ ಸಲದ ದೀಪಾವಳಿ ವಿಶೇಷ ಸಂಚಿಕೆಗಳನ್ನು ರೂಪಿಸಿ ಪ್ರಕಟಿಸಿವೆ. ಈ ಆರೂ ಪತ್ರಿಕೆಗಳಲ್ಲಿನ ವಿಷಯ ವೈವಿಧ್ಯ, ಸಾಹಿತ್ಯದ ವಿಷಯವಾರು ವಿಂಗಡಣೆ ಲೇಖಕ ವರ್ಗ ಹೆಚ್ಚೂ ಕಡಿಮೆ ಒಂದೇ ಆಗಿದೆ. ಒಂದೆರಡು ಲೇಖನಗಳು ಬೇರೆ ವಿಷಯಗಳಿಗೆ ಸಂಬಂಧಿಸಿದ್ದಾಗಿರಬಹುದು. ಆದರೆ ಈ ಲೇಖನಗಳು ಯಾವುದೇ ಒಳನೋಟಗಳನ್ನಾಗಲಿ ಅಥವಾ ನಮ್ಮನ್ನು ಚಿಂತನೆಗೆ ಒಳಪಡಿಸುವ ಸಾಮರ್ಥ್ಯವನ್ನಾಗಲಿ ಪಡೆದಿರುವುದಿಲ್ಲ. ವಿಶೇಷ ಲೇಖನಗಳು ಎಂಬ ಶೀರ್ಷಿಕೆಯಡಿಯಲ್ಲಿ ಪ್ರಕಟವಾಗುವ ಲೇಖನಗಳ ಹೆಸರುಗಳನ್ನು ಗಮನಿಸಿದರೆ ನಾನು ಹೇಳುತ್ತಿರುವ ವಿಚಾರಗಳು ಮನವರಿಕೆಯಾಗಬಹುದು : ಹಸಿರು ಕರ್ನಾಟಕ, ಹಸಿರು ಕನ್ನಡನಾಡು, ದೀಪಾವಳಿ, ಜಾದೂಗಾರನ ಸಮಾವೇಶ, ಧಾರವಾಡ - ಕವಿಗಳು ಕಂಡಂತೆ, ಲಂಡನ್ನಿನ ಮ್ಯೂಸಿಯಂ, ತಾಂಬೂಲ ಸಂಸ್ಕೃತಿ, ಕಲೆ ಧರ್ಮಗಳ ಆಡೊಂಬಲ-ಡಂಬಳ, ಮಹಾಕಾವ್ಯಗಳಲ್ಲಿ ಮೈತ್ರಿ, ರಾಮಾಯಣದ ರಹಸ್ಯ-ಸ್ವಾರಸ್ಯ, ಕುಮಾರವ್ಯಾಸ, ಪಂಪ ಚಿತ್ರಿಸಿದ ಪಾಂಡು ಪ್ರಸಂಗ, ಕನ್ಯಾಕುಮಾರಿ, ಮೇಜು-ಬಡಗಿ, ವೀರಪ್ಪನ್ ಮನಗೆದ್ದವರು, ಅಧ್ಯಾಪಕಿ ನರ್ತಕಿ ಎಂಬ ಹತಾಶೆ, ದಕ್ಷಿಣ ಕನ್ನಡದ ವೈಶಿಷ್ಟ್ಯಗಳು-ಈ ಬಗೆಯ ಲೇಖನಗಳು ಕನ್ನಡದ ಮೇಲೆ ಹೆಸರಿಸಿದ ವಿಶೇಷಾಂಕಗಳಲ್ಲಿ ಪ್ರಕಟವಾಗಿವೆ. ಈ ಶೀರ್ಷಿಕೆಗಳನ್ನು ಓದಿದಾಕ್ಷಣ ಓದುವುದೇ ಬೇಡವೆನ್ನಿಸಿಬಿಡುತ್ತದೆ. ಈ ಬಗೆಯ ಲೇಖನಗಳು ಓದುಗರ ಜ್ಞಾನವನ್ನು, ಮನಸ್ಸನ್ನು ವಿಸ್ತರಿಸುವ ಸಾಮರ್ಥ್ಯವನ್ನು ಪಡೆದಿರುವುದಿಲ್ಲ-ಪಡೆದೂ ಇಲ್ಲ. ಇಂತಹ ವಿಷಯವನ್ನೊಳಗೊಂಡಿರುವ ಲೇಖನಗಳು ತುಷಾರ, ಸುಧಾ, ಮಯೂರ, ಲಂಕೇಶ್ ಪತ್ರಿಕೆ ಹಾಗೂ ಆಯಾ ದಿನಪತ್ರಿಕೆಗಳ ವಾರದ ವಿಶೇಷ ಪುರವಣಿಗಳಲ್ಲಿ ಪ್ರಕಟವಾಗುತ್ತಲೇ ಇವೆ, ಓದುಗರು ಓದುತ್ತಲೇ ಇದ್ದಾರೆ. ವಿಶೇಷಾಂಕಗಳ ಹೆಸರಿನಲ್ಲಿ ಮತ್ತೆ ಅದೇ ಬಗೆಯ ಲೇಖನಗಳನ್ನು ಪ್ರಕಟಿಸುವುದರಲ್ಲಿ ಅರ್ಥವಿದೆಯೇ?

ಇನ್ನು ಕವಿತೆಯ ವಿಷಯಕ್ಕೆ ಬರೋಣ- ಪ್ರಜಾವಾಣಿ ೧೪ ಕವಿತೆ ಪ್ರಕಟಿಸಿದರೆ, ಉದಯವಾಣಿ ೧೯ ಕವಿತೆ, ಲಂಕೇಶ್ ಪತ್ರಿಕೆ ೭, ಕನ್ನಡ ಪ್ರಭ ೫, ಮುಂಬಯಿವಾಣಿ ೧೧, ಕರ್ಮವೀರ ೮ ಕವಿತೆಗಳನ್ನು ಪ್ರಕಟಿಸಿವೆ. ಒಂದು ಪತ್ರಿಕೆಗೆ ಬರೆದು ಸುಮ್ಮನಾಗದ ನಮ್ಮ ಕವಿಗಳು ಎಲ್ಲಾ ಪತ್ರಿಕೆಗಳಿಗೆ ಒಂದೊಂದು ಕವಿತೆ ಬರೆದು ಕಳುಹಿಸಿದ್ದಾರೆ. ಅವು ಅಚ್ಚಾಗಿವೆ. ಹಾಗೆಯೇ ಪ್ರಜಾವಾಣಿ ೯, ಉದಯವಾಣಿ ೧೩, ಕನ್ನಡಪ್ರಭ ೪, ಮುಂಬಯಿ ವಾಣಿ ೧೦, ಲಂಕೇಶ್ ಪತ್ರಿಕೆ ೬, ಕರ್ಮವೀರ ೮ ಕತೆಗಳನ್ನು ಪ್ರಕಟಿಸಿವೆ. ಪ್ರಜಾವಾಣಿ ಕಥಾ ಸ್ಪರ್ಧೆಯ ಕತೆಗಳನ್ನು ಪ್ರಕಟಿಸಿದೆ. ಇದು ಸ್ವಾಗತಾರ್ಹವಾದ ಪ್ರಶಂಸನೀಯವಾದ ಕಾರ್ಯವೆಂಬುದರಲ್ಲಿ ಸಂಶಯವಿಲ್ಲ. ಓದುಗರ ವೇದಿಕೆ, ಸಿನಿಮಾ, ಹಾಸ್ಯ, ಲಲಿತ ಪ್ರಬಂಧ, ವ್ಯಕ್ತಿಚಿತ್ರ, ಸಂದರ್ಶನ, ಮಕ್ಕಳ ಪುಟ, ವರ್ಷ ಭವಿಷ್ಯ ಇವೆಲ್ಲವೂ ಎಲ್ಲಾ ಸಂಚಿಕೆಗಳ ಸಾಮಾನ್ಯ




ಯಾವುದೇ ಒಳನೋಟಗಳಿಲ್ಲದೆ ಸಾಹಿತ್ಯದ ಒಂದೇ ಒಂದು ಎಳೆಯನ್ನು ಕುರಿತು ಬರೆದಿರುವ ಲೇಖನಗಳಿಂದ ಪ್ರಯೋಜನ ಇಲ್ಲವೆಂಬುದು ವಿಶೇಷಾಂಕಗಳ ಗಮನಕ್ಕೆ ಬರುತ್ತಿಲ್ಲವೇ?




ಕನ್ನಡ ವಿಶೇಷಾಂಕಗಳ ವಿಷಯ ಲೇಖಕ ವರ್ಗ ಹೆಚ್ಚೂ ಕಡಿಮೆ ಒಂದೇ ಆಗಿದೆ.

ಅಂಶಗಳು. ವಿಶೇಷ ಸಂಚಿಕೆಯೆಂದರೆ ಕತೆ, ಕಾವ್ಯ, ಹಾಸ್ಯ, ಲಲಿತ ಪ್ರಬಂಧ, ಸಿನಿಮಾ, ವಿಶೇಷ ಲೇಖನ ಓದುಗರ ವಿಭಾಗ ಇವು ಇರಲೇಬೇಕು ಎಂಬ ನಿಯಮ ಚೌಕಟ್ಟನ್ನು ಹಾಕಿಕೊಂಡು ರೂಪಿಸಲಾಗಿದೆ. ಈ ಕಾಲಂಗಳಿಲ್ಲದೆ ವಿಶೇಷಾಂಕವೇ ಇಲ್ಲ ಎಂಬಂತಹ ವಾತಾವರಣ ಸೃಷ್ಟಿಯಾಗಿಬಿಟ್ಟಿದೆ. ನಾನು ಸುಮಾರು ೧೫ ವರ್ಷಗಳಿಂದ ವಿಶೇಷಾಂಕಗಳನ್ನು ಗಮನಿಸುತ್ತಾ ಬಂದಿದ್ದೇನೆ. ಈ ೧೫ ವರ್ಷಗಳಲ್ಲಿ ಯಾವುದೇ ವಿಶೇಷ ಸಂಚಿಕೆಯನ್ನು ಇಲ್ಲಿಯವರೆಗೂ ಮೇಲಿನ ಚೌಕಟ್ಟನ್ನು ಮೀರಿ ನಿಲ್ಲುವಂತೆ ರೂಪಿಸಿಲ್ಲ.

ನಾಡಿನ ಸಾಂಸ್ಕೃತಿಕ ಸಂಪತ್ತನ್ನು ಹೆಚ್ಚಿಸಲು ಈ ಬಗೆಯ ಸಾಹಿತ್ಯ ಸಂಚಿಕೆಗಳು ಉಪಯುಕ್ತವಾಗುತ್ತವೆ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ, ಇನ್ನುಳಿದ ಜ್ಞಾನ ಶಾಖೆಗಳ ಬಗ್ಗೆ ಬೆಳಕು ಚೆಲ್ಲುವುದು ಬೇಡವೇ? ವಿಶೇಷ ಬಗೆಯ, ಗಂಭೀರವಾದ ಚಿಂತನೆಗೆ ಒಳಗು ಮಾಡುವ ಲೇಖನಗಳನ್ನು ನಮ್ಮ ಓದುಗರು ಪರಿಗಣಿಸುವುದಿಲ್ಲ, ಓದುಗರಿಗೆ ಏನು ಬೇಕೋ ಅದನ್ನು ನೀಡುತ್ತಿದ್ದೇವೆ; ಅದಕ್ಕಾಗಿಯೇ ಕತೆ, ಕವಿತೆ, ಹಾಸ್ಯ, ಸಿನಿಮಾ, ವರ್ಷ ಭವಿಷ್ಯ ನೀಡುತ್ತಿದ್ದೇವೆ ಎಂದು ಮಾರುಕಟ್ಟೆಯ ನೀತಿಯನ್ನು ಹೇಳಬಹುದು. ಆದರೆ ಜನಪ್ರಿಯ ಸಾಹಿತ್ಯದ ಓದುಗರು ವಿಶೇಷಾಂಕಗಳಲ್ಲಿ ಪ್ರಕಟವಾಗುವ ಕವಿತೆ ಕತೆಗಳನ್ನು ಓದುವುದಿಲ್ಲ. ಅವುಗಳನ್ನು ಬಯಸುವುದೂ ಇಲ್ಲ.

ಸಾಹಿತ್ಯದ ಆಳ ಅಗಲಗಳನ್ನು ಸೂಕ್ಷ್ಮಗಳನ್ನು ಬಲ್ಲವರು ಮಾತ್ರ ಇಲ್ಲಿ ಪ್ರಕಟವಾಗಿರುವ ಕತೆ, ಕವಿತೆಗಳನ್ನು ಓದುತ್ತಾರೆ. ಹಾಗಿದ್ದರೆ ವಿಶೇಷಾಂಕಗಳನ್ನು ರೂಪಿಸುವುದು ಇಂತಹ ಸೀಮಿತ ವರ್ಗಕ್ಕಾಗಿಯೇ? ಇನ್ನುಳಿದ ಜ್ಞಾನ ಶಾಖೆಗಳಲ್ಲಿ ಪರಿಣತರಾಗಿರುವವರಿಗೆ ಈ ವಿಶೇಷಾಂಕಗಳಿಂದ ಯಾವುದೇ ಪ್ರಯೋಜನವಾಗಬಾರದೇ? ಅರ್ಥಶಾಸ್ತ್ರ ಇತಿಹಾಸ, ವಾಣಿಜ್ಯಶಾಸ್ತ್ರ ರಾಜಕೀಯ ನೀತಿಶಾಸ್ತ್ರ ಸಮಾಜಶಾಸ್ತ್ರ ಮಾನವಶಾಸ್ತ್ರ ಭೌತಶಾಸ್ತ್ರ ರಸಾಯನ ಶಾಸ್ತ್ರ ಜೀವವಿಜ್ಞಾನ, ತಂತ್ರಜ್ಞಾನ ಇವೆಲ್ಲವೂ ಇಂದು ಹೊಸ ಹೊಸ ಚಿಂತನೆ, ರೂಪಗಳನ್ನು ಪಡೆಯುತ್ತಿವೆ. ತಾಂತ್ರಿಕತೆ, ವಿಜ್ಞಾನದಲ್ಲಿ ಹೊಸ ಹೊಸ ಆವಿಷ್ಕಾರಗಳುಂಟಾಗುತ್ತಿವೆ. ಇವೆಲ್ಲವುಗಳ ಬಗ್ಗೆ ವಿಶೇಷಾಂಕಗಳು ಗಮನಹರಿಸಿ ತನ್ನ ಓದುಗರ ಬೌದ್ಧಿಕ ವಿಕಾಸಕ್ಕೆ ನೆರವಾಗಬಾರದೆ? ಏಕೆ ಆಗುತ್ತಿಲ್ಲ. ನಾನು ಗಮನಿಸಿರುವ ಮೇಲಿನ ಎಲ್ಲಾ ವಿಶೇಷಾಂಕಗಳು ಯಾವುದೇ ಹೊಸತನದಿಂದ ಕೂಡಿಲ್ಲ. ಯಾವುದೇ ಒಳ ನೋಟಗಳಿಲ್ಲದೆ ಸಾಹಿತ್ಯದ ಒಂದೇ ಒಂದು ಎಳೆಯನ್ನು ಕುರಿತು ಬರೆದಿರುವ ಲೇಖನಗಳಿಂದ ಯಾವುದೇ ಪ್ರಯೋಜನವಿಲ್ಲವೆಂಬುದು ವಿಶೇಷಾಂಕಗಳ ಗಮನಕ್ಕೆ ಬರುತ್ತಿಲ್ಲವೇ? ಯಾವುದೇ ಶೀರ್ಷಿಕೆ ತೆಗೆದುಕೊಂಡರೂ ಎಲ್ಲಾ ವಿಶೇಷಾಂಕಗಳಲ್ಲಿ ಒಂದೇ ಸ್ವರೂಪದವು. ಸಿನಿಮಾ ವಿಭಾಗವಂತೂ ಕೇಳುವುದೇ ಬೇಡ. ಪ್ರಭಾವಶಾಲಿ ಮಾಧ್ಯಮವಾದ ಸಿನಿಮಾ ಬಗ್ಗೆ ವಾರಪತ್ರಿಕೆ, ವಿಶೇಷ ಪುರವಣಿಗಳಲ್ಲಿ ಪ್ರಕಟವಾಗುವ ವಿಷಯಗಳನ್ನೇ ಇಲ್ಲಿಯೂ ಪ್ರಕಟಿಸಲಾಗಿದೆ.

ಇಡೀ ವರ್ಷ ಸುಧಾ, ಮಯೂರ, ತುಷಾರ, ತರಂಗ, ಲಂಕೇಶ್ ಪತ್ರಿಕೆಯಲ್ಲಿ ಹಾಗೂ ಪ್ರಜಾವಾಣಿ, ಕನ್ನಡಪ್ರಭ, ಉದಯವಾಣಿ ನೀಡುವ ಭಾನುವಾರದ ವಿಶೇಷ ಪುರವಣಿಗಳಲ್ಲಿ ಮಾಡುವ ಕೆಲಸವನ್ನು ಇಲ್ಲಿ ದೊಡ್ಡ ಪ್ರಮಾಣದಲ್ಲಿ ಮಾಡಲಾಗಿದೆ. ಅವುಗಳ ಮುಂದುವರಿದ ರೂಪವನ್ನು ಈ ವಿಶೇಷಾಂಕಗಳು ಪಡೆದುಕೊಂಡಿಲ್ಲ. ಇದಕ್ಕೆ ಕಾರಣ, ವಿಶೇಷಾಂಕಗಳನ್ನು ರೂಪಿಸುವವರ ಮಿತಿಗಳೆ? ಇಲ್ಲವೇ ಮಾಲೀಕರು ಹೇರಿರಬಹುದಾದ ಮಿತಿಗಳೇ ಎಂಬುದು ಗೊತ್ತಾಗುತ್ತಿಲ್ಲ.


ಪ್ರಜಾವಾಣಿ ಎಲ್ಲಾ ದೃಷ್ಟಿಯಿಂದಲೂ ನಮ್ಮ ನಾಡಿನ ಪ್ರಮುಖ ದಿನಪತ್ರಿಕೆ. ಈ ಪತ್ರಿಕೆ ಸುವರ್ಣ ಮಹೋತ್ಸವವನ್ನು ಆಚರಿಸುತ್ತಿದೆ. ಹಣಕಾಸಿನ ಕೊರತೆಯಾಗಲಿ, ಲೇಖಕರ ಕೊರತೆಯಾಗಲಿ ಇಲ್ಲವೇ ಶ್ರೇಷ್ಠ ಚಿಂತಕರ ಹಾಗೂ ವಿಶೇಷವಾದ ಸಂಚಿಕೆಯನ್ನು ರೂಪಿಸಬೇಕಾದ ಬೌದ್ಧಿಕ ಸಾಮರ್ಥ್ಯವಿರುವ ಸಿಬ್ಬಂದಿಯ ಕೊರತೆ ಈ ಪತ್ರಿಕೆಗಿಲ್ಲ. ಸುವರ್ಣ ಮಹೋತ್ಸವವನ್ನಾಚರಿಸುತ್ತಿರುವ ಈ ಪತ್ರಿಕೆಯಾದರೂ ನಾಡಿನ ಸಮಸ್ತ ಸಾಂಸ್ಕೃತಿಕ ಇತಿಹಾಸಕ್ಕೆ ಪೂರಕವಾಗಬಹುದಾದ ವಿಶೇಷ ಸಂಚಿಕೆಯನ್ನು ರೂಪಿಸುತ್ತದೆಂದು ಓದುಗ ವರ್ಗ ಭಾವಿಸಿತ್ತು. ಆದರೆ ಇದು ಯಥಾಪ್ರಕಾರ ಯಾಂತ್ರಿಕವಾಗಿ ಎಲ್ಲಾ ವಿಶೇಷಾಂಕಗಳಂತೆ ಹೊರಬಂದಿದೆ. ಸ್ವಾತಂತ್ರ್ಯದ ಸುವರ್ಣ ಮಹೋತ್ಸವ ಹಾಗೂ ಪತ್ರಿಕೆಯ ಸುವರ್ಣ ಮಹೋತ್ಸವ ಹಾಗೂ ದೀಪಾವಳಿ ಇವೆಲ್ಲವುಗಳ ಕೊಡುಗೆಯಾಗಿ ಪತ್ರಿಕೆ ಕಂಡ ಇತಿಹಾಸ, ಕಲೆ, ವಿಜ್ಞಾನ, ತಂತ್ರಜ್ಞಾನ, ಕಳೆದ ಐವತ್ತು ವರ್ಷಗಳಲ್ಲಿ ನಡೆದಿರಬಹುದಾದ ಸಾಂಸ್ಕೃತಿಕ ಹಾಗೂ ಸಾಮಾಜಿಕ ಚಳವಳಿಗಳನ್ನು ಕುರಿತು ಅಪೂರ್ವವಾದ ಸಂಚಿಕೆಯನ್ನು ರೂಪಿಸಬಹುದಿತ್ತು. ಆದರೆ ಹಳೇ ಜಾಡಿನಲ್ಲಿಯೇ ರೂಪುಗೊಂಡಿರವುದು ವಿಷಾದನೀಯ.

# ಹಳೆ ಬೇರು ಹೊಸ ಚಿಗುರು



ನಾವು ಈ ಬಾರಿ ಕರ್ಮವೀರ ದೀಪಾವಳಿ ವಿಶೇಷಾಂಕವನ್ನು ಕೊಂಡಿದ್ದೆವು. ಏಕೆಂದರೆ ನಾವು ಕರ್ಮವೀರ ವಾರ ಪತ್ರಿಕೆಯ ಖಾಯಂ ಓದುಗರಾಗಿದ್ದೇವೆ. ಬೆಲೆಯು ಸ್ವಲ್ಪ ದುಬಾರಿ ಅನ್ನಿಸಿದರೂ ಈಗಿನ ದುಬಾರಿ ಕಾಲದಲ್ಲಿ ಪರವಾಗಿಲ್ಲ. ಸಂಪೂರ್ಣ ಓದಿ ಮುಗಿಸಿದ್ದೇವೆ. ನಮ್ಮ ಕುಟುಂಬದ ಜನರೆಲ್ಲರೂ ಮೆಚ್ಚಿಕೊಂಡಿದ್ದಾರೆ. ನಮಗೆ ಹನಿಗವನಗಳು, ವ್ಯಂಗ್ಯ ಚಿತ್ರಗಳು ಮತ್ತು ಕಥೆಗಳು ತುಂಬಾ ಹಿಡಿಸಿದವು. ಹೌದು ಪ್ರತಿ ವರ್ಷದಂತೆ ಖಾಯಂ ಸಾಹಿತಿಗಳ ಬರಹಗಳ ಬಗ್ಗೆ ಬೇಜಾರೆನ್ನಿಸಿತು. ಹೊಸ ಮತ್ತು ಯುವ ಬರಹಗಾರರಿಗೆ ಆದ್ಯತೆಯನ್ನು ನೀಡಬೇಕು. ಬೇರೆ ವಿಶೇಷಾಂಕಗಳ ವೈವಿಧ್ಯಮಯ ಮುದ್ರಣ, ವಿನ್ಯಾಸ ಮನಸ್ಸಿಗೆ ತುಂಬಾ ಮುದ ನೀಡಿವೆ. ವಿಶೇಷಾಂಕವು ''ಹಳೆ ಬೇರು, ಹೊಸ ಚಿಗುರು' ಎನ್ನುವಂತೆ ಯುವ ಸಾಹಿತಿಗಳು ಹಾಗೂ ಹಿರಿಯ ಸಾಹಿತಿಗಳ ಬರಹಗಳನ್ನು ಸಮವಾಗಿ ಆಯ್ಕೆ ಮಾಡಬೇಕು.

**– ಚೆನ್ನವೀರ ನಾಲ್ವಾಡ**
ಚಿಕ್ಕೇನಕೊಪ್ಪ



ತೆಲುಗು ವಿಶೇಷಾಂಕಗಳು
ಚಹಾ ಮತ್ತು ಸಿಗರೇಟ್ ಹಣದಲ್ಲಿ
ಕೊಳ್ಳಬಹುದಾದಷ್ಟು ಅಗ್ಗ.
ಎಲ್ಲಕ್ಕಿಂತ ಮುಖ್ಯವಾಗಿ
ಕೊಂಡುಕೊಂಡ ಆರು ತಾಸುಗಳಲ್ಲಿ
ಈ ಪತ್ರಿಕೆಗಳನ್ನು 'ನಿಜವಾಗಿಯೂ'
ಓದಿ ಮುಗಿಸಬಹುದು.
ಅವು ಅಷ್ಟು ಚಿಕ್ಕವಿರುತ್ತವೆ.

## ತೆಲುಗು ವಿಶೇಷಾಂಕಗಳು

# ಕನ್ನಡದ ಥರ ಬರ್ಡನ್ ಅನ್ನಿಸಲ್ಲ!

○ ಪಿ. ಶ್ರೀಕಾಂತ್

**ದೀ**ಪಾವಳಿ ಬಂತೆಂದರೆ ಪತ್ರಿಕೆಯವರಿಗೆ ಆತುರ-ಸಡಗರ ಹಾಗೂ ಟೆನ್ಷನ್.

ಸುಮಾರು ಮುನ್ನೂರೈವತ್ತು ಪುಟಗಳ 'ಸರಕ'ನ್ನು ಮಾರ್ಕೆಟ್‌ಗೆ ಬಿಡೋದು-ಸರ್ಕ್ಯುಲೇಶನ್ ನೋಡೋದು... ಪ್ರಜಾವಾಣಿ ಗ್ರೂಪ್-ಉದಯವಾಣಿ ಗ್ರೂಪ್-ಕರ್ಮವೀರಗಳ ಈ 'ಸರಕು'ಗಳು ಮೂರೂ ಏಕಕಾಲಕ್ಕೆ ದೀಪಾವಳಿಗೆ ೧೫ ದಿನ ಮುಂಚೆ ನಿಂದಲೇ ಕಣ್ಣಿಗೆ ರಾಚುತ್ತಿರುತ್ತವೆ. ಒಂದೊಂದು ಪತ್ರಿಕೆ ಒಂದೊಂದು ಥರ ಹೈಟೆಕ್ ಪ್ರಿಂಟಿಂಗ್-ವಿನ್ಯಾಸ-ವರ್ಣ ಸಂಯೋಜನೆ-ಆಕರ್ಷಕ 'ಫ್ರೀ ಗಿಫ್ಟ್ಸ್'... ಎಲ್ಲಾ ಸೇರಿ ಓದುಗನಿಗೆ ದೊಡ್ಡ 'ಡೈಲಮಾ' ತಂದೊಡ್ಡುತ್ತವೆ.

ಆಫೀಸಲ್ಲಿ ಫೈಲ್ಸ್ ಎದುರು-ಕ್ಯಾಂಟೀನ್‌ನಲ್ಲಿ ಕೊನೆಯ ಸಿಪ್ ಆಸ್ವಾದಿಸ್ತಾ ಸಿಗರೇಟ್‌ನ ಕೊನೆ ಪಫ್ ಅನುಭವಿಸ್ತಾ..... ಮಧ್ಯಾಹ್ನ ಲಂಚವರ್‌ನಲ್ಲಿ ಊಟವಾದ ನಂತರದ ಸಮಯದಲ್ಲಿ... ಎಷ್ಟೋ ಜನ ಕೊಂಡೋದುಗರು ದೀಪಾವಳಿ ವಿಶೇಷಾಂಕಗಳ ಬಗ್ಗೆ ಚರ್ಚಿಸ್ತಾನೇ ಇರ್ತಾರೆ, ಯೋಚಿಸ್ತಾನೇ ಇರ್ತಾರೆ.... ಈ ಸಲ ಯಾವ ಪತ್ರಿಕೆಯ ವಿಶೇಷಾಂಕ ಚೆನ್ನಾಗಿರ್ತದೆ? ಯಾವುದು ಕೊಂಡ್ಕೋಳ್ಳೋದು? ಸರ್ಕ್ಯುಲೇಟಿಂಗ್ ಲೈಬ್ರರಿಯಲ್ಲಿ ತಕ್ಷಣ ಸಿಗುತ್ತಾ? ಅಂತ. ಇವೆಲ್ಲಕ್ಕೆ ವಿರುದ್ಧವಾಗಿ ನೀವು 'ತರಂಗ'ದ ಖಾಯಂ ಓದುಗರಾಗಿದ್ದರೆ 'ಉದಯವಾಣಿ ದೀಪಾವಳಿ ವಿಶೇಷಾಂಕ', 'ಪ್ರಜಾವಾಣಿ'- 'ಸುಧಾ'ದ ಖಾಯಂ ಓದುಗರಾಗಿದ್ದರೆ 'ಪ್ರಜಾವಾಣಿ ದೀಪಾವಳಿ ವಿಶೇಷಾಂಕ'ಗಳನ್ನು ನಿಮಗೆ 'ಸೆಕೆಂಡ್ ಆಪ್ಶನ್' ಇಲ್ದಂಗೇನೇ-ಮದುವೆಯಾಗಿ ಒಂದು ವರ್ಷದ ನಂತರ ನಿಮ್ಮ ಹೆಂಡತಿ ನಿಮ್ಮನ್ನು 'ನಿರ್ಲಕ್ಷಿ'ಸುವ ರೀತಿಯಲ್ಲಿ ಕೇರ್ ಮಾಡದೇ 'ಪೇಪರ್' ಹುಡುಗ ಆಯಾ ವಿಶೇಷಾಂಕಗಳನ್ನು ನಿಮ್ಮ 'ಅಮ್ಮಾವ್ರ' ಕೈಗೆ ತಲುಪಿಸಿಬಿಟ್ಟಿರ್ತಾನೆ. ಸಂಜೆ ಮನೆ ಸೇರುತ್ತಿದ್ದಂತೆ ನೀವು ಅವುಗಳನ್ನು ನೋಡುತ್ತೀರಿ-ನಿಟ್ಟುಸಿರು ಬಿಡ್ತೀರಿ-ಪೇಚಾಡುತ್ತಾ ಉಚಿತ 'ಕೊಡುಗೆ'ಯಲ್ಲಿ ೪೦ರ ನಂತರ ಆರೋಗ್ಯ ವಿಧಾನದ ಬಗ್ಗೆ ಸೀರಿಯಸ್ ಆಗಿ ಓದ್ತೀರಿ.

ಹೌದು. ಕನ್ನಡದ ಬಹುತೇಕ ದೀಪಾವಳಿ ವಿಶೇಷಾಂಕಗಳಲ್ಲಿ ಸಾಮಾನ್ಯವಾಗಿ ಏನಿರುತ್ತವೆ? ಬಹುಮಾನಿತ ಕತೆಗಳು-ಕತೆಗಳು, ಒಂದಿಷ್ಟು ಹಾಸ್ಯ, ಎರಡು ಡಜನ್ ವ್ಯಂಗ್ಯ ಚಿತ್ರಗಳು, ಕಿರುಗವನಗಳು, ವಿಶೇಷ ಲೇಖನಗಳು (ಕತೆಗಾರರು, ಹಾಸ್ಯ ಲೇಖಕರು, ಕಿರುಗವನಗಳ ಕವಿಗಳನ್ನು ಓದುಗರು 'ಗೆಸ್' ಮಾಡಿ ಹೇಳಬಲ್ಲರು).

ಇತಿಹಾಸದ ದೇಗುಲಗಳ ಫೋಟೋಗಳು, ಹಳೇ ತಂಜಾವೂರಿನ ಪೇಯಿಂಟಿಂಗ್ಸ್ ಅಥವಾ ನಾಟಕದ ಬಗ್ಗೆನೋ, ಸಾಹಿತ್ಯದ ಬಗ್ಗೆನೋ 'ಗಂಭೀರ' ಚರ್ಚೆ. ಇದರೊಂದಿಗೆ ಈಚೆಗೆ ಶುರು ಆಗಿರುವ 'ಗಿಫ್ಟ್' ದಂಧೆ! ಮೊದಲೆಲ್ಲಾ ಯಾವುದಾದರೊಂದು ಖ್ಯಾತ ಲೇಖಕರ ಕಾದಂಬರಿ ಕೊಡ್ತಿದ್ದರು. ಈಗ ನಿಮಗೆ ಗೊತ್ತಿರದ ನಿಮ್ಮ ಆರೋಗ್ಯದ ಬಗ್ಗೆ, ನಿಮ್ಮ ಮನೆಯ ಸುತ್ತಲಿನ ಬಗ್ಗೆನೋ, ಫ್ಯಾಶನ್ ಬಗ್ಗೆನೋ ಪುಸ್ತಕ ಕೊಡ್ತಿದ್ದಾರೆ.

ಇನ್ನು ಮಯೂರ, ತುಷಾರ, ಕಸ್ತೂರಿ ಪತ್ರಿಕೆಗಳು 'ದೀಪಾವಳಿ'ತನದ ಮುಖಪುಟ, ಹಬ್ಬದ ಸಂಪಾದಕೀಯ, ಕಾರ್ಟೂನ್ಸ್, ಉತ್ತಮ ಕತೆಗಳು, ಇತ್ಯಾದಿಗಳನ್ನು 'ಭಾರಿ' ಅನಿಸದ 'ಸರಕಿ'ನಲ್ಲಿ ರೆಗ್ಯುಲರ್ ಬೆಲೆಯಲ್ಲಿ ಸಿಗುವ ವಿಶೇಷಾಂಕಗಳಾಗಿವೆ.

ಇದಿಷ್ಟು ಕನ್ನಡ ದೀಪಾವಳಿ ವಿಶೇಷಾಂಕ



ಮುಖ್ಯವಾಗಿ ತೆಲುಗು ಓದುಗರು
ಈ ವಿಶೇಷಾಂಕಗಳ ಬಗ್ಗೆ
ವಿಶೇಷವಾಗಿ
ತಲೆ ಕೆಡಿಸಿಕೊಳ್ಳುವುದಿಲ್ಲ!

ಗಳಾದರೆ ಇನ್ನು ತೆಲುಗು ದೀಪಾವಳಿ ವಿಶೇಷಾಂಕಗಳ ಬಗ್ಗೆ ನೋಡೋಣ.

ತೆಲುಗು ಓದುಗರು ಮುಖ್ಯವಾಗಿ ಈ ವಿಶೇಷಾಂಕಗಳ ಬಗ್ಗೆ ವಿಶೇಷವಾಗಿ ತಲೆಕೆಡಿಸಿಕೊಳ್ಳುವದಿಲ್ಲ. ತೆಲುಗು ದೀಪಾವಳಿ ವಿಶೇಷಾಂಕಗಳು 'ಸೈಜ'ನಲ್ಲಿ ಸಾಮಾನ್ಯ ವೀಕ್ಲಿಗಳಂತೆಯೇ ಇರುತ್ತವೆ. ಹಾಗೂ ಬೆಲೆಯಲ್ಲಿ ಏನೂ ವ್ಯತ್ಯಾಸ ಇರುವುದಿಲ್ಲ. ಆಂಧ್ರಪ್ರಭ, ಆಂಧ್ರಜ್ಯೋತಿಯಂತಹ ಪತ್ರಿಕೆಗಳು ಅಮೆರಿಕಾ-ಕೆನಡಾದಲ್ಲಿ ನೆಲೆಸಿರುವ ಆಂಧ್ರದ ಸಂಘದವರೊಂದಿಗೆ ಸಂಯುಕ್ತವಾಗಿ ಸ್ಪಾನ್ಸರ್‌ದೊಂದಿಗೆ ಕಾದಂಬರಿ, ಕತೆ, ಕಾರ್ಟೂನ್ ಸ್ಪರ್ಧೆಗಳನ್ನು ಭಾರೀ ಮಟ್ಟದಲ್ಲಿ ನಡೆಸುತ್ತಾರೆ. ಬಹುಮಾನಿತ ಕಾದಂಬರಿಗಳ ಪ್ರಕಟಣೆ ದೀಪಾವಳಿ ಸಂಚಿಕೆಯಿಂದ ಶುರುಮಾಡುತ್ತಾರೆ.

ಮುಖಪುಟಗಳ ವಿಷಯದಲ್ಲೂ ಅಷ್ಟೇ-ಫೋಟೋ ಅಚ್ಚು ಮಾಡಿ ವಿನ್ಯಾಸ ಮಾಡಿಸೋದು ಆಂಧ್ರಭೂಮಿ (ಈ ವರ್ಷ ಮಾತ್ರ), ಹಾಗೂ ಇಂಡಿಯಾ ಟುಡೆದಂತಹ ಪತ್ರಿಕೆಗಳು ಮಾತ್ರ. ಉಳಿದೆಲ್ಲಾ ಪತ್ರಿಕೆಗಳು ಪತ್ರಿಕೆಗೆಂದೇ ಖ್ಯಾತ ಕಲಾವಿದರಾದ ಬಾಪು, ಚಂದ್ರ, ಕರುಣಾಕರ್, ಗೋಪಿಯರಿಂದ ಆರ್ಟ್ ಮಾಡಿಸುತ್ತವೆ. ಬಾಪುರಂತಹ ಕಲಾವಿದರು ಮುಖಪುಟಕ್ಕೆ ಕಾರ್ಟೂನ್ ಟಚ್ ಕೊಡ್ತಾರೆ. ಮೂರು ವಾರಗಳ ಮುಂಚಿತವಾಗಿ ಪ್ರಕಟವಾಗುವ ಜಾಹೀರಾತಿನಲ್ಲೂ 'ನಿಮ್ಮ ಮೆಚ್ಚಿನ ಬಾಪು ಮುಖಪುಟ' ಅಂತ ಪ್ರಕಟಿಸುವಷ್ಟು ಜನಪ್ರಿಯ.

ಆಂಧ್ರದ 'ಆವಕಾಯಿ'ಯಷ್ಟೇ ಜನಪ್ರಿಯವಾದ ಬಾಪು ಕಾರ್ಟೂನ್‌ಗಳನ್ನು ದೀಪಾವಳಿ ಸ್ಪೆಷಲ್‌ನಲ್ಲಿ ಏನಿಲ್ಲವೆಂದರೂ ೧೫-೨೦ ಚಿತ್ರ ಬರೆಯಿಸಿ ಪ್ರಕಟಿಸ್ತಾರೆ.

ತೆಲುಗಿನ ವಾರಪತ್ರಿಕೆಗಳ ಸೈಜು ನಮ್ಮ 'ಸುಧಾ', 'ತರಂಗ'ದಷ್ಟೇ. ಅಂದರೆ ಸುಮಾರು ೮೦-೯೦ ಪುಟಗಳು. ದೀಪಾವಳಿ ವಿಶೇಷಾಂಕಗಳಾಗಿ ೧೧೦ರಿಂದ ೧೨೦ ಪುಟಗಳಿಗೆ ಈ ಪತ್ರಿಕೆಗಳು ಹಿಗ್ಗುತ್ತವೆ. ಆದರೆ ಬೆಲೆಯಲ್ಲಿ ಯಾವುದೇ ವ್ಯತ್ಯಾಸ ಇರುವುದಿಲ್ಲ. ವಿಶೇಷಾಂಕಗಳಲ್ಲಿ ವಿಶೇಷ ಆಹ್ವಾನಿತ ಕತೆಗಳು ೫-೬, ೪ ಧಾರಾವಾಹಿಗಳು, ೩೦ರಿಂದ ೪೦ ಹಬ್ಬದ ವಿಶೇಷ ಕಾರ್ಟೂನುಗಳು, ಹಬ್ಬದ ಪ್ರಾದೇಶಿಕ ಪ್ರಾಮುಖ್ಯ ಕುರಿತಾದ ಲೇಖನಗಳು, ಕವನಗಳು, ಖ್ಯಾತ ಕತೆಗಾರರ, ಸಿನಿಮಾ ನಟ-ನಟಿಯರ ಹಳೆಯ ದೀಪಾವಳಿಯ 'ಮೆಲುಕು'ಗಳು ಇರುತ್ತವೆ.


ಇನ್ನು 'ಇಂಡಿಯಾ ಟುಡೇ'ದಂತಹ 'ದೀಪಾವಳಿ ಸ್ಪೆಶಲ್' ಅಂತ ಮುಖಪುಟ ಹೊತ್ತು ಬರುವ ಪತ್ರಿಕೆಗಳು 'ಮುಖಪುಟ ಲೇಖನ'ವನ್ನು ಚರ್ಚೆಯ ರೂಪದಲ್ಲಿ ಮಾಡುತ್ತವೆ. ಈ ವರ್ಷದ 'ಇಂಡಿಯಾ ಟುಡೆ' ದೀಪಾವಳಿ ಸ್ಪೆಶಲ್‌ನ ಮುಖ್ಯಲೇಖನ 'ವ್ಯಕ್ತಿತ್ವಕ್ಕೆ ಮೆರುಗು' ಎಂಬ ಆಧುನಿಕ ಫ್ಯಾಶನ್ ಕುರಿತಾಗಿದೆ.

ಇದಿಷ್ಟು ಒಂದೆಡೆಯಾದರೆ ಇಡೀ ಪತ್ರಿಕೋದ್ಯಮದ ಅರ್ಧಕ್ಕಿಂತಲೂ ಹೆಚ್ಚು Market ಅನ್ನು ಆಕ್ರಮಿಸಿಕೊಂಡಿರುವ 'ಸಿನಿಮಾ ಮ್ಯಾಗಜೈನ್ಸ್' ಬಗ್ಗೆ ನೋಡೋಣ.

'ಸಿನಿಮಾ' ತೆಲುಗರ ಬದುಕಿನ ಅವಿಭಾಜ್ಯ ಅಂಗ. ಸಿನಿಮಾ ಪತ್ರಿಕೆಗಳಾದ 'ಸಿತಾರ', 'ಜ್ಯೋತಿಚಿತ್ರ', 'ಶಿವರಂಜನಿ', 'ಮೇಘ ಸಂದೇಶಂ' ಮತ್ತು ಕೇವಲ Posterಗಳಿಗಾಗಿಯೇ ಮೀಸಲಾಗಿರುವ 'ಸೂಪರ್ ಹಿಟ್'-ದಂತಹ ಪತ್ರಿಕೆಗಳಲ್ಲಿ ಬ್ಲೋಅಪ್ಸ್, ದೀಪಾವಳಿಯಂದು ಆರಂಭವಾಗಲಿರುವ ಹೊಸಚಿತ್ರಗಳ ಮಹೂರ್ತದ ಶಾಟ್ಸ್, ಎಲ್ಲಾ ನಟ-ನಟಿಯರ ಲೈಫ್ ಪಾರ್ಟನರ್ಸ್‌ಗಳೊಂದಿಗೆ ಫೋಟೋಗಳು ಒಟ್ಟಾರೆ ಇಡೀ ಪತ್ರಿಕೆಗಳೆಲ್ಲಾ 'ದೀಪಾವಳಿ ಫೋಟೋ ಸೆಶನ್' ಥರ ಇರ್‍ತವೆ. ತೆಲುಗಿನ ಅತ್ಯಂತ ಹೆಚ್ಚು ಸರ್ಕುಲೇಶನ್ ಪತ್ರಿಕೆಗಳಲ್ಲಿ ಈ ಸಿನಿಮಾ ಮ್ಯಾಗಜೈನ್‌ಗಳಿಗೆ ಅಗ್ರತಾಂಬೂಲ.

ಹಾಗೆ ನೋಡಿದರೆ, ತೆಲುಗಿನ ಯಾವುದೇ ಪತ್ರಿಕೆಯ ದೀಪಾವಳಿ ವಿಶೇಷಾಂಕಗಳು ಕನ್ನಡದ ಥರ ೩೦-೪೦ರೂ.ಗಳ Burden ಅನಿಸಲ್ಲ. ಹಾಯಾಗೇ ಒಂದು ಟೀ+ಗೋಲ್ಡ್ ಫ್ಲೇಕ್ ಸ್ಮಾಲ್‌ಗೆ ಪತ್ರಿಕೆ ಕೊಳ್ಳುವಷ್ಟು ಕಡಿಮೆ ಬೆಲೆ. ಉಚಿತ ಕೊಡುಗೆಗಳ ಹಾವಳಿ ಇಲ್ಲಿಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಪತ್ರಿಕೆ ಕೊಂಡ ಆರು ತಾಸುಗಳಲ್ಲಿ ಈ ಪುಸ್ತಕಗಳನ್ನು 'ನಿಜವಾಗಿ'ಯೂ ಓದಿ ಮುಗಿಸುವಷ್ಟು ಚಿಕ್ಕದಾಗಿರುತ್ತವೆ. ●

# ನನ್ನ ನೆಚ್ಚಿನ ಉದಯವಾಣಿ



ಪ್ರತಿ ವರ್ಷದಂತೆ ಈ ಸಾರಿಯೂ ನಾನು. 'ಉದಯವಾಣಿ' ದೀಪಾವಳಿ ವಿಶೇಷಾಂಕವನ್ನು ಕೊಂಡೆ. ಯಾಕೆಂದರೆ ಪ್ರತಿ ವರ್ಷವೂ ಇದೇ ನನ್ನ ನೆಚ್ಚಿನ ವಿಶೇಷಾಂಕ. ಉತ್ತಮ ಹಾಳೆ, ವೈವಿಧ್ಯಮಯ ಲೇಖನಗಳು, ತುಂಬಾ ಆಕರ್ಷಕವಾಗಿರುತ್ತದೆ. ಜಾಹೀರಾತು ಸಹ ಬಿಡದೆ ಸಂಪೂರ್ಣವಾಗಿ ಓದಿರುವೆ. ನಮ್ಮ ಮನೆಯವರೆಲ್ಲರಿಗೆ ನೆಚ್ಚಿನದಾಗಿದೆ 'ಉದಯವಾಣಿ' ವಿಶೇಷಾಂಕ.

ನನ್ನ ಮೊದಲ ಆದ್ಯತೆ ಕವನ ಮತ್ತು ಹನಿಗವಿತೆಗಳಿಗೆ. ನಂತರ ಕಥೆ, ನಾಟಕ, ಹಾಸ್ಯ ವಿಡಂಬನೆ, ಸಂದರ್ಶನ, ಸಿನೇಮಾ ಕಾಲಂಗಳನ್ನು ಓದುತ್ತೇನೆ. 'ಉದಯವಾಣಿ' ಸಂಚಿಕೆಯಲ್ಲಿ ಕೆ.ಟಿ.ಗಟ್ಟಿಯವರ 'ಕೂರ್ಮಾವತಾರ', ಜಿ.ಕೆ.ಐತಾಳ್‌ರ 'ದೇವರು', ಪ್ರೇಮಾಭಟ್‌ರ 'ನೇಮವಿಲ್ಲದ ಪೂಜೆ' ಇವು ಇಷ್ಟವಾದವು. ನಾಟಕ ನನಗೆ ಇಷ್ಟವಿಲ್ಲ. 'ಹಸಿರು ಕರ್ನಾಟಕ' (ಡಾ.ಗೌರೀಶ್ ಕಾಯ್ಕಿಣಿ), ಹಸಿರು ಕನ್ನಡ ನಾಡು (ಶೇಷ ನಾರಾಯಣ), ಹಿಮಾಲಯ ಯಾವಾಗಲೂ ನಿಗೂಢ! (ಎನ್.ಜೆ. ಗುಣಪ್ರಕಾಶ್) ಅದ್ಭುತವಾಗಿದ್ದವು.

'ಉದಯವಾಣಿ' ಸಂಚಿಕೆಯಲ್ಲಿ ಪ್ರತಿ ಸಾರಿಯೂ ಬೇರೆ ಬೇರೆ ಲೇಖಕರಿಗೆ ಆದ್ಯತೆ ಕೊಟ್ಟಿರುತ್ತಾರೆ. ಬೇಸರವೇನೂ ಆಗಲಿಲ್ಲ. ಬೇರೆ ವಿಶೇಷಾಂಕಗಳಿಗೆ ಹೋಲಿಸಿ ನೋಡಿದರೆ ಇದಕ್ಕೆ ಪ್ರಥಮ ಸ್ಥಾನ. ನಂತರ 'ಪ್ರಜಾವಾಣಿ' ವಿಶೇಷಾಂಕ.

ಮಾದರಿ ವಿಶೇಷಾಂಕದ ಕಾಗದ ಹಾಗೂ ಮುದ್ರಣದ ಗುಣಮಟ್ಟ ಉತ್ತಮವಾಗಿರಬೇಕು. ಹಿರಿಯ ಬರಹಗಾರರಿಂದ ಕಿರಿಯ ಬರಹಗಾರರಿಗೆ ಮಾರ್ಗದರ್ಶನವಿರಬೇಕು. ಹೊಸ ಲೇಖಕರಿಗೆ, ಕವಿಗಳಿಗೆ, ಮೊದಲ ಆದ್ಯತೆ ಕೊಡಬೇಕು. ಕೃಷಿ ಬಗ್ಗೆ ಉತ್ತಮ ಲೇಖನವಿರಬೇಕು. ಹಳ್ಳಿಯಲ್ಲಿ ನಶಿಸಿ ಹೋಗುವ ಅವಶೇಷಗಳ ಬಗ್ಗೆ ಗಮನಹರಿಸಬೇಕು. ಸಾಮಾನ್ಯರಿಗೆ ಕೈಗೆಟುಕುವ ಹಾಗೆ ಬೆಲೆ ಇರಬೇಕು. 'ಉದಯವಾಣಿ' ಬೆಲೆ ಸರಿ ಇದೆ. ಆದಷ್ಟೂ ಜಾಹೀರಾತು ಕಡಿಮೆ ಇರಬೇಕು.

**- ಬಾಬು ಬೆಟ್ಟದೂರು**
ಮಾನ್ವಿ

## ಮರಾಠಿ ವಿಶೇಷಾಂಕಗಳು

# ಮೆಚ್ಚಲೇಬೇಕಾದ ಪ್ರಯೋಗಶೀಲತೆ



ಮರಾಠಿಯಲ್ಲಿ ಸುಮಾರು ೫೦೦ ದೀಪಾವಳಿ ಸಂಚಿಕೆಗಳು ಪ್ರಕಟಗೊಳ್ಳುತ್ತವೆ! ಬೆಲೆಯೂ ಅಷ್ಟೇ ದುಬಾರಿ.

**ಸಂ**ಸ್ಕೃತಿ ಪ್ರಿಯನಾದ ಮರಾಠಿ ಮನುಷ್ಯ ಪುಸ್ತಕವನ್ನು ಅಷ್ಟೇ ಅದಮ್ಯವಾಗಿ ಪ್ರೀತಿಸುತ್ತಾನೆ. ಈ ಅಕ್ಷರ ಸಂಸ್ಕೃತಿಯ ವ್ಯಾಮೋಹ ಇಂದು-ನಿನ್ನೆಯದಲ್ಲ. ಮರಾಠಾ ಸಂಸ್ಕೃತಿಯ ಜತೆ ಜತೆಗೆ ಇದು ಅಂಟಿಕೊಂಡಂತಿದೆ. ಕನ್ನಡದಲ್ಲಿ ಸಾಹಿತ್ಯ ಬರೇ ಕೆಲವರದೇ ಸೊತ್ತಾಗಿದೆ. ಅಕ್ಷರ ಕ್ರಾಂತಿ ನಮ್ಮಲ್ಲಿ ಅಷ್ಟೊಂದು ಪ್ರಾಮುಖ್ಯ ಪಡೆದಂತಿಲ್ಲ.

ಮರಾಠಿಯಲ್ಲಿ ಸುಮಾರು ೫೦೦ ದೀಪಾವಳಿ ಸಂಚಿಕೆಗಳು ಪ್ರಕಟಗೊಳ್ಳುತ್ತವೆ! ಆರೇಳು ತಿಂಗಳು ಮೊದಲೇ ಇದರ ಪೂರ್ವ ಸಿದ್ಧತೆ. ಬೆಲೆಯೂ ಅಷ್ಟೇ ದುಬಾರಿ. ಐವತ್ತರ ಆಸು-ಪಾಸು. ಆದರೂ Hot Cakeನಂತೆ ಮಾರಾಟಗೊಳ್ಳುತ್ತವೆ. 'ಆವಾಜ್' ಎಂಬ ಸಂಚಿಕೆ ಖರೀದಿಸಲು ನೂಕುನುಗ್ಗಲು. ಕೆಲವೇ ದಿನಗಳಲ್ಲಿ ಸಾವಿರಾರು ಪ್ರತಿಗಳ ಮಾರಾಟ. ನನ್ನೊಬ್ಬ ಸ್ನೇಹಿತನ ಹತ್ತಿರ ಕಳೆದ ಇಪ್ಪತ್ತೈದು ವರ್ಷಗಳ ೬-೭ ಸಂಚಿಕೆಗಳು ಈಗಲೂ ಇವೆ. ಇನ್ನೊಬ್ಬನ ಹತ್ತಿರ ೧೫ ಸಂಚಿಕೆಯಿವೆ. ಅತ್ಯಂತ ಆಸ್ಥೆಯಿಂದ ಸಂಗ್ರಹಿಸಿದ್ದಾನೆ. ಈ ಸಂಚಿಕೆಗಳ ಮುಖಪುಟ, ಕಲಾ ವಿನ್ಯಾಸ, ಸ್ವರೂಪ ಆಕಾರ ನೋಡುವುದೆಂದರೆ ಕಣ್ಣಿಗೊಂದು ಹಬ್ಬ. ಸಂಚಿಕೆಯು ೧೦೦ರಿಂದ ೩೦೦ ಪುಟಗಳ ಮಿತಿ ಹೊಂದಿರುತ್ತದೆ. ಕಲಾತ್ಮಕತೆ ಜತೆಗೆ ವ್ಯಾಪಾರೀ ಧೋರಣೆಯೂ ಇಲ್ಲಿದೆ. ಬಣ್ಣ, ಮುದ್ರಣ, ಚಿತ್ರ, ಆಕರ್ಷಣೆಗಳಲ್ಲಿ ಕನ್ನಡಕ್ಕೆ ಹೋಲಿಸಿದರೆ ಮರಾಠಿ ಸಂಚಿಕೆಗಳು ಅಷ್ಟೊಂದು ಶ್ರೇಷ್ಠ ದರ್ಜೆಯವಲ್ಲ. ಆದರೆ ಮುಖಪುಟದ ವಿನ್ಯಾಸ ಮಾತ್ರ ಆಕರ್ಷಕ. ಖ್ಯಾತ ಲೇಖಕರಿಂದ ಲೇಖನ, ಕಥೆ ತರಿಸಿಕೊಳ್ಳುತ್ತಾರೆ. ಕೆಲವು ಲೇಖಕರಂತೂ ದೀಪಾವಳಿ ಸಂಚಿಕೆಗಾಗಿಯೇ ಬರೆಯುತ್ತಾರೆ. ನಿಯತ ಕಾಲಿಕಗಳಲ್ಲದೆ, ಉಳಿದ ಸಂಘ-ಸಂಸ್ಥೆಗಳೂ, ಕೆಲವೊಮ್ಮೆ ವ್ಯಕ್ತಿಗತ ಪಾತಳಿಯಲ್ಲಿ ಸಂಚಿಕೆ ಪ್ರಕಟಗೊಳ್ಳುತ್ತವೆ. ನಾ.ಸೀ. ಫಡಕೆ ಎಂಬ ಲೇಖಕ ತನ್ನ ಕಥೆ, ಕಾದಂಬರಿಗಳದ್ದೇ ಒಂದು ದೀ.ಸಂ. ಪ್ರಕಟಿಸಿದರು. ಹೆಸರು 'ಅಂಜಲಿ'. ಚಂದ್ರಕಾಂತ ಕಾಕೋಡಕರ 'ಚಂದ್ರಕಾಂತಾ' ಹೊರಡಿಸಿದ. ಈ ಸಂಚಿಕೆ ಒಬ್ಬ ಸಾಹಿತಿಯ ಸಮಗ್ರ ಲೇಖನ ಪ್ರಕಟಿಸುತ್ತದೆ.

**○ ಚಂದ್ರಕಾಂತ ಪೋಕಳೆ**

ಪ್ರತಿ ದೀಪಾವಳಿ ಸಂಚಿಕೆ ಕಥೆ, ಕಾದಂಬರಿ, ವಿವಿಧ ಲೇಖನ, ಲಲಿತ ಪ್ರಬಂಧ, ಹಾಸ್ಯ, ಕವಿತೆ, ವ್ಯಂಗ್ಯಚಿತ್ರ, ವಿಡಂಬನೆ, ವಿಮರ್ಶೆ, ಸಮಕಾಲೀನ ಸಮಸ್ಯೆ, ವಿದ್ಯಮಾನಗಳನ್ನು ಒಳಗೊಂಡಿರುತ್ತದೆ. ಸಮೃದ್ಧ ಸಾಹಿತ್ಯದ ರಸದೂಟ. ತುರ್ತು ಪರಿಸ್ಥಿತಿ ಕಾಲದ ಸಂಚಿಕೆಗಳಲ್ಲಿ ರಾಜಕೀಯಕ್ಕೆ ಮಹತ್ವ ನೀಡಲಾಗಿತ್ತು. ಕೆಲವು ಬರೇ ಮನರಂಜನೆಯನ್ನೋ, ಹಾಸ್ಯವನ್ನೋ ಆಧರಿಸಿದರೆ, ಕೆಲವು ವೈಚಾರಿಕತೆಯಿಂದ-ಗಂಭೀರ ಸ್ವರೂಪದ್ದಾಗಿರುತ್ತವೆ. ಹಣ ಗಳಿಸುವ ಉದ್ದೇಶಕ್ಕಾಗಿ ಹುಟ್ಟಿಕೊಂಡ ಪತ್ರಿಕೆಗಳೂ ಇವೆ.

ಮಹಾರಾಷ್ಟ್ರ ಟೈಮ್ಸ್, ಲಲಿತ, ಸಾಪ್ತಾಹಿಕ ಸಕಾಳ, ಕಥಾಶ್ರೀ, ಸತ್ಯಕಥಾ, ಮೌಜ, ಅಸ್ಮಿತಾದರ್ಶಿ, ಹಂಸ, ಮರಾಠವಾಡಾ, ದೀಪಾವಲಿ-ಇವು ಪ್ರಸಿದ್ಧ ದೀಪಾವಳಿ ಸಂಚಿಕೆಗಳು. ಈ ಸಂಚಿಕೆಗಳ ಸಾಹಿತ್ಯಿಕ ಮೌಲ್ಯ ಅತ್ಯಂತ ಶ್ರೇಷ್ಠ ದರ್ಜೆಯದು. ಇವು ಸಾಹಿತ್ಯಿಕ ಚಳವಳಿಯನ್ನೂ ಮುಂದುವರೆಸಿದ ಹೆಗ್ಗಳಿಕೆಗೆ ಪಾತ್ರವಾಗಿವೆ. ಆಗಾಗ ಸಾಹಿತ್ಯಿಕ ಪ್ರಯೋಗವನ್ನೂ ಇವು ಮಾಡುತ್ತವೆ. ಸಮಕಾಲೀನ ಸಮಸ್ಯೆಗಳಿಗೆ ಅಗ್ರಸ್ಥಾನ. ಸಾಮಾಜಿಕ ವಿಚಾರಗಳ ಸ್ಪಂದನ. ಕೆಲ ಪ್ರಯೋಗ ಹೀಗಿವೆ:



ಮರಾಠಿ ಮಹಿಳೆಯರು ಕನ್ನಡದವರಿಗಿಂತ ಹೆಚ್ಚು ಪುಸ್ತಕಪ್ರಿಯರು. ಹೊಸ ಬಟ್ಟೆ ಖರೀದಿಸುವದರ ಜತೆಗೆ ದೀಪಾವಳಿ ಸಂಚಿಕೆಯನ್ನೂ ತರುತ್ತಾರೆ.




ಲೇಖಕರ ಹೆಂಡಂದಿರ ಅಭಿಪ್ರಾಯ; ಕಥೆ ಹುಟ್ಟಿದ ಬಗೆ, ಸಾಹಿತ್ಯಿಕ ಹುಡುಕಾಟ ಇತ್ಯಾದಿ.

ಗಂಗಾಧರ ಗಾಡಗೀಳ, ಗೋಖಲೆ, ಜಿ.ಎ., ದಳವಿ, ಮಾಡಗೂಳಕರ, ಪುಲ ಇವರು ಪ್ರಸಿದ್ಧ ಲೇಖಕರು; ಕುಸುಮಾಗ್ರಜ, ಸುರ್ವೆ, ಧಸಾಳ, ಇಂದಿರಾಸಂತ, ಗ್ರೇಸಿ-ಕವಿಗಳು; ರಮೇಶ ಮಂತ್ರಿ, ಬುವಾ, ಮಿರಾಸದಾರ, ವಪು ಕಾಳೆ-ಹಾಸ್ಯ ಲೇಖಕರು.

ಕೆಲವು ಲೇಖಕರಂತೂ ಕೆಲವೇ ಪತ್ರಿಕೆಗೆ ಕಥೆ, ಲೇಖನ ಕಳಿಸುತ್ತಾರೆ. ಅಂಥಾ ನಿಷ್ಠೆ ಅವರದ್ದು. ಉಳಿದ ಪತ್ರಿಕೆ ಎಷ್ಟೇ ಹಣ ಕೊಟ್ಟರೂ ಕಥೆ ಕೊಡುವುದಿಲ್ಲ. ಉದಾ-'ಜಿಎ' ಇಂಥ ಕಟ್ಟುನಿಟ್ಟಿನ ವ್ಯಕ್ತಿ. ಇಂಥವರಿಂದಾಗಿಯೇ ಆ ಸಂಚಿಕೆಗೆ ಮಹತ್ವ. ಖ್ಯಾತ ಲೇಖಕರ ಕಾದಂಬರಿ ಮೊದಲು ದೀಪಾವಳಿ ಸಂಚಿಕೆಯಲ್ಲಿ ಪ್ರಕಟ. ಅನಂತರ ಪುಸ್ತಕ ರೂಪದಲ್ಲಿ. ಸಂಚಿಕೆಯ ವಿಷಯವೂ ವೈವಿಧ್ಯಮಯ. ನಿಸರ್ಗ, ಧಾರ್ಮಿಕ, ಆರೋಗ್ಯ, ಜ್ಯೋತಿಷ್ಯ, ಕೃಷಿ, ಹಾಸ್ಯ, ವಿಡಂಬನೆಯದೇ ಪ್ರತ್ಯೇಕ ಸಂಚಿಕೆಗಳು. ಮಕ್ಕಳದ್ದೂ ವಿಶಿಷ್ಟ ಸಂಚಿಕೆ. ಪ್ರತಿ ವರ್ಷ ಹೊಸ ಹೊಸ ಪ್ರಯೋಗ ಮಾಡುವದು ಮರಾಠಿಯ ವೈಶಿಷ್ಟ್ಯ. ಅದರದ್ದೇ ಒಂದು ವಿಶಿಷ್ಟ ಪ್ರಕೃತಿ, ಮನೋಧರ್ಮ, ಧೋರಣೆ ಹೊಂದಿರುತ್ತದೆ.

ಕನ್ನಡದಲ್ಲಿ ಪತ್ರಿಕಾ ಬಳಗ ಬಿಟ್ಟು ಬೇರೆ ಯಾರೂ ದೀಪಾವಳಿ ಸಂಚಿಕೆ ಪ್ರಕಟಿಸುವ ಧೈರ್ಯ ತೋರುತ್ತಿಲ್ಲ. ಲಂಕೇಶರ 'ಪಾಂಚಾಲಿ' ಇದಕ್ಕೆ ಅಪವಾದ. ಮರಾಠಿಯಲ್ಲಿ ವ್ಯಕ್ತಿಗತ ಪಾತಳಿಯಲ್ಲಷ್ಟೇ ಅಲ್ಲ, ಪ್ರಾದೇಶಿಕ ಹಿನ್ನೆಲೆಯಲ್ಲೂ ಸಂಚಿಕೆ ಮೂಡಿಬರುತ್ತದೆ. ವಿದರ್ಭ, ಮರಾಠವಾಡಾ, ಪುಣೆ, ಕೊಲ್ಲಾಪುರ, ಸಾಂಗಲಿ, ಕೊಂಕಣ ಈ ಪ್ರದೇಶದ ಸಂಚಿಕೆಗಳು ತಮ್ಮದೇ ವೈಶಿಷ್ಟ್ಯವನ್ನು ಹೊರಸೂಸುತ್ತವೆ. ಕನ್ನಡದಲ್ಲಿ ಸಿನೇ ಪ್ರಪಂಚಕ್ಕೆ ಅಗ್ರಸ್ಥಾನ. ಅವರದ್ದೇ ಭಾವಚಿತ್ರಗಳು. ಆಗಾಗ ನಿಸರ್ಗದ ಚಿತ್ರಗಳು ಪ್ರಕಟಗೊಳ್ಳುತ್ತಿದ್ದರೂ ರೋಚಕವಾದ ಗಾಸಿಪ್ ಪ್ರಪಂಚಕ್ಕೆ ಹೆಚ್ಚಿನ ಮನ್ನಣೆ. ಆದರೆ, ಮರಾಠಿಯಲ್ಲಿ ಸಿನೇಮಾ ಗೌಣ. ಕಲೆ-ಸಂಗೀತಕ್ಕೆ ಪ್ರಥಮ ಸ್ಥಾನ. ಈ ಸಂಚಿಕೆಗಳ ಹಿಂದೆ ಸಂಪಾದಕನ ಜಾಣ್ಮೆ ಗುರುತಿಸಬಹುದು. 'ಅಸ್ಮಿತಾ ದರ್ಶಿ', 'ಮರಾಠವಾಡಾ', 'ಸಾಪ್ತಾಹಿಕ ಸಕಾಳ' ಕನ್ನಡದ ಅನುವಾದಿತ ಕತೆಗಳಿಗೆ ಪ್ರಾಧಾನ್ಯ ನೀಡಿದ್ದನ್ನು ಕಂಡಿದ್ದೇನೆ.

ಒಮ್ಮೆ 'ಉಪರಾ' ಆತ್ಮಕತೆ ಬರೆದ ಲಕ್ಷ್ಮಣ ಮಾನೇ - 'ಈವರೆಗೆ ಬಂದ ಸಾಹಿತ್ಯ ಬರೇ ೩% ಜನಗಳದ್ದು, ಇನ್ನೂ ೯೭% ಜನರ ಸಾಹಿತ್ಯ ಬರಬೇಕಾಗಿದೆ, ಎಂದು ಹೇಳಿಕೆ ನೀಡಿದರು. ಇದರ ಚರ್ಚೆಗಾಗಿಯೇ ಪ್ರತ್ಯೇಕ ದೀ.ಸಂ. ಹೊರಡಿಸಲಾಯಿತು. (ನಮ್ಮಲ್ಲಿಯ 'ಬೂಸಾ' ಪ್ರಕರಣ ನೆನಪಿದೆಯಲ್ಲವೇ?). 'ಸತ್ಯಕತೆ' ಭಾರತೀಯ ಭಾಷೆಗಳ ಅಂಕೆಯನ್ನೇ ಮುಖಪುಟವನ್ನಾಗಿಸಿತು. ೨೦ ಕಾಲಮ್ಮಿನ ಅಡಿಯಲ್ಲಿ ೨೦ರ ಮಗ್ಗಿಯೇ ಹೊರಪುಟ ಅಲಂಕರಿಸಿತು. ಏಕಾತ್ಮಕತೆಯ ದರ್ಶನವನ್ನೂ ಮಾಡಿಸಿತು. Conscious, Unconscious, Sub-Conscious ಎಂಬ ಮನಸ್ಸನ್ನೇ ಆಧರಿಸಿದ ರ.ಕೃ. ಜೋಶಿ ಎಂಬವರ ಕವಿತೆಯೇ ಮುಖಪುಟದಲ್ಲಿ ಸ್ಥಾನ ಪಡೆಯಿತು. ಅಕ್ಷರ ವಿನ್ಯಾಸಗಳ ನಾನಾ ನಮೂನೆಯ ಪ್ರಯೋಗ ಕಾಣಸಿಗುತ್ತದೆ. ಕನ್ನಡದಲ್ಲಿಯಂತೆ- ಬರೇ ಸಿನೇ

# 'ಹೊಸ ಬದುಕು' ಮಾದರಿ

ಪ್ರತಿ ಸಲದಂತೆ ಹೆಸರಾಂತ ಪತ್ರಿಕೆಗಳ ವಿಶೇಷಾಂಕವನ್ನು ನಾನು ಖರೀದಿಸಲಿಲ್ಲ. ಈ ಬಾರಿ ಕುಂದಾಪುರದಿಂದ ಪ್ರಕಟವಾಗುತ್ತಿರುವ 'ಹೊಸ ಬದುಕು' ಪತ್ರಿಕೆಯ ದೀಪಾವಳಿ ಪತ್ರಿಕೆಯ ಪ್ರತಿ ಪುಟಗಳಲ್ಲೂ ಹೊಸತನದ ಛಾಪು ತುಂಬಿ ತುಳುಕುತ್ತಿತ್ತು ಎಂದರೆ ಅತಿಶಯೋಕ್ತಿಯಾಗಲಾರದು. ರಾಜ್ಯದ ಉದಯೋನ್ಮುಖ ಲೇಖಕರಿಗೆ ವೇದಿಕೆಯಾಗುವ ದೃಷ್ಟಿಯಿಂದ ಹುಟ್ಟಿಕೊಂಡ ಈ ಹೊಸ ಪತ್ರಿಕೆ ತನ್ನ ವಿಶೇಷಾಂಕದಲ್ಲೂ ಉದಯೋನ್ಮುಖರಿಗೆ ಹೆಚ್ಚಿನ ಪ್ರೋತ್ಸಾಹ ನೀಡಿದ್ದು ನನಗೆ ಖುಷಿ ತಂದಿತು. ೨೨ ಕಲರ್ ಫೋಟೋಗಳು, ಹದಿನಾರು ಸಿನೆಮಾ ಮಂದಿಯ ಸಂದರ್ಶನಗಳು, ಹನ್ನೆರಡು ಕಥೆಗಳು, ಪಠ್ಯಪುಸ್ತಕಗಳ ತರಹ ಬೋರೆನಿಸುವ ಬರಹಗಳಿಗಿಂತ ತೀರಾ ಭಿನ್ನವಾದ ಜೀವಂತ ಬರಹಗಳು ಪ್ರತಿ ಪುಟವನ್ನೂ ಆಸ್ಥೆಯಿಂದ ಓದಿಸಿಕೊಂಡು ಹೋದವು. ಸಾಕಷ್ಟು ಜಾಹೀರಾತುಗಳನ್ನು ಪಡೆದು ಕಲರ್‌ನಲ್ಲಿ ಪತ್ರಿಕೆಯನ್ನು ಮುದ್ರಿಸಿ ಬೆಲೆಯನ್ನು ಗಗನಕ್ಕೇರಿಸಿ ಸಪ್ಪೆ ಬರಹಗಳಿಂದ ಓದುಗರನ್ನು ಲೂಟಿಗೈಯುವ ಹೆಸರಾಂತ ಎನಿಸಿಕೊಂಡಿರುವ ಪತ್ರಿಕೆಗಳಿಗಿಂತ ಬ್ಲ್ಯಾಕ್ ಅಂಡ್ ವೈಟ್‌ನಲ್ಲಿ ಮುದ್ರಿತಗೊಂಡ 'ಹೊಸ ಬದುಕು' ಸಾವಿರ ಪಾಲು ಮೇಲು ಎನಿಸಿತು.

ನನ್ನ ದೃಷ್ಟಿಯಲ್ಲಿ ಮಾದರಿ ವಿಶೇಷಾಂಕವೆಂದರೆ ಹೊಸ ಬದುಕಿನ ಒಳ ಹೂರಣವನ್ನೊಳಗೊಂಡು ಪ್ರಜಾವಾಣಿ ವಿಶೇಷಾಂಕದಲ್ಲಿರುವಷ್ಟು ಪುಟಗಳೊಂದಿಗೆ ಹೊಸ ಬದುಕಿನ ವಿಶೇಷಾಂಕದ ಬೆಲೆಗೆ ಸಿಗುವಂತಿರಬೇಕು.

**- ಕೆ. ಕಲಾವತಿ**
ಕುಂದಾಪುರ.

[P.S. : ನನ್ನ ಫೋಟೋ ಪ್ರಕಟವಾಗುವುದು ನಮ್ಮವರಿಗೆ ಇಷ್ಟವಿಲ್ಲದ ಕಾರಣ ಫೋಟೋ ಕಳಿಸುತ್ತಿಲ್ಲ]

ತಾರೆಯರ ಚಿತ್ರಗಳಿಲ್ಲ. ಕೆಲ ಸಂಚಿಕೆಗಳು ರಾಶಿ-ಭವಿಷ್ಯ ಪ್ರಕಟಿಸುವದೇ ಇಲ್ಲ. ಕೆಲವೊಮ್ಮೆ ಓದುಗರನ್ನು ಬೆಚ್ಚಿಸುವ, ಚಕಿತಗೊಳಿಸುವ ಎರಡೆರಡು ಚಿತ್ರಗಳ ಜೋಡಣೆಯೂ ಇರುತ್ತದೆ. ಲೈಂಗಿಕತೆ ಮೂಲಕ ತಿಳಿಹಾಸ್ಯ ಹೊರಹೊಮ್ಮಿಸುವ ಪ್ರಯತ್ನ ಮಾಡುವರು. Tortoiseನ ಜಾಹೀರಾತು ಇಂಥ ಪ್ರಯೋಗದಲ್ಲಿ ನಿರತ.

ಕನ್ನಡದಲ್ಲಿಯಂತೆ ಇಲ್ಲೂ ಕಥೆ ಸ್ಪರ್ಧೆ ಇದೆ. ಆದರೆ ಬಹುಮಾನ ಕನ್ನಡಕ್ಕಿಂತ ಕಡಿಮೆ. 'ಪ್ರಜಾವಾಣಿ'ಯ ೪,೦೦೦/-ರೂ. ಪ್ರಾಯಶಃ ಭಾರತೀಯ ಭಾಷೆಗಳಲ್ಲೇ ಹೆಚ್ಚಿನದು. ಮುಂಬೈ, ಪುಣೆಯಂತಹ ನಗರಗಳಲ್ಲಿ ಎಲ್ಲ ದೀಪಾವಳಿ ಸಂಚಿಕೆಗಳ ಪ್ರದರ್ಶನ ಏರ್ಪಡಿಸುತ್ತಾರೆ. ವಾರಗಟ್ಟಲೆ ಇದನ್ನು ವೀಕ್ಷಿಸಬಹುದು. ಅನಂತರ ಶ್ರೇಷ್ಠ ಸಂಚಿಕೆಯ ಆಯ್ಕೆ. ಅದಕ್ಕೆ ಪ್ರಶಸ್ತಿ-ಬಹುಮಾನ. ಪ್ರತಿ ಸಂಚಿಕೆಯ ಮೌಲಿಕ, ಉತ್ತಮ ಲೇಖನ ಆಯ್ದು 'ಅಕ್ಷರ ದೀಪಾವಳಿ' ಎಂಬ ಹೆಸರಿನಲ್ಲಿ ಮತ್ತೇ ಪ್ರಕಟಿಸುತ್ತಾರೆ. ಇದು ಸಂಗ್ರಹಯೋಗ್ಯ ಸಂಚಿಕೆ. ಇಂಥ ಪ್ರಯತ್ನ ಕನ್ನಡದಲ್ಲಿಲ್ಲ. ಮರಾಠಿಗರ ಪ್ರಯೋಗಶೀಲತೆ ಮೆಚ್ಚುವಂತಹದು.

ನಾನು ಗಮನಿಸಿದಂತೆ ಮರಾಠಿ ಮಹಿಳೆಯರು ಕನ್ನಡದವರಿಗಿಂತ ಹೆಚ್ಚು ಪುಸ್ತಕ ಪ್ರಿಯರು. ಗ್ರಂಥಾಲಯದಿಂದ ಸಂಚಿಕೆ ತರಿ ಸಾಧ್ಯವಾದರೆ ಖರೀದಿಸಿ ಓದುವ ಹುಮ್ಮಸ್ಸು. ದೀಪಾವಳಿಯಲ್ಲಿ ಹೊಸ ಬಟ್ಟೆ ಖರೀದಿಸುವದರ ಜತೆಗೆ ದೀಪಾವಳಿ ಸಂಚಿಕೆಯನ್ನೂ ತರುತ್ತಾರೆ. ಮಕ್ಕಳಿಗೂ ಮಕ್ಕಳ ಸಂಚಿಕೆ ಕೊಡಿಸುತ್ತಾರೆ. ಪರಿಣಾಮ ಓದಿನಲ್ಲಿ ಎಲ್ಲರೂ ತನ್ಮಯ. ಮರಾಠಿಗರ ಪ್ರವೃತ್ತಿಗೆ ತಕ್ಕಂತೆ ಹಾಸ್ಯ ಸಂಚಿಕೆಗಳಿಗೆ ಮೊದಲ ಸ್ಥಾನ. ಕೆಲವು ಸಂಚಿಕೆಯಲ್ಲಂತೂ ಬರೇ ವ್ಯಂಗ್ಯಚಿತ್ರಗಳೇ. ಇಡೀ ಕುಟುಂಬ ಅದನ್ನು ಓದಿ ನಕ್ಕು ನಲಿಯುತ್ತಾರೆ. ಕನ್ನಡದಲ್ಲಿ ಮಹಿಳೆ ಓದುವದೇ ಕಡಿಮೆ. ಅದರಲ್ಲೂ ಮದುವೆಯ ನಂತರ ಸಂಸಾರಿಕ ಜಂಜಾಟದಲ್ಲಿ ನಲುಗಿ ಹೋಗುತ್ತಾಳೆ. ಇವಳಿಗೆ ಪುಸ್ತಕ, ಪತ್ರಿಕೆ ಎಂದರೆ ಏನೋ ಒಂದು ಬಗೆಯ ಉದಾಸೀನತೆ. ಅಕ್ಷರವೆಂದರೆ ದ್ವೇಷ, ತಲೆನೋವು, ಅಲರ್ಜಿ!


ಕೆಲವು ಶ್ರೇಷ್ಠ ಲೇಖಕರಿಗೆ ಮೊದಲು ಚೆಕ್ ನೀಡಿ ಲೇಖನ ತರಿಸಿಕೊಳ್ಳುವ ಪರಿಪಾಠವೂ ಇದೆ. ಅಥವಾ ಕಥೆ ಬರೆಯಲು ಹೇಳಿ ಪತ್ರಿಕಾ ಏಜೆಂಟರಿಂದಲೋ, ಸ್ಥಳೀಯ ಕಾರ್ಯಾಲಯದಿಂದಲೋ ತಕ್ಷಣ ಹಣ ಸಂದಾಯ ಮಾಡುವ ವ್ಯವಸ್ಥೆ. ಕನ್ನಡದಲ್ಲಿ ಗೌರವ ಸಂಚಿಕೆಯೂ ಇಲ್ಲ. ಹಣ ೪-೫ ತಿಂಗಳ ನಂತರ! ಅದೂ ಜುಜುಬಿ.

'ಮರಾಠಿಗಿಂತ ಕನ್ನಡದಲ್ಲೇ ಮೌಲಿಕ ಬರಹಗಳಿರುತ್ತವೆ. ಮರಾಠಿಯ ಬರಹ ತೀರಾ ಕಳಪೆ ಮಟ್ಟದ್ದು. ಬರೇ ಹಾಸ್ಯ, ಅತೀ ಲೈಂಗಿಕತೆ' ಎಂದೂ ಕನ್ನಡದ ಕೆಲ ಲೇಖಕರು ಮೂಗು ಮುರಿದದ್ದನ್ನು ಕಂಡಿದ್ದೇನೆ. ಅದೇನಿದ್ದರೂ ಅವರ ಪ್ರಯೋಗಶೀಲತೆ, ನಾವೀನ್ಯತೆ ಮಾತ್ರ ಮೆಚ್ಚಲೇಬೇಕು. ಈ ಕಾರಣದಿಂದಾಗಿಯೇ ೫೦೦ ದೀಪಾವಳಿ ಸಂಚಿಕೆಗಳನ್ನು ಓದುಗರಿಗೆ ತಲುಪಿಸುವ, ಪ್ರಕಟಿಸುವ ಎದೆಗಾರಿಕೆ ಅವರಲ್ಲಿದೆ.

ಮರಾಠಿ ಪತ್ರಿಕೆಗಳಿಗೆ ಜನರ ನಾಡಿಮಿಡಿತ ಗೊತ್ತಿದೆ! ಅದಕ್ಕೆ ತಕ್ಕಂತೆ ಅವರು ಸ್ಪಂದಿಸುತ್ತಾರೆ. ಅಂಥ ಲವಲವಿಕೆ, ಜೀವಂತಿಕೆ ಇಂದಿಗೂ ಉಳಿಸಿಕೊಂಡಿದ್ದಾರೆ. ●

---

# ಬೆಲೆ ಮೀರಿದ ಅಭಿಮಾನ!



**ಕೊಂ**ಡದ್ದು "ಉದಯವಾಣಿ". ಕಾರಣ ನಾನು ಹೆಚ್ಚಾಗಿ ಉದಯವಾಣಿಯವರ, ತುಷಾರ, ತರಂಗ, ಓದುತ್ತೇನೆ. ಅಲ್ಲದೆ ಇದರಲ್ಲಿ ನನಗೆ ಮೆಚ್ಚುಗೆಯಾಗುವ ಕವನಗಳು, ಆಕರ್ಷಕ ಚಿತ್ರದ ಜೊತೆಗೆ ಬರುವ ಲೇಖನಗಳು ಅಡಗಿವೆ. ಅಲ್ಲದೆ ಇದರ ಮೇಲಿನ ಅಭಿಮಾನ ಬೆಲೆಗೆ ಮೀರಿದ ವಿಷಯ.

ಬೆಲೆಗೆ ಮೀರಿದ ವಿಷಯವನ್ನು ಹೊತ್ತ ಉದಯವಾಣಿ ವಿಶೇಷಾಂಕಕ್ಕೆ ಆ ಬೆಲೆ (ರೂ. ೩೦) ಏನೂ ಹೆಚ್ಚಲ್ಲ.

ನನಗಿಷ್ಟವಾದ ಕತೆ, ಪ್ರಬಂಧ, ಕವನ, ವಿಶೇಷ ಲೇಖನ ಬರಹ, ಹಾಸ್ಯ ಬರಹ ಓದಿದ್ದೇನೆ. ಸಂಪೂರ್ಣ ಓದಲಿಲ್ಲ. ಇನ್ನೂ ಸಿನಿಮಾ ಸಂಭ್ರಮ ಓದಬೇಕಿದೆ.

ನಮ್ಮ ಅಣ್ಣಂದಿರಿಗೆ ಹಾಗೂ ಉಳಿದವರಿಗೂ ಅದರಲ್ಲಿಯ ಶುಭ್ರ ಚಿತ್ತಾಕರ್ಷಕ ಚಿತ್ರ ಲೇಖನಗಳು ಹಿಡಿಸಿದವಂತೆ. ಅಕ್ಕಂದಿರಿಗೆ ಬರೆ ಕಥೆ ಹಾಸ್ಯ ಬರಹ ಹಿಡಿಸಿದವಂತೆ. ಅಲ್ಲದೆ ಬಾಲ ಪ್ರತಿಭೆಗೆ ಅವಕಾಶ ಇದ್ದಿದ್ರೆ ಚೆನ್ನಾಗಿರ್ತಿತ್ತು. ಅಂತ ತಮ್ಮ ಅಭಿಪ್ರಾಯ ತಿಳಿಸಿದ್ರು.


ನನಗೆ ಅದರಲ್ಲಿಯ ಹಾಸ್ಯ ಬರಹ, ಕವನ, ಓ ನನ್ನ ಚೇತನ, ಆಗು ನೀ ಅನಿಕೇತನ, ಫೋಟೋ ನೆನಪುಗಳು ಚಿತ್ರ ಲೇಖನ ಇವೆಲ್ಲಾ ಹಿಡಿಸಿದವು.

ಲೇಖಕರು ಹಳಬರಾದರೂ ಅವರ ಹಳೆ ಲೇಖನಿಯಿಂದ ಮೂಡಿದ ಹೊಸ ಲೇಖನ ಯಾವ ಮಟ್ಟದಲ್ಲಿದೆಯೆಂದು ವಿಶ್ಲೇಷಿಸುವುದು ಓದುಗನಾದವನ ಮುಖ್ಯ ಕರ್ತವ್ಯ. ಲೇಖನಿ ಬರೆದಂತೆ ಹರಿತವಾಗುತ್ತದೆ. ಹಳೆ ಲೇಖನಿಯ ಹೊಸ ಲೇಖನಗಳು ಇಂದಿನ ಯುವ ಪೀಳಿಗೆಗೆ ದಾರಿ ದೀಪವಾಗಬಹುದು. ಈ ಮೇಲಿನ ಎಲ್ಲಾ ಅಂಶ ಈ ವಿಶೇಷಾಂಕದಲ್ಲಿ ಕಾಣ ಬರುತ್ತದೆ. ಆದ್ದರಿಂದ ಹಳೆಯ ಲೇಖಕರ ಬರಹಗಳಿವೆ ಎಂದು ನನಗೆ ಅಸಮಾಧಾನವಾಗಲಿಲ್ಲ. ಪ್ರಜಾವಾಣಿ, ಕರ್ಮವೀರ ದೀಪಾವಳಿ ವಿಶೇಷಾಂಕದ ಮುದ್ರಣ ವಿನ್ಯಾಸ ನನಗೆ ಮುದ ನೀಡಿದೆ.

ನನ್ನ ದೃಷ್ಟಿಯಲ್ಲಿ ಮಾದರಿ ವಿಶೇಷಾಂಕ: ೧. ಯಾವುದೇ ಪತ್ರಿಕೆ 'ಯಾ' ವಿಶೇಷಾಂಕಕ್ಕೆ ಆಕರ್ಷಕ ಮುಖಪುಟ, ವಿನ್ಯಾಸ, ಮುದ್ರಣ ಅತ್ಯವಶ್ಯ ೨. ಮನಸ್ಸಿಗೆ ಮುದ ನೀಡುವ ಚಿತ್ರ ಸಹಿತ ಲೇಖನಗಳಿರಬೇಕು. ೩. ಯುವ ಪ್ರತಿಭೆಗೆ ಅವಕಾಶ ಇರಬೇಕು
೪. ವಿದ್ಯಾರ್ಥಿಗಳಿಗೆ ಉಪಯೋಗವಾಗುವ ಒಂದೆರಡು ಲೇಖನಗಳು ಆದರೂ ಇರಬೇಕು. ೫. ಲೇಖನಗಳು ಪ್ರಸ್ತುತ ಸಮಸ್ಯೆಗೆ ಸ್ಪಂದಿಸುವಂತಿರಬೇಕು. ಜನ ಜಾಗೃತಿ ಮೂಡಿಸುವಂತಿರಬೇಕು. ೬. ಓದುಗರ ಬರಹಗಳಿಗೆ ಸ್ವಲ್ಪವಾದರೂ ಸ್ಥಳಾವಕಾಶ ಬೇಕು. ೭. ಕಥೆ, ಕವನ, ಹಾಸ್ಯ ಬರಹ ಮುಂತಾದವು ಇದ್ರೆ ವಿಶೇಷಾಂಕಕ್ಕೆ ಕಳೆಬರುತ್ತದೆ. ೮. ಮಹಿಳೆಯರಿಗೋಸ್ಕರ ಕೆಲವು ಲೇಖನಗಳು ಬೇಕು ೯. ಸಿನಿಮಾ ತಾರೆಗಳ ಮುಖಗಳು ವಿಶೇಷಾಂಕದ ಪುಟಗಳಲ್ಲಿ ನಗುತ್ತಿರಬೇಕು.

**– ಎ. ಲಕ್ಷ್ಮಣ್ ಬಾಳಿಮಕ್ಕಿ**
ತ್ರಾಸಿ (ದ.ಕ.)

# ವಾಕರಿಕೆ ತರುವ ವಿಷಯ



ಪ್ರತೀ ಸಾರೆಯಂತೆ ಈ ಸಾರೆಯೂ ನಾನು 'ಲಂಕೇಶ್ ಪತ್ರಿಕೆ', 'ಉದಯವಾಣಿ' ಹಾಗೂ 'ಕರ್ಮವೀರ'ಗಳನ್ನು ಕೊಂಡುಕೊಂಡಿದ್ದೆ. ಸಮೃದ್ಧ ಸಾಹಿತ್ಯಕ್ಕಾಗಿಯೇ ನಾನು ಈ ವಿಶೇಷಾಂಕಗಳನ್ನು ಕೊಂಡುಕೊಂಡೆ. ಬೆಲೆಯ ಬಗ್ಗೆ ಹೇಳುವುದಾದರೆ, ಈ ವರ್ಷದ ವಿಶೇಷಾಂಕಗಳೆಲ್ಲವೂ ಒಂದಕ್ಕಿಂತ ಒಂದು ಪೈಪೋಟಿಗಿಳಿದಂತೆ ಭಾಸವಾಯಿತು! ನಿಜಕ್ಕೂ ವಿಶೇಷಾಂಕಗಳ ಬೆಲೆಯು ಅತಿ ದುಬಾರಿ ಎನ್ನಿಸುತ್ತದೆ. ನಾನು ಕೊಂಡವುಗಳೆಲ್ಲ ತೀರ ಭಿನ್ನ. 'ಲಂಕೇಶ್ ಪತ್ರಿಕೆ'ಯಲ್ಲಿನ ವಿಶಿಷ್ಟ ಕತೆಗಳು, 'ಒಂದು ಮೇಜಿನ ಆತ್ಮಕತೆ' ಎಂಬ ಲೇಖನ ಇಷ್ಟವಾದರೆ, 'ಉದಯವಾಣಿ'ಯಲ್ಲಿನ ಫೋಟೋಗಳನ್ನು ನೋಡುವುದೇ ಆನಂದ. 'ಕರ್ಮವೀರ'ದಲ್ಲಿ ಓದುಗರ ಅಂಕಣಗಳು ಇಷ್ಟವಾದವು. ನನಗಿಷ್ಟವಾದುದನ್ನು ಓದುತ್ತೇನೆಯೇ ವಿನಾ ಖಂಡಿತ ಸಂಪೂರ್ಣವಾಗಿ ಓದುವುದಿಲ್ಲ!

ಇಂತಹ ದುಬಾರಿ ವಿಶೇಷಾಂಕಗಳನ್ನು ಕುಟುಂಬದ ಸದಸ್ಯರು ಅದರಲ್ಲೂ ಹೆಂಗಸರು ಮೆಚ್ಚುವುದೇ ಇಲ್ಲ. ನನ್ನ ಕುಟುಂಬದಲ್ಲಿ ದೀಪಾವಳಿ ವಿಶೇಷಾಂಕಗಳನ್ನು ನನ್ನ ಮಕ್ಕಳು, ಸಹೋದರರು, ಸಹೋದರಿ ಇಷ್ಟಪಡುತ್ತಾರೆ. ಸಾಮಾನ್ಯವಾಗಿ ದೀಪಾವಳಿ ವಿಶೇಷಾಂಕಗಳಲ್ಲಿ ಹಳೆಯ ಲೇಖಕರ ಬರಹಗಳೇ ಇರುವುದು ವಾಕರಿಕೆ ತರುವ ವಿಷಯ! ಒಂದು ವಿಶೇಷಾಂಕ ಹೊರ ಬರುತ್ತದೆ ಎಂದರೆ, ಇಂತಿತಹವರೇ ಬರೆಯುತ್ತಾರೆ ಎಂದು ಮುಂಚಿತವಾಗಿಯೇ ಊಹಿಸಬಹುದು! ಹಳೆಯ ಲೇಖಕರಿಂದ ಬರೆಸುವುದನ್ನು ಒಂದು 'ಪ್ಯಾಷನ್' ಮಾಡಿಕೊಂಡ ಪತ್ರಿಕೆಗಳೇ ಇಂದು ಹೆಚ್ಚಿನ ಸಂಖ್ಯೆಯಲ್ಲಿವೆ. ಅವರೋ ನೇರವಾಗಿ ವಿಷಯ ಪ್ರವೇಶ ಮಾಡದೇ ಪೀಠಿಕೆಯನ್ನೇ ಹೆಚ್ಚು ಬರೆದಿರುತ್ತಾರೆ.

ಮುದ್ರಣ-ವಿನ್ಯಾಸದ ಬಗ್ಗೆ ಹೇಳುವುದಾದರೆ 'ಉದಯವಾಣಿ' ಪ್ರಥಮ ಸ್ಥಾನ ಪಡೆದರೆ, 'ಪ್ರಜಾವಾಣಿ' ದ್ವಿತೀಯ ಎನ್ನಬಹುದು. ವಿನ್ಯಾಸದಲ್ಲಿ ನಾವು ತೆಲುಗು ತಮಿಳನ್ನು ಅನುಸರಿಸಬಹುದು.

ನನ್ನ ಕನಸಿನ 'ಮಾದರಿ' ವಿಶೇಷಾಂಕ ಹೀಗಿರಬೇಕು :

''ಹಳೆಬೇರು ಹೊಸ ಚಿಗುರು ಬೆರತಿರಲು ಮರ ಸೊಗಸು'' ಎಂಬಂತೆ ಅಲ್ಲಲ್ಲಿ ಹಳೇ ಬೇರು ಇರಲಿ, ಆದರೆ ಪ್ರಾಧಾನ್ಯ ಹೊಸ ಚಿಗುರಿಗೇ! 'ಹನಿಗವನ'ಗಳು ರೇಖಾ ಚಿತ್ರದೊಂದಿಗೆ ಪ್ರಕಟವಾಗಿರಬೇಕು. ಮನಸ್ಸಿಗೆ ಮುದ ನೀಡುವಂತಹ 'ವ್ಯಂಗ್ಯ ಚಿತ್ರ'ಗಳು, ಕಥೆಗಳಂತೂ ವಿಶೇಷಾಂಕಗಳಿಗೆ 'ಜೀವಾಳ'.

ಛಾಯಾಚಿತ್ರಗಳೂ ಅವಶ್ಯವಾಗಿ ಬೇಕು. ಇವು ರಂಗುರಂಗಿನಲ್ಲೇ ಇದ್ದರೆ ಚೆನ್ನ. ಹಾಗೆಂದು ಕಪ್ಪು-ಬಿಳುಪು ಛಾಯಾಚಿತ್ರಗಳನ್ನು ಅಲ್ಲ ಗಳೆಯುವಂತಿರಬಾರದು. ಓದುಗರನ್ನು ಚಿಂತನೆಗೆ ಹಚ್ಚುವಂತಹ 'ವಾರ್ಷಿಕ ಸ್ಪರ್ಧೆ'ಗಳೂ ಇರಬೇಕು.

**– ಪರಮೇಶ್ವರ ಎಸ್.ಕುದರಿ**
ಚಳ್ಳಕೆರೆ.

# ಹಳೇ ಪ್ರೊಫೆಸರುಗಳ ಬೋಳೇ ವಿಚಾರ

ದೀಪಾವಳಿಯ ಬಟ್ಟೆಬರೆ, ಸಿಹಿಯೂಟ, ಪಟಾಕಿಗಳಿಗೆಂದು ಐನೂರರ ನೋಟುಗಳೇ ಗಾಳಿಗೆ ಹೋಗುತ್ತಿರುವಾಗ ದೀಪಾವಳಿ ವಿಶೇಷಾಂಕದ ಬೆಲೆಯ ಬಗ್ಗೆ ಓದುಗ ಯೋಚಿಸಿಯಾನೇ?

ಯಾವುದೇ ವಿಷಯವನ್ನು ಚರ್ಚೆ/ಸಮೀಕ್ಷೆಗೆ ಕೈಗೆತ್ತಿಕೊಂಡಿದ್ದರೂ ಪ್ರತಿವರ್ಷವೂ ಅಚ್ಚಾಗುವ ಅದೇ ಹಳೇ ಪ್ರೊಫೆಸರ್‌ಗಳ ಪಾಸ್‌ಪೋರ್ಟ್ ಸೈಜಿನ ಫೋಟೋಗಳು, ಅವರ ತರ್ಕ-ವಿಚಾರ-ಅನಿಸಿಕೆಗಳು ಚರ್ವಿತಚರ್ವಣ ವಾಗಿರುತ್ತವೆ. ಕಾಲೇಜ್ ಕ್ಯಾಂಪಸ್ ಬಿಟ್ಟರೆ ಬೇರೆಲ್ಲೂ ವಿಚಾರವಂತರು ಸಿಗುವುದಿಲ್ಲವೇನೋ ಎನ್ನುವಷ್ಟರಮಟ್ಟಿಗೆ ಇವರ ಸಂಖ್ಯೆಯಿರುತ್ತದೆ.

ಮುಂಬಯಿ ಚಿತ್ರನಟಿಯ ಶಯ್ಯಾಗೃಹದ ಪ್ರತ್ಯಕ್ಷ ವರದಿಯನ್ನು ಈ ಕೂತಲ್ಲೇ ಹೆಣೆಯಲು ತಿಣುಕುವ ಪತ್ರಕರ್ತರಿಗೆ, ನಮ್ಮ ರಂಗಭೂಮಿಯ ವಿಚಾರಗಳು ಹೇಗೆ ಹೊಳೆದಾವು?

ಒಂದೆಡೆ ಉತ್ತರ ಕರ್ನಾಟಕದಲ್ಲಿ ನೆಲೆ ಯೂರಲು 'ಪ್ರಜಾವಾಣಿ' ಧಾರವಾಡದ ಬಗೆಗಿನ ಲೇಖನಗಳ ಬಗ್ಗೆ ವಿಶೇಷ ಆಸಕ್ತಿ ತೋರುತ್ತಿದ್ದರೆ, ಮತ್ತೊಂದೆಡೆ ಮೈಸೂರು ಭಾಗದ ವಿಷಯಗಳನ್ನೇ ಹೈಲೈಟ್ ಮಾಡುತ್ತಿರುವ 'ಉದಯವಾಣಿ' ದಕ್ಷಿಣ ಭಾಗದಲ್ಲಿ ವೃದ್ಧಿಯಾಗಲು ಯತ್ನಿಸುತ್ತಿದೆ.

**– ಕೆ. ಜಗದೀಶ್**
ಬಳ್ಳಾರಿ

# ಓಲ್ಡ್ ಈಜ್ ಗೋಲ್ಡ್!



ನಾನು ಈ ಸಾರಿ ''ಲಂಕೇಶ್ ದೀಪಾವಳಿ ವಿಶೇಷಾಂಕ'' ಪತ್ರಿಕೆಯನ್ನು ಕೊಂಡುಕೊಂಡಿರುವೆ. ನಾನು ಕೊಂಡು-ಕೊಂಡ ವಿಶೇಷಾಂಕದ ಬೆಲೆಯ ಬಗ್ಗೆ ಹೇಳಬೇಕೆಂದರೆ.... ನಾವು ಎಲ್ಲಾದರೂ ಹೊರಗಡೆ ಹೋದಾಗ ಮಿತಿಯಿಲ್ಲದ ಹಾಗೆ ಹೇರಳವಾಗಿ ಹಣವನ್ನು ದುಂದುವೆಚ್ಚ ಮಾಡುವುದರಲ್ಲಿ ನಿಪುಣರು. ಇಂಥದರಲ್ಲಿ ಈ ಪತ್ರಿಕೆಯ ಬೆಲೆ ಹೆಚ್ಚೆನಿಸಲಿಲ್ಲ. ಸಂಪೂರ್ಣವಾಗಿ ಇನ್ನೂ ಓದಿಲ್ಲ (ಓದುವೆ).

ಈ ವಿಶೇಷಾಂಕದ ಬಗ್ಗೆ, ನಮ್ಮ ಕುಟುಂಬದ ಸದಸ್ಯರ ಅಭಿಪ್ರಾಯ 'ಹೆಮ್ಮೆ'ಯದಾಗಿದೆ.

ನನಗೆ ಈ ವಿಶೇಷಾಂಕದಲ್ಲಿನ 'ಚಲನ ಚಿತ್ರಗಳಲ್ಲಿ ಹೆಣ್ಣು' ಅಂಕಣದ ವಿನಯ ಪ್ರಸಾದರ ಅನಿಸಿಕೆ ಹಿಡಿಸಿದೆ.

ಪ್ರತಿ ವರ್ಷದಂತೆ ಈ ವರ್ಷವೂ ಅದೇ ಹಳೆಯ ಲೇಖಕರ ಬರಹಗಳಿದ್ದರೂ....'Old is gold' ಅಲ್ಲವೆ?

'ಮಾದರಿ ವಿಶೇಷಾಂಕ' ಹೇಗಿರಬೇಕೆಂದರೆ ಆಧುನಿಕತೆಯ ತಿರುವು ಪಡೆದಿರಬೇಕು ಮತ್ತು ಕಥೆ, ನಾಟಕ, ಕವನ, ಹಾಸ್ಯದಿಂದ ಕೂಡಿರಬೇಕು.

**– ಕೆ. ಸುಧಾ**
ಹ್ಯಾಳ್ಯಾ.

# ಕರ್ಮವೀರ - ಉದಯವಾಣಿ



ಕರ್ಮವೀರ ದೀಪಾವಳಿ ವಿಶೇಷಾಂಕದ ಬೆಲೆ ರೂ.೩೦. ವಿಶೇಷಾಂಕದ ಮುಖಪುಟದಲ್ಲಿ ಹಾಲಕ್ಕಿ ವೇಷದ ಗೌಡತಿ ಶ್ರುತಿ ಕೈಯಲ್ಲಿ ದೀಪ ಹಿಡಿದಿದ್ದನ್ನು ಬಹಳ ಕಲಾತ್ಮವಾಗಿ ಮುದ್ರಿಸಲಾಗಿದೆ.

ಲೇಖನಗಳು : 'ಮೌನಬಂಗಾರ ಮತ್ತು ಮಾತು ಬೆಳ್ಳಿ'' (ಡಾ. ಪಂಚಾಕ್ಷರಿ ಹಿರೇಮಠ) ಬಹಳ ಸೊಗಸಾಗಿ ಮೂಡಿದೆ.

ಕಥೆಗಳು : ಸಿರಿಸಂಪತ್ತು (ಗೀತಾ ನಾಗಭೂಷಣ), ಕಥೆ ಗ್ರಾಮೀಣ ಪ್ರದೇಶದ ವಿಷಯ ಕೊಂದಿದೆ. ಸಿರಿ ಸಂಪತ್ತಿಗೆ ಮಾರು ಹೋದ ಹೆಂಗಸು, ಪುನಃ ತನ್ನ ಕುರುಡು ಗಂಡನನ್ನು ಸ್ಮರಿಸುವಂತಾಗಿದೆ.

ಓದುಗರ ವೇದಿಕೆ : 'ಛೇ! ಹಾಗೆ ಮಾಡಬಾರದಿತ್ತು' ಬಹಳ ಚೆನ್ನಾಗಿ ಮೂಡಿ ಬಂದಿರುತ್ತದೆ.

ವರ್ಷ ಭವಿಷ್ಯ ಮತ್ತು ಉಚಿತ ಕೊಡುಗೆ : (ಸೌಂದರ್ಯ ಸಂಗಾತಿ) ಇವೆಲ್ಲವುಗಳು ಬಹಳ ಅರ್ಥವತ್ತಾಗಿ ಮುದ್ರಣಗೊಂಡಿವೆ.

ಉದಯವಾಣಿ ದೀಪಾವಳಿ ವಿಶೇಷಾಂಕ ೯೭ರ ಬೆಲೆ ರೂ. ೩೦. ಮುಖಪುಟವು ಬಹಳ ಆಕರ್ಷಕವಾಗಿದೆ.

ಎತ್ತಣ ಮಾಮರ ಎತ್ತಣ ಕೋಗಿಲೆ (ವೀಣಾ ಬನ್ನಂಜೆ), ಕೆಂಪಾದವೋ ಎಲ್ಲಾ ಕೆಂಪಾದವೋ (ಗೀತಾ ನಾಗಭೂಷಣ), ಕಥೆಗಳು ಹಾಗೂ ಕೀರ್ತಿನಾಥ ಕುರ್ತಕೋಟಿ ಅವರೊಂದಿಗಿನ ಸಂವಾದ (ಡಾ. ನರಹಳ್ಳಿ ಬಾಲಸುಬ್ರಮಣ್ಯಂ) ಬಹಳ ಸೊಗಸಾಗಿ ಮೂಡಿಬಂದಿವೆ. ಕೀರ್ತಿನಾಥ ಕುರ್ತಕೋಟಿಯವರ ಕುಟುಂಬದವರ ಫೋಟೋ ಬಹಳ ಆಕರ್ಷಕವಾಗಿದ್ದವು.

**- ಶ್ರೀಶೈಲ ಚಲವಾದಿ**
ಹಿರೇಬಾದವಾಡಗಿ

## ಎರಡು ಪತ್ರಗಳು

ದೀಪಾವಳಿ ವಿಶೇಷಾಂಕಗಳ ಬಗ್ಗೆ ಲೇಖನ ಕೋರಿ ಬರೆದ ಪತ್ರಕ್ಕೆ ಕನ್ನಡದ ಖ್ಯಾತ ಲೇಖಕರಾದ ಕೆ.ವಿ.ತಿರುಮಲೇಶ್ ಹಾಗೂ ಜಿ.ರಾಜಶೇಖರ ಅವರು ಈ ಕೆಳಗಿನಂತೆ ಉತ್ತರಿಸಿದ್ದಾರೆ.

- ಸಂ.

ಪ್ರಿಯ ಚಂದ್ರಕಾಂತ ವಡ್ಡು ಅವರೇ,

ಕೆಲವು ದೀಪಾವಳಿ ಸಂಚಿಕೆಗಳಲ್ಲಿ ನನ್ನದೇ ಕತೆಗಳು ಬಂದಿರುತ್ತ ನೀವು ಕೋರಿದ ಅನಿಕೆಗಳನ್ನು ನಾನು ಬರೆಯುವುದು ಸಾಧ್ಯವಿಲ್ಲ. ಅಲ್ಲದೆ ಇಂಥ ಲೇಖನಗಳನ್ನು ನಾನು ಬರೆಯುವವನೂ ಅಲ್ಲ. ಕ್ಷಮಿಸಿ.


**- ಕೆ.ವಿ. ತಿರುಮಲೇಶ್**
ಹೈದರಾಬಾದ್

ಪ್ರಿಯರೇ,

ನಿಮ್ಮ ಪತ್ರ ತಲುಪಿತು. ನಿಮ್ಮ ಪತ್ರಿಕೆಯ ಸಂಚಿಕೆಗಳೂ ತಲುಪಿವೆ. ಕೃತಜ್ಞತೆಗಳು. ಲಂಕೇಶ್ ಪತ್ರಿಕೆಯ ದೀಪಾವಳಿ ಸಂಚಿಕೆಯನ್ನು ಹೊರತುಪಡಿಸಿ ನಾನು ಯಾವ ದೀಪಾವಳಿ ಸಂಚಿಕೆಯನ್ನೂ ನೋಡಿಲ್ಲ; ನೋಡುವ ಕ್ರಮವನ್ನೂ ಇಟ್ಟುಕೊಂಡಿಲ್ಲ. ಹಾಗಾಗಿ ತಾವು ಹೇಳಿದ ಲೇಖನ ಬರೆಯಲು ನಾನು ಅಸಮರ್ಥ ಎಂದು ತಿಳಿಸಲು ವಿಷಾದಿಸುತ್ತೇನೆ.

**- ಜಿ. ರಾಜಶೇಖರ್**
ಉಡುಪಿ.

## ಜಾಹೀರಾತು ಕಿರಿಕಿರಿ



ಈ ಬಾರಿ ನಾನು 'ಪ್ರಜಾವಾಣಿ', 'ಕನ್ನಡ ಪ್ರಭ', 'ಕರ್ಮವೀರ' ಹೀಗೆ ಹಲವಾರು ವಿಶೇಷಾಂಕಗಳನ್ನು ಕೊಂಡು ಓದಿದ್ದರು ನಮ್ಮ ಕುಟುಂಬದವರ ಪ್ರೀತಿಗೆ ಪಾತ್ರವಾಗಲಿಲ್ಲ. ಕಾರಣ ಇಷ್ಟೊಂದು ಹಣ ವೆಚ್ಚ ಮಾಡುತ್ತೀಯಾ ಎಂದು ರೇಗಿದರು. ಸಂಪೂರ್ಣ ಓದಿದಾಗ ಬರೀ ಅಡ್ವರ್ಟೈಜ್‌ಮೆಂಟ್‌ಗಳೇ ಗೋಚರಿಸಿ ಬೇಸರವೆನಿಸಿತು.

ನನಗೆ, ಲೇಖನ ಹಾಗೂ ಸ್ವಲ್ಪ ಮಟ್ಟಿಗೆ ಕಥೆ ಹಿಡಿಸಿದವು. ಹಳೆಯ ಲೇಖಕರ ಬರಹಗಳಿವೆ ಎಂದು ಅಸಮಾಧಾನವೇನು ಇಲ್ಲ. ಕಾರಣ ಹಳೆಯ ಲೇಖಕರ ಲೇಖನಗಳು ಅರ್ಥಪೂರ್ಣವಾಗಿರುತ್ತವೆ.

ನನ್ನ ದೃಷ್ಟಿಯಲ್ಲಿ 'ಮಾದರಿ' ವಿಶೇಷಾಂಕದ ಬೆಲೆ ಹೆಚ್ಚಿದ್ದರು ಅಭ್ಯಂತರವಿಲ್ಲ; ಅಡ್ವರ್ಟೈಜ್‌ಮೆಂಟ್ ಸಂಗ್ರಹದಲ್ಲಿ ಹಿಂದುಳಿಯಬೇಕು! ಹಿರಿಯ ಲೇಖಕರಾಗಲಿ, ಕಿರಿಯ ಲೇಖಕರಾಗಲಿ ನಮಗೆ ಅಭ್ಯಂತರವಿಲ್ಲ.

**- ಲಕ್ಷ್ಮಣ ಎನ್.**
ಸುಳ್ಳೂರು.

## ನಟರಾಜ ವಿಶೇಷಾಂಕ



ನಾನು 'ನಟರಾಜ' ವಿಶೇಷಾಂಕವನ್ನು ಕೊಂಡಿದ್ದೇನೆ. ಈ ವಿಶೇಷಾಂಕದಲ್ಲಿ ಚಲನಚಿತ್ರ ತಾರೆಯರ ಏರಿಳಿತ ಮತ್ತು ಚಿತ್ರಗಳ ಸೋಲು ಗೆಲುವುಗಳಿರುವುದರಿಂದ ಕೊಂಡಿರುವೆ. ಇದರ ಬೆಲೆ ಐದು ರೂಪಾಯಿ ಐವತ್ತು ಪೈಸೆ.

ಈ ವಿಶೇಷಾಂಕಗಳನ್ನು ನಮ್ಮ ಕುಟುಂಬದ ಸದಸ್ಯರಾರೂ ನೋಡುವದಿಲ್ಲ. ಯಾಕೆಂದರೆ ಅವರಿಗೆ ಯಾವ ಪತ್ರಿಕೆಗಳನ್ನು ನೋಡುವ ಆಸಕ್ತಿ ಇಲ್ಲ. ಯಾವಾಗಲೂ ಹುಬ್ಬಳ್ಳಿ ಸಿದ್ಧಾರೂಢಪ್ಪನ ನಾಮಸ್ಮರಣವೇ ಅವರಿಗೆ ಮುಖ್ಯ.

ವಿವಿಧ ಕಲಾವಿದರಿಂದ ವಿವಿಧ ಲೇಖಕರಿಂದ ಮೂಡಿ ಬರುವ ಈ ವಿಶೇಷಾಂಕದ ಬಗ್ಗೆ ಅಸಮಾಧಾನ ಸಾಧ್ಯವಿಲ್ಲ. ಬೇರೆ ವಿಶೇಷಾಂಕಗಳನ್ನು ನಾನು ಕೊಂಡುಕೊಳ್ಳುವದಿಲ್ಲ.

''ಮಾದರಿ'' ವಿಶೇಷಾಂಕದಲ್ಲಿ ವರ್ಣರಂಜಿತ ಚಿತ್ರಗಳು ಮೂಡಿ ಬರಬೇಕು. ಮತ್ತು ಶ್ರೀ ದೇವಿಯ ಭಕ್ತಿಗೀತೆ ಒಂದಾದರೂ ಮುದ್ರಣವಾಗಬೇಕು.

**- ಕಲಾವಿದ ಶಿವಪುತ್ರ**
ಹುಣಶ್ಯಾಳ.

# ಆಪ್ತಸಮಾಲೋಚನೆ



○ ಉಷಾ ನವರತ್ನರಾಮ್

## ಮಾನಭಂಗ ಮಾಡಿಲ್ಲವಲ್ಲ!

*ನಾನೋರ್ವ ೨೪ ವರ್ಷದ ಯುವತಿ. ತೆಳ್ಳನೆ, ಬೆಳ್ಳನೆ ಮೈಕಟ್ಟು ಹೊಂದಿ ಸುಂದರವಾಗೇ ಇದ್ದೇನೆ. ಸಂಕೋಚ ಸ್ವಭಾವದವಳು ಕೂಡಾ. ನಮ್ಮ ಮನೆ ಹಾದಿಯಲ್ಲಿ ಒಂದು ಬಟ್ಟೆ ಅಂಗಡಿ ಇದೆ. ಅಲ್ಲಿ ಮೋಹಕ ನಗೆ ಬೀರುವ ಸುಂದರ ಹುಡುಗ ಇರುತ್ತಾನೆ. ನಾನು ಆ ಮಾರ್ಗದಲ್ಲಿ ಹೋಗುವಾಗ ನಮ್ಮ ದೃಷ್ಟಿ ಕೂಡುತ್ತದೆ. ಒಮ್ಮೆ ಆತನೊಂದಿಗಿದ್ದ ಗೆಳೆಯರು ಆತನನ್ನು ಚುಡಾಯಿಸುತ್ತ ನನ್ನೆಡೆ ನೋಡಿದರು. ಈ ಬಗ್ಗೆ ಪರೀಕ್ಷಿಸಲು ನಮ್ಮ ಮೇಡಂ ಹಾಗೂ ತಂಗಿಗೆ ಹೇಳಿದೆ. ಅವರೂ ಆತ ನನ್ನ ಬಗ್ಗೆ ಆಸಕ್ತಿ ವಹಿಸುತ್ತಿರುವುದನ್ನು ಖಾತ್ರಿಪಡಿಸಿದರು. ಇದು ಹೀಗೇಕೆ ಎಂದು ನನಗೆ ತಿಳಿಯುತ್ತಿಲ್ಲ. ದಯವಿಟ್ಟು ಸಲಹೆ ಕೊಡಿ.*

**ಅಭಿಮಾನಿ, ಊರಿಲ್ಲ**

**ಸಲಹೆ**

**ನೀವು ಮಾಡುತ್ತಿರುವುದು ಸರಿಯಲ್ಲ. ಮಾನಸಿಕವಾಗಿ ನೀವು ವಿನಾಕಾರಣ ಕ್ಷೋಭೆಗೊಂಡಿದ್ದೀರಿ. ಆ ಹುಡುಗ ನಿಮ್ಮನ್ನು ನೋಡುತ್ತಾನೆ, ನಗುತ್ತಾನೆ, ಮಾತಾಡಬಯಸುತ್ತಾನೆ ಎಂದು ಹೇಳುವಾಗ ನೀವು ವಿನಾಕಾರಣ ಆ ಹುಡುಗನಿಗೆ ನಿಮ್ಮ ಬದುಕಿನಲ್ಲಿ ಒಂದು ಸ್ಥಾನ ಕಲ್ಪಿಸಿ ನಿಮ್ಮ ಬದುಕನ್ನು ಸಮಸ್ಯೆ ಮಾಡಿಕೊಳ್ಳುತ್ತಿದ್ದೀರಿ. ಎಲ್ಲಾ ಪುರುಷರಿಗೂ ಅಂದವಾಗಿರುವ ಹುಡುಗಿಯನ್ನು ನೋಡಲು, ಬಯಸಲು, ಮಾತಾಡಿಸಲು ಇಷ್ಟವಿರುತ್ತದೆ. ಅವನೆಂದೂ ಬಂದು ನಿಮಗೆ ತೊಂದರೆಯೇನೂ ಮಾಡಿಲ್ಲವಲ್ಲ. ಮಾನಭಂಗ ಮಾಡಿಲ್ಲವಲ್ಲ! ಎ ಥಿಂಗ್ ಆಫ್ ಬ್ಯೂಟಿ ಈಸ್ ಜಾಯ್ ಫಾರೆವರ್ ಎಂದು ಕೀಟ್ಸ್ ಕವಿ ಹೇಳಿಲ್ಲವೇ? ಅವನ ಚಲನವಲನಗಳನ್ನು ನೀವೇ ಅಷ್ಟು ಆಸಕ್ತಿಯಿಂದ ಗಮನಿಸಬೇಕಾದ ಪ್ರಮೇಯವೇ ಇರುವುದಿಲ್ಲ. ನಿಮ್ಮ ಮನಸ್ಸನ್ನು ನೀವು ಹಿಡಿತದಲ್ಲಿಟ್ಟುಕೊಂಡು ನಿರಾಳವಾಗಿ ಓಡಾಡಿ. ನೀವಾಗಿಯೇ ತಂಗಿ, ಅಕ್ಕ, ಸ್ನೇಹಿತರು, ಮೇಡಂಗಳನ್ನು ಡಿಟೆಕ್ಟಿವ್‌ಗಳಾಗಿ ಮಾಡಿ ಆ ಹುಡುಗನ ಬಗ್ಗೆ ಅತೀ ಆಸಕ್ತಿ ತೋರುವುದನ್ನು ಬಿಡಿ. ನಿಮ್ಮನ್ನು ನೋಡಿದರೆ, ಮೆಚ್ಚಿದರೆ ನೀವೇನೂ ಸವೆದು ಹೋಗುವುದಿಲ್ಲ. ಒಳ್ಳೆಯ ಹವ್ಯಾಸ ರೂಪಿಸಿಕೊಳ್ಳಿ, ಇಂತಹ ಅನಾವಶ್ಯಕ ಶಂಕೆ ಸಂಶಯಗಳ ಸುಳಿಗೆ ಸಿಕ್ಕಬೇಡಿ.**

## ಸಂಸ್ಕಾರವಿಲ್ಲದ ಹೆಂಡತಿ

*ನಮ್ಮದು ಇದಿರು ಬದಿರು ಸಂಬಂಧ. ನನ್ನ ತಂಗಿಯನ್ನು ಮದುವೆಯಾದ ವರನ ತಂಗಿಯ ಜೊತೆ ನನ್ನ ಮದುವೆ. ಮದುವೆಯಾದ ನಾಲ್ಕಾರು ತಿಂಗಳು ಸುಖವಾಗಿದ್ದ ನಾನು ವಿದ್ಯಾವಂತ, ನನ್ನವಳು ಅವಿದ್ಯಾವಂತೆ, ಜೊತೆಗೆ ಲೌಕಿಕ ಜ್ಞಾನವಿರದ ಮಂದಬುದ್ಧಿಯ ಮಂಕುಹೆಣ್ಣು. ಇತ್ತ ನನ್ನ ತಂಗಿಯ ಜೀವನ ಸರಾಗವಾಗಿದೆ. ನಮ್ಮಿಬ್ಬರಲ್ಲಿ ದಾಂಪತ್ಯ ವಿರಸದಿಂದ ಪ್ರತಿ ೧೫ ದಿನಕ್ಕೊಮ್ಮೆ ನನ್ನ ಮಡದಿ ತೌರಿಗೆ ಹೋಗುವದು, ಹೋದ ಬಳಿಕ ಮರುದಿನ ನನ್ನ ತಂಗಿಯನ್ನು ತೌರಿಗೆ ಕಳುಹಿಸುವದು. ಹೀಗೆ ೫ ವರ್ಷ ಕಳೆದಿದೆ. ನಾನೇನಾದರೂ ಮರು ಮದುವೆಗೆ ಅಣಿಯಾದರೆ ನನ್ನ ತಂಗಿ ಎರಡು ಮಕ್ಕಳನ್ನು ಕಟ್ಟಿಕೊಂಡು ನನ್ನ ಮನೆಯಲ್ಲಿರಬೇಕಾಗುತ್ತದೆ. ಸ್ಥಿತಿವಂತನಾದ ನಾನು ನನ್ನ ತಂಗಿಯನ್ನು ಸಾಕಬಲ್ಲೆ. ಆದರೂ, ಮದುವೆಯಾದ ಹೆಣ್ಣು ಗಂಡನ ಮನೆಯಲ್ಲಿದ್ದರೆ ಉಚಿತ ಎನ್ನುವ ಸಮಾಜದ ಆಜ್ಞೆಗೆ ಮಣಿದು ಮೌನವಾಗಿದ್ದೇನೆ. ನನ್ನ ಪತ್ನಿಗೆ ಎಷ್ಟೇ ತಿಳಿ ಹೇಳಿದರೂ ನಿಷ್ಪ್ರಯೋಜಕವಾಗಿದೆ. ಬಾಲ್ಯದಲ್ಲಿ ಉತ್ತಮ ಸಂಸ್ಕಾರವಿಲ್ಲದ ಕಾರಣ ಆಕೆ ಕಲ್ಲುಬಂಡೆಯಂತಿದ್ದಾಳೆ. ಹೀಗೆ ವಿರಹದಲ್ಲಿ ೫ ವರ್ಷ ಕಳೆದಿದೆ. ನನಗೆ ಮಕ್ಕಳಿಲ್ಲ. ಹೊಸ ಬದುಕಿನ ನಿರೀಕ್ಷೆಯಲ್ಲಿದ್ದೇನೆ.*

**ಹು.ರಾ.ಬಾ.,** *ಊರು ಬೇಡ*

**ಸಲಹೆ**

**ನೀವು ತಿಳಿಸಿರುವಂತೆ ಸಮಸ್ಯೆ ಜಟಿಲವಾಗಿರುವುದೇನೋ ನಿಜ. ಆದರೆ ತಾಳ್ಮೆ, ಸಹನೆ, ಪ್ರೀತಿ, ವಿಶ್ವಾಸಗಳಿಂದ ಗೆಲ್ಲಲಾಗದಿರುವುದು ಯಾವುದೂ ಇಲ್ಲ. ಇದಿರು ಬದಿರು ಸಂಬಂಧವಾಗಿರುವುದು ನಿಮ್ಮ ಬಲಹೀನತೆ. ಅಂದರೆ ನಿಮ್ಮ ತಂಗಿಯ ಬದುಕನ್ನು ನಿಮ್ಮ ಪತ್ನಿಯ ಸೋದರ, ತಂದೆ ತಾಯಿಗಳು ನಿಮ್ಮ ಮೇಲೆ ಬಿಗಿಮುಷ್ಟಿ ಹಿಡಿದಿರುವಂತಿದೆ. ನಿಮ್ಮ ತಂಗಿಯೂ ಸಹಕರಿಸಿದ್ದಲ್ಲಿ ಸಮಸ್ಯೆ ನಿವಾರಣೆಯಾಗಬಹುದು. ನಿಮ್ಮ ಪತ್ನಿ ತವರಿಗೆ ಹೋದ ಕೂಡಲೇ ನಿಮ್ಮ ತಂಗಿಯೇನೂ ನಿಮ್ಮ ಮನೆಗೆ ಬರಬೇಕಿಲ್ಲ. ಅವಳು ಕಾನೂನು ರೀತ್ಯಾ ಆ ಮನೆಯ ಸೊಸೆಯಾಗಿ, ಪತ್ನಿಯಾಗಿ ಅವರ ಮೊಮ್ಮಗನ ತಾಯಿಯಾಗಿ ಎಲ್ಲಾ ಹಕ್ಕುಗಳನ್ನೂ ಪಡೆದಿರುತ್ತಾಳೆ. ನಾನು ತವರಿಗೆ ಹೋಗುವುದಿಲ್ಲ-ಇದು ನನ್ನ ಅತ್ತೆ, ಮಾವ, ಗಂಡನ ಮನೆ ಎಂದು ಒಂದೆರಡು ಬಾರಿ ಅಲ್ಲೇ ಉಳಿದರೆ ನಿಮ್ಮ ಪತ್ನಿ ತವರಿಗೆ ಓಡುವುದು ತಪ್ಪುತ್ತದೆ. ನಿಮ್ಮ ತಂಗಿ ನಿರ್ದಾಕ್ಷಿಣ್ಯವಾಗಿ ನಾದಿನಿಗೆ ಬುದ್ಧಿ ಹೇಳಬಹುದು. ನೀವು ಅಷ್ಟೇ ಪತ್ನಿಯನ್ನು ತಿದ್ದಬಹುದು. ಅವಳ ಪ್ರೀತಿ ವಿಶ್ವಾಸ ಗಳಿಸಿ ಅವಳಿಗೆ ಮನೆಯಲ್ಲಿ ಗೌರವ ಸ್ಥಾನ ನೀಡಿದ್ದಲ್ಲಿ ಅವಳು ನಿಮಗೆ ಹೊಂದಿಕೊಳ್ಳಬಹುದು. ಅವಳು ಮಂಕುಹೆಣ್ಣು, ಅವಿದ್ಯಾವಂತೆ, ಮಂದಬುದ್ಧಿಯವಳು, ಲೌಕಿಕ ಜ್ಞಾನವಿಲ್ಲದವಳು ಎಂದೆಲ್ಲಾ ಹೀಯಾಳಿಸುವ ಬದಲು ಅವಳನ್ನು ತಿದ್ದಿ ಲೌಕಿಕ ಜ್ಞಾನ ಬೆಳೆಸಿಕೊಳ್ಳಲು ಅನುವು ಮಾಡಿಕೊಟ್ಟು, ವಿದ್ಯೆ ಕಲಿಸಿದಲ್ಲಿ ಅವಳು ಬಹಳ ಸುಧಾರಿಸಬಹುದು. ಅವಳ ತವರಿನಲ್ಲಿ ಆ ಸೌಕರ್ಯಗಳಿಲ್ಲದಿರಬಹುದು. ಅವಳನ್ನು ತಿದ್ದಿ ಋಜು ಮಾರ್ಗಕ್ಕೆ ಕರೆದೊಯ್ಯುವ ನೈತಿಕ ಕರ್ತವ್ಯ ನಿಮ್ಮದಾಗಿರುತ್ತದೆ. ಪತ್ನಿಯನ್ನು ಒಲಿಸಿಕೊಳ್ಳುವುದು ನಿಮ್ಮ ಕೈಯ್ಯಲ್ಲಿದೆ. ಬೇಕಾದಲ್ಲಿ ಒಂದಿಷ್ಟು ದಿನ ಬೇರೆ ಸಂಸಾರ ಹೂಡಿ ನೋಡಿ. ಗಂಡ-ಹೆಂಡತಿಯರ ಮಧ್ಯೆ ವಿರಸ ಬರುವುದು ಹೆಚ್ಚಾಗಿ ಮೂರನೆಯವರಿಂದ. ನೀವೂ ನಿಮ್ಮ ಪತ್ನಿಯ ಇಚ್ಛೆ, ಆಸೆ, ಆಕಾಂಕ್ಷೆಗಳಿಗೆ ಮನ್ನಣೆ ನೀಡಿ ನೋಡಿ. ನಮ್ಮ ಪುರುಷ ಪ್ರಧಾನ ಸಮಾಜದಲ್ಲಿ ಗಂಡಿನ ಅಹಂಕಾರ, ಹಟ, ದುರಭಿಮಾನ ಎಷ್ಟೋ ಸಂಸಾರಗಳ ಸುಖವನ್ನು ಹಾಳುಮಾಡುತ್ತದೆ. ನಿಮ್ಮ ಪತ್ನಿಗೊಂದು ಬಾರಿ ಚಾನ್ಸ್ ಕೊಟ್ಟು ನೋಡಿ.**

## ಗೆಳತಿಯೊಂದಿಗೆ ಹೇಗೆ ವರ್ತಿಸಲಿ?

*ನಾನು ೧೯ ವರ್ಷದ ವಿದ್ಯಾರ್ಥಿ. ಇಲ್ಲಿ ನನ್ನ Classmate ಒಬ್ಬಳು ಇದ್ದಾಳೆ. ಅವಳು ನನ್ನ ಗೆಳತಿಯೂ ಅಹುದು. ಆದರೆ ಬೇರೆ ಜನ ನಮ್ಮನ್ನು ತಪ್ಪಾಗಿ ಭಾವಿಸಿದ್ದಾರೆ.*

*ನಾನು ಅವಳನ್ನು ಗೆಳತಿಯಂತೆ ಪ್ರೀತಿಸುತ್ತೇನೆ. ಅವಳನ್ನು ಬಿಟ್ಟು ಜೀವಿಸಲಿಕ್ಕೆ ಸಾಧ್ಯವಿಲ್ಲ. ಆದರೆ ನಾನು ವಿವೇಕಾನಂದರ ಹಾಗೆ ಬ್ರಹ್ಮಚಾರಿಯಾಗಬೇಕೆಂದಿದ್ದೇನೆ. ನಾನು ಬ್ರಹ್ಮಚಾರಿಯಾಗಿ ಅವಳೊಂದಿಗೆ ಜೀವನ ಪರ್ಯಂತ ಗೆಳೆತನದಿಂದ ಇರಬಹುದೇ? ನಾನು ಅವಳ ಜೊತೆ ಹೇಗೆ behave ಮಾಡಲಿ*

ಎಂಬುದೇ ನನಗೆ ತಿಳಿಯದಾಗಿದೆ. ಆದಕಾರಣ ತಾವು ದಯವಿಟ್ಟು ನನ್ನನ್ನು ಒಳ್ಳೆಯ ಮಾರ್ಗದ ಕಡೆ ತೆಗೆದುಕೊಂಡು ಒಯ್ಯುವಿರಿ ಎಂದು ನಂಬಿದ್ದೇನೆ.

ನಿಮ್ಮ ಅಭಿಮಾನಿ, ಊರು ಬೇಡ

**ಸಲಹೆ**

**ನೀವಾಗಲೇ ವಿವೇಕಾನಂದರಂತೆ ಬ್ರಹ್ಮಚಾರಿಯಾಗಬಯಸುವವರು ನಿಮ್ಮ ಪ್ರೀತಿಯ ಗೆಳತಿಗೆ ತಿಳಿಸದಿರುವುದು ಆಶ್ಚರ್ಯ. ಅವಳೊಂದಿಗೆ ನೀವು ಯಾವ ರೀತಿ ನಡೆದುಕೊಳ್ಳಬೇಕೆಂದು ನೀವಿಬ್ಬರೂ ಕುಳಿತು ವಿಶ್ಲೇಷಿಸಬಹುದಲ್ಲವೇ? ನಿಮ್ಮಿಬ್ಬರ ಸಂಬಂಧ ನಿರ್ಮಲವಾಗಿದ್ದರೆ ಸಾಕು. ಬೇರೆಯವರು ಏನಾದರೂ ಅಂದುಕೊಳ್ಳಲಿ ಬಿಡಿ. ಆಡಿಕೊಳ್ಳುವವರು ಹೇಗಿದ್ದರೂ ಆಡಿಕೊಳ್ಳುವವರೇ. ಜೀವನ ಪರ್ಯಂತ ಗೆಳೆತನ ಉಳಿಸಿಕೊಳ್ಳಲೂ ಬಹುದು. ಆದರೆ, ಅವಳೂ ನಿಮ್ಮಂತೆ ಬ್ರಹ್ಮಚಾರಿಣಿಯಾಗಿರಬೇಕೆಂದು ಬಯಸದಿರಿ. ಅವಳು ಮದುವೆಯಾಗಿ ಗೃಹಸ್ಥ ಜೀವನ ನಡೆಸಲು ಅನುವು ಮಾಡಿಕೊಟ್ಟು ಆಶೀರ್ವದಿಸಿ ಅಣ್ಣನಂತೆ ಇರಿ.**

## ಸ್ತನಗಳ ಗಾತ್ರ

ನನ್ನ ವಯಸ್ಸು ೨೫ ವರ್ಷ. ಅವಿವಾಹಿತೆ. ನನಗೆ ೨೫ ವರ್ಷ ತುಂಬಿದರೂ ನನ್ನ *brest* (ಎದೆ) ಇನ್ನೂ ತುಂಬಾ ಚಿಕ್ಕದಿದೆ. ಅಂದರೆ ೧೮ ವರ್ಷದವರಿಗಿದ್ದಂತಿದೆ. ಅದನ್ನು ನನ್ನ ವಯಸ್ಸಿಗೆ ತಕ್ಕಂತೆ ವೃದ್ಧಿಸಬೇಕು. ಏಕೆಂದರೆ ನನ್ನ ಎದೆಯ ಗಾತ್ರ ನೋಡಿದರೆ ನನಗೆ ಒಂದು ತರಹ ಅನುಭವವಾಗುತ್ತದೆ. ಆದ ಕಾರಣ ತಾವು ದಯಮಾಡಿ ನನ್ನ *brest*ನ್ನು ಹೇಗೆ ದೊಡ್ಡದು ಮಾಡಬಹುದು ಎಂಬುದನ್ನು ತಿಳಿಸಿದರೆ ತುಂಬ ಉಪಕಾರವಾದೀತು. ಯಾವುದೇ ಚಿಕಿತ್ಸೆ ಅಥವಾ ಔಷಧಿಗಳಿದ್ದರೆ ಅದನ್ನು ತೆಗೆದುಕೊಳ್ಳಲು ನಾನು ಸಿದ್ಧಳಾಗಿರುವೆನು.

**ಹೆಸರು ಬೇಡ, ಕಾದರಹಳ್ಳಿ**

**ಸಲಹೆ**

**ನೀವು ಪುಷ್ಟಿಯಾದ ಆಹಾರ, ಸಾಕಷ್ಟು ವ್ಯಾಯಾಮದತ್ತ ಗಮನ ಹರಿಸಬೇಕು. ಹಾಲು, ಮೊಸರು, ತುಪ್ಪ, ಬೆಣ್ಣೆ, ಮೊಟ್ಟೆ ಧಾರಾಳವಾಗಿ ಸೇವಿಸಿ. ಕಡೆಯ ಪಕ್ಷ ದಿನಕ್ಕೆ ಎರಡು ಬಾರಿ ಎರಡು ಕಿ.ಮೀ. ವಾಕಿಂಗ್ ಮಾಡಿ. ಈಜು ಬರುವ ಹಾಗಿದ್ದರೆ ಪ್ರತಿದಿನ ಈಜು ಮಾಡಿ. ನೀವು ಇಪ್ಪತ್ತೈದು ವರ್ಷಗಳವರೆಗೆ ಸುಮ್ಮನಿದ್ದುದು ಸರಿಯಲ್ಲ. ಹದಿಹರೆಯದಿಂದ ಮೈ ಅರಳುವ ವಯಸ್ಸಿನಲ್ಲಿ ಆರೋಗ್ಯ ಆರೈಕೆಗಳತ್ತ ಗಮನ ಹರಿಸಬೇಕು. ನೀವು ಒಮ್ಮೆ ಸ್ತ್ರೀತಜ್ಞ ವೈದ್ಯರನ್ನು ಸಂಪರ್ಕಿಸಿ ತಪಾಸಣೆ ಮಾಡಿಸಿಕೊಳ್ಳಿ,ಹಾರ್ಮೋನುಗಳ ವೈಪರೀತ್ಯದಿಂದಲೂ ಒಮ್ಮೊಮ್ಮೆ ಹೀಗಾಗಬಹುದು. ಅನುವಂಶೀಯತೆಯೂ ಕಾರಣವಿರಬಹುದು. ಒಂದು ಹೆಣ್ಣಿನ ಸೌಂದರ್ಯ ಸ್ತನದ ಗಾತ್ರದಿಂದ ಮಾತ್ರ ಅಳೆಯುವುದಿಲ್ಲ. ಕೆಲವು ಮಾಡೆಲ್‌ಗಳಿಗೆ ಸ್ತನಗಳು ಚಿಕ್ಕದಿದ್ದರೂ ಇತರ ಮೈಕಟ್ಟಿನಿಂದ ಆತ್ಯಾಕರ್ಷಕವಾಗಿ ಕಾಣುತ್ತಾರೆ. ಹಾಲಿವುಡ್ ತಾರೆ ಆಡ್ರಿ ಹಿಪ್‌ಬರ್ನ್ ಹೀಗಿದ್ದೂ ಅತ್ಯಾಕರ್ಷಕ, ಅತ್ಯುತ್ತಮ ನಟಿ ಎನಿಸಿಕೊಂಡಿದ್ದಳು.**

## ಕತೆ ಪ್ರಕಟವಾಗಲು ಏನು ಮಾಡಬೇಕು?

ನಾನು ನಿಮ್ಮಂತೆ ಒಬ್ಬ ಕಾದಂಬರಿಗಾರ್ತಿ ಆಗಬೇಕೂಂತ ಬಹಳ ದಿನದ ಕನಸು. ಆದರೆ ನನ್ನ ವಿದ್ಯಾಭ್ಯಾಸ ಕೇವಲ ಎಂಟನೆಯ ತರಗತಿ. ಇದಕ್ಕೆ ಹೆಚ್ಚಿನ ವಿದ್ಯಾಭ್ಯಾಸ ಆಗಿರಬೇಕೇ?

ಆದರೂ ಕೈಲಾದ ಪ್ರಯತ್ನ ಮಾಡಿ ಎಂಟುಹತ್ತು ಕತೆಗಳನ್ನು ಬರೆದು ವಾರ ಪತ್ರಿಕೆಯೊಂದಕ್ಕೆ ಕಳುಹಿಸಿದೆ. ಒಂದು ಕತೆಯೂ ಪ್ರಕಟವಾಗಲಿಲ್ಲ. ಕತೆ ಪ್ರಕಟಿಸುವುದಕ್ಕೆ ಚಂದಾದಾರರಾಗಬೇಕೆ? ಹೇಗೆ? ಎನ್ನುವುದು ನನಗೆ ತಿಳಯದ ವಿಷಯ. ಪತ್ರಿಕೆಗಳಲ್ಲಿ ಕತೆ ಪ್ರಕಟಪಡಿಸಲು ಏನು ಮಾಡಬೇಕು ಎನ್ನುವುದನ್ನು ವಿವರಿಸಿ ತಿಳಿಸಿ.

**- ಎ. ಅನ್ನಪೂರ್ಣ, ಲಿಂಗಸುಗೂರು**

**ಸಲಹೆ**

**ಕತೆ ಕಾದಂಬರಿ ಬರೆಯಲು ಅನುಭವ ಮುಖ್ಯ. ಬರೆಯುವ ಶೈಲಿ, ನಿರೂಪಣೆ, ಚಾತುರ್ಯ ಮುಖ್ಯ. ಎಂ.ಕೆ. ಇಂದಿರಾರವರು ಹೆಚ್ಚು ಓದದಿದ್ದರೂ ಅವರ ಕಾದಂಬರಿಗಳು ಅತ್ಯಂತ ಸುಂದರ ನೈಜವಾದುವು. ಅಂತೆಯೇ ಎಷ್ಟೋ ಮಂದಿ ಪದವೀಧರರಾಗದಿದ್ದರೂ ಅವರ ಲೇಖನಿಯಿಂದ ಒಳ್ಳೆಯ ಕೃತಿಗಳು ಮೂಡಿ ಬಂದಿವೆ. ನೀವು ಕತೆ ಬರೆದು ಕಳಿಸಿದರಾಗ ಲಿಲ್ಲ-ಅವುಗಳು ಏಕೆ ಪ್ರಕಟವಾಗಲಿಲ್ಲ ಎನ್ನುವುದಕ್ಕೆ ಕಾರಣಗಳಿರಬೇಕು. ನಿಮ್ಮ ಕಥನ, ನಿರೂಪಣೆ, ಶೈಲಿ, ಭಾಷೆ ಎಲ್ಲವನ್ನೂ ಪರಿಗಣಿಸಬೇಕಾಗುತ್ತದೆ. ಆದುದರಿಂದ ನೀವು ಬರೆದ ಕತೆಗಳನ್ನು ಯಾವುದಾದರೂ ಲೇಖಕ, ಲೇಖಕಿ, ಸಾಹಿತಿಗೆ ತೋರಿಸಿ ಮಾರ್ಗದರ್ಶನ ಪಡೆಯಿರಿ. ಪತ್ರಿಕೆಗೆ ಚಂದಾದಾರ ರಾಗುವುದಕ್ಕೂ, ಕತೆಗಳು ಪ್ರಕಟವಾಗುವುದಕ್ಕೂ ಯಾವ ಸಂಬಂಧವೂ ಇಲ್ಲ.**

## ಉಗುಳಲಾರೆ ನುಂಗಲಾರೆ!


ನಾನು ೨೦ ವರ್ಷದ ಹುಡುಗಿ. ಒಬ್ಬ ಹುಡುಗನನ್ನು ಪ್ರೀತಿಸುತ್ತಿರುವೆ. ನಮ್ಮಿಬ್ಬರದು ಒಂದೇ ಊರು. ನಮ್ಮ ತಂದೆಗೆ ಅವನ ತಂದೆಗೆ ಆಗುವುದಿಲ್ಲ. ಯಾವಾಗಲೂ ದ್ವೇಷ. ಇದೆಲ್ಲಾ ತಿಳಿದು ನಾವು ಪ್ರೀತಿಸಿದೆವು. ನಂತರ ಹೆತ್ತ ತಂದೆ ತಾಯಿಗಳಿಗೆ ನೋವು ಕೊಡಬಾರದೆಂದು ಯೋಚಿಸಿ ಇಬ್ಬರೂ ಮದುವೆ ಯಾಗುವವರೆಗೂ ಪ್ರೀತಿಸುವುದೆಂದು ತೀರ್ಮಾನಿಸಿದೆವು. ನಾವು ಪ್ರೀತಿಸಿ ೩ ವರ್ಷಗಳಾದವು. ಅವನ ಮದುವೆ ಆಯಿತು. ಈಗಲೂ ಅವನು ನನ್ನ ಮಾತ ನಾಡಿಸುತ್ತಾನೆ. ನಾನು ಸಹ ಮಾತನಾಡಿಸುತ್ತೇನೆ. ನನಗೂ ಇವನಿಗೂ ಮೊದಲೇ ಶರೀರ ಸಂಬಂಧವಿತ್ತು. ಮದುವೆಯಾದರೂ ನನ್ನ ಹತ್ತಿರ ಈ ಸಂಬಂಧವನ್ನು ಇಚ್ಛಿಸುತ್ತಾನೆ. ಆದರೆ ನನಗೆ ಇಷ್ಟವಿಲ್ಲ. ಆದರೆ ಇವನು ನನಗೆ ಮುಂದೆ ಎಲ್ಲಿ ತೊಂದರೆ ಕೊಡುತ್ತಾನೋ ಎಂಬ ಭಯ. ಎಷ್ಟೇ ಪ್ರಯತ್ನಿಸಿದರೂ ಇವನನ್ನು ಮರೆಯಲು ನನ್ನಿಂದ ಸಾಧ್ಯವಾಗುತ್ತಿಲ್ಲ ಮತ್ತು ಅವನಿಗೆ ಬೇಜಾರು ಮಾಡಲು ಆಗುತ್ತಿಲ್ಲ. ಅವನು ಹೇಳಿದ್ದನ್ನೆಲ್ಲಾ ಕೇಳಬೇಕಾಗಿದೆ. ಇದರಿಂದ ನನಗೆ ಭಯ ದುಃಖ ಯೋಚನೆಗಳಾಗಿವೆ.

ನಾನು ತಪ್ಪು ಮಾಡಿರುವೆ ನಿಜ. ಸರಿಯಾದ ದಾರಿ ತಿಳಿಸಿ. ಅದರಂತೆ ನಡೆಯುತ್ತೇನೆ.

ರಾಣಿ, ಊರು ಬೇಡ

**ಸಲಹೆ**

**ಮೂರ್ಖತನಕ್ಕೂ ಒಂದು ಮಿತಿಯಿದೆ. ಮದುವೆಯಾಗುವವರೆಗೂ ಪ್ರೀತಿಸುತ್ತೇವೆ ಎಂದು, ನಿಮ್ಮ ಪ್ರೀತಿಯನ್ನು ಅಷ್ಟು ಗೌಣವಾಗಿ ಭಾವಿಸಿ, ಬೇರೆ ಮದುವೆಯಾದ ಹುಡುಗನ ಬಗ್ಗೆ ನೀವು ತಲೆಕೆಡಿಸಿಕೊಳ್ಳುತ್ತಿರುವುದು ವ್ಯರ್ಥ. ಪ್ರೀತಿಯೆಂದರೆ ಸಾಯುವವರೆಗೂ, ಕೊನೆಯ ಉಸಿರಿರುವವರೆಗೆ ಇರುವ, ಇರಬೇಕಾದುದು. ಅವನು ಮದುವೆಯಾಗುವ ಮುಂಚೆ ನಿಮ್ಮೊಂದಿಗೆ ದೈಹಿಕ ಸಂಬಂಧ ಬೆಳೆಸಲು ನೀವು ಒಪ್ಪಿದುದು ಆಶ್ಚರ್ಯ. ಇನ್ನೂ ಅವನು ನಿಮ್ಮ ದೈಹಿಕ ಸಂಬಂಧ ಮುಂದುವರೆಸಲು ಆಶಿಸುವುದು ಸರಿಯಲ್ಲ. ಪ್ರೀತಿಗೂ, ಕಾಮಕ್ಕೂ ವ್ಯತ್ಯಾಸ ತಿಳಿಯದೇ ನೀವಿಬ್ಬರೂ ತಪ್ಪು ದಾರಿಯಲ್ಲಿ ನಡೆಯುತ್ತಿದ್ದೀರಿ. ಅನೈತಿಕ ಸಂಬಂಧವನ್ನು ಮುಂದುವರೆಸುವುದು ಸರಿಯಲ್ಲ. ಕೂಡಲೇ ಇಬ್ಬರೂ ಭೇಟಿಯಾಗುವುದು, ಮಾತಾಡುವುದು, ಬಂದು ನೋಡುವುದನ್ನು ನಿಲ್ಲಿಸಿ. ಅವನು ಮದುವೆಯಾಗಿ ಕೈಹಿಡಿದ ಹೆಂಡತಿಗೆ ಮೋಸ ಮಾಡುತ್ತಿದ್ದಾನೆ. ನೀವು ಇನ್ನೊಂದು ಹೆಣ್ಣಿನ ಬಾಳು ಹಾಳುಮಾಡುತ್ತಿದ್ದೀರಿ. ಅವನೇನೂ ನಿಮಗೆ ತೊಂದರೆ ಕೊಡಲಾರ. ತಪ್ಪು ಮಾಡುವಾಗ ಭಯವಿರುತ್ತದೆ. ನೀವು ಋಜುಮಾರ್ಗದಲ್ಲಿ ನಡೆದರೆ ಭಯ ತಾನೇ ತಾನಾಗಿ ಮಾಯವಾಗುತ್ತದೆ. ನೀವೂ ಯಾರಾದರೂ ಯೋಗ್ಯ ವರನನ್ನು ವಿವಾಹವಾಗಿ ನಿಶ್ಚಿಂತೆಯಿಂದ ಗೃಹಸ್ಥ ಜೀವನ ನಡೆಸಿರಿ. ನಿಮ್ಮನ್ನು ಅರ್ಥ ಮಾಡಿಕೊಳ್ಳುವ ವರ ಸಿಕ್ಕರೆ ಬಾಳು ಸುಗಮವಾಗುವುದು. ಹಿಂದಿನದೆಲ್ಲಾ ಕೆಟ್ಟ ಕನಸೆಂದು ಮರೆತುಬಿಡಿ. ಮನೋನಿಗ್ರಹ ಮಾಡಿ. ಆ ಹಿಂದಿನವನನ್ನು ಮರೆಯಿರಿ, ನಿಮ್ಮ ಬದುಕಿನಿಂದ ದೂರವಿಡಿ.** ●



ಬಾಗಲಕೋಟೆ ಸಿಮೆಂಟ್ ಫ್ಯಾಕ್ಟರಿ : ಒಂದು ನೋಟ

# ಬಾಗಲಕೋಟೆಯ ಉತ್ಕೃಷ್ಟ ಸಿಮೆಂಟ್

○ ಸಿದ್ಧರಾಜ್ ಎಂ. ಕೆಂಧೂಳಿ

ಬಯಲುಸೀಮೆಯ ನಾಡಾದ, ಬಾಗಲಕೋಟೆಯಲ್ಲಿ ಬೆರಳೆಣಿಕೆಯಷ್ಟು ಕೈಗಾರಿಕಾ ಘಟಕಗಳನ್ನು ಕಾಣಬಹುದಾಗಿದೆ. ಇತ್ತೀಚೆಗಷ್ಟೇ ಕೆಲವು ಚಿಕ್ಕ ಕೈಗಾರಿಕಾ ಘಟಕಗಳು ತಲೆಎತ್ತಿವೆ.

ಆದರೆ, ಬಾಗಲಕೋಟೆಯ 'ಕನೋರಿಯಾ ಇಂಡಸ್ಟ್ರೀಸ್ ಲಿಮಿಟೆಡ್'ನ ಸಿಮೆಂಟ್ ಫ್ಯಾಕ್ಟರಿ ಕಳೆದ ೪೦ ವರ್ಷಗಳಿಂದ ಶ್ರೇಷ್ಠ ಗುಣಮಟ್ಟದ ಸಿಮೆಂಟ್ ಉತ್ಪಾದಿಸಿ ಉತ್ತರ ಕರ್ನಾಟಕದ ಪ್ರಮುಖ ಕೈಗಾರಿಕೆಗಳಲ್ಲಿ ಒಂದೆನಿಸಿದೆ.

ಬಾಗಲಕೋಟೆ ತಾಲೂಕಿನ ಸುತ್ತಮುತ್ತ ಸುಣ್ಣದ ಕಲ್ಲಿನ ನಿಕ್ಷೇಪವನ್ನು ಗಮನಿಸಿ ಇಲ್ಲಿ ಸಿಮೆಂಟ್ ಫ್ಯಾಕ್ಟರಿಯನ್ನು ಪ್ರಾರಂಭಿಸಲಾಯಿತು. ಈ ಮೊದಲು 'ಬಾಗಲಕೋಟೆ ಉದ್ಯೋಗ ಲಿಮಿಟೆಡ್' ಎಂಬ ಹೆಸರಿನಲ್ಲಿ ಇದ್ದ ಈ ಕಂಪನಿ ಇತ್ತೀಚಿನ ವರ್ಷಗಳಲ್ಲಿ 'ಕನೋರಿಯಾ ಇಂಡಸ್ಟ್ರೀಸ್ ಲಿಮಿಟೆಡ್'ನ ಆಡಳಿತದಲ್ಲಿ ಮುನ್ನಡೆಯುತ್ತಿದೆ.


ಈ ಕಂಪೆನಿ ೧೯೫೫ರಲ್ಲಿ ಪ್ರಾರಂಭವಾಗಿದ್ದು, ಆ ಸಮಯದಲ್ಲಿ ಪ್ರತಿದಿನ ೩೦೦ ಟನ್ ಸಿಮೆಂಟ್ ಉತ್ಪಾದನೆ ಮಾಡಲಾಗುತ್ತಿತ್ತು. ೧೯೮೨ರಲ್ಲಿ ಅಭಿವೃದ್ಧಿ ಹೊಂದಿ ದಿನಕ್ಕೆ ೧೦೦೦ ಟನ್ ಸಿಮೆಂಟ್ ಉತ್ಪಾದನೆಯನ್ನು ಮಾಡಲು ಪ್ರಾರಂಭಿಸಿತು. ವಿದ್ಯುತ್ ಬಳಕೆಯಲ್ಲಿ ತನ್ನದೇ ಆದ ೩ ಮೇಗಾ ವ್ಯಾಟ್ ವಿದ್ಯುತ್ ಉತ್ಪಾದಿಸುವ ಜನರೇಟರನ್ನು ಹೊಂದಿದೆ. ಇದರಿಂದ ನಿರಂತರ ವಿದ್ಯುತ್ ಸಂಪರ್ಕದ ವ್ಯವಸ್ಥೆಯನ್ನು ಮಾಡಿಕೊಂಡಿದೆ. ಹೊಸ ಉಪಕರಣಗಳನ್ನು ಅಳವಡಿಸಿ ಹೊಸ-ಹೊಸ ತಂತ್ರಜ್ಞಾನದೊಂದಿಗೆ ಪೂರ್ಣ ಕಂಪ್ಯೂಟರ್ ಕಂಟ್ರೋಲ್ ಪದ್ಧತಿಯನ್ನು ಅನುಸರಿಸಲಾಗುತ್ತಿದೆ. ಪ್ರತಿನಿತ್ಯ ಉತ್ಪಾದಿಸುವ ಸಿಮೆಂಟನ್ನು ಪರಿಪೂರ್ಣವಾಗಿ ವಿಶೇಷ ಕಂಪ್ಯೂಟರ್ ಪ್ರಯೋಗಾಲಯದಲ್ಲಿ ಪರಿವೀಕ್ಷಣೆ ಮಾಡಲಾಗುತ್ತದೆ.

ಸಿಮೆಂಟ್ ಫ್ಯಾಕ್ಟರಿಯಿಂದ ಹೊರಬೀಳುವ ಹೊಗೆ ಹಾಗೂ ಒಣಪುಡಿಯನ್ನು Electro Static Precipitators ಮೂಲಕ ಸಂಸ್ಕರಿಸಿ ವಾಯು ಮಾಲಿನ್ಯ ನಿಯಂತ್ರಿಸಲಾಗುತ್ತಿದೆ.

ಗ್ರಾಹಕರಿಗೆ ಯೋಗ್ಯ ಬೆಲೆಗೆ ನೀಡುವುದರೊಂದಿಗೆ ಸುಲಭ ಲಭ್ಯತೆಗಾಗಿ ಈ ಸಂಸ್ಥೆ ಕರ್ನಾಟಕ ರಾಜ್ಯಾದ್ಯಂತ ಮಾರಾಟ ಕೇಂದ್ರ ಹಾಗೂ ಮಾರಾಟ ಮಳಿಗೆಗಳನ್ನು ಹೊಂದಿದೆ. ಸಾಕಷ್ಟು ಬೇಡಿಕೆಯ ನೆರೆರಾಜ್ಯಗಳಾದ ಗೋವಾ, ಮಹಾರಾಷ್ಟ್ರ ಹಾಗೂ ಕೇರಳಗಳಲ್ಲಿಯೂ ತನ್ನ ಮಾರಾಟ ಡೀಪೋಗಳನ್ನು ಸ್ಥಾಪಿಸಿದೆ. ಅಲ್ಲದೆ, ಪ್ರಮುಖ ನಗರ-ಪಟ್ಟಣಗಳಲ್ಲಿ ಡೀಲರುಗಳ ಮುಖಾಂತರ ವಿತರಣೆ ವ್ಯವಸ್ಥೆ ಮಾಡಿದೆ. ಈ ಕಂಪನಿಯು ISI ಮಾರ್ಕ್ ಗಳಿಸಿದ 'ಬಾಗಲಕೋಟೆಯ ಸಿಮೆಂಟ್-೪೩ ಗ್ರೇಡ್' ಎಂಬ ಬ್ರ್ಯಾಂಡ್ ಹೊಂದಿದೆ.

ಕನೋರಿಯಾ ಇಂಡಸ್ಟ್ರೀಸ್ ಸ್ಥಳೀಯ ಸಂಘ-ಸಂಸ್ಥೆಗಳಿಗೆ ಆರ್ಥಿಕ ಸಹಾಯ ನೀಡಿ ಸಾಮಾಜಿಕ-ಧಾರ್ಮಿಕ-ಸಾಂಸ್ಕೃತಿಕ ಮುಂತಾದ ಕಾರ್ಯಗಳಿಗೆ ನೆರವಾಗಿದೆ. ಬಸ್ ತಂಗುನಿಲ್ದಾಣ ಹಾಗೂ ಕುಡಿಯುವ ನೀರಿಗಾಗಿ ಬೋರ್‌ವೆಲ್ಸ್, ವಿದ್ಯುತ್ ಪಂಪ್ ಪೂರೈಸುವ ಮೂಲಕ ಸಾಮಾಜಿಕ ಸೇವೆಯಲ್ಲಿಯೂ ಭಾಗಿಯಾಗಿದೆ.

ಸಿಮೆಂಟ್ ಫ್ಯಾಕ್ಟರಿಯ ಆವರಣದಲ್ಲಿಯೇ ಒಂದು ಪೂರ್ವ ಪ್ರಾಥಮಿಕ ಶಾಲೆಯನ್ನು ಸ್ಥಾಪಿಸಿ ಶಿಕ್ಷಣ ಪ್ರಸಾರದ ಕಾರ್ಯವನ್ನೂ ಸಹ ಮಾಡುತ್ತಿದೆ. ರಾಯಚೂರು ಬೆಳಗಾಂವ ರಸ್ತೆಗೆ ಇರುವ ಈ ಕಂಪನಿ ಸಾರಿಗೆ ವ್ಯವಸ್ಥೆ ಹಾಗೂ ರೈಲ್ವೆ ಸಾಗಾಣಿಕೆಯ ವ್ಯವಸ್ಥೆಯನ್ನು ಮಾಡಿಕೊಂಡಿದೆ. ಕಂಪನಿಯ ಮುಖ್ಯದ್ವಾರದಲ್ಲಿ ಸುಂದರ ಗಾರ್ಡನ್ ನಿರ್ಮಿಸಿ 'ಸತ್ಯಂ-ಶಿವಂ-ಸುಂದರಂ' ಎಂಬ ಶಿವಮಂದಿರವನ್ನು ಸ್ಥಾಪಿಸಿದೆ.



ಸಿಮೆಂಟ್ ತುಂಬುವ ಕೊನೆಯ ಹಂತ

ಈ ಕಂಪನಿಯು ನಿರಂತರವಾಗಿ ಸಿಮೆಂಟ್ ಉತ್ಪಾದಿಸುವ ಕಂಪನಿ ಆಗಿದೆ. ಕೈಗಾರಿಕಾ ತಂತ್ರಜ್ಞಾನ ಅಭಿವೃದ್ಧಿಪಡಿಸಿ, ಹೊಸ-ಹೊಸ ಉಪಕರಣಗಳನ್ನು ಉಪಯೋಗಿಸಿ ತನ್ನ ಉತ್ಪಾದನೆಯನ್ನು ಹೆಚ್ಚಿಸಿಕೊಂಡಿದೆ. ಸದ್ಯ ದಿನ ಒಂದಕ್ಕೆ ೧೫೦೦ ಟನ್ ಸಿಮೆಂಟ್ ಉತ್ಪಾದಿಸುವ ಸಾಮರ್ಥ್ಯ ಹೊಂದಿದೆ. ಮುಂಬರುವ ವರ್ಷಗಳಲ್ಲಿ ಇನ್ನೂ ಅಭಿವೃದ್ಧಿಪಡಿಸಿ ದಿನಕ್ಕೆ ೩,೦೦೦ ಟನ್ ಸಿಮೆಂಟ್ ಉತ್ಪಾದಿಸುವ ಗುರಿ ಹೊಂದಿದೆ.

ದಿನದ ೨೪ ಗಂಟೆಯೂ ಕಾರ್ಯನಿರತವಾಗಿರುವ ಫ್ಯಾಕ್ಟರಿಯಲ್ಲಿ ಮೂರು ಶಿಫ್ಟ್‌ದಲ್ಲಿ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಅಣೆಕಟ್ಟು, ಸೇತುವೆ, ನೀರಿನ ಟ್ಯಾಂಕ್, ಮನೆ ಸ್ಲ್ಯಾಬ್, ಹಾಯ್‌ವೇ, ರನ್‌ವೇ, ಸಿಮೆಂಟ್ ಪೈಪ್, ಕಾಲುವೆ, ಬಹುಮಹಡಿ ಕಟ್ಟಡ ಮುಂತಾದ ಕೆಲಸಗಳಿಗೆ ಈ ಉತ್ತಮ ಸಿಮೆಂಟ್ ಉಪಯೋಗಿಸಬಹುದಾಗಿದೆ. ■

# ಕೋಲಾರದಲ್ಲಿ ಹೀಗೊಂದು ಲೀಲೆ!

**ಮೂ**ರುವರೆ ವರ್ಷಗಳಾಗುತ್ತಿದ್ದರೂ ಹೆರಿಗೆಯಾಗದೆ ನೋವೂ ಕಾಣದೆ ಬಳಲುವ ನಾರಾಯಣಮ್ಮನ ಪರಿಯ ಕಂಡ ಜನಸಮೂಹ ಇದು ಮಾಯಾಜಾಲವಲ್ಲ-ಮುರುಗನ ಲೀಲೆ ಎಂದು ಕೊಂಡಾಡುತ್ತಿದೆ.

ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲ್ಲೂಕು ಉಕ್ಕರಹಳ್ಳಿ ಗ್ರಾಮದ ನಿವಾಸಿ ನಾರಾಯಣಸ್ವಾಮಿಯ ಹೆಂಡತಿ ನಾರಾಯಣಮ್ಮ ಮದುವೆಯಾಗಿ ಒಂದೂವರೆ ವರ್ಷದವರೆಗೂ ಮಕ್ಕಳಾಗದ ಕಾರಣ ಮುರುಗನಾಥಸ್ವಾಮಿಯ ಕಾವಡಿ ಎತ್ತಿದ್ದು ನಿಜವಾದರೂ, ಆ ನಂತರ ಗರ್ಭಿಣಿಯಾಗಿದ್ದು ಅಷ್ಟೇ ಸತ್ಯ ಎಂಬುದು ಅವರ ಕುಟುಂಬದ ವಾದ.

ನಾರಾಯಣಮ್ಮ ಗರ್ಭವತಿಯಾಗಿ ಎರಡು ವರ್ಷ ಕಳೆದಾಗ, ಹೆರಿಗೆಯಾಗುವ ಸೂಚನೆ ಕಾಣದೆ ಶಸ್ತ್ರಚಿಕಿತ್ಸೆ ಮಾಡಿಸಬೇಕೆಂದು ಹೊರಟಾಗ, ಇದ್ದಕ್ಕಿದ್ದಂತೆ ಬಾಗಿಲಲ್ಲಿ ಘಮಘಮ ವಾಸನೆಯೊಂದಿಗೆ ಎರಡು ನಿಂಬೆ ಹಾಗೂ ನವಿಲಿನ ಗರಿ ಕಾಣಿಸಿದ್ದನ್ನು ಕಂಡು, ದೇವರ ಅಡಚಣೆ ಇದೆಂದು ಭಾವಿಸಿ ಪ್ರಯಾಣ ಮೊಟಕುಗೊಳಿಸಿದ್ದರಂತೆ.

ಸುಮಾರು ಒಂದೂವರೆ ವರ್ಷವಾದರೂ ತಾಜಾ ಹಣ್ಣಿನಂತಿರುವ ನಿಂಬೆ ಕೊಳೆತ-ವಾಸನೆ-ಒಣಗುವಿಕೆಗಳಿಗೆ ಬಲಿಯಾಗದೆ ನಾರಾಯಣಮ್ಮ ಮಲಗಿರುವಾಗ ಅವರ ತಲೆಯ ಬಳಿಗೆ ಬಂದಿರುವುದಲ್ಲದೆ, ಬೆಳಗಾಗುವಷ್ಟರಲ್ಲಿ ಯಥಾಪ್ರಕಾರ ಮುರುಗನ ಫೋಟೋ ಬಳಿ ಹೋಗುವುದನ್ನು ಅನೇಕ ಜನ ಕಣ್ಣಾರೆ ಕಂಡಿದ್ದಾರೆ ಎಂದು ಜಿಲ್ಲೆಯಲ್ಲಿ ಸುದ್ದಿ ಹಬ್ಬಿದೆ. ಇವರು ಶ್ರದ್ಧೆಯಿಂದ ಪೂಜಿಸಿದಾಗ ಮುರುಗನ ಫೋಟೋದಿಂದ ಹಾಲು ಬರುವುದನ್ನು ಜನ ಕಂಡಿದ್ದಾರೆ ಎಂಬುದು ಮತ್ತೊಂದು ಕೌತುಕದ ವದಂತಿ. ನಾರಾಯಣಮ್ಮನನ್ನು ಯಾರಾದರೂ ನಿಂದಿಸಿದರೆ, ಅಥವಾ ಮನದಲ್ಲೇ ಏನಾದರೂ ಕೊರಗು ಉಂಟಾಗಿದ್ದರೆ ಫೋಟೋ ಬಳಿ ಇಟ್ಟಿರುವ ನವಿಲಿನ ಗರಿಗಳು ಮುದುಡಿಕೊಳ್ಳುವುದಲ್ಲದೆ ಆಕೆ ಲವಲವಿಕೆಯಲ್ಲಿರುವಾಗ ನವಿಲುಗರಿ ಕಣ್ಣು ಕೋರೈಸುವಂತೆ ಅರಳುತ್ತವೆ ಎಂಬುದಾಗಿ ಅನೇಕ ಜನ ನಂಬತೊಡಗಿದ್ದಾರೆ.

ಈ ಹಿಂದೆ ಮೂರು ವರ್ಷಗಳ ಮೇಲೆ ಐದು ತಿಂಗಳಾಗುತ್ತಾ ಬಂದರೂ ಇನ್ನೂ ಹೆರಿಗೆಯಾಗದ ನಾರಾಯಣಮ್ಮ, ತಾನು ಮನೆಯಲ್ಲಿ ಒಬ್ಬೊಂಟಿಯಾಗಿ ಓಡಾಡುತ್ತಿರುವಾಗ, ಗೋಡೆ ಹುತ್ತಿನೊಳಗಿಂದ ತನಗೆ ಪೂಜೆ ಮಾಡೆಂಬ ಧ್ವನಿ ಕೇಳಿಸಿತೆಂದು ಹೇಳುತ್ತಾರೆ. ತನ್ನಿಂದಾಗದೆಂಬ ಪ್ರತ್ಯುತ್ತರ ನೀಡಿದ ನಾರಾಯಣಮ್ಮ, ಈ ವಿಷಯ ತನ್ನತ್ತೆಗೆ ತಿಳಿಸಿದಳಂತೆ.

ಅಲ್ಲಿಂದ ಶುರುವಾದ ಈ ಎಲ್ಲಾ ಚಮತ್ಕಾರಗಳು ಬಾಯಿಂದ ಬಾಯಿಗೆ ಬದಲಾಗುತ್ತ ರೆಕ್ಕೆಪುಕ್ಕ ಕಟ್ಟಿಕೊಂಡು ಹಾರಾಡತೊಡಗಿವೆ.

ಈ ಘಟನೆಗಳ ಹಿಂದಿನ ಮರ್ಮ ಜನರೆದುರು ಬಯಲಾಗುವುದು ಅತ್ಯಗತ್ಯ.

○ ಮಿ. ವ್ಯಾಸ್, ಉತ್ತನೂರು

# ಅಜ್ಜ ಅಜ್ಜಿಯರ ಸೌಂದರ್ಯ ಸ್ಪರ್ಧೆ



ಇತ್ತೀಚೆಗೆ ತಮಿಳುನಾಡಿನ ರಾಜಧಾನಿ ಚನ್ನೈಯಲ್ಲಿರುವ ''ಕುಚಲಾಂಬಾಳ್ ಕಲ್ಯಾಣ ಮಹಲ್''ನಲ್ಲಿ ಏರ್ಪಡಿಸಿದ್ದ ''ಸೌಂದರ್ಯ ಸ್ಪರ್ಧೆ''ಯಲ್ಲಿ ಭಾಗವಹಿಸಿದ್ದ ಸ್ಪರ್ಧಾಳುಗಳು ೫೦ರಿಂದ ೮೦ ವರ್ಷಗಳ ವೃದ್ಧರು. ಆದ್ದರಿಂದ ಯಾವುದೇ ರಾಜಕೀಯ, ವೈಷಮ್ಯ, ಆರ್ಭಟಗಳ ಸುಳಿವಿಲ್ಲದೆ ಸ್ಪರ್ಧೆ ಪ್ರಶಾಂತವಾಗಿಯೇ ನಡೆದಿತ್ತು.

''ಸೌಂದರ್ಯ ಸ್ಪರ್ಧೆ'' ಎಂಬ ಹೆಸರಿಟ್ಟಿದ್ದರೂ ಸಹ ಹೆಚ್ಚಾಗಿ ತಳುಕು-ಬಳುಕುಗಳಿಗೆ ಪ್ರಾಧಾನ್ಯ ನೀಡದೆ, ಆತ್ಮ ಸೌಂದರ್ಯಕ್ಕೇ ಅಗ್ರಸ್ಥಾನ ನೀಡಿತ್ತಲ್ಲದೆ, ''ಅಂದ ಅಂದರೆ ಬಾಹ್ಯ ಸೌಂದರ್ಯವಲ್ಲ, ಮನಸು ಕೂಡಾ ಅಂದವಾಗಿರಬೇಕು'' ಎಂಬುದನ್ನು ಸಾಬೀತುಪಡಿಸಿತ್ತು.

ಸಹಕರಿಸಿದ ಶರೀರಕ್ಕೆ ಉತ್ಸಾಹ ನೀಡಿ, ತತ್ತರಿಸುವಂತೆ ಹೆಜ್ಜೆ ಇಡುತ್ತಾ ವಿಜಯ ಸಾಧಿಸಬೇಕೆಂಬ ತಪನದೊಂದಿಗೆ, ಕಳೆಗುಂದಿದ ಮುಖದಲ್ಲಿ ಆತ್ಮವಿಶ್ವಾಸ ತುಂಬಿಸಿ ''ಸೌಂದರ್ಯ ಸ್ಪರ್ಧೆ''ಯಲ್ಲಿ ಭಾಗವಹಿಸಲು ಬಂದಿದ್ದ ಅಜ್ಜಿ-ಅಜ್ಜಂದಿರಿಂದ ಕಲ್ಯಾಣ ಮಹಲ್ ತೇಜೋಮಯವಾಗಿ ಮಿಂಚುವಂತಿತ್ತು. ಅಕ್ಟೋಬರ್ ಒಂದರಂದು ''ಪ್ರಪಂಚ ವೃದ್ಧರ ದಿನೋತ್ಸವ''ದ ಪ್ರಯುಕ್ತ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಅಮೆರಿಕ ೧೯೯೧ರಲ್ಲಿ, ಅಕ್ಟೋಬರ್ ಒಂದನೇ ತಾರೀಕು 'ಪ್ರಪಂಚ ವೃದ್ಧರ ದಿನೋತ್ಸವ'ವನ್ನಾಗಿ ಆಚರಿಸಬೇಕೆಂದು ಪ್ರಕಟಿಸಿದಾಗಿಂದ ಚನ್ನೈಯಲ್ಲಿರುವ ''ಹೆಲ್ಪೇಜ್ ಇಂಡಿಯಾ'' ಸಂಸ್ಥೆ, ಆ ದಿನಗಳಂದು ಈ ಸ್ಪರ್ಧೆಯನ್ನು ಏರ್ಪಡಿಸಿಕೊಂಡು ಬಂದಿದೆ. ಈ ಸ್ಪರ್ಧೆಯಲ್ಲಿ ಭಾಗವಹಿಸಿದ ವೃದ್ಧರಲ್ಲಿರುವ ಒಬ್ಬ ಅಂದಗಾರನನ್ನು ''ಗ್ರಾಂಡ್ ಪಾ ಕಿಂಗ್'' ಎಂತಲೂ ಒಬ್ಬ ಅಂದಗಾತಿಯನ್ನು ''ಗ್ರಾನೀ ಕ್ವೀನ್'' ಎಂತ ಗುರುತಿಸುತ್ತಾರೆ.

ಈ ವರ್ಷದ ಸ್ಪರ್ಧೆಯಲ್ಲಿ ಚನ್ನೈಯಲ್ಲಿರುವ ೨೫ ಸೇವಾ ಸಂಸ್ಥೆಗಳಿಂದ ಸುಮಾರು ೨೦೦ ಮಂದಿ ಪಾಲ್ಗೊಂಡು, 'ರೇಮಂಡ್ ರೋಡ್ರಿಗ್' ಅನ್ನುವ ತಾತ 'ಬ್ಯೂಟಿ ಕಿಂಗ್' ಹಾಗೂ ಕೇಥರಿನ್ ಸ್ಮಿತ್ ಅನ್ನುವ ಅಜ್ಜಿ 'ಬ್ಯೂಟಿ ಕ್ವೀನ್' ಆಗಿ ಆಯ್ಕೆಯಾಗಿದ್ದಾರೆ.

# ವಿದ್ಯೋ-ಉದ್ಯೋಗ

# ಪ್ರಿನ್ಸಿಪಾಲರಾಗುವುದು ಹೇಗೆ?

○ ಸೂರ್ಯಕಾಂತ ಗುಣಕಿಮಠ

**ಆಯಾ ವೃತ್ತಿ, ಹುದ್ದೆಗಳಲ್ಲಿ ಯಶಸ್ವಿಯಾದವರ ಮೂಲಕವೇ ವಿದ್ಯಾರ್ಥಿಗಳಿಗೆ ಅಧಿಕೃತವಾಗಿ ವೃತ್ತಿ ಮಾರ್ಗದರ್ಶನ ಮಾಡಿಸುವ ವಿನೂತನ ಪ್ರಯೋಗವಿದು.**

**ಈ ಬಾರಿ ಪ್ರಿನ್ಸಿಪಾಲರಾದ ಸೂರ್ಯಕಾಂತ ಗುಣಕಿಮಠ ಅವರು ನಿಮಗೆ ಈ ಮಾಹಿತಿ ನೀಡಿದ್ದಾರೆ.**

ಭಾರತೀಯ ಆಡಳಿತ ಸೇವೆ ಮತ್ತು ಕರ್ನಾಟಕ ಆಡಳಿತ ಸೇವೆಯಂತಹ ಪತ್ರಾಂಕಿತ ಅಧಿಕಾರಿಗಳ ಹುದ್ದೆಗಳಿಗಾಗಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೇರ್ಗಡೆಯಾಗಬೇಕೆಂಬುದು ಎಲ್ಲರಿಗೂ ತಿಳಿದಿರುವ ವಿಷಯ. ತಹಶೀಲ ದಾರರಾಗಲು, ವಾಣಿಜ್ಯ ತೆರಿಗೆ ಅಧಿಕಾರಿ ಇಲ್ಲವೇ ಜಿಲ್ಲಾಧಿಕಾರಿಯಾಗಲು ಯಾವುದೇ ವಿಭಾಗದಲ್ಲಿ ಪದವೀಧರರಿದ್ದರೆ ಸಾಕು. ಮೇಲ್ಕಾಣಿಸಿದ ಅಧಿಕಾರಿಗಳ ಆಯ್ಕೆ ನೇರವಾಗಿ ಪ್ರವೇಶ ಪರೀಕ್ಷೆ ಮೂಲಕ ನಡೆದರೆ, ಶಿಕ್ಷಣ ಸಂಸ್ಥೆಯ ಉನ್ನತ ಹುದ್ದೆಯಾಗಿರುವ ಪ್ರಿನ್ಸಿಪಾಲರ ಹುದ್ದೆಗೆ ಯಾವುದೇ ಪ್ರವೇಶ ಪರೀಕ್ಷೆ ಇಲ್ಲ. ಏನಿದ್ದರೂ ಈ ಹುದ್ದೆ ಸ್ನಾತಕೋತ್ತರ ಪದವಿ ಪಡೆದು, ಶಿಕ್ಷಣ ಇಲಾಖೆಯಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ ಅವಧಿಯ ಸೇವಾ ಹಿರಿತನವನ್ನು ಅವಲಂಬಿಸಿದೆ.

## ಪ್ರಿನ್ಸಿಪಾಲರ ಆಯ್ಕೆ

ವಿಶ್ವವಿದ್ಯಾಲಯ ಧನಸಹಾಯ ಆಯೋಗದ (ಯು.ಜಿ.ಸಿ.) ವ್ಯಾಪ್ತಿಗೆ ಬರುವ ಬಹುಪಾಲು ರಾಜ್ಯಗಳ ಪ್ರಥಮ ದರ್ಜೆ ಕಾಲೇಜುಗಳ ಪ್ರಿನ್ಸಿಪಾಲರ ಹುದ್ದೆಗೆ ಯಾವುದೇ ನೇಮಕಾತಿ ನಿಯಮ ಇಲ್ಲ. ಆಯಾ ಕಾಲೇಜುಗಳಲ್ಲಿ ಸೇವಾ ಹಿರಿತನವನ್ನು ಹೊಂದಿರುವ ಉಪನ್ಯಾಸಕ ಪ್ರಿನ್ಸಿಪಾಲನಾಗಿ ಕಾರ್ಯ ನಿರ್ವಹಿಸುತ್ತಾನೆ. ಅವನು ಇನ್ನೊಂದು ಸಂಸ್ಥೆಗೆ ವರ್ಗವಾದಾಗ ಅಲ್ಲಿ ಸೇವಾ ಹಿರಿತನ ಇಲ್ಲದಿದ್ದರೆ ಪುನಃ ಉಪನ್ಯಾಸಕ ವೃತ್ತಿಗೇ ಇಳಿಯಬೇಕಾಗುತ್ತದೆ. ಈ ಬಗೆಯ ಗೊಂದಲವನ್ನು ಆಂಧ್ರಪ್ರದೇಶ, ಮಹಾರಾಷ್ಟ್ರ ಮತ್ತು ತಮಿಳುನಾಡು ಸರ್ಕಾರಗಳು ಜೇಷ್ಠತಾ ಪಟ್ಟಿಯ ಆಧಾರದ ಮೇಲೆ ಪ್ರಿನ್ಸಿಪಾಲರನ್ನು ನಿಯಮಿಸುವುದರ ಮೂಲಕ ನಿವಾರಿಸಿಕೊಂಡಿವೆ.

## ಆಡಳಿತದ ತೊಂದರೆಗಳು

೧. ಹುದ್ದೆ ತಾತ್ಕಾಲಿಕವಾದುದು ಎಂಬ ಭಾವನೆಯಿಂದ ಆಡಳಿತದಲ್ಲಿ ಬಿಗಿ ಧೋರಣೆ ತಳೆಯಲು ಶಕ್ಯವಾಗುವದಿಲ್ಲ.

೨. ಸಹದ್ಯೋಗಿ ತಪ್ಪು ಮಾಡಿದರೆ ಶಿಕ್ಷೆ ನೀಡುವಲ್ಲಿ ಹಿಂಜರಿತ ಉಂಟಾಗುತ್ತದೆ.

೩. ಮುಖ್ಯಸ್ಥ ಹಾಗೂ ಸಂಸ್ಥೆಯ ಸಹದ್ಯೋಗಿಗಳ ನಡುವೆ ಸೇವಾವಧಿಯ ವ್ಯತ್ಯಾಸ ಬಹಳವಿಲ್ಲದಿದ್ದಾಗ ಗೌರವ ಭಾವನೆಯ ಅಭಾವದಿಂದಾಗಿ ಪ್ರಿನ್ಸಿಪಾಲ ಹಾಗೂ ಉಪನ್ಯಾಸಕರ ನಡುವೆ ಹೊಂದಾಣಿಕೆ ಕಷ್ಟಕರವಾಗುತ್ತದೆ.

೪. ಸೇವಾ ಹಿರಿತನ ಹೊಂದಿರುವ ಬೇರೊಬ್ಬ ಉಪನ್ಯಾಸಕ ಬಂದರೆ ಈಗಿರುವ ಪ್ರಿನ್ಸಿಪಾಲ ಹುದ್ದೆಯಿಂದ ಕೆಳಗಿಳಿದಾಗ ಅಲ್ಲಿಯೇ ಸೇವೆ ಸಲ್ಲಿಸಲು ಮುಜುಗರ ಉಂಟಾಗುತ್ತದೆ. ಆಡಳಿತಕ್ಕೆ ಮೈ ಒಗ್ಗಿ ಹೋಗಿರುವುದರಿಂದ ಪಾಠ ಮಾಡುವಲ್ಲಿ ನಿರಾಸಕ್ತಿ ಮೂಡುತ್ತದೆ.


೫. ಕೆಲಸಮಯದ ಬಾದಶಹನೆಂಬ ಭಾವನೆಯಿಂದ ಪುಸ್ತಕ, ಪೀಠೋಪಕರಣಗಳು, ಪ್ರಯೋಗಾಲಯದ ಉಪಕರಣಗಳು ಇತ್ಯಾದಿಯ ಖರೀದಿಯಲ್ಲಿ ಅಪ್ರಾಮಾಣಿಕತೆಯೇ ತಾಂಡವವಾಡುವ ಸಾಧ್ಯತೆಗಳಿವೆ.

ಕರ್ನಾಟಕದಲ್ಲಿಯೂ ಸಹ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ಉಪನ್ಯಾಸಕರ ಜೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸುವ ಪ್ರಕ್ರಿಯೆ ಇತ್ತೀಚಿಗಷ್ಟೇ ಪ್ರಾರಂಭಗೊಂಡಿದೆ. ಕನಿಷ್ಠ ೧೫ ವರ್ಷಗಳವರೆಗೆ ಉಪನ್ಯಾಸಕರಾಗಿ ಸೇವೆ ಸಲ್ಲಿಸಿರುವವರು ಇದರ ವ್ಯಾಪ್ತಿಗೆ ಬರುತ್ತಾರೆ. ನಂತರ ಖಾಲಿ ಇರುವ ಪ್ರಿನ್ಸಿಪಾಲರ ಹುದ್ದೆಗಳಿಗೆ ಜೇಷ್ಠತೆಯ ಆಧಾರದ ಮೇಲೆ ಬಡ್ತಿ ನೀಡಲಾಗುತ್ತದೆ.

## ಕಿರಿಯ ಕಾಲೇಜುಗಳಲ್ಲಿ

೧೯೭೦ರಲ್ಲಿ ಕರ್ನಾಟಕದಲ್ಲಿಯೂ +೨ ಹಂತ ಜಾರಿಗೆ ಬರುತ್ತಲೇ ಪಿ.ಯು.ಸಿ.ಯನ್ನು ಬೋಧಿಸುತ್ತಿದ್ದ ಪ್ರೌಢಶಾಲೆಗಳನ್ನು ಸಂಯುಕ್ತ ಕಿರಿಯ ಕಾಲೇಜುಗಳೆಂದು ಕರೆಯಲಾರಂಭಿಸಿದರು. ಈಗ ಅವುಗಳನ್ನು ಸಂಯುಕ್ತ ಪದವಿ ಪೂರ್ವ ಕಾಲೇಜುಗಳೆಂದು, ಕೇವಲ ಪಿ.ಯು.ಸಿ.ಯನ್ನು ಬೋಧಿಸುತ್ತಿರುವ ಕಾಲೇಜುಗಳನ್ನು ''ಸ್ವತಂತ್ರ ಪದವಿಪೂರ್ವ ಕಾಲೇಜು''ಗಳೆಂದು ಕರೆಯಲಾಗುತ್ತಿದೆ.

ಈ ಎಲ್ಲ ಸಂಯುಕ್ತ ಹಾಗೂ ಸ್ವತಂತ್ರ ಪದವಿಪೂರ್ವ ಕಾಲೇಜುಗಳಿಗೆ ಕರ್ನಾಟಕದಲ್ಲಿ



೧೯೭೫ರಲ್ಲಿ ನಡೆದ ಪ್ರಿನ್ಸಿಪಾಲರ ನೇರ ನೇಮಕಾತಿ ಹೊರತುಪಡಿಸಿ, ಮಿಕ್ಕೆಲ್ಲ ಸಂದರ್ಭಗಳಲ್ಲಿ ಜೇಷ್ಠತೆಯ ಆಧಾರದ ಮೇಲೆ ಸ್ನಾತಕೋತ್ತರ ಪದವಿಯನ್ನು ಹೊಂದಿರುವ ಸೇವಾನಿರತ ಶಿಕ್ಷಕರನ್ನೇ ಉಪನ್ಯಾಸಕರೆಂದೂ ಹಾಗೂ ಸೇವಾ ಹಿರಿತನ ಹೊಂದಿರುವವರನ್ನು ಪ್ರಿನ್ಸಿಪಾಲರ ಹುದ್ದೆಗೆ ಬಡ್ತಿ ನೀಡಿ ನಿಯಮಿಸುತ್ತಾ ಬಂದಿದ್ದಾರೆ. ನಂತರದ ವರ್ಷಗಳಲ್ಲಿ ಉಪನ್ಯಾಸಕರ ಹುದ್ದೆಗಳು ಸೃಷ್ಟಿಯಾದಾಗ ಕರ್ನಾಟಕ ಲೋಕಸೇವಾ ಆಯೋಗವು ಉಪನ್ಯಾಸಕರನ್ನು, ಸಂದರ್ಶನದ ಮೂಲಕ, ರಾಜ್ಯ ಮಟ್ಟದ ಆಯ್ಕೆ ಸಮಿತಿ (SLRC) ಮೂಲಕ ಹಾಗೂ ಸ್ಥಳೀಯ ಹಾಗೂ ಗುತ್ತಿಗೆ ಉಪನ್ಯಾಸಕರ ಸಮೂಹವನ್ನು ಖಾಯಂ ಮಾಡುವುದರ ಮೂಲಕ ಉಪನ್ಯಾಸಕರ ಕೊರತೆಯನ್ನು ನೀಗುತ್ತಾ ಬಂದಿದೆ. ಇವರಲ್ಲಿ ಸೇವಾ ಹಿರಿತನ ಹೊಂದಿರುವವರಿಗೆ ಪ್ರಿನ್ಸಿಪಾಲರ ಹುದ್ದೆಗೆ ಬಡ್ತಿ ನೀಡಲಾಗುತ್ತಿದೆ ಮತ್ತು ಈಗ ಎಲ್ಲಾ ಪದವಿಪೂರ್ವ ಕಾಲೇಜುಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಾ ಬರುತ್ತಿವೆ.

ಹೊಸದಾಗಿ ಪ್ರಾರಂಭವಾಗುವ ಕಾಲೇಜುಗಳಿಗೆ ಹೊಸದಾಗಿ ಉಪನ್ಯಾಸಕರಾಗಿ ನೇಮಕಾತಿ ಹೊಂದಿ ಸೇವೆಗೆ ಸೇರುವವನೇ ಪ್ರಭಾರಿ ಪ್ರಿನ್ಸಿಪಾಲನಾಗಿ ಕಾರ್ಯ ನಿರ್ವಹಿಸುವ ಪರಿಸ್ಥಿತಿ ಈಗಲೂ ಇದೆ. ಬೋಧನೆ, ಆಡಳಿತ ಇವೆರಡರಲ್ಲೂ ಅನನುಭವಿ ಆಗಿರುವ ಇವನು ಸಂಸ್ಥೆಯನ್ನು ಯಾವುದೇ ವಿಧದಲ್ಲಿ ಮುನ್ನಡೆಸಲು ಸಾಧ್ಯವಾಗದೇ ಆಡಳಿತದಲ್ಲಿ, ಹಣಕಾಸು ವ್ಯವಹಾರಗಳಲ್ಲಿ ಅರಿವಾಗದಂತೆ ಅನೇಕ ತಪ್ಪುಗಳು ನುಸುಳಿ ಕಾರ್ಯಕ್ಷಮತೆ ಕುಗ್ಗುತ್ತವೆ.

## ಪ್ರಿನ್ಸಿಪಾಲನ ಗುಣಲಕ್ಷಣಗಳು

ಇವನು ಸಂಸ್ಥೆಯ ಮುಖ್ಯ ಗುರು. ಗುರು ಎಂದರೆ ಗೌರವಕ್ಕೆ ಅರ್ಹನಾದ ವ್ಯಕ್ತಿ ಎಂದೂ ಅಲ್ಲದೇ ಗು ಎಂದರೆ ಅಂಧಃಕಾರ, ರು ಎಂದರೆ ಹೊಡೆದೋಡಿಸುವುದು ಎಂಬ ಅರ್ಥವೂ ಇದೆ. ಹೀಗೆ ಮುಖ್ಯ ಗುರುವು ತನ್ನ ಉಪನ್ಯಾಸಕ ವೃಂದದ ಹಾಗೂ ವಿದ್ಯಾರ್ಥಿ ವೃಂದದ ಅಜ್ಞಾನದ ಅಂಧಃಕಾರವನ್ನು ಹೊಡೆದೋಡಿಸಲು ಶ್ರಮಿಸುವಂತವನಾಗಿರಬೇಕು. ಪ್ರಿನ್ಸಿಪಾಲನು ಗಡಿಯಾರದ ಎಲ್ಲ ಚಕ್ರಗಳನ್ನು ತಿರುಗಿಸುವ ಚೇತನಾ ಸುರುಳಿ ಇದ್ದಂತೆ, ರಾಶಿ ಮಾಡುವ ಕಣದಲ್ಲಿಯ ಮೇಟಿ ಇದ್ದಂತೆ. ಮೇಟಿ ಭದ್ರವಾಗಿದ್ದರೆ ಎತ್ತುಗಳು ಸುತ್ತುವುದು, ಅವುಗಳ ಹಿಂದೆ ರೈತ ಸುತ್ತುವುದು, ಕಾಳು (ಫಲಿತಾಂಶ) ಹೊರಬರುವ ಎಲ್ಲ ಕ್ರಿಯೆಗಳ ನಡುವೆ ಹೊಂದಾಣಿಕೆ ಇರುತ್ತದೆ. ಬಯಸಿದ ಫಲಿತಾಂಶ ನಿರೀಕ್ಷೆಯಂತೆ ಹೊರಬೀಳುತ್ತದೆ.

ನಮ್ಮ ಸಂಸ್ಕೃತಿಯನ್ನು ನಮ್ಮದು ಮತ್ತು ಪ್ರಾಚೀನ ಕಾಲದ್ದು ಎನ್ನುವ ಕಾರಣಕ್ಕೆ ಒಳ್ಳೆಯದಲ್ಲವೆಂದು ನಿರ್ಧಾರಕ್ಕೆ ಬರುವುದು ಬೇಡ. ಹಾಗೆಯೇ ಪಾಶ್ಚಾತ್ಯ ಸಂಸ್ಕೃತಿಯನ್ನು ಪರದೇಶದ್ದು ಮತ್ತು ಅತ್ಯಾಧುನಿಕವಾಗಿದೆ ಎಂಬ ಕಾರಣಕ್ಕೆ ತಿರಸ್ಕರಿಸುವುದೂ ಬೇಡ. ಆರೋಗ್ಯಕರವಾದ ಹಾಗೂ ಸಂತಸಮಯವಾದ ಶಿಕ್ಷಣ ಪದ್ಧತಿಗೆ (ಹಳೆ ಬೇರು ಹೊಸ ಚಿಗುರು ಕೂಡಿರಲಿ ಮರ ಸೊಬಗು) ಎನ್ನುವ ಕವಿವಾಣಿಯಂತೆ ಹಳೆ ಹೊಸದರ ಸಂಗಮವಾಗಬೇಕು. ಅದೇ ಕಾಲಕ್ಕೆ ಹಳೆಯದೆಲ್ಲವೂ ಹೊನ್ನವಲ್ಲ, ಹೊಸದೆಲ್ಲವೂ ಕಸವಲ್ಲವೆನ್ನುವ ಎಚ್ಚರವೂ ನಮ್ಮಲ್ಲಿರಬೇಕು.


ಈ ಬಗೆಯ ಹೃದಯ ವೈಶಾಲ್ಯತೆಯೊಂದಿಗೆ ಉತ್ತಮ ಪ್ರಾಂಶುಪಾಲನ ದೇಹ ಮನಸ್ಸುಗಳು ಪರಿಶುದ್ಧವಾಗಿರಬೇಕು. ಸತ್ಯವನ್ನು ನುಡಿಯಬೇಕು. ಕೇಡನ್ನು ಬಯಸದಿರುವ, ತನ್ನೆಲ್ಲ ಪಂಚೇಂದ್ರಿಯಗಳ ಮೇಲೆ ಹತೋಟಿಯನ್ನು ಹೊಂದಿರುವ ಕರುಣಾಮಯಿಯೂ ಮತ್ತು ಉದಾತ್ತ ಗುಣದವನೂ ಆಗಿರಬೇಕು.

ಅಲ್ಲದೇ ತನ್ನ ಕರ್ತವ್ಯಗಳನ್ನು ಸಮರ್ಪಕವಾಗಿ ನೆರವೇರಿಸಬೇಕಾದರೆ ಕಾಲೇಜಿನ ನಾನಾ ಅಂಗಗಳನ್ನು ಜೋಡಿಸುವ ಕಲಾತ್ಮಕತೆ, ನೈಪುಣ್ಯತೆ, ದೂರದೃಷ್ಟಿ, ವ್ಯವಸ್ಥಾಪನಾ ಶಕ್ತಿ ಮತ್ತು ಆಡಳಿತ ಕೌಶಲ್ಯ ಹೊಂದಿರಲೇಬೇಕಾಗುತ್ತದೆ.

## ಜವಾಬ್ದಾರಿ ಹಾಗೂ ಕರ್ತವ್ಯಗಳು

ಶೈಕ್ಷಣಿಕ ವರ್ಷ ಪ್ರಾರಂಭವಾಗುವ ಮೊದಲು ಇಡೀ ವರ್ಷದಲ್ಲಿ ಹಮ್ಮಿಕೊಳ್ಳಲಿರುವ ಕಾರ್ಯಕ್ರಮಗಳ ಕಾಲಾನುಕ್ರಮಣಿಕೆಯನ್ನು ಸಿದ್ಧಪಡಿಸಬೇಕು. ಅದರಲ್ಲಿ

೧. ಪಠ್ಯಕ್ರಮ ವಿಭಜನೆ
೨. ಶಾರೀರಿಕ ಶಿಕ್ಷಣದ ಚಟುವಟಿಕೆಗಳ ಕಾರ್ಯಕ್ರಮ
೩. ಸಾಂಸ್ಕೃತಿಕ ಚಟುವಟಿಕೆಗಳು
೪. ಶೈಕ್ಷಣಿಕ ಪ್ರವಾಸ
೫. ವಾರ್ಷಿಕ ಸ್ನೇಹ ಸಮ್ಮೇಳನ.... ಮುಂತಾದವುಗಳು ಪ್ರಮುಖವಾಗಿವೆ.
೬. ವರ್ಷದ ಪ್ರಾರಂಭದಲ್ಲಿ ಉಪನ್ಯಾಸಕರ/ಶಿಕ್ಷಕರ ಸಭೆಯನ್ನು ಕರೆದು ವಾರ್ಷಿಕ



## ಸೂರ್ಯಕಾಂತ ಗುಣಕಿಮಠ

ರಾಯಚೂರು ಜಿಲ್ಲೆ ದೇವದುರ್ಗದ ಸರ್ಕಾರಿ ಕಾಲೇಜಿನಲ್ಲಿ ಪ್ರಿನ್ಸಿಪಾಲರಾಗಿರುವ ಸೂರ್ಯಕಾಂತ ಗುಣಕಿಮಠ ಅವರ ಹುಟ್ಟೂರು ಬಿಜಾಪುರ ಜಿಲ್ಲೆಯ ಬದಾಮಿ. ಕರ್ನಾಟಕ ವಿ.ವಿ.ದಿಂದ ರಸಾಯನ ಶಾಸ್ತ್ರದಲ್ಲಿ ಎಂ.ಎಸ್‌ಸಿ. ಹಾಗೂ ಮೈಸೂರಿನ ರೀಜನಲ್ ಕಾಲೇಜ್ ಆಫ್ ಎಜುಕೇಷನ್‌ನಲ್ಲಿ ಬಿ.ಇಡಿ. ಮಾಡಿರುವ ಸೂರ್ಯಕಾಂತರು ಕಳೆದ ೨೦ ವರ್ಷಗಳಿಂದ ಉಪನ್ಯಾಸಕ ವೃತ್ತಿಯಲ್ಲಿದ್ದಾರೆ. ಸಾಹಿತ್ಯ ಹಾಗೂ ಪತ್ರಿಕೋದ್ಯಮ ಕ್ಷೇತ್ರದೊಂದಿಗೂ ಇವರಿಗೆ ನಿಕಟ ನಂಟು. ಎರಡು ಕವನ ಸಂಕಲನಗಳು ಪ್ರಕಟವಾಗಿವೆ. ಹಲವು ಸಂಕಲನಗಳನ್ನು ಸಂಪಾದಿಸಿದ್ದಾರೆ. ೪೭ ವರ್ಷದ ಇವರು ಬಂಡಾಯ ಸಂಘಟನೆ ಹಾಗೂ ರಂಗ ಚಟುವಟಿಕೆಗಳಿಗೂ ಬಹಳ ಹತ್ತಿರ.

ಸೂರ್ಯಕಾಂತರ ಪತ್ನಿ ಮೀರಾ ಅವರು ಕೂಡ ಹೊಸಕೋಟೆ ಸರ್ಕಾರಿ ಕಾಲೇಜಿನಲ್ಲಿ ಪ್ರಿನ್ಸಿಪಾಲರಾಗಿದ್ದಾರೆ. ಈ ದಂಪತಿಗೆ ಮೂವರು ಮಕ್ಕಳು : ಪವಿತ್ರ, ಶರ್ವಾಣಿ, ವಿಕಾಸ್.

ಕಾರ್ಯಕ್ರಮಗಳ ಯೋಜನೆಯನ್ನು ಚರ್ಚಿಸಿ ಕೆಲಸಗಳನ್ನು ಅವರವರ ಆಸಕ್ತಿ, ಅರ್ಹತೆಗನುಗುಣವಾಗಿ ಹಂಚಿ ಕೊಡಬೇಕು.

ಆ. ಪ್ರಥಮ ದರ್ಜೆ ಕಾಲೇಜು ಆಗಿದ್ದರೆ ಎಲ್ಲ ವಿಷಯಗಳ ಹಾಗೂ ಭಾಷೆಗಳ ಉಪನ್ಯಾಸಕರ ಸಭೆ ಕರೆದು ಸರ್ವಸಮ್ಮತವಾದ ಕ್ರೋಢೀಕೃತ ವೇಳಾಪಟ್ಟಿಯನ್ನು ತಯಾರಿಸಲು ಸೂಕ್ತವಾದ ಮಾರ್ಗದರ್ಶನ ಮಾಡುವುದು. ಪದವಿಪೂರ್ವ ಕಾಲೇಜಾಗಿದ್ದರೆ, ಕಾಲೇಜು ವಿಭಾಗದ ವಿಜ್ಞಾನ, ಕಲಾ, ವಾಣಿಜ್ಯ, ವೃತ್ತಿಶಿಕ್ಷಣ ವಿಭಾಗಗಳ ಉಪನ್ಯಾಸಕರನ್ನು ಹಾಗೂ ಭಾಷಾ ಶಿಕ್ಷಕರ ಅವಧಿಗಳನ್ನೊಳಗೊಂಡಂತೆ ಬೇರೆ ಬೇರೆ ವೇಳೆಪತ್ರಿಕೆಯನ್ನು ಸಿದ್ಧಪಡಿಸಿ ಕ್ರೋಢೀಕೃತ ವೇಳಾಪಟ್ಟಿಯನ್ನು ತಯಾರಿಸುವುದು. ಪ್ರೌಢಶಾಲೆಯ ಹಿರಿಯ ಶಿಕ್ಷಕರುಗಳ ಸಹಾಯದಿಂದ ತರಗತಿಗಳ ಗೃಹಕಾರ್ಯದ ಹಾಗೂ ಶಾಲೆಯ ಕ್ರೋಢೀಕೃತ ವೇಳಾಪಟ್ಟಿಯನ್ನು ತಯಾರಿಸುವುದು.

ಇ. ಶಾಲಾ ಶೈಕ್ಷಣಿಕ ಸಮಿತಿಯನ್ನು ನವೀಕರಣ ಮಾಡುವುದು.

ಈ. ಮೇಲಾಧಿಕಾರಿಗಳಿಗೆ ಸಲ್ಲಿಸಬೇಕಾದ ದಾಖಲೆಗಳ ದಿನಾಂಕಗಳನ್ನು ಪಟ್ಟಿಮಾಡುವುದು. ಅವುಗಳಲ್ಲಿ ಮುಖ್ಯವಾದವುಗಳೆಂದರೆ :

೧. ವಾರ್ಷಿಕ ಅಂದಾಜು ಬಜೆಟ್

೨. ರಿಕ್ತ ಸ್ಥಳಗಳ ತಖ್ತೆ

೩. ಶಾಲಾ ಅಂಕಿ ಸಂಖ್ಯೆಗಳು

೪. ಸಿಬ್ಬಂದಿಯವರ ಮಾಹಿತಿ

೫. ಮಾಸಿಕ ಯೋಜನೆ ಹಾಗೂ ಯೋಜನೇತರ ಖರ್ಚಿನ ತಖ್ತೆಗಳು.

ಉ. ಸಾದಿಲ್ವಾರು ಹಣದ ವಿಂಗಡಣೆಯನ್ನು ಸಂಸ್ಥೆಯ ಅವಶ್ಯಕತೆಗಳಿಗೆ ಅನುಗುಣವಾಗಿ ಮಾಡಿ ಮಂಜೂರಾತಿಗಾಗಿ ಕಳಿಸುವುದು.

ಊ. ಶಾಲೆ/ಕಾಲೇಜಿಗೆ ಸಂಬಂಧಿಸಿದ ಎಲ್ಲ ಮಾಹಿತಿಯನ್ನು ಚಿತ್ರಕಲಾ ಶಿಕ್ಷಕರಿಂದ ಸುಂದರವಾಗಿ ಬರೆಯಿಸಿ ತಮ್ಮ ಕೋಣೆಯಲ್ಲಿ ಆಕರ್ಷಕವಾಗಿ ಕಾಣುವಂತೆ ಪ್ರದರ್ಶಿಸುವುದು.

### ನಿತ್ಯದ ಮೇಲ್ವಿಚಾರಣೆಯ ಕ್ರಮ

ದೈನಂದಿನ ಚಟುವಟಿಕೆಗಳಾದ ಸ್ವಚ್ಛತೆ, ಪ್ರಾರ್ಥನೆ, ಪ್ರೌಢಶಾಲೆ ವಿದ್ಯಾರ್ಥಿಗಳು ಧರಿಸುವ ಸಮವಸ್ತ್ರ ತಪಾಸಣೆ ಮತ್ತು ಅವರಿಂದ ಶನಿವಾರಕ್ಕೊಮ್ಮೆ ನಡೆಯುವ ಸಾಮೂಹಿಕ ಕವಾಯತು ವೀಕ್ಷಣೆ. ಶಾಲೆಯ/ಕಾಲೇಜಿನ ದೈನಂದಿನ ತರಗತಿ ಬೋಧನೆಗಳ ಪರೀವೀಕ್ಷಣೆ, ಪರೀಕ್ಷಾ ಕಾರ್ಯ, ಮೌಲ್ಯಮಾಪನದ ಪರಿವೀಕ್ಷಣೆ, ಆರ್ಥಿಕ ವ್ಯವಸ್ಥೆಯ ಪರಿವೀಕ್ಷಣೆ ಬೋಧಕರ ಪಾಠಗಳ ಟಿಪ್ಪಣಿ ಮತ್ತು ತರಗತಿ ಹಾಜರಿಗಳ ಪರಿವೀಕ್ಷಣೆ ಮುಂತಾದವುಗಳ ಮೇಲ್ವಿಚಾರಣೆಯನ್ನು ನಿಯಮಿತವಾಗಿ ಮಾಡುತ್ತಿರಬೇಕು.

ಪಾಂಡಿತ್ಯ-ಪ್ರತಿಭೆಯನ್ನು ಹೊಂದಿರುವ ಅನೇಕ ಪ್ರಾಧ್ಯಾಪಕರುಗಳು ಪ್ರಿನ್ಸಿಪಾಲರಾದಾಗ ಉತ್ತಮ ಆಡಳಿತ ನೀಡುವಲ್ಲಿ ವಿಫಲರಾಗಿದ್ದಾರೆ. ಪರಿಶ್ರಮದಿಂದ ಪಾಂಡಿತ್ಯ ಗಳಿಸಬಹುದು. ಆದರೆ ಉತ್ತಮ ಆಡಳಿತಗಾರನಾಗಬೇಕಾದರೆ ಸಂಯೋಜನೆ, ನಿಯಂತ್ರಣ, ಸಹಕಾರ ಈ ಗುಣಗಳನ್ನು ರೂಢಿಸಿಕೊಂಡು ನಿರ್ದಾಕ್ಷಿಣ್ಯನು, ನಿಷ್ಪಕ್ಷಪಾತಿಯು, ದೂರದರ್ಶಿಯೂ, ದಾರ್ಶಿಕನೂ ಆಗಿರಬೇಕು.

ಒಬ್ಬ ವ್ಯಕ್ತಿ ಈ ಎಲ್ಲ ಆಗಿರಲು ಸಾಧ್ಯವೇ? ಮೂಲತಃ ಈ ದಿಸೆಯಲ್ಲಿ ವ್ಯಾಪಕವಾಗಿ ಚಿಂತನೆ ಮಾಡುವ ಮನಸ್ಸಿರಬೇಕು. ಮನಸ್ಸಿನಲ್ಲಿ ಹುದುಗಿರುವ ಉತ್ತಮ ಆಡಳಿತಗಾರನಾಗುವ ಬಯಕೆಯನ್ನು ಅನುಭವಗಳ ಮೂಸೆಯಲ್ಲಿ ಪುಟಿ ಹಾಕುತ್ತಿರುವ ಸತ್ಯಾಸತ್ಯತೆಯ ಒರೆಗಲ್ಲಿಗೆ ನಿತ್ಯವೂ ಉಜ್ಜಿ ಪರಕಿಸುವ, ಪರಾಮರ್ಶಿಸುವ ಉದ್ಭವಿಸುವ ಸಮಸ್ಯೆಗಳನ್ನು ವಿವೇಕದಿಂದ ವಿಶ್ಲೇಷಿಸುವ, ತಾಳ್ಮೆಯಿಂದ ಚರ್ಚಿಸಿ, ಪರಿಹಾರ ಕಂಡುಕೊಳ್ಳುವ ಸ್ವಭಾವದವನಾಗಿರಬೇಕು. ಕಠಿಣ ಪ್ರಸಂಗಗಳಲ್ಲಿ ಕಾನೂನಿನ ಚೌಕಟ್ಟನ್ನು ಮೀರದಂತೆ ನಿಷ್ಠುರನೂ, ನ್ಯಾಯಪರನೂ ಇರುವುದಲ್ಲದೇ ಈ ಮೊದಲು ತಾನು ವಿದ್ಯಾರ್ಥಿಯಾಗಿದ್ದೆ, ಉಪನ್ಯಾಸಕನಾಗಿದ್ದೆ, ಈಗ ಹೆಚ್ಚಾಗಿ ತಂದೆ-ತಾಯಿಯರಂತೆ, ಮಕ್ಕಳ ಶ್ರೇಯಸ್ಸಿಗಾಗಿ ಶ್ರಮಿಸುವ ಜವಾಬ್ದಾರಿಯುತ ಸ್ಥಾನದಲ್ಲಿದ್ದೇನೆ ಎಂಬ ಅರಿವು ದಿನನಿತ್ಯ ನಮ್ಮನ್ನು ಕಾಡುತ್ತಿರಬೇಕು. ಅಂದಾಗ ಮಾತ್ರ ಉತ್ತಮ ನಾವಿಕನಂತೆ ನಾವೇ ಸುರಕ್ಷಿತವಾಗಿ ದಡ ಸೇರಿಸುವಲ್ಲಿ ಸಫಲರಾಗಬಹುದು, ಪ್ರಶಂಸನೀಯ ಪ್ರಿನ್ಸಿಪಾಲರಾಗಬಹುದು.

## ಡಿ. ಫಾರ್ಮ ಪ್ರವೇಶಕ್ಕೆ ಅರ್ಜಿ


೧೯೯೭-೯೮ನೇ ಸಾಲಿನಲ್ಲಿ ಡಿಪ್ಲೊಮಾ ಫಾರ್ಮಸಿ ಪದವಿಗೆ ಮೊದಲನೇ ವರ್ಷದ ಡಿ. ಫಾರ್ಮ ಕೋರ್ಸಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ವಿದ್ಯಾರ್ಹತೆ : ಭೌತಶಾಸ್ತ್ರ, ರಾಸಾಯನಿಕ ಶಾಸ್ತ್ರ ಮತ್ತು ಜೀವಶಾಸ್ತ್ರ ಅಥವಾ ಗಣಿತ ಶಾಸ್ತ್ರಗಳನ್ನೊಳಗೊಂಡ ಕೆಳಕಂಡ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿರಬೇಕು. ಅ. ವಿಜ್ಞಾನದಲ್ಲಿ ಇಂಟರ್ ಮೀಡಿಯಟ್ ಪರೀಕ್ಷೆ, ಆ. ವಿಜ್ಞಾನದಲ್ಲಿ ಮೂರು ವರ್ಷಗಳ ಪದವಿ ವ್ಯಾಸಂಗದಲ್ಲಿ ಮೊದಲನೆ ವರ್ಷ ಇ. ವಿಜ್ಞಾನದಲ್ಲಿ ೧೦+೨ ಪರೀಕ್ಷೆ (ಶೈಕ್ಷಣಿಕ ಪ್ರವಾಹ) ಈ. ಪದವಿ ಪೂರ್ವ ಪರೀಕ್ಷೆ ಉ. ಮೇಲಿನ ಪರೀಕ್ಷೆಗಳಿಗೆ ತತ್ಸಮಾನವಾದ, ಭಾರತೀಯ ಫಾರ್ಮಸಿ ಪರಿಷತ್ತಿನಿಂದ ಅನುಮೋದಿತ ಇತರೆ ವಿದ್ಯಾರ್ಹತೆ. ಅರ್ಜಿ ಫಾರಂಗಳನ್ನು ಪ್ರಾಚಾರ್ಯರು, ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯ, ೨, ಪಿ. ಕಾಳಿಂಗರಾವ್ ರಸ್ತೆ, ಸುಬ್ಬಯ್ಯ ವೃತ್ತ ಬೆಂಗಳೂರು-೨೭, ಇವರಿಂದ ಮನಿಆರ್ಡರ್ ಮೂಲಕ ಅಥವಾ ನಗದಾಗಿ ರೂ. ೧೦.೦೦ ಪಾವತಿ ಮಾಡಿ ದಿನಾಂಕ ೨೦-೧೨-೯೭ರ ವರೆಗೆ ಪಡೆಯಬಹುದು. ಪೋಸ್ಟಲ್ ಆರ್ಡರ್ ಡಿ.ಡಿ. ಅಥವಾ ಚೆಕ್ಕುಗಳನ್ನು ಅಂಗೀಕರಿಸುವುದಿಲ್ಲ. ಭರ್ತಿ ಮಾಡಿದ ಅರ್ಜಿಗಳನ್ನು ಸದಸ್ಯ ಕಾರ್ಯದರ್ಶಿ, ಆಯ್ಕೆ ಸಮಿತಿ, ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯ, ೨, ಪಿ. ಕಾಳಿಂಗರಾವ್ ರಸ್ತೆ, ಸುಬ್ಬಯ್ಯ ವೃತ್ತ, ಬೆಂಗಳೂರು - ೨೭. ಇವರಿಗೆ ದಿನಾಂಕ ೨೭-೧೨-೯೭ರಂದು ಸಾಯಂಕಾಲ ೪-೦೦ ಗಂಟೆಯೊಳಗೆ ತಲುಪಿಸಬೇಕು. ಲಕೋಟೆ ಮೇಲೆ 'ಡಿ' ಫಾರ್ಮ ಪ್ರವೇಶಕ್ಕಾಗಿ ಅರ್ಜಿ ಎಂದು ನಮೂದಿಸಬೇಕು.

## ನಾಗರಿಕ ಸೇವಾ ಪರೀಕ್ಷೆಗೆ ತರಬೇತಿ

ಕೇಂದ್ರ ಲೋಕಸೇವಾ ಆಯೋಗ ನಡೆಸುವ ನಾಗರಿಕ ಸೇವೆಗಳ ೧೯೯೮ರ ಪೂರ್ವಭಾವಿ ಪರೀಕ್ಷೆ ತೆಗೆದುಕೊಳ್ಳ ಬಯಸುವ ಅರ್ಹ ಅಭ್ಯರ್ಥಿಗಳಿಗೆ ಕೃಷಿಕ ಸರ್ವೋದಯ ಪ್ರತಿಷ್ಠಾನದವರು ತರಬೇತಿ ನೀಡುತ್ತಾರೆ. ವಿವರಗಳಿಗೆ ಈ ಕೆಳಗಿನ ವಿಳಾಸದಲ್ಲಿ ಸಂಪರ್ಕಿಸಬಹುದು.

**ಕೃಷಿಕ ಸರ್ವೋದಯ ಪ್ರತಿಷ್ಠಾನ**

೧೫, ಪಾರ್ಕ್ ಸ್ಟ್ರೀಟ್, ಕ್ವೀನ್ಸ್ ರೋಡ್ ಕ್ರಾಸ್, ಟಸ್ಕಾರ್ ಟೌನ್, ಬೆಂಗಳೂರು. ದೂರವಾಣಿ : ೨೮೬೬೫೩೩




# ವಿದ್ಯಾರ್ಥಿ ವೇತನ

## ರಾಮಕೃಷ್ಣ ಮಠ

ಸಂಸ್ಕೃತ, ವೈದ್ಯಕೀಯ (ದಂತ ಮತ್ತು ನರ್ಸಿಂಗ್ ಸೇರಿ), ಇಂಜನಿಯರಿಂಗ್, ಕೃಷಿ, ಪಶು ವೈದ್ಯಕೀಯ ವಿಜ್ಞಾನ, ತೋಟಗಾರಿಕೆ, ರೇಶ್ಮೆ ವಿಷಯಗಳ ಪದವಿ ವಿದ್ಯಾರ್ಥಿಗಳಿಗೆ ೧೯೯೭-೯೮ನೇ ಸಾಲಿಗೆ ರಾಮಕೃಷ್ಣ ಮಠ ೫೦೦ ರೂ. ವಿದ್ಯಾರ್ಥಿ ವೇತನ ನೀಡಲಿದೆ.

ಮಠದ ಕಚೇರಿಯಿಂದ ೩೧.೧.೯೭ರೊಳಗೆ ಅರ್ಜಿ ನಮೂನೆಗಳನ್ನು ಪಡೆಯಬಹುದು. ಭರ್ತಿ ಮಾಡಿದ ಅರ್ಜಿ ಪಾರ್ಮ್ ತಲುಪಲು ಅಂತಿಮ ದಿನಾಂಕ : ೧೫.೧.೯೮. ಆಯ್ಕೆಯಾದ ವಿದ್ಯಾರ್ಥಿಗಳಿಗೆ ೨೮.೨.೯೮ರೊಳಗೆ ಅಂಚೆ ಮೂಲಕ ವೈಯಕ್ತಿಕವಾಗಿ ತಿಳಿಸಲಾಗುವುದು.

**ವಿವರಗಳಿಗೆ ಸಂಪರ್ಕಿಸಿ :**

ರಾಮಕೃಷ್ಣ ಮಠ
ಬುಲ್ ಟೆಂಪಲ್ ರೋಡ್
ಬೆಂಗಳೂರು - ೫೬೦ ೦೧೯

## ಬಬ್ಬೂರು ಕಮ್ಮೆ

ಬಬ್ಬೂರು ಕಮ್ಮೆ ಸೇವಾ ಸಮಿತಿಯು ಈ ಜನಾಂಗಕ್ಕೆ ಸೇರಿದ ಆರ್ಥಿಕವಾಗಿ ಹಿಂದುಳಿದ ಎಸ್ಸೆಸ್ಸೆಲ್ಸಿ ಹಾಗೂ ಮೇಲಿನ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನಿಸಿದೆ.

ಭರ್ತಿ ಮಾಡಿದ ಅರ್ಜಿಗಳನ್ನು ಜ. ೩೧ರೊಳಗೆ ಬಬ್ಬೂರು ಕಮ್ಮೆ ಸೇವಾ ಸಮಿತಿ, ೧೭, ಶೇಷಾದ್ರಿ ರಸ್ತೆ, ಬೆಂಗಳೂರು-೯ ಇವರಿಗೆ ಸಲ್ಲಿಸಲು ಪ್ರಕಟಣೆ ಹೇಳಿದೆ.

## ಆರ್ಯಈಡಿಗ

ಆರ್ಯ ಈಡಿಗರ ವಿದ್ಯಾರ್ಥಿ ನಿಲಯದ ಹಳೆಯ ವಿದ್ಯಾರ್ಥಿಗಳ ಸಂಘವು ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲು ಅರ್ಜಿ ಆಹ್ವಾನಿಸಿದೆ.

ವಿವಿಧ ಶಾಲಾ ಕಾಲೇಜುಗಳಲ್ಲಿ ಓದುತ್ತಿರುವ ಅರ್ಹ ವಿದ್ಯಾರ್ಥಿಗಳು ಭರ್ತಿ ಮಾಡಿರುವ ಅರ್ಜಿಯನ್ನು ಡಿ. ೩೧ರೊಳಗೆ ಎಸ್. ಪಿ. ಮುನಿಯಪ್ಪ ಅಧ್ಯಕ್ಷರು, ವಿದ್ಯಾರ್ಥಿ ವೇತನ ಸಮಿತಿ, ನಂ. ೧೧, ೩ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು -೩ ಇವರಿಗೆ ಕಳುಹಿಸಲು ಪ್ರಕಟಣೆ ತಿಳಿಸಿದೆ.

## ಕುರುಬ ಜನಾಂಗ

ಕಾಳಿದಾಸ ಗೆಳೆಯರ ಬಳಗ ಸೇವಾ ಸಂಸ್ಥೆಯು ಕುರುಬ ಜನಾಂಗಕ್ಕೆ ಸೇರಿದ ಪದವಿ ಮತ್ತು ಸ್ನಾತಕೋತ್ತರ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಬಡ ಹಾಗೂ ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲಿದೆ.

ಆಸಕ್ತರು ಕಾಳಿದಾಸ ಗೆಳೆಯರ ಬಳಗ ಸೇವಾ ಸಂಸ್ಥೆ, ಕೇರಾಫ್ ದೀಪಕ್ ನರ್ಸಿಂಗ್ ಹೋಂ, ಸಂಖ್ಯೆ ೨೫೯, ಕನಕಪುರ ರಸ್ತೆ, ೭ನೇ ಬಡಾವಣೆ, ಜಯನಗರ, ಬೆಂಗಳೂರು-೫೬೦ ೦೮೨ (ದೂರವಾಣಿ: ೬೬೩೭೦೪೩, ೬೪೯೭೪೯) ಈ ವಿಳಾಸವನ್ನು ಸಂಪರ್ಕಿಸಬಹುದು.

## ಉತ್ತರಾದಿ ಮಠ

ಶ್ರೀಮದುತ್ತರಾದಿ ಮಠವು ಸ್ಥಾಪಿಸಿದ ಜಯ ಸತ್ಯಪ್ರಮೋದ ನಿಧಿಯು ತಾಂತ್ರಿಕ ಶಿಕ್ಷಣ ಪಡೆಯುತ್ತಿರುವ (ವೈದ್ಯಕೀಯ, ಎಂಜಿನಿಯರಿಂಗ್) ಅರ್ಹ, ಬಡ ಮಾಧ್ವ ವಿದ್ಯಾರ್ಥಿಗಳಿಂದ ೧೯೯೭-೯೮ನೇ ವರುಷಕ್ಕಾಗಿ ಉಚಿತ ವಿದ್ಯಾರ್ಥಿವೇತನಗಳಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ನಿಗದಿತ ಅರ್ಜಿಗಳನ್ನು ಜಯ ಸತ್ಯ ಪ್ರಮೋದ ನಿಧಿ ಕಾರ್ಯಾಲಯ, ಉತ್ತರಾದಿ ಮಠ ಪೂಜಾ ಮಂದಿರದ ಅಟ್ಟ, ಉತ್ತರಾದಿಮಠದ ರಸ್ತೆ, ಬಸವನಗುಡಿ, ಬೆಂಗಳೂರು-೫೬೦ ೦೦೪, ಇವರಿಂದ ಪಡೆದು ೨೦-೧೨-೧೯೯೭ ರೊಳಗೆ ಸಲ್ಲಿಸಬೇಕೆಂದು ನಿಧಿಯ ಕಾರ್ಯ ನಿರ್ವಾಹಕ ನಿರ್ದೇಶಕರಾದ ಗೋವಿಂದ ಮೂರ್ತಿ ದೇಸಾಯಿ ಅವರು ತಿಳಿಸಿರುತ್ತಾರೆ.

## ಹೈನುಗಾರಿಕೆ ತರಬೇತಿ

ರೈತರಿಗೆ, ರೈತರ ಮಕ್ಕಳಿಗೆ ಹೈನುಗಾರಿಕೆ ಮತ್ತು ಮೇವು ಉತ್ಪಾದನೆ ಬಗ್ಗೆ ಡಿಸೆಂಬರ್ ೨೨ರಿಂದ ೩೧ರ ವರೆಗೆ ತರಬೇತಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಹೆಸರುಘಟ್ಟದಲ್ಲಿರುವ ರಾಜ್ಯ ಜಾನುವಾರು ಸಂವರ್ಧನಾ ಮತ್ತು ತರಬೇತಿ ಕೇಂದ್ರದಲ್ಲಿ ತರಬೇತಿ ನೀಡಲಾಗುವುದು. ತರಬೇತಿ ಅವಧಿಯಲ್ಲಿ ಉಚಿತ ವಸತಿ ಸೌಕರ್ಯವನ್ನು ಮಾತ್ರ ಕಲ್ಪಿಸಲಾಗುವುದು. ತರಬೇತಿ ಅವಧಿಯಲ್ಲಿ ಊಟ ತಿಂಡಿ, ಪ್ರಯಾಣ ವೆಚ್ಚವನ್ನು ವಿದ್ಯಾರ್ಥಿಗಳೇ ಭರಿಸಿಕೊಳ್ಳಬೇಕು ಎಂದು ಪ್ರಕಟಣೆ ತಿಳಿಸಿದೆ.

ಆಸಕ್ತ ವಿದ್ಯಾರ್ಥಿಗಳು ಉಪನಿರ್ದೇಶಕರು, ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ರಾಜ್ಯ ಜಾನುವಾರು ಸಂವರ್ಧನಾ ತರಬೇತಿ ಕೇಂದ್ರ, ಬೆಂಗಳೂರು ಇವರನ್ನು ಸಂಪರ್ಕಿಸಲು ಕೋರಲಾಗಿದೆ.

## ಮಹಿಳಾ ಉದ್ಯಮಿಗಳಿಗೆ ಸಲಹಾ ಕೇಂದ್ರ

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವು ಸ್ವಯಂ ಉದ್ಯೋಗಿಗಳಾಗಲು ಇಚ್ಛಿಸುವ ಬೆಂಗಳೂರು ಜಿಲ್ಲೆಯ ಮಹಿಳಾ ಉದ್ಯಮಿಗಳಿಗಾಗಿ ಸಲಹಾ ಕೇಂದ್ರವನ್ನು ಸಂಪರ್ಕ, ಸಂಖ್ಯೆ ೧೧:೧, ಎ-೩, ಕತಾಳಿಪಾಳ್ಯ, ೭ನೇ ಅಡ್ಡರಸ್ತೆ, ೧೭ನೇ ಮುಖ್ಯರಸ್ತೆ, ೬ ಬ್ಲಾಕ್, ಕೋರಮಂಗಲ, ಬೆಂಗಳೂರು (ದೂರವಾಣಿ ೫೫೨೨೫೨೪) ಇಲ್ಲಿ ಸ್ಥಾಪಿಸಿದೆ.

ಸ್ವಯಂ ಉದ್ಯಮಿಗಳಾಗಲು ಇಚ್ಛಿಸುವ ಮಹಿಳೆಯರಿಗೆ ಯೋಜನಾ ವರದಿಯ ತಿಳಿವಳಿಕೆ, ವಿವಿಧ ಸರ್ಕಾರಿ-ಸರ್ಕಾರೇತರ ಸಂಘ ಸಂಸ್ಥೆಗಳಿಂದ ದೊರೆಯುವ ಸಾಲ ಸೌಲಭ್ಯದ ಮಾಹಿತಿ, ಮಾರುಕಟ್ಟೆ ವಿವರ ಹಾಗೂ ಇನ್ನಿತರ ಸಲಹೆಗಳನ್ನು ಉಚಿತವಾಗಿ ನೀಡಲಾಗುವುದು.

# IAS ಪರೀಕ್ಷೆ: ನಿಮ್ಮ ಸಂದೇಹ ನೈಜ ಪರಿಹಾರ

*ಸ್ಪರ್ಧೆ! ಸ್ಪರ್ಧೆ! ಇಂದು ಜಗತ್ತು ಸ್ಪರ್ಧಾಕಣವಾಗಿ ಪರಿವರ್ತಿತವಾಗುತ್ತಿದೆ. ಇಂದಿನ ಪ್ರತಿ ಯುವಕನ ಕನಸು ಈ ಸ್ಪರ್ಧಾತ್ಮಕ ಜಗತ್ತಿನಲ್ಲಿ ಗೆಲ್ಲಬೇಕು, ಬಾಳಿನಲ್ಲಿ ನಿಲ್ಲಬೇಕು ಎಂಬುದಾಗಿರುತ್ತದೆ. ಇಂತಹ ಯುವಕರಿಗೆ ಕೈ ಬೀಸಿ ಕರೆಯುತ್ತಿದೆ ಕೇಂದ್ರ ಲೋಕಸೇವಾ ಆಯೋಗದ ಪರೀಕ್ಷೆಗಳಾದ IAS ಮತ್ತು IPS! ಈ ಪರೀಕ್ಷೆ ಎದುರಿಸ ಹೊರಟ ಅಭ್ಯರ್ಥಿಗಳಿಗೆ ನೂರಾರು ಪ್ರಶ್ನೆಗಳು ಉದ್ಭವವಾಗುವುದು ಸಹಜ, ಅಂತಹ ಪ್ರಶ್ನೆಗಳಿಗೆ ಸಂದೇಹಗಳಿಗೆ ಇಲ್ಲಿ ಉತ್ತರವಿದೆ.*

○ **ಕ.ಹೊ. ಮಂಜುನಾಥ**
ಉಪನ್ಯಾಸಕರು, ಜ್ಞಾನಭಾರತಿ-ತರಬೇತಿ ಕೇಂದ್ರ, ಚಾಮರಾಜಪೇಟೆ, ಬೆಂಗಳೂರು

**● IAS ಮತ್ತು IPS ಪರೀಕ್ಷೆಗೆ ಯಾವಾಗ ಅರ್ಜಿ ಕರೆಯುತ್ತಾರೆ? ಅರ್ಜಿ ಫಾರ್ಮ ಎಲ್ಲಿ ಸಿಗುತ್ತೆ? ಹೇಗೆ ಅರ್ಜಿ ಸಲ್ಲಿಸಬೇಕು? ಯಾರಿಗೆ ಸಲ್ಲಿಸಬೇಕು?**

ಈ ಪರೀಕ್ಷೆಗಳನ್ನು ದೆಹಲಿಯಲ್ಲಿರುವ UPSCಯವರು ಡಿಸೆಂಬರ್ ತಿಂಗಳ ಮೊದಲ ಅಥವಾ ಎರಡನೇ ವಾರದಲ್ಲಿ ಕರೆಯುತ್ತಾರೆ. ಆದರೆ, ಈ ಸಲ ನೋಟಿಫಿಕೇಶನ್ ನವೆಂಬರ್ ೨೯ರಂದು ಹೊರಬಿದ್ದಿದೆ. ಮತ್ತು ಅರ್ಜಿ ಸಲ್ಲಿಸಲು ಈ ಸಲ ೧೨-೧-೯೮ ಕೊನೆಯ ದಿನವಾಗಿರುತ್ತದೆ. ಅರ್ಜಿ ಫಾರ್ಮ ಗಳು ಸಾಮಾನ್ಯವಾಗಿ ನಗರ ಕೇಂದ್ರದಲ್ಲಿಯ ಪುಸ್ತಕ ಅಂಗಡಿ/ಮಳಿಗೆಗಳಲ್ಲಿ ಸಿಗುತ್ತದೆ. ಅಕಸ್ಮಾತ್ ಅಲ್ಲಿ ದೊರೆಯದಿದ್ದಲ್ಲಿ ನಿರಾಶರಾಗಬೇಕಿಲ್ಲ. ''ಎಂಪ್ಲಾಯ್‌ಮೆಂಟ್ ನ್ಯೂಸ್'' ವಾರಪತ್ರಿಕೆಯಲ್ಲಿ ಅಚ್ಚಾಗಿ ಬಂದೇ ಬರುತ್ತೆ. ಅದನ್ನು ಟೈಪ್ ಮಾಡಿ ಅಥವಾ ಜೆರಾಕ್ಸ್ ಮಾಡಿಸಿ, ಅದೂ ಇಲ್ಲ ಎಂದರೆ ಅಂದವಾಗಿ ಬರೆದು ಭರ್ತಿ ಮಾಡಿ UPSCಯವರು ತಿಳಿಸಿರುವ ಕೊನೆಯ ದಿನದೊಳಗೆ ದೆಹಲಿಯ ಕೇಂದ್ರಕ್ಕೆ ತಲುಪುವಂತೆ ಕಳಿಸಬೇಕು.

**● ಈ ಪರೀಕ್ಷೆ ಎಂದು ಇರುತ್ತದೆ? ಹೇಗೆ ಇರುತ್ತದೆ?**

ಸಾಮಾನ್ಯವಾಗಿ ಈ ಪರೀಕ್ಷೆ ೩ ಹಂತದಲ್ಲಿ ನಡೆಯುತ್ತದೆ. ಮೊದಲ ಹಂತದ ಪೂರ್ವಭಾವಿ ಪರೀಕ್ಷೆ ಜೂನ್ ತಿಂಗಳ ಮೊದಲ ಭಾನುವಾರ ನಡೆಯುತ್ತದೆ. ಆದರೆ, ಈ ಸಲ ಸ್ವಲ್ಪ ಮೊದಲು ಅಂದರೆ ಮೇ ೩೧, ೧೯೯೮ರಂದು ನಡೆಯಲಿದೆ. ಈ ಪರೀಕ್ಷೆಯು ಬಹು ಆಯ್ಕೆಯ ಪ್ರಶ್ನೆಗಳನ್ನೊಳಗೊಂಡಿರುತ್ತದೆ.

ಎರಡನೇ ಹಂತದ್ದು ಮುಖ್ಯ ಪರೀಕ್ಷೆ. ಮೊದಲ ಹಂತದಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ಈ ಪರೀಕ್ಷೆಗೆ ಕುಳಿತುಕೊಳ್ಳಲು ಅರ್ಹರು ಮತ್ತು ಇದರ ಅಂಕಗಳು ಆಯ್ಕೆಯಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತವೆ. ಈ ಪರೀಕ್ಷೆಯ ಲಕ್ಷಣವೆಂದರೆ ಇದು ವಿವರಣಾತ್ಮಕ ಉತ್ತರ ಅಪೇಕ್ಷಿಸುವ ಪರೀಕ್ಷೆ. ಇದು ನವೆಂಬರ್‌ನಲ್ಲಿ ಇರುತ್ತದೆ.

ಮೂರನೇ ಹಂತವೇ ಸಂದರ್ಶನ. ಮುಖ್ಯ ಪರೀಕ್ಷೆಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ದೆಹಲಿಗೆ ಕರೆಯುತ್ತಾರೆ. ಎಪ್ರಿಲ್-ಮೇ ತಿಂಗಳಲ್ಲಿ ಈ ಸಂದರ್ಶನಗಳು ನಡೆಯುತ್ತವೆ.

**ಗಮನಿಸಿ** : ಮುಖ್ಯಪರೀಕ್ಷೆ ಅಂಕ ಪಟ್ಟಿಯಲ್ಲಿ ಸಂದರ್ಶನದ ಅಂಕಗಳನ್ನು ಸೇರಿಸುವುದರಿಂದ IAS ಪರೀಕ್ಷೆ ಎರಡೇ ಹಂತದಲ್ಲಿ ನಡೆಯುತ್ತದೆ ಎಂತಲೂ ಕೆಲವರು ಹೇಳುತ್ತಾರೆ. ಒಟ್ಟಿನಲ್ಲಿ ಪ್ರವೇಶ ಪರೀಕ್ಷೆ ಮುಖ್ಯ ಪರೀಕ್ಷೆ, ಸಂದರ್ಶನ ಇದ್ದೇ ಇರುತ್ತದೆ.

**● ಈ ಪರೀಕ್ಷೆ ತುಂಬಾ ಕಷ್ಟ ಎನ್ನುತ್ತಾರೆ ನಿಜವೇ?**

ನೋಡಿ, ಜೀವನದಲ್ಲಿ ಯಾವುದು ತಾನೇ ಕಷ್ಟವಿಲ್ಲದ್ದು ಹೇಳಿ! ಆಲಸಿಗೆ ಊಟ ಮಾಡುವುದೂ ಕಷ್ಟ! ಅಲ್ಲವೆ? ಆದ್ದರಿಂದ ಕಷ್ಟ ಎನ್ನುವುದಕ್ಕಿಂತ ಹೇಗೆ ಕಷ್ಟವನ್ನೂ ಎದುರಿಸುತ್ತಾ ಮುನ್ನುಗ್ಗುತ್ತೇವೆ ಎಂಬುದೇ ಯಶಸ್ಸನ್ನು ನಿರ್ಧರಿಸುತ್ತದೆ.

**● ಪೂರ್ವಭಾವಿ ಪರೀಕ್ಷೆ ಬ್ಗಗ್ಗೆ ತಿಳಿಸ್ತೀರಾ?**

ಈ ಸಲದ ಪ್ರವೇಶ ಪರೀಕ್ಷೆ ೧೯೯೮, ಮೇ ೩೧ರಂದು ನಡೆಯುತ್ತದೆ ಎಂದು ಈಗಾಗಲೇ ತಿಳಿಸಿರುವೆ. ಇದು ೨ ಪ್ರಶ್ನೆಪತ್ರಿಕೆಗಳನ್ನೊಳಗೊಂಡಿರುತ್ತದೆ. ಒಂದು ಸಾಮಾನ್ಯ ಜ್ಞಾನ ಅಧ್ಯಯನವಾದರೆ, ಇನ್ನೊಂದು ಪತ್ರಿಕೆ ಐಚ್ಛಿಕ ವಿಷಯವನ್ನು ಕುರಿತದ್ದು. ಎರಡೂ ಪತ್ರಿಕೆಗಳ ಪರೀಕ್ಷೆ ಒಂದೇ ದಿನ ನಡೆಯಲಿದ್ದು, ಬೆಳಿಗ್ಗೆ ಐಚ್ಛಿಕ ವಿಷಯದ ಪರೀಕ್ಷೆ ನಡೆದರೆ ಮಧ್ಯಾಹ್ನ ಸಾ.ಜ್ಞಾ.ಅಧ್ಯಯನ ಪರೀಕ್ಷೆ ಇರುತ್ತದೆ. ಈಗಾಗಲೇ ತಿಳಿದಿರುವಂತೆ ಈ ಪರೀಕ್ಷೆಯಲ್ಲಿ ಬಹು ಆಯ್ಕೆ ಪ್ರಶ್ನೆಗಳಿದ್ದು ಒಟ್ಟು ೪೫೦ ಅಂಕಗಳದ್ದಾಗಿರುತ್ತದೆ.

**● ಪೂರ್ವಭಾವಿ ಪರೀಕ್ಷೆಯ ಸಾಮಾನ್ಯ ಜ್ಞಾನ ಅಧ್ಯಯನ ವಿಷಯಕ್ಕೆ ಹೇಗೆ ತಯಾರಾಗಬೇಕು? ಸ್ವಲ್ಪ ವಿವರಿಸುವಿರಾ?**

ಸಾಮಾನ್ಯ ಜ್ಞಾನ ಅಧ್ಯಯನ ಒಂದು ಸಾಗರ ಇದ್ದಂತೆ. ''ಅ''ದಿಂದ ''ಜ್ಞ''ತನಕ ಏನನ್ನಾದರೂ ಪ್ರಶ್ನೆ ಮಾಡಬಹುದು. ಹಾಗೆಂದು ಹೆದರಬೇಕಿಲ್ಲ. ವ್ಯವಸ್ಥಿತ ಅಧ್ಯಯನದ ಮೂಲಕ ಎಂತಹದನ್ನೂ ಕರಗತ ಮಾಡಿಕೊಳ್ಳಬಹುದು.

ಸಾಮಾನ್ಯವಾಗಿ ಪರೀಕ್ಷೆ ಎದುರಿಸ ಹೊರಟ ಅಭ್ಯರ್ಥಿಗಳು ಈ ವಿಷಯವನ್ನು ಇತಿಹಾಸ, ಭೂಗೋಳ, ಅರ್ಥಶಾಸ್ತ್ರ, ವಿಜ್ಞಾನ-ತಂತ್ರಜ್ಞಾನ ಪ್ರಚಲಿತ ಘಟನೆಗಳು ಎಂದು ವಿಭಜಿಸಿಕೊಂಡು ಅದರಲ್ಲಿ ಪರಿಣತಿಯನ್ನು ಪಡೆಯಲು ಪ್ರಯತ್ನಿಸುತ್ತಾರೆ. ಹೀಗೆ ಮಾಡುವುದರಿಂದ ಉತ್ತಮ ಅಂಕಗಳನ್ನು ಕೂಡಾ ಗಳಿಸಬಹುದು.

**● ಹಾಗಾದರೆ ಈ ಎಲ್ಲಾ ವಿಷಯಗಳನ್ನು ಎಲ್ಲಿಂದ ಸಂಗ್ರಹಿಸಬೇಕು?**

ಎಲ್ಲಿಗೂ ಹೋಗಬೇಕಾಗಿಲ್ಲ. ೬ನೇ ತರಗತಿಯಿಂದ ೧೨ನೇ ತರಗತಿಯ NCERTಯ (ಭಾಷಾ ವಿಷಯ ಮತ್ತು ಗಣಿತ ಹೊರತು ಪಡಿಸಿ) ವಿಷಯಗಳಾದ ಇತಿಹಾಸ, ಭೂಗೋಳ, ವಿಜ್ಞಾನದ ಪುಸ್ತಕಗಳನ್ನು ಓದಬೇಕು.

ಪ್ರಚಲಿತ ವಿಷಯಕ್ಕೆ ಏನು ಮಾಡಬೇಕು ಎಂಬುದಲ್ಲವೇ? ನಿಮ್ಮ ಮುಂದಿನ ಪ್ರಶ್ನೆ?

ದಿನನಿತ್ಯದ ಘಟನಾವಳಿಯನ್ನು ತಿಳಿಯಲು ಕೆಲವು ದಿನ ಪತ್ರಿಕೆ ಮತ್ತು ಮಾಸಿಕ ಪತ್ರಿಕೆಗಳನ್ನು ಓದಿದರೆ ಸಾಕು.

● **ನಾನೊಬ್ಬ ಹಿಂದುಳಿದ ಗ್ರಾಮೀಣ ವಿದ್ಯಾರ್ಥಿ. ಕಡಿಮೆ ಅಂಕಗಳು ಬಂದಿವೆ ಹಾಗೂ ಇಂಗ್ಲಿಷ್ ಸರಿಯಾಗಿ ಬರುವುದಿಲ್ಲ ನಾನು *IAS* ಮಾಡಬಹುದೇ?**

ದಡ್ಡತನ ಎಂಬುದು ಒಂದು ಮಾನಸಿಕ ಸ್ಥಿತಿ. ಹುಟ್ಟಾ ಯಾರೂ ದಡ್ಡರಲ್ಲ. ಶ್ರಮವಹಿಸಿ ಯಾರು ಕಾಯಕ ಮಾಡುತ್ತಾರೋ ಅವರು ಯಶಸ್ವಿಗಳಾಗುವುದು ಶತಸಿದ್ಧ. ಆದ್ದರಿಂದ ನಾನು ಹಳ್ಳಿಗ, ನಾನು ದಡ್ಡ ಎಂಬುದನ್ನು ಮರೆತು ಬಿಡಿ.

*IAS* ಪರೀಕ್ಷೆಗೆ ಕುಳಿತುಕೊಳ್ಳಲಿಕ್ಕಾಗಲಿ, ಯಶಸ್ವಿಯಾಗಲಿಕ್ಕಾಗಲಿ ಪದವಿಯಲ್ಲಿ ಗಳಿಸಿದ ಅಂಕಗಳು ಲೆಕ್ಕಕ್ಕೆ ಬರುವುದಿಲ್ಲ. ನೀವು ಎಷ್ಟು ಪರಿಶ್ರಮ ಹಾಕಿ ಓದುತ್ತೀರೋ, ಎಷ್ಟು ಪ್ರತಿಭೆಯನ್ನು ಹೊರಹಾಕುತ್ತೀರೋ ಅದರ ಮೇಲೆ ನಿಂತಿದೆ ಯಶಸ್ಸು! ಆದ್ದರಿಂದ ಪದವಿಯಲ್ಲಿ ಕಡಿಮೆ ಅಂಕ ಬಂದಿದೆ. ಆದ್ದರಿಂದ *IAS* ಕನಸಿನ ಕುಸುಮ ಎಂದುಕೊಳ್ಳದೇ ಅಧ್ಯಯನವೆಂಬ ಕಾಯಕಕ್ಕೆ ಕೈ ಹಾಕಿ. ಯಶಸ್ಸು ಖಂಡಿತಾ ಸಿಕ್ಕೇಸಿಗುತ್ತೆ.

ಇಂಗ್ಲಿಷ್ ಬರದಿದ್ದರೆ *IAS* ಸಾಧ್ಯವಿಲ್ಲ ಎಂಬುದು ಇನ್ನೊಂದು ಮೂಢನಂಬಿಕೆ. ಉತ್ತರ ಭಾರತದ ಸಾಕಷ್ಟು ಅಭ್ಯರ್ಥಿಗಳು ಅವರ ಮಾತೃಭಾಷೆಯಲ್ಲಿ ಪರೀಕ್ಷೆ ಬರೆದು ಯಶಸ್ಸನ್ನು ಗಳಿಸುತ್ತಾರಾದರೆ ನಮ್ಮಿಂದ ಏಕೆ ಸಾಧ್ಯವಿಲ್ಲ? ನಮ್ಮಲ್ಲೂ ಶಿವರಾಮುವಿನಂತಹ ಅನೇಕ ಪ್ರತಿಭೆಗಳು ಕನ್ನಡದಲ್ಲಿ ಬರೆದು ಯಶಸ್ಸನ್ನು ಗಳಿಸಲಿಲ್ಲವೆ?

ಹಾಗೆಂದು ಇಂಗ್ಲಿಷನ್ನು ಅಲಕ್ಷಿಸಬೇಕೆಂದೇನೂ ಇಲ್ಲ. ಅದೊಂದು ಸಮೃದ್ಧಭಾಷೆ. ಜ್ಞಾನ ಸಂಗ್ರಹಕ್ಕೆ ಅದನ್ನು ಅವಲಂಬಿಸಬೇಕಾಗಿದೆ. ಆದ್ದರಿಂದ ಆ ಭಾಷೆ ತಿಳಿದಿರುವುದು ಉತ್ತಮ.

● **ಐಚ್ಛಿಕ ವಿಷಯಗಳಾವುವು? ಎಷ್ಟು ವಿಷಯಗಳನ್ನು ಆರಿಸಿ ಕೊಳ್ಳಬೇಕು?**

ಪೂರ್ವಭಾವಿ ಪರೀಕ್ಷೆಗೆ ಒಂದು ಐಚ್ಛಿಕ ವಿಷಯವನ್ನು ಮುಖ್ಯ ಪರೀಕ್ಷೆಗೆ ೨ ಐಚ್ಛಿಕ ವಿಷಯಗಳನ್ನು ಆರಿಸಿಕೊಳ್ಳಬೇಕು.


ಪ್ರವೇಶ ಪರೀಕ್ಷೆಗೆ-ಇತಿಹಾಸ, ಭೂಗೋಳ, ರಾಜ್ಯಶಾಸ್ತ್ರ, ಸಾರ್ವ ಜನಿಕ ಆಡಳಿತ ಮತ್ತು ಅರ್ಥಶಾಸ್ತ್ರದಿಂದ ಹಿಡಿದು ವಿಜ್ಞಾನ ವಿಷಯ ಗಳಾದ ಭೌತ, ರಸಾಯನ ಶಾಸ್ತ್ರ ವೈದ್ಯಶಾಸ್ತ್ರದ ತನಕ ಸರಿ ಸುಮಾರು ೨೩ ವಿಷಯಗಳಿವೆ. ಯಾವುದಾದರೂ ಒಂದನ್ನು ಆರಿಸಿಕೊಳ್ಳಬಹುದಾಗಿದೆ.

● **ಸರ್, ನನ್ನದೊಂದು ಸಮಸ್ಯೆ! ಐಚ್ಛಿಕ ವಿಷಯವಾಗಿ ಪದವಿಯಲ್ಲಿ ಯಾವ ವಿಷಯಗಳನ್ನು ಅಧ್ಯಯನ ಮಾಡಿರುತ್ತೇವೆಯೋ ಅದನ್ನೇ ತೆಗೆದುಕೊಳ್ಳಬೇಕೆ? ಅಥವಾ ಬೇರೆ ವಿಷಯವನ್ನು ಆಯ್ದುಕೊಳ್ಳಲು ಅವಕಾಶ ಇದೆಯೇ?**

IAS ಪರೀಕ್ಷೆ ತೆಗೆದುಕೊಳ್ಳಲು ಪದವಿ ಕನಿಷ್ಟ ಅರ್ಹತೆ ಎಂದಿದೆಯೇ ಹೊರತು, ಪದವಿಯಲ್ಲಿ ಓದಿದ ವಿಷಯವನ್ನೇ IAS ಪರೀಕ್ಷಾ ಐಚ್ಛಿಕ ವಿಷಯವಾಗಿ ಆರಿಸಿಕೊಳ್ಳಬೇಕು ಎಂಬ ನಿಯಮವೇನೂ ಇಲ್ಲ. ನಿಮಗೆ ಇಷ್ಟ ಬಂದ ಯಾವ ವಿಷಯವನ್ನಾದರೂ ಆರಿಸಿಕೊಂಡು ಅಧ್ಯಯನ ಮಾಡಬಹುದು ಹಾಗೂ ಐಚ್ಛಿಕ ವಿಷಯವಾಗಿ ತೆಗೆದುಕೊಂಡು ಪರೀಕ್ಷೆ ಬರೆಯಬಹುದು.

● **ಐಚ್ಛಿಕ ವಿಷಯದ ಅಧ್ಯಯನದ ಬಗ್ಗೆ ತಿಳಿಸುವಿರಾ?**

ಈ ಪ್ರಶ್ನೆಗೆ ಉತ್ತರ ನೀವು ಯಾವ ಐಚ್ಛಿಕ ವಿಷಯವನ್ನೂ ಆರಿಸಿಕೊಂಡಿದ್ದೀರಿ ಎಂಬುದರ ಮೇಲೆ ಅವಲಂಬಿಸಿದೆ. ಇಷ್ಟಂತೂ ನಿಜ, ಯಾವ ವಿಷಯವನ್ನೇ ಆರಿಸಿಕೊಳ್ಳಿ ಆ ವಿಷಯದ ಮೇಲೆ ಬಲವಾದ



ಹಿಡಿತ ಆಳವಾದ ಜ್ಞಾನ ಇರಬೇಕು. ಕನಿಷ್ಟ ಪದವಿ ಮಟ್ಟದ ವಿಷಯ ಪಕ್ವತೆಯಂತೂ ಅಪೇಕ್ಷಿತ.

● **ಐಚ್ಛಿಕ ವಿಷಯದಲ್ಲಿ ಪೂರ್ವಭಾವಿ ಪರೀಕ್ಷೆ ಮತ್ತು ಮುಖ್ಯ ಪರೀಕ್ಷೆಯ ಪಠ್ಯಕ್ರಮ ಒಂದೇ ಇರುತ್ತದೆಯೇ ಅಥವಾ ವ್ಯತ್ಯಾಸವಿದೆಯೆ?**

ವ್ಯತ್ಯಾಸ ಇದ್ದೇ ಇದೆ. ಪೂರ್ವಭಾವಿ ಪರೀಕ್ಷಾ ಪಠ್ಯಕ್ರಮಕ್ಕೂ, ಮುಖ್ಯ ಪರೀಕ್ಷಾ ಪಠ್ಯಕ್ರಮಕ್ಕೂ ಬಹಳಷ್ಟು ವ್ಯತ್ಯಾಸ ಇಲ್ಲದಿದ್ದರೂ ಪೂರ್ವಭಾವಿ ಪರೀಕ್ಷೆಯ ಪಠ್ಯಕ್ರಮದ ಜೊತೆಗೆ ಇನ್ನಷ್ಟು ವಿಷಯವನ್ನು ಆಯಾ ಐಚ್ಛಿಕ ವಿಷಯಗಳಿಗೆ ಸಂಬಂಧಿಸಿದಂತೆ ಸೇರಿಸಿರುತ್ತಾರೆ.

● **IAS ಪೂರ್ವಭಾವಿ ಪರೀಕ್ಷೆಗೆ ಕನ್ನಡ ಐಚ್ಛಿಕ ವಿಷಯವಾಗಿ ತೆಗೆದುಕೊಳ್ಳಲು ಅವಕಾಶ ಇದೆಯೆ?**

ಇಲ್ಲ! ಯಾವುದೇ ಭಾಷೆಯ ವಿಷಯವನ್ನೂ ಐಚ್ಛಿಕ ವಿಷಯವಾಗಿ ಪ್ರವೇಶ ಪರೀಕ್ಷೆಯಲ್ಲಿ ತೆಗೆದುಕೊಳ್ಳಲು ಬರುವುದಿಲ್ಲ. ಆದರೆ ಮುಖ್ಯ ಪರೀಕ್ಷೆಯಲ್ಲಿ ಕನ್ನಡವನ್ನು ಐಚ್ಛಿಕ ವಿಷಯವಾಗಿ ತೆಗೆದುಕೊಳ್ಳಬಹುದು.

**ಗಮನಿಸಿ :** K.A.S. ಪ್ರವೇಶ ಪರೀಕ್ಷೆಗೆ ''ಕನ್ನಡ'' ಐಚ್ಛಿಕ ವಿಷಯ ವಾಗಿ ತೆಗೆದುಕೊಳ್ಳಲು ಅವಕಾಶ ಕಲ್ಪಿಸಿದೆ.

● **ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳ ತರಬೇತಿಗೆ IAS ತರಬೇತಿ ಕೇಂದ್ರಗಳಿವೆಯೆ....?**

ರಾಜ್ಯ ಸರ್ಕಾರದ ಅನೇಕ ಕೇಂದ್ರಗಳು, ಅನೇಕ ಸ್ವಯಂ ಸೇವಾ ಸಂಘಟನೆಗಳು ಈ ನಿಟ್ಟಿನಲ್ಲಿ ಉಚಿತ ಅಥವಾ ಕನಿಷ್ಟ ಸಹಾಯಧನವನ್ನು ಪಡೆದು ತರಬೇತಿ ನೀಡುವ ಕಾರ್ಯದಲ್ಲಿ ತೊಡಗಿವೆ. ಆ ಬಗ್ಗೆ ಆಗಾಗ ಪತ್ರಿಕೆಗಳಲ್ಲಿ ಪ್ರಕಟಣೆಗಳು ಬರುತ್ತಿರುತ್ತವೆ. ವಿವರಗಳಿಗೆ ಅಕ್ಟೋಬರ್ ೯೭ರ 'ಬಿಸಿಲ ಬದುಕು' ಸಂಚಿಕೆ ನೋಡಿ.

### ಕೆಲವು ತರಬೇತಿ ಕೇಂದ್ರಗಳ ವಿಳಾಸಗಳು

**ಸಂಯೋಜಕರು**
'ಜ್ಞಾನಭಾರತಿ' ಸ್ಪರ್ಧಾ ಪರೀಕ್ಷೆ ವಿಭಾಗ
೧೯೩/೧, ೪ನೇ ಮುಖ್ಯರಸ್ತೆ, ೫ನೇ ಅಡ್ಡರಸ್ತೆ,
ಚಾಮರಾಜಪೇಟೆ, ಬೆಂಗಳೂರು - ೧೮.

**ಜೆ.ಎಸ್.ಎಸ್. ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಸಂಸ್ಥೆ**
೮ನೇ ಬ್ಲಾಕ್, ೩೮ನೇ ಕ್ರಾಸ್, ಜಯನಗರ, ಬೆಂಗಳೂರು - ೧೧.

**ಕಾಕಡೆ ಐ.ಎ.ಎಸ್. ಮತ್ತು ಕೆ.ಎ.ಎಸ್ ಅಧ್ಯಯನ ಕೇಂದ್ರ**
'ವಿಹಾರ', ೭ನೇ ಕ್ರಾಸ್, ಕಲ್ಯಾಣ ನಗರ, ಧಾರವಾಡ - ೫೮೦ ೦೦೭.

**ಐ.ಎ.ಎಸ್. ಸ್ಟಡಿ ಸರ್ಕಲ್**
೧೩೩, ಶಾರದಾ ಕಾಲನಿ, ಕೆ.ಎಚ್.ಬಿ.ಸಿ.ಎಸ್. ಲೇಔಟ್,
೩ನೇ ಹಂತ, ೪ನೇ ವಿಭಾಗ, ಬಸವೇಶ್ವರನಗರ, ಬೆಂಗಳೂರು - ೭೯.

# ಐ.ಎ.ಎಸ್.ಗೆ ಅರ್ಜಿ ಕರೆದಿದ್ದಾರೆ

'**ನಾ**ಗರಿಕ ಸೇವೆಗಳ ಹುದ್ದೆ'-ಇದರ ಆಕರ್ಷಣೆ ಸಾಮಾನ್ಯವಾದದ್ದಲ್ಲ. ದೇಶದ ಬುದ್ಧಿವಂತರೆಲ್ಲರ ಕನಸಿನ ಹುದ್ದೆಗಳವು. ಐಎಎಸ್, ಐಪಿಎಸ್, ಐಎಫ್‌ಎಸ್ ಹುದ್ದೆಗಳ ಅಧಿಕಾರ ವ್ಯಾಪ್ತಿ, ಸಂಬಳದ ಆಕರ್ಷಣೆ ಸಾಮಾನ್ಯವಾದದ್ದಲ್ಲ. ಈ ಹುದ್ದೆಗಳಿಗಾಗಿ ಯುವಜನರು ಮುಗಿಬೀಳುತ್ತಾರೆ. ಪ್ರತೀ ವರ್ಷ ನಡೆಯುವ ಈ ಹುದ್ದೆಗಳ ಪರೀಕ್ಷೆಗಳಿಗಾಗಿ ಅರ್ಜಿಗಳನ್ನು 'ಕೇಂದ್ರ ಲೋಕಸೇವಾ ಆಯೋಗ' ಕರೆದಿದೆ. ೩೧ರ ಮೇ '೯೮ರಂದು ನಡೆಯಲಿರುವ ಪೂರ್ವಭಾವಿ ಪರೀಕ್ಷೆಗಳಿಗಾಗಿ ದೇಶದಾದ್ಯಂತ ಇರುವ ೪೧ ಪರೀಕ್ಷಾ ಕೇಂದ್ರಗಳು ಸಿದ್ಧವಾಗುತ್ತಿವೆ. ಕರ್ನಾಟಕದಲ್ಲಿ ಬೆಂಗಳೂರು ಮತ್ತು ಧಾರವಾಡದಲ್ಲಿ ಪರೀಕ್ಷಾ ಕೇಂದ್ರವಿದೆ.

ಭಾರತೀಯ ಆಡಳಿತ ಸೇವೆಯಿಂದ ಮೊದಲ್ಗೊಂಡು ಭಾರತೀಯ ಪೊಲೀಸ್ ಸೇವೆ, ಭಾರತೀಯ ವಿದೇಶೀ ಸೇವೆಯಲ್ಲದೆ, ಅನೇಕ ಸಾರ್ವಜನಿಕ ಸೇವಾ ಹುದ್ದೆಗಳಿದ್ದು, ಒಟ್ಟು ಹುದ್ದೆಗಳು ಸುಮಾರು ೭೪೦.

### ಸಾಮಾನ್ಯ ಅರ್ಹತೆ

ಭಾರತೀಯ ಆಡಳಿತ ಸೇವೆ ಮತ್ತು ಪೊಲೀಸ್ ಸೇವೆಗೆ ಸೇರಲಿಚ್ಛಿಸುವವರು ಭಾರತೀಯನಾಗಿರಬೇಕು. ಉಳಿದ ಸೇವೆಗಳಿಗೆ ಆತ ಭಾರತದ ಪ್ರಜೆಯಾಗಿರಬೇಕು ಇಲ್ಲವೇ ನೇಪಾಳ, ಭೂತಾನ್ ಅಥವಾ ೧೯೬೨ಕ್ಕೆ ಮೊದಲು ವಲಸೆ ಬಂದ ಟಿಬೆಟ್‌ನವನಾಗಿರಬೇಕು.

### ವಿದ್ಯಾರ್ಹತೆ

ವಿಶ್ವವಿದ್ಯಾನಿಲಯವೊಂದರ ಪದವಿ ಇಲ್ಲವೇ ತತ್ಸಮಾನ ಅರ್ಹತೆ.

### ವಯಸ್ಸು

೨೧ ವರ್ಷವನ್ನು ದಾಟಿದ ಮತ್ತು ೧-೮-೯೮ಕ್ಕೆ ೨೮ ವರ್ಷ ಮೀರದ ವ್ಯಕ್ತಿಗಳು ಅರ್ಜಿ ಸಲ್ಲಿಸಲು ಅರ್ಹರು. ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಅಭ್ಯರ್ಥಿಗಳಿಗೆ ೫ ವರ್ಷ, ಜಮ್ಮು ಮತ್ತು ಕಾಶ್ಮೀರದ ಅಭ್ಯರ್ಥಿಗಳಿಗೆ ೫ ವರ್ಷ, ಅದೇ ಪ್ರದೇಶದ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಅಭ್ಯರ್ಥಿಗಳಿಗೆ ೧೦ ವರ್ಷ, ರಕ್ಷಣಾ ಸೇವೆಯಲ್ಲಿರುವವರಿಗೆ ೩ ವರ್ಷ ಮತ್ತು ರಕ್ಷಣಾ ಸೇವೆಯಲ್ಲಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಅಭ್ಯರ್ಥಿಗಳಿಗೆ ೮ ವರ್ಷ-ವಯಸ್ಸಿನ ಮಿತಿಯಲ್ಲಿ ರಿಯಾಯಿತಿ ಇದೆ.

ಸಾಮಾನ್ಯ ಅಭ್ಯರ್ಥಿಗಳಿಗೆ ಪರೀಕ್ಷೆ ತೆಗೆದುಕೊಳ್ಳಲು ೪ ಅವಕಾಶಗಳಿದ್ದು, ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ನೀಡುವ ಅವಕಾಶಕ್ಕೆ ಮಿತಿ ಇಲ್ಲ. ಇತರೆ ಹಿಂದುಳಿದ ವರ್ಗದ ಅಭ್ಯರ್ಥಿಗಳು ಗರಿಷ್ಠ ೭ ಪ್ರಯತ್ನಗಳಲ್ಲಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕು.

**ವಿ.ಸೂ : ಓದುಗರ ಅನುಕೂಲಕ್ಕಾಗಿ ೪೨-೪೩ನೇ ಪುಟದಲ್ಲಿ IAS ಅರ್ಜಿ ಫಾರ್ಮ್ ಮುದ್ರಿಸಿದ್ದೇವೆ.**

### ಆಯ್ಕೆಯ ವಿಧಾನ

ಸಾರ್ವಜನಿಕ ಸೇವೆಗಾಗಿ ಅಭ್ಯರ್ಥಿಯ ಆಯ್ಕೆ ೨ ಹಂತಗಳಲ್ಲಿ ಆಗುವಂತದ್ದು.

**I ಪೂರ್ವಭಾವಿ ಪರೀಕ್ಷೆ :** ಪೂರ್ವಭಾವಿ ಪರೀಕ್ಷೆಯಲ್ಲಿ ೨ ಪ್ರಶ್ನೆಪತ್ರಿಕೆಗಳಿರುತ್ತವೆ. ೧೫೦ ಅಂಕದ ಸಾಮಾನ್ಯ ಅಧ್ಯಯನ ಪತ್ರಿಕೆಯ ಅಭ್ಯರ್ಥಿಯ ಸಾಮಾನ್ಯ ಜ್ಞಾನ, ಸಾಮಾನ್ಯ ವಿಜ್ಞಾನ, ಭಾರತದ ಚರಿತ್ರೆ, ದೇಶ/ವಿದೇಶದ ಪ್ರಚಲಿತ ವಿದ್ಯಮಾನಗಳು, ಜಾಗತಿಕ ಭೂಗೋಳ ಶಾಸ್ತ್ರ, ಭಾರತದ ರಾಜಕೀಯ ಮತ್ತು ಆರ್ಥಿಕ ಪರಿಸ್ಥಿತಿ, ಭಾರತದ ಸ್ವಾತಂತ್ರ್ಯ ಆಂದೋಳನ ಮತ್ತು ಸಾಮಾನ್ಯ ಬೌದ್ಧಿಕ ಸಾಮರ್ಥ್ಯವನ್ನು ಪರೀಕ್ಷಿಸುವ ಪ್ರಶ್ನೆಗಳನ್ನೊಳಗೊಂಡಿರುತ್ತದೆ.

ಪರೀಕ್ಷೆಯ ಕಾಲಾವಧಿ ೨ ಗಂಟೆ.

ಅಭ್ಯರ್ಥಿಯು ತಾನು ಅಧ್ಯಯನ ಮಾಡಿದ ವಿಷಯದ ಮೇಲೆ ೩೦೦ ಅಂಕಗಳನ್ನುಳ್ಳ ಪತ್ರಿಕೆಯನ್ನು ಉತ್ತರಿಸಬೇಕು. ಆತ ಆಯ್ದುಕೊಳ್ಳಬಹುದಾದ ವಿಷಯಗಳು -

೧. ಪಶುಸಂಗೋಪನೆ ಮತ್ತು ಪಶುವೈದ್ಯ ಶಾಸ್ತ್ರ ೨. ಕೃಷಿ, ೩. ಸಿವಿಲ್ ತಂತ್ರಜ್ಞಾನ, ೪. ಸಸ್ಯಶಾಸ್ತ್ರ ೫. ರಸಾಯನ ಶಾಸ್ತ್ರ ೬. ವಾಣಿಜ್ಯ ಶಾಸ್ತ್ರ ೭. ಅರ್ಥಶಾಸ್ತ್ರ ೮. ವಿದ್ಯುಚ್ಛಕ್ತಿ ತಂತ್ರಜ್ಞಾನ, ೯. ಭೂಗೋಳ, ೧೦. ಭೂಗರ್ಭಶಾಸ್ತ್ರ ೧೧. ಭಾರತದ ಚರಿತ್ರೆ, ೧೨. ಕಾನೂನು, ೧೩. ಗಣಿತ, ೧೪. ಯಾಂತ್ರಿಕ ತಂತ್ರಜ್ಞಾನ, ೧೫. ವೈದ್ಯಕೀಯ ಶಾಸ್ತ್ರ ೧೬. ತತ್ವಶಾಸ್ತ್ರ ೧೭. ಭೌತಶಾಸ್ತ್ರ ೧೮. ರಾಜಕೀಯ ಶಾಸ್ತ್ರ ೧೯. ಮನೋವಿಜ್ಞಾನ, ೨೦. ಸಾರ್ವಜನಿಕ ಆಡಳಿತ, ೨೧. ಸಮಾಜ ಶಾಸ್ತ್ರ ೨೨. ಸಂಖ್ಯಾಶಾಸ್ತ್ರ ೨೩. ಪ್ರಾಣಶಾಸ್ತ್ರ

ಈ ಪತ್ರಿಕೆಯ ಕಾಲಾವಧಿ ೨ ಗಂಟೆ.

ಎರಡೂ ಪ್ರಶ್ನೆಪತ್ರಿಕೆಗಳಲ್ಲಿ ಬಹು ಆಯ್ಕೆಯ ಪ್ರಶ್ನೆಗಳಿರುತ್ತವೆ. ಪತ್ರಿಕೆಯ ಭಾಷೆ ಹಿಂದಿ ಅಥವಾ ಇಂಗ್ಲೀಷ್. ಪ್ರತೀ ಪತ್ರಿಕೆಯ ಮಟ್ಟ ಪದವಿಯ ಪಠ್ಯಕ್ರಮವನ್ನು ಆಧರಿಸಿರುತ್ತದೆ.

**II ಮುಖ್ಯ ಪರೀಕ್ಷೆ :** ಪೂರ್ವಭಾವಿ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಯು ಮುಖ್ಯ ಪರೀಕ್ಷೆಗೆ ಅರ್ಹನಾಗುತ್ತಾನೆ. ಮುಖ್ಯ ಪರೀಕ್ಷೆಯ ೯ ಪತ್ರಿಕೆಗಳನ್ನು ಒಳಗೊಂಡಿರುತ್ತದೆ.

**(a) ಭಾಷೆ :** ಸಂವಿಧಾನದ ೮ನೇ ಷೆಡ್ಯೂಲಿನಲ್ಲಿರುವ ಯಾವುದಾದರೊಂದು ಭಾಷೆಯನ್ನು (ಅಸ್ಸಾಮಿ, ಬೆಂಗಾಳಿ, ಗುಜರಾತಿ, ಹಿಂದಿ, ಕನ್ನಡ, ಕಾಶ್ಮೀರಿ, ಕೊಂಕಣಿ, ಮಲೆಯಾಳಂ, ಮಣಿಪುರಿ, ಮರಾಠಿ, ನೇಪಾಳಿ, ಒರಿಯಾ, ಪಂಜಾಬಿ, ಸಂಸ್ಕೃತ, ಸಿಂಧಿ, ತಮಿಳು, ತೆಲುಗು ಮತ್ತು ಉರ್ದು) ಅಭ್ಯರ್ಥಿಯು ಆಯ್ದುಕೊಂಡು, ೩೦೦ ಅಂಕಗಳ ಪತ್ರಿಕೆಯನ್ನು ಉತ್ತರಿಸಬೇಕು.


**(b)** ೩೦೦ ಅಂಕಗಳ ಇಂಗ್ಲೀಷ್ ಪತ್ರಿಕೆ.

**(c)** ೨೦೦ ಅಂಕಗಳ ಪ್ರಬಂಧ ಬರಹ

**(d)** ೪ ಮತ್ತು ೫ನೇ ಪತ್ರಿಕೆ ಸಾಮಾನ್ಯ ಅಧ್ಯಯನದ ಪತ್ರಿಕೆಗಳು - ಪ್ರತೀ ಪತ್ರಿಕೆಗೂ ೩೦೦ ಅಂಕಗಳು

**(e)** ೬, ೭, ೮ ಮತ್ತು ೯ - ಇವು ಅಭ್ಯರ್ಥಿ ಆಯ್ದುಕೊಂಡ ೨ ವಿಷಯಗಳಲ್ಲಿನ ೪ ಪತ್ರಿಕೆಗಳು (ಪ್ರತೀ ವಿಷಯಕ್ಕೂ ೨ ಪತ್ರಿಕೆಗಳಂತೆ) ಒಟ್ಟು ೧೨೦೦ ಅಂಕಗಳು.

ಅಭ್ಯರ್ಥಿಯು-ಕೃಷಿ, ಪಶುಸಂಗೋಪನೆ ಮತ್ತು ಪಶುವೈದ್ಯಶಾಸ್ತ್ರ, ಪೌರಾತ್ವಶಾಸ್ತ್ರ, ಸಸ್ಯಶಾಸ್ತ್ರ, ರಸಾಯನಶಾಸ್ತ್ರ, ಸಿವಿಲ್ ತಂತ್ರಜ್ಞಾನ, ವಾಣಿಜ್ಯ ಮತ್ತು ಲೆಕ್ಕಶಾಸ್ತ್ರ ಅರ್ಥಶಾಸ್ತ್ರ ವಿದ್ಯುತ್ ತಂತ್ರಜ್ಞಾನ, ಭೂಗರ್ಭಶಾಸ್ತ್ರ ಭೂಗೋಳ, ಚರಿತ್ರೆ, ಕಾನೂನು, ಮ್ಯಾನೇಜ್



ಮೆಂಟ್, ಗಣಿತ, ಯಾಂತ್ರಿಕ ತಂತ್ರಜ್ಞಾನ, ವೈದ್ಯಶಾಸ್ತ್ರ ತತ್ವಶಾಸ್ತ್ರ ಭೌತಶಾಸ್ತ್ರ ರಾಜಕೀಯ ಶಾಸ್ತ್ರ ಮತ್ತು ಅಂತರಾಷ್ಟ್ರೀಯ ಸಂಬಂಧ, ಮನಶಾಸ್ತ್ರ ಸಾರ್ವಜನಿಕ ಆಡಳಿತ, ಸಮಾಜಶಾಸ್ತ್ರ, ಸಂಖ್ಯಾಶಾಸ್ತ್ರ ಪ್ರಾಣಿಶಾಸ್ತ್ರ ಮತ್ತು ೨೬ ಭಾಷೆಗಳಲ್ಲಿ ಯಾವುದಾದರೊಂದು ಭಾಷೆಯ ಸಾಹಿತ್ಯ - ಈ ವಿಷಯಗಳಲ್ಲಿ ಯಾವುದಾದರೂ ೨ ವಿಷಯಗಳನ್ನು ಆಯ್ದುಕೊಳ್ಳಬಹುದು.

ಮೇಲಿನ ಎಲ್ಲ ಪತ್ರಿಕೆಗಳಲ್ಲಿನ ಪ್ರಶ್ನೆಗಳಿಗೆ ಪ್ರಬಂಧರೂಪದ ಉತ್ತರವನ್ನು ನೀಡಬೇಕು. ೩ ಗಂಟೆ ಅವಧಿಯ ಪ್ರಶ್ನೆಪತ್ರಿಕೆಗಳನ್ನು (ಪತ್ರಿಕೆ ೧ ಮತ್ತು ೨ನ್ನು ಬಿಟ್ಟು) ಇಂಗ್ಲಿಷ್ ಅಥವಾ ೮ನೇ ಷೆಡ್ಯೂಲಿನಲ್ಲಿರುವ ಯಾವುದೇ ಭಾಷೆಯಲ್ಲಿ ಉತ್ತರಿಸಬಹುದು. **ಕನ್ನಡದಲ್ಲಿ ಉತ್ತರಿಸಿ ಯಶಸ್ವಿಯಾಗಿರುವ ಅಭ್ಯರ್ಥಿಗಳು ಇದ್ದಾರೆ.** ಭಾಷೆಯ ಪತ್ರಿಕೆಗಳನ್ನು ಹೊರತುಪಡಿಸಿದರೆ ಉಳಿದೆಲ್ಲ ಪತ್ರಿಕೆಗಳು ಇಂಗ್ಲಿಷ್ ಅಥವಾ ಹಿಂದಿಯಲ್ಲಿರುತ್ತವೆ.

**III ಸಂದರ್ಶನ :** ಮುಖ್ಯಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳನ್ನು ಮೌಖಿಕ ಸಂದರ್ಶನಕ್ಕೆ ಕರೆಯಲಾಗುತ್ತದೆ. ಅಭ್ಯರ್ಥಿಯ ಆಸಕ್ತಿ, ಸಾಮಾನ್ಯ ವಿಷಯಗಳ ಬಗೆಗೆ ಆತನ ಜ್ಞಾನ ಮತ್ತು ಹುದ್ದೆಗೆ ಆತ ಅರ್ಹನೇ ಎನ್ನುವುದನ್ನು ಅಳೆಯಲು ಇರುವ ಸಂದರ್ಶನವು ಪಾಟೀ ಸವಾಲಲ್ಲ, ಬದಲಿಗೆ ಒಂದು ಸಂವಾದ. ಅಭ್ಯರ್ಥಿಯು ಈಗಾಗಲೇ ಪೂರ್ವಭಾವಿ ಮತ್ತು ಮುಖ್ಯ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿ ತನ್ನ ಬುದ್ಧಿಮತ್ತೆಯನ್ನು ಸಾಬೀತುಪಡಿಸಿರುತ್ತಾನೆ. ಅಭ್ಯರ್ಥಿಯ ಮಾನಸಿಕ ಸ್ಥಿರತೆ, ಬೌದ್ಧಿಕ ಏಕಾಗ್ರತೆ, ವಿಷಯವನ್ನು ಆತ ವಿಶ್ಲೇಷಿಸುವ ರೀತಿ, ಆತ ತರ್ಕಬದ್ಧನಾಗಿ/ಪಕ್ಷಾತೀತನಾಗಿ ಯೋಚಿಸಬಲ್ಲನೇ, ಆತನಿಗೆ ನಾಯಕತ್ವದ ಗುಣ/ಸಾಮರ್ಥ್ಯವಿದೆಯೇ, ಆತ ನೈತಿಕವಾಗಿ ಸಮರ್ಥನೋ ಎನ್ನುವುದನ್ನು ಪಕ್ಷಾತೀತರಾದ ಸದಸ್ಯರ ಗುಂಪೊಂದು ಪರೀಕ್ಷಿಸುತ್ತದೆ.

ಇದಕ್ಕಾಗಿ ಮೀಸಲಿಟ್ಟ ಅಂಕಗಳು ೩೦೦.

**ಅರ್ಜಿಶುಲ್ಕ :** ಸಾಮಾನ್ಯ ಅಭ್ಯರ್ಥಿಗಳು ರೂ. ೪೦ನ್ನು ಅಂಚೆ ಕಚೇರಿಯಲ್ಲಿ ದೊರೆಯುವ ಕೇಂದ್ರ ನೇಮಕಾತಿ ಶುಲ್ಕ ಸ್ಟ್ಯಾಂಪ್ ರೂಪದಲ್ಲಿ ನೀಡಬೇಕು. ಬೇರಾವುದೇ ರೂಪದಲ್ಲಿ ಹಣ ನೀಡಬಾರದು. ದೈಹಿಕ ಅಂಗವಿಕಲರು, ಪರಿಶಿಷ್ಟ ವರ್ಗ/ಜಾತಿಗೆ ಸೇರಿದವರು ಯಾವುದೇ ಶುಲ್ಕ ಸಲ್ಲಿಸುವಂತಿಲ್ಲ.

ಮುಖ್ಯಪರೀಕ್ಷೆಗೆ ಆಯ್ಕೆಯಾದ ಅಭ್ಯರ್ಥಿಗಳು ಮತ್ತೊಮ್ಮೆ ರೂ. ೬೦ ಶುಲ್ಕವನ್ನು ನೀಡಬೇಕಾಗುತ್ತದೆ.

**ಅರ್ಜಿ ಸಲ್ಲಿಸುವ ವಿಧಾನ :** ಆಯೋಗವು ನಿಗದಿಪಡಿಸಿದ ಅರ್ಜಿಯನ್ನು (ಎಂಪ್ಲಾಯ್‌ಮೆಂಟ್ ನ್ಯೂಸ್, ೨೯ ನವೆಂಬರ್ -೫ ಡಿಸೆಂಬರ್ '೯೭) ತುಂಬಿ.

"UNDER SECRETARY (CSP)
UNION PUBLIC SERVICE
COMMISSION
DHOLPUR HOUSE
NEW DELHI - 110 011ಗೆ

೧೨-೧-೯೮ರೊಳಗೆ ಕಳಿಸಬೇಕು. ಅರ್ಜಿಯ ಮೇಲೆ "APPLICATION FOR CIVIL SERVICES (PRELIMINARY) EXAMINATIONS '98" ಎಂದು ಸ್ಪಷ್ಟವಾಗಿ ಬರೆಯಬೇಕು.

**ಅರ್ಜಿಯ ಜೊತೆ**

* ೪೦ ರೂ.ನ ನೇಮಕಾತಿ ಶುಲ್ಕ ಸ್ಟ್ಯಾಂಪ್‌ಗಳು
* ಸಹಿ ಹಾಕಿದ ಪಾಸ್‌ಪೋರ್ಟ್ ಅಳತೆಯ (5X7 ಸೆ.ಮೀ.) ಛಾಯಾಚಿತ್ರ.
* ಸ್ವವಿಳಾಸವಿರುವ ರೂ. ೧.೨೫ರ ಅಂಚೆ ಚೀಟಿ ಅಂಟಿಸಿರುವ ಪೋಸ್ಟ್ ಕಾರ್ಡ್.
* ಸ್ವವಿಳಾಸವಿರುವ 11.5X27.5 ಸೆ.ಮೀ.ನ ಉತ್ತಮ ದರ್ಜೆಯ ಲಕೋಟೆಯನ್ನು ಕಳಿಸಬೇಕು.

ಅರ್ಜಿಯನ್ನು ಉತ್ತಮ ದರ್ಜೆಯ ಕಾಗದದ ಮೇಲೆ ಬರೆಯಬೇಕು. ಅರ್ಜಿಯನ್ನು ಚಿತ್ತಿಲ್ಲದೆ, ಸೂಚನೆಗನುಗುಣವಾಗಿ ತುಂಬಬೇಕು. **ಅರ್ಜಿಯ ಜೊತೆ ಯಾವುದೇ ಸರ್ಟಿಫಿಕೇಟ್‌ಗಳನ್ನು ಲಗತ್ತಿಸಬಾರದು.**

**ಗಮನಿಸಬೇಕಾದ್ದು :** ಆಯೋಗ ಈಗ ಕರೆದಿರುವುದು ಪೂರ್ವಭಾವಿ ಪರೀಕ್ಷೆಗೆ ಮಾತ್ರ. ಪೂರ್ವಭಾವಿ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳನ್ನು, ಆನಂತರ ಮುಖ್ಯಪರೀಕ್ಷೆಗೆ ಕರೆಯಲಾಗುತ್ತದೆ. ಆಗ ಅದಕ್ಕೆ ಇನ್ನೊಮ್ಮೆ ಅರ್ಜಿ ಸಲ್ಲಿಸಬೇಕಾಗುತ್ತದೆ.

ಸಿವಿಲ್ ಪರೀಕ್ಷೆಗಳಿಗಾಗಿ ತಯಾರಿ ನಡೆಸಲು ಮಾರುಕಟ್ಟೆಯಲ್ಲಿ ಸಿದ್ಧವಾದ ಗೈಡ್‌ಗಳು ದೊರೆಯುತ್ತವೆ. ಪರಿಶಿಷ್ಟ ಜಾತಿ/ವರ್ಗ ಮತ್ತು ಹಿಂದುಳಿದ ವರ್ಗದ ಅಭ್ಯರ್ಥಿಗಳನ್ನು ಪರೀಕ್ಷೆಗೆ ತರಬೇತಿ ಮಾಡಲು ಸರ್ಕಾರ ವಿಶೇಷ ತರಬೇತಿ ಶಿಬಿರಗಳನ್ನು ನಡೆಸುತ್ತದೆ, ಇಷ್ಟಲ್ಲದೆ ಪ್ರತಿಷ್ಠಿತ ಖಾಸಗಿ ಅಕಾಡೆಮಿಗಳು ತರಬೇತಿ ತರಗತಿಗಳನ್ನು ನಡೆಸುತ್ತವೆ.

ಸಿವಿಲ್ ಹುದ್ದೆಗಳು ವ್ಯಕ್ತಿಯೊಬ್ಬನನ್ನು ಕೀರ್ತಿಯ ಶಿಖರಕ್ಕೆ ಒಯ್ಯಬಲ್ಲವು. ಕಿರಣ್ ಬೇಡಿ, ಟಿ.ಎನ್.ಶೇಷನ್... ಇವರೆಲ್ಲ ಸಿವಿಲ್ ಪರೀಕ್ಷೆಯ ಮೂಲಕ ಆಯ್ಕೆಯಾದವರೇ. ಕೀರ್ತಿ, ಪ್ರತಿಷ್ಠೆಯಲ್ಲದೆ ಜನಪ್ರಿಯತೆಯನ್ನು, ಜನಹಿತ ಕಾರ್ಯಗಳನ್ನು ಮಾಡಿ ದೇಶದ ಋಣ/ಜನರ ಋಣ ತೀರಿಸಲು ಸಾಧ್ಯ ಮಾಡುವ ಈ ಹುದ್ದೆಗಳು ಕಠಿಣ ಪರಿಶ್ರಮ, ಯೋಚನಾ ಶಿಸ್ತು, ತರ್ಕಬದ್ಧ ತೀರ್ಪು, ಸೂಕ್ಷ್ಮ ಗ್ರಹಣ ಶಕ್ತಿ, ಬುದ್ಧಿವಂತಿಕೆ, ಗಾಢ ಸಾಮಾನ್ಯ ಜ್ಞಾನ, ವಿಶಾಲ ಓದನ್ನು ಬಯಸುತ್ತವೆ.

ಇದೆಲ್ಲ ನಿಮ್ಮಿಂದ ಸಾಧ್ಯವಾದಲ್ಲಿ, ನಿಮ್ಮಲ್ಲಿ ಅಂತಹ ಸಾಮರ್ಥ್ಯ ಅಡಗಿದ್ದಲ್ಲಿ ನೀವೂ ಅನೇಕರ ಬದುಕಿನಲ್ಲಿ ಬೆಳಕನ್ನು ತರಬಹುದು.

ಅದು ನಿಮ್ಮ ಶ್ರಮದಿಂದಷ್ಟೇ ಸಾಧ್ಯ!

## ನವೋದಯ ಶಾಲೆಗಳು

- ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸದ ಅವಕಾಶ ಒದಗಿಸಲು ಸ್ಥಾಪನೆಗೊಂಡಿರುವ ನವೋದಯ ಶಾಲೆಗಳ ವೈಶಿಷ್ಟ್ಯವೇನು?
- ನವೋದಯ ಶಾಲೆಗಳಿಗೆ ಯಾರು ಸೇರಬಹುದು? ಪ್ರವೇಶ ಪಡೆಯುವುದು ಹೇಗೆ?
- ಈ ಶಾಲೆಗಳಲ್ಲಿ ಅನುಸರಿಸುವ ಪರೀಕ್ಷಾ ಕ್ರಮ ಎಂತಹದು?

... ಇತ್ಯಾದಿ ಇತ್ಯಾದಿ ಸಂಪೂರ್ಣ ವಿವರಗಳಿಗಾಗಿ

**ಮುಂದಿನ ಸಂಚಿಕೆ ನೋಡಿ !**

CUT HERE NEATLY

# UNION PUBLIC SERVICE COMMISSION

**APPLICATION FORM FOR**
**CIVIL SERVICES (PRELIMINARY)**
**EXAMINATION, 1998**

*(To be filled in by the candidate with ball-point pen)*

| FOR OFFICE USE ONLY | | | | | | |
|---|---|---|---|---|---|---|
| Roll No. | | | | | | |

**NOTE : (i)** THE CANDIDATE IS NOT REQUIRED TO ENCLOSE WITH HIS APPLICATION ANY CERTIFICATE OR COPY THEREOF.

**NOTE : (ii)** THE CANDIDATE SHOULD ENSURE THAT THE APPLICATION FORM USED BY HIM IS EXACTLY IN THE SAME FORMAT AS PRINTED IN THE UPSC ADVERTISEMENT.

**IMPORTANT** : The application form, duly completed, must reach the office of the UPSC on or before **12th January, 1998**. In respect of candidates residing in remote areas/ regions specified in Para 7 of Notice, and whose applications are received by post, the last date is **19th January, 1998**. In case of applications received by hand or courier service, benefit of extended time will NOT be available, regardless of the place of residence of the applicant.

PASTE HERE FIRMLY A SIGNED COPY OF YOUR RECENT PASSPORT SIZE PHOTOGRAPH (approx. 5 cm x 7 cm)

1. Details of Fee Paid: Fee to be paid is Rs. 40. (SC/ST/PH Candidates are not required to pay any fee.)

Space for affixing Central Recruitment Fee Stamps

(Postage/revenue/ court fee stamps etc. are not acceptable)

| Name of the Post Office/ Indian Mission* with complete address | Denominations of Central Recruitment Fee Stamps/ Indian Mission Receipt* | VALUE Rs. |
|---|---|---|
| | | |
| | | |
| | | |
| | Total | |

*Strike off whatever is not applicable.

2. Do you claim Fee remission?
   (i) Answer 'Yes' or 'No'. .................... YES/NO
   (ii) If 'yes', encircle the relevant category. .................... SC/ST/PH.

3. (a) Name (as recorded in Matriculation or equivalent certificate) (in BLOCK CAPITALS in English) Shri/Smt./Kum. ....................

   (b) Address for Correspondence (in BLOCK CAPITALS in English) ....................
   ....................
   .................... (Pin Code) | | | | | | |

   (c) Father's Name (in BLOCK CAPITALS in English) ....................

   (d) If you are a candidate from any one of the areas entitled to additional time e.g. Assam, Meghalaya, etc: indicate clearly the name of the State/UT/area or region from where you are posting your application. ....................

IMPORTANT : PLEASE DO NOT LEAVE ANY COLUMN BLANK.

4. Sex : Write 1, if male; or 2, if female [ ]
5. Centre at which you wish to appear (write the Name of the centre out of th...

CUT HERE NEATLY

CUT HERE NEATLY

6. (a) Date of birth (as recorded in Matriculation or equivalent certificate)

e.g. Write 1st Sep. 1973 as | 0 | 1 | | 0 | 9 | | 1 | 9 | 7 | 3 |

| D | D | M | M | Y | Y | Y | Y |
|---|---|---|---|---|---|---|---|
| | | | | 1 | 9 | | |

(b) Write your date of birth in words e.g. First September Nineteen Seventy three.

........................................................
Date of Birth (in words)

(c) In case you claim age-relaxation, mention relevant provision of Para 4 of the Notice.

........................................................

7. Optional Subject (indicate the name of *only* one Subject out of subjects given in Appendix).

........................................................

8. Write 1 if you have already passed the degree or equivalent Examination; or 2 if you have appeared/appearing.

9. Community : (Indicate your community in words and in code)
Scheduled Caste ..................... 1
Scheduled Tribe ..................... 2
Other Backward Classes (OBCs) ...... 3
Others (General Category) ............ 4

COMMUNITY

| In words | Code |
|---|---|
| | |

NOTE : Candidates belonging to OBCs but coming in the 'Creamy Layer', and thus not being entitled to OBC reservation, should indicate their community as "Others (General Category) .: Code No.4".

10. If you have already appeared at Civil Services (Preliminary) Examination earlier, indicate the year(s) of examination; Otherwise write "NA".

11. (i) If you are a blind candidate, Write (in words)—"BLIND"

........................................................

(ii) If you are not a blind candidate, write—"NA"

NOTE : For the definition of 'Blind', please see General Instructions below Appendix-I, Section II(B).

IMPORTANT : BEFORE SIGNING, PLEASE CHECK YOUR ENTRIES.

12. Certified that entries made above in columns 1 to 11 of this application are true and Correct.

........................................................
*** Signature of candidate (PLEASE SIGN HERE)

## DECLARATION TO BE SIGNED BY THE CANDIDATE

I hereby declare that all statements made in this application are true, complete and correct to the best of my knowledge and belief. In the event of any information being found false or incorrect, or ineligibility being detected before or after the examination, action can be taken against me by the Commission under Rule 14 of the Rules notified in Gazette of India Extraordinary dated 29th November, 1997 and also reproduced in Para 6 of the Notice of the Commission published in Employment News/ Rozgar Samachar dt 29th November, 1997.

I have read the provisions in the Rules and the Notice of the Commission carefully and I hereby undertake to abide by them.

I further declare that I fulfil all the conditions of eligibility regarding Age Limits, Educational Qualifications etc. prescribed for admission to the examination and that I have not exhausted the number of attempts admissible to me under para 4 of the Notice

**I have informed my Head of Office/Department in writing that I am applying for this examination.

Place .................... Date .................... *****Signature of Candidate** ....................

**Name as signed** ....................
(in BLOCK CAPITALS in English)

**Strike off this sentence if not applicable.

***Application not signed by the candidate is liable to rejection

CUT HERE NEATLY

davp 3301(87)97

# ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವಿವಿಧ ಹುದ್ದೆಗಳ ನೇಮಕಾತಿಗಾಗಿ ಅರ್ಜಿ ಆಹ್ವಾನ

**ಕ**ರ್ನಾಟಕ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಹಾಗೂ ಕೆ.ಎಚ್.ಎಸ್.ಡಿ.ಪಿ.ಯಲ್ಲಿ ಖಾಲಿ ಇರುವ ಈ ಕೆಳಗಿನ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಕರೆಯಲಾಗಿದೆ. ಅರ್ಜಿಗಳನ್ನು ದ್ವಿಪ್ರತಿಗಳಲ್ಲಿ ಭಾಗ-೧ರಲ್ಲಿ ಸಲ್ಲಿಸಬೇಕು. ಬೇರೆ ಯಾವುದೇ ನಮೂನೆಯಲ್ಲಿ ಸಲ್ಲಿಸಿದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಅರ್ಜಿ ಫಾರಂಗಳನ್ನು ಸರ್ಕಾರದ ಪುಸ್ತಕ ಮಳಿಗೆಯಿಂದಾಗಲೀ ಅಥವಾ ಸರ್ಕಾರದಿಂದ ಮನ್ನಣೆ ಪಡೆದ ಪುಸ್ತಕದ ಅಂಗಡಿಗಳಿಂದಾಗಲೀ ನಿಗಧಿತ ಶುಲ್ಕ ಕೊಟ್ಟು ಪಡೆಯಬಹುದು. ಅರ್ಜಿ ಸಲ್ಲಿಸಲು ಕಡೆಯ **ದಿನಾಂಕ :** ೦೯-೦೧-೧೯೯೮. ಹುದ್ದೆಯ ಹೆಸರು ಮತ್ತು ವೇತನ ಶ್ರೇಣಿ:

**೧. ಕ್ಷ-ಕಿರಣ ತಂತ್ರಜ್ಞರು :**

(೧೨೮೦-೨೩೭೫), ಹುದ್ದೆಗಳ ಸಂಖ್ಯೆ ೮೭. **ವಿದ್ಯಾರ್ಹತೆ:** ೧. ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಪಾಸಾಗಿರಬೇಕು. ೨. ಸರ್ಕಾರದಿಂದ ಮನ್ನಣೆ ಪಡೆದ ಸಂಸ್ಥೆಯಿಂದ ೧೨ ತಿಂಗಳ ಕ್ಷ-ಕಿರಣ ತಂತ್ರಜ್ಞರ ತರಬೇತಿಯನ್ನು ಯಶಸ್ವಿಯಾಗಿ ಪೂರೈಸಿರಬೇಕು ಅಥವಾ ವಕೇಷನಲ್ ಸ್ಟೇಟ್ ಕೌನ್ಸಿಲ್ ಆಫ್ ಎಜುಕೇಷನ್‌ರವರ ೨ ವರ್ಷದ ಡಿಪ್ಲೋಮಾ ಕೋರ್ಸನ್ನು ಕ್ಷ-ಕಿರಣ ತಂತ್ರದಲ್ಲಿ ಯಶಸ್ವಿಯಾಗಿ ಪೂರೈಸಿರಬೇಕು.

**೨. ಫಾರ್ಮಾಸಿಸ್ಟ್ :**

(೧೨೮೦-೨೩೭೫) ಹುದ್ದೆಗಳ ಸಂಖ್ಯೆ ೪೬೧. **ವಿದ್ಯಾರ್ಹತೆ:** ೧. ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಪಾಸಾಗಿರಬೇಕು. ೨. ಸರ್ಕಾರದ ಅಥವಾ ಸರ್ಕಾರದಿಂದ ಮನ್ನಣೆ ಪಡೆದ ಸಂಸ್ಥೆಯಿಂದ ಡಿಪ್ಲೋಮಾ ಫಾರ್ಮಸಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು.

**೩. ಎಲೆಕ್ಟ್ರಿಷಿಯನ್ :**

(೧೦೪೦-೧೯೦೦), ಹುದ್ದೆಗಳ ಸಂಖ್ಯೆ ೬. **ವಿದ್ಯಾರ್ಹತೆ:** ೧. ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಪಾಸಾಗಿರಬೇಕು. ೨. ಎಲೆಕ್ಟ್ರಿಕಲ್ ಇಂಜನಿಯರಿಂಗ್‌ನಲ್ಲಿ ಸರ್ಟಿಫಿಕೆಟ್ ಪಡೆದಿರಬೇಕು ಅಥವಾ ತತ್ಸಮಾನ ವಿದ್ಯಾರ್ಹತೆ ಇರಬೇಕು.

**೪. ಕಿರಿಯ ಆರೋಗ್ಯ ಸಹಾಯಕ ಪುರುಷರು :**

(೧೨೮೦-೨೩೭೫) ಹುದ್ದೆಗಳ ಸಂಖ್ಯೆ ೨೪೨. **ವಿದ್ಯಾರ್ಹತೆ:** ೧. ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು ಹಾಗೂ ಸರ್ಕಾರದಿಂದ ಅಂಗೀಕೃತವಾದ ಸಂಸ್ಥೆಯಿಂದ ನಡೆಸುವ ವಿವಿದೋದ್ದೇಶ ಆರೋಗ್ಯ ಕಾರ್ಯಕರ್ತರ (ಪುರುಷರ) ತರಬೇತಿಯನ್ನು ಯಶಸ್ವಿಯಾಗಿ ಪೂರೈಸಿರಬೇಕು ಅಥವಾ ಆರೋಗ್ಯ ಪರಿವೀಕ್ಷಕರ ತರಬೇತಿಯನ್ನು ಪಡೆದಿರಬೇಕು ಅಥವಾ ಸ್ಟೇಟ್ ಕೌನ್ಸಿಲ್ ಆಫ್ ವಕೇಷನಲ್ ಎಜುಕೇಷನ್‌ರವರಿಂದ ಮನ್ನಣೆ ಪಡೆದ ವೃತ್ತಿ ಶಿಕ್ಷಣ ತರಬೇತಿಯ ಡಿಪ್ಲೋಮಾ ಕೋರ್ಸನ್ನು ವಿವಿದೋದ್ದೇಶ ಆರೋಗ್ಯ ಕಾರ್ಯಕರ್ತರ (ಪುರುಷರ) ಕೋರ್ಸ್‌ನಲ್ಲಿ ಪಡೆದಿರಬೇಕು.

**೫. ಕಿರಿಯ ಪ್ರಯೋಗಾಲಯ ತಂತ್ರಜ್ಞರು :**

(೧೨೮೦-೨೩೭೫), ಹು.ಸ.: ೨೩೬. **ವಿದ್ಯಾರ್ಹತೆ:** ೧. ರಸಾಯನ ಶಾಸ್ತ್ರವನ್ನು ಒಂದು ವಿಷಯವನ್ನಾಗಿ ತೆಗೆದುಕೊಂಡು ಪದವಿಪೂರ್ವ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ೨. ೧೨ ತಿಂಗಳ ಅಥವಾ ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯಿಂಧ ಹೆಚ್ಚಿನ ಅವಧಿಗಾಗಿ ಪ್ರಯೋಗಶಾಲಾ ತಾಂತ್ರಿಕ ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಬಗ್ಗೆ ಪ್ರಮಾಣ ಪತ್ರವನ್ನು ಹೊಂದಿರತಕ್ಕದ್ದು. ಅಥವಾ ಕರ್ನಾಟಕದಲ್ಲಿ ವೃತ್ತಿಪರ ಶಿಕ್ಷಣ ಪರೀಕ್ಷೆಗೆ ಸಂಬಂಧಪಟ್ಟಂತೆ ರಾಜ್ಯ ಪರಿಷತ್ತಿನಿಂದ ನೀಡಿದ ಪದವಿಪೂರ್ವ ಡಿಪ್ಲೋಮಾ ಪ್ರಮಾಣ ಪತ್ರವನ್ನು ಹೊಂದಿರತಕ್ಕದ್ದು.

**೬. ಪ್ಯಾರಾ ಮೆಡಿಕಲ್ ವರ್ಕರ್ಸ್ :**

(೧೦೪೦-೧೯೫೦), ಹು.ಸ.: ೧೩೮. **ವಿದ್ಯಾರ್ಹತೆ:** ೧. ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು. ೨. ಸಾರ್ವಜನಿಕರ ಆರೋಗ್ಯ ವಿಷಯದಲ್ಲಿ ಪರಿಜ್ಞಾನ ಇರುವಂತವರಿಗೆ ಪ್ರಾಶಸ್ತ್ಯ ಕೊಡಲಾಗುವುದು. ಅನುಭವ ಪ್ರಮಾಣಪತ್ರ ಲಗತ್ತಿಸಬೇಕು.

**ವಯೋಮಿತಿ:** ೧. ಕನಿಷ್ಟ ವಯಸ್ಸು: ೧೮ ವರ್ಷಗಳು. ಗರಿಷ್ಟ ವಯಸ್ಸು ಪರಿಶಿಷ್ಟ ಜಾತಿ, ಪಂಗಡ ಮತ್ತು ಪ್ರವರ್ಗ ೧ಕ್ಕೆ ಸೇರಿದ ಅಭ್ಯರ್ಥಿಗಳಿಗೆ ೩೮ ವರ್ಷಗಳು. ೨ಎ, ೨ಬಿ, ೩ಎ ಮತ್ತು ೩ಬಿ ಪ್ರವರ್ಗಗಳಿಗೆ ೩೬ ವರ್ಷಗಳು ಮತ್ತು ಇತರ ವರ್ಗಗಳಿಗೆ ೩೩ ವರ್ಷಗಳು (ಸಾಮಾನ್ಯ ಅಭ್ಯರ್ಥಿ). ೨. **ಅರ್ಜಿ ಶುಲ್ಕ:** ಅಭ್ಯರ್ಥಿಗಳು ತಮ್ಮ ಅರ್ಜಿಯ ಜೊತೆ ಶುಲ್ಕ ೫-೦೦ ರೂ.ಗಳ ಪೋಸ್ಟಲ್ ಆರ್ಡರನ್ನು ಸದಸ್ಯ ಕಾರ್ಯದರ್ಶಿ ಇಲಾಖಾ ನೇಮಕಾತಿ ಸಮಿತಿ ಇವರಿಗೆ ಮೇಲ್ಕಂಡ ವಿಳಾಸಕ್ಕೆ ಪಾವತಿಯಾಗುವಂತೆ ಕಳುಹಿಸಿಕೊಡಬೇಕು. ಸ್ಥಳೀಯ ಅಭ್ಯರ್ಥಿ ಮತ್ತು ಸ್ಪೈಫಂಡರಿ ಸದಸ್ಯ ಕಾರ್ಯದರ್ಶಿ ಇಲಾಖಾ ನೇಮಕಾತಿ ಸಮಿತಿ ಇವರಿಗೆ ಮೇಲ್ಕಂಡ ವಿಳಾಸಕ್ಕೆ ಪಾವತಿಯಾಗುವಂತೆ ಕಳುಹಿಸಿಕೊಡಬೇಕು. ಸ್ಥಳೀಯ ಅಭ್ಯರ್ಥಿ ಮತ್ತು ಸ್ಟೈಫಂಡರಿ ಪದವೀಧರ ಅಭ್ಯರ್ಥಿಗಳಿಗೆ ಶುಲ್ಕ ೧-೦೦ ರೂ. ಮಾತ್ರ. ಪರಿಶಿಷ್ಟ ಜಾತಿ:ಪಂಗಡ ಹಾಗೂ ಪ್ರವರ್ಗ-೧ಕ್ಕೆ ಸೇರಿದ ಅಭ್ಯರ್ಥಿಗಳಿಗೆ ಶುಲ್ಕ ಇರುವುದಿಲ್ಲ. ಅರ್ಜಿಯ ದಿನಾಂಕಕ್ಕೆ ಹಿಂದಿನ ಹದಿನೈದು ದಿವಸಗಳಿಗಿಂತ ಮುಂಚೆ ಪಡೆದ ಪೋಸ್ಟಲ್ ಆರ್ಡರ್‌ಗಳನ್ನು ಪರಿಗಣಿಸಲಾಗುವುದಿಲ್ಲ. ೩. **ಸರ್ಟಿಫಿಕೇಟ್:** ಅಭ್ಯರ್ಥಿಗಳು ಅರ್ಜಿ ಫಾರಂ ಜೊತೆ ಅರ್ಹತಾತ್ಮಕ ಪರೀಕ್ಷೆಗಳ ಅಂಕಪಟ್ಟಿಗಳ ನಕಲನ್ನು ಲಗತ್ತಿಸಬೇಕು ಹಾಗೂ ವಕೇಷನಲ್ ಎಜುಕೇಷನ್‌ನಲ್ಲಿ ಪಿ.ಯು.ಸಿ. ಡಿಪ್ಲೋಮಾ ಕೋರ್ಸ್ ಪಡೆದ ಅಭ್ಯರ್ಥಿಗಳು ಎಲ್ಲಾ ನಕಲು ಪಟ್ಟಿಗಳನ್ನು (ವರ್ಷಾವಾರು) ಹಾಕಿ ವಕೇಷನಲ್ ಎಜುಕೇಷನ್‌ನವರು ನೀಡಿದ ಅಂತ್ಯದ ಯೋಗ್ಯತಾ ಪತ್ರವನ್ನು ಸಹಾ ಹಾಕಬೇಕು. ಅಂತ್ಯದ ಯೋಗ್ಯತಾ ಪತ್ರವನ್ನು ಲಗತ್ತಿಸದೇ ಇರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಅರ್ಜಿಯನ್ನು ಹಾಕುವಾಗಲೇ ಸಂಪೂರ್ಣವಾಗಿ ಎಲ್ಲಾ ಪತ್ರಗಳನ್ನು ಹಾಕಬೇಕು.

ತಡವಾಗಿ ನೀಡಿದ ಪ್ರಮಾಣಪತ್ರಗಳನ್ನು ಪರಿಗಣಿಸಲಾಗುವುದಿಲ್ಲ. ಅರ್ಜಿಗಳ ಜೊತೆ ಪ್ರಮಾಣಪತ್ರಗಳ ನಕಲನ್ನು ಮಾತ್ರ ಲಗತ್ತಿಸಿ ಮೂಲ ಪ್ರತಿಗಳನ್ನು ಸಂದರ್ಶನದ ವೇಳೆಯಲ್ಲಿ ಪರಿಶೀಲನೆಗಾಗಿ ಸಲ್ಲಿಸುವುದು. ೪. **ಜಾತಿಪತ್ರ:** ಮೀಸಲಾತಿ ಕೋರಿ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಯಾವ ಗುಂಪಿಗೆ ಮತ್ತು ಜಾತಿಯ ಕ್ರಮಸಂಖ್ಯೆಗೆ ಸೇರಿದವರೆಂದು ದೃಢೀಕರಣ ಪತ್ರವನ್ನು ಸಂಬಂಧಪಟ್ಟ ತಹಶೀಲ್ದಾರ್‌ರವರಿಂದ ಪಡೆದು ಸಲ್ಲಿಸಬೇಕು. ೫. **ಮಾಜಿ ಸೈನಿಕರುಗಳಿಗೆ:** ಸರ್ಕಾರದ ನಿಯಮಾವಳಿಗಳ ಪ್ರಕಾರ ಆಯ್ಕೆ ಮಾಡಲಾಗುವುದು. ೬. **ಗ್ರಾಮಾಂತರ ಪ್ರದೇಶದ ಸರ್ಟಿಫಿಕೇಟ್:** ಗ್ರಾಮಾಂತರ ಪ್ರದೇಶದ ಅಭ್ಯರ್ಥಿಗಳಿಗೆ ಹೆಚ್ಚುವರಿ ಅಂಕವನ್ನು ಪಡೆಯಬೇಕಾದಲ್ಲಿ ಅಸಿಸ್ಟೆಂಟ್ ಎಜುಕೇಷನ್ ಆಫೀಸರ್‌ರವರಿಂದ ಮರುಸಹಿ ಮಾಡಲ್ಪಟ್ಟ ಪ್ರಮಾಣಪತ್ರವನ್ನು ಲಗತ್ತಿಸಬೇಕು. ಇಂತಹ ಯೋಗ್ಯತಾ ಪತ್ರವಿಲ್ಲದಿದ್ದಲ್ಲಿ ಅಂತಹವರಿಗೆ ಹೆಚ್ಚುವರಿ ಅಂಕಗಳನ್ನು ನೀಡಲಾಗುವುದಿಲ್ಲ. ಕಿರಿಯ ಆರೋಗ್ಯ ಸಹಾಯಕರು, ಕಿರಿಯ ಪ್ರಯೋಗಶಾಲಾ ತಂತ್ರಜ್ಞರು ಹಾಗೂ ಪ್ಯಾರಾ ಮೆಡಿಕಲ್ ವರ್ಕರ್ಸ್ ಹುದ್ದೆಗಳಿಗೆ ೧೯೯೪ರಲ್ಲಿ ಈಗಾಗಲೇ ಅರ್ಜಿ ಹಾಕಿರುವ ಅಭ್ಯರ್ಥಿಗಳು ಹೊಸ ಅರ್ಜಿಗಳನ್ನು ಹಾಕಬೇಕು. ಅದರಲ್ಲಿ ಮತ್ತೆ ಪೋಸ್ಟಲ್ ಆರ್ಡರ್‌ಗಳನ್ನು ಹಾಕಬೇಕಾಗುವುದಿಲ್ಲ. ಆದರೆ ಹಿಂದೆ ಲಗತ್ತಿಸಿದ್ದ ಪೋಸ್ಟಲ್ ಆರ್ಡರ್ ನಂಬರನ್ನು ಅರ್ಜಿಗಳಲ್ಲಿ ನಮೂದಿಸತಕ್ಕದ್ದು. ಅಭ್ಯರ್ಥಿಗಳು ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ೨ ಭಾವಚಿತ್ರಗಳನ್ನು ತಮ್ಮ ಸಹಿಯೊಡನೆ ಅರ್ಜಿ ಮೇಲೆ ಲಗತ್ತಿಸಿರಬೇಕು. ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಪಡೆಯಬಹುದು.

**ವಿಳಾಸ:** ಸದಸ್ಯ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ,
ಇಲಾಖಾ ನೇಮಕಾತಿ ಸಮಿತಿ, ಆನಂದರಾವ್ ವೃತ್ತ,
ಬೆಂಗಳೂರು - ೯.


## ಅಂಚೆ ಮೂಲಕ ಬಿ.ಎಡ್: ಒಂದು ಎಚ್ಚರಿಕೆ!

**ಮಾನ್ಯತೆ ಪಡೆಯದ ಖಾಸಗಿ ಶಿಕ್ಷಣ ಸಂಸ್ಥೆಗಳು ಅಂಚೆ ತೆರಪಿನ ಮೂಲಕ ಬಿ.ಎಡ್. ಕೋರ್ಸ್‌ಗಳಿಗೆ ಅರ್ಜಿ ಆಹ್ವಾನಿಸುತ್ತಿದ್ದು, ಈ ಕಾಲೇಜುಗಳಿಂದ ಪಡೆಯುವ ಪದವಿಗೆ ಮಾನ್ಯತೆ ಇರುವುದಿಲ್ಲ.**

**ಆದ್ದರಿಂದ ಅಂಥ ಕಾಲೇಜುಗಳಿಗೆ ತಮ್ಮ ಮಕ್ಕಳನ್ನು ಕಳುಹಿಸುವುದರ ಬಗ್ಗೆ ಪೋಷಕರು ಎಚ್ಚರ ವಹಿಸುವಂತೆ ರಾಷ್ಟ್ರೀಯ ಶಿಕ್ಷಕ ಶಿಕ್ಷಣ ಮಂಡಳಿಯ ಪ್ರಾದೇಶಿಕ ನಿರ್ದೇಶಕರು ಸೂಚನೆ ನೀಡಿದ್ದಾರೆ.**

**ಮಂಡಳಿಯ ಮಾನ್ಯತೆ ಪಡೆಯದ ಕಾಲೇಜುಗಳಿಂದ ಪಡೆದ ಪದವಿಯನ್ನು ಕೇಂದ್ರ ಅಥವಾ ರಾಜ್ಯ ಸರ್ಕಾರಗಳ ಹಾಗೂ ಮಾನ್ಯತೆ ಪಡೆದ ಇತರ ಶಿಕ್ಷಣ ಸಂಸ್ಥೆಗಳಲ್ಲಿ ಹುದ್ದೆ ನೇಮಕಾತಿಗೆ ಪರಿಗಣಿಸಲಾಗುವುದಿಲ್ಲ.**

**ಹಾಗಾಗಿ ಮಾನ್ಯತೆ ಪಡೆಯದ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆಯುವ ಮುನ್ನ ಅಂತಹ ಸಂಸ್ಥೆಗಳ ಬಗ್ಗೆ ಪೂರ್ಣ ವಿವರವನ್ನು ರಾಷ್ಟ್ರೀಯ ಶಿಕ್ಷಕ ಶಿಕ್ಷಣ ಮಂಡಳಿ, ದಕ್ಷಿಣ ಪ್ರಾದೇಶಿಕ ಕಚೇರಿ, ನಂ. ೬೬, ೬ನೇ ಮುಖ್ಯರಸ್ತೆ, ೪ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-೧೦. (ದೂರವಾಣಿ: ೩೩೦೬೪೯೦) ಇಲ್ಲಿ ಪಡೆಯಲು ಕೋರಲಾಗಿದೆ.**



## ಕೆನಡಾದಲ್ಲಿ ವಿದ್ಯಾವಕಾಶ

ಕೆನಡಾ ದೇಶದ ರೆಜೈನಾ ವಿಶ್ವವಿದ್ಯಾಲಯದ ಮೂಲ ರೆಜೈನಾ ಕಾಲೇಜಿನಲ್ಲಿದ್ದು ಅದು ೧೯೧೧ರಲ್ಲಿ ಮಾನ್ಯತೆ ಪಡೆಯಿತು. ಇತ್ತೀಚಿನ ಕಾಲು ಶತಮಾನದ ಅವಧಿಯಲ್ಲಿ ರೆಜೈನಾ ವಿಶ್ವವಿದ್ಯಾಲಯ ಸಾಕಷ್ಟು ಮಹತ್ವವನ್ನು ಸಂಪಾದಿಸಿದೆ. ಕೆನಡಾದಲ್ಲಿ ಅದೊಂದು ಪ್ರಮುಖ ಸ್ಥಾನವನ್ನು ಪಡೆದಿದೆ. ಸ್ನಾತಕೋತ್ತರ ಪದವಿ ಅಧ್ಯಯನಕ್ಕೆ ಸೌಲಭ್ಯಗಳು ಇಲ್ಲಿ ನಮೂದಿಸಿದ ವಿಷಯಗಳಲ್ಲಿ ಇದೆ - ಆಡಳಿತ, ಶಿಕ್ಷಣ, ಕಲೆ, ಇಂಜನಿಯರಿಂಗ್, ಚಿತ್ರಕಲೆ, ಸಂಗೀತ, ವಿಜ್ಞಾನ, ಸಮಾಜಶಾಸ್ತ್ರ ಇತ್ಯಾದಿ. ಪಿ.ಎಚ್.ಡಿ.ಗಾಗಿ ಸಂಶೋಧನೆಯನ್ನು ಈ ವಿಷಯಗಳಲ್ಲಿ ಮಾಡಬಹುದು. ಜೀವಶಾಸ್ತ್ರ, ಜೀವರಸಾಯನ ಶಾಸ್ತ್ರ, ರಸಾಯನ ಶಾಸ್ತ್ರ, ಕಂಪ್ಯೂಟರ್ ಶಾಸ್ತ್ರ, ಇಂಜನಿಯರಿಂಗ್, ಗಣಿತ ಶಾಸ್ತ್ರ, ಭೌತ ಶಾಸ್ತ್ರ, ಮನಃಶಾಸ್ತ್ರ ಇತ್ಯಾದಿ. ಸಂಶೋಧನ ಮಾರ್ಗದರ್ಶಕರು ಸಾಕಷ್ಟು ಪರಿಣತಿಯನ್ನು ಪಡೆದಿದ್ದು, ಅಪಾರ ಅನುಭವವನ್ನೂ ಪಡೆದಿದ್ದಾರೆ.

ಟಾಫೆಲ್ (TOFEL) ಮತ್ತು ಜಿ.ಆ.ಇ. (Graduate Record Examination) ಪರೀಕ್ಷೆಗಳನ್ನು ತೆಗೆದುಕೊಂಡು ಮೇಲ್ಪಂಕ್ತಿಯಲ್ಲಿ ಉತ್ತೀರ್ಣರಾಗಿದ್ದರೆ, ಪ್ರವೇಶ ಪಡೆಯುವದು ಸುಲಭ; ಸಾಮಾನ್ಯವಾಗಿ, ಪ್ರವೇಶ ಬಯಸುವವರೂ ಆರ್ಥಿಕ ಸಹಾಯ ಸಿಗಬೇಕೆಂದೂ ಬಯಸುತ್ತಾರೆ. ಇದಕ್ಕಾಗಿ ಸ್ಪರ್ಧೆ ಇರುವದರಿಂದ ಅದರಲ್ಲಿ ಪಾಲ್ಗೊಳ್ಳಲೇ ಬೇಕಾಗುತ್ತದೆ. ಬೋಧಕ ಸಹಾಯಕರೆಂದೋ (Teaching Assistantship) ಅಥವಾ ಸಂಶೋಧನ ಸಹಾಯಕರೆಂದೋ (Research Assistantship) ಕೆಲಸ ಮಾಡುವ ಸುಸಂಧಿ ಅನೇಕ ವಿಷಯಗಳ ಮೇಲೆ ಅವಲಂಬಿಸಿದೆ. ಅನೇಕ ದೇಶಗಳಿಂದ ವಿದ್ಯಾರ್ಥಿಗಳು ಪ್ರವೇಶ-ಅರ್ಜಿ ಕಳಿಸುತ್ತಿರುವದರಿಂದ ಪೈಪೋಟಿಯನ್ನು ಯಾರೂ ಅಲಕ್ಷಿಸುವಂತಿಲ್ಲ. ಪ್ರವೇಶ ಮತ್ತು ಆರ್ಥಿಕ ಸಹಾಯಗಳ ಬಗ್ಗೆ ಮಾಹಿತಿ ಲಭ್ಯವಿದ್ದು, ಇಚ್ಛಿಸುವವರು ಡಾ. ನಾರಾಯಣ್ ಮಹಿಷಿಯವರನ್ನು ಭಾರತೀಯ ವಿಜ್ಞಾನ ಸಂಸ್ಥೆ ಅಲಮ್ನೈ ಅಸೋಸಿಯೇಶನ್, ಬೆಂಗಳೂರು-೧೨ ಭೇಟಿ ಮಾಡಬಹುದು.

## ಬಿಜಾಪುರದ ಸೈನಿಕ ಶಾಲೆ

### ೬ನೇ ಮತ್ತು ೯ನೇ ತರಗತಿ ಪ್ರವೇಶ ಪರೀಕ್ಷೆಗಾಗಿ ಅರ್ಜಿ ಆಹ್ವಾನಿಸಲಾಗಿದೆ

೧೯೯೮ನೇ ಸಾಲಿಗಾಗಿ ಪ್ರವೇಶ ಪರೀಕ್ಷೆಯ ಮೂಲಕ ೬ನೇ ಮತ್ತು ೯ನೇ ತರಗತಿ ಪ್ರವೇಶಕ್ಕಾಗಿ ಅರ್ಜಿ ಕರೆಯಲಾಗಿದೆ. ಅರ್ಹತೆ: ೬ನೇ ತರಗತಿಗೆ ವಿದ್ಯಾರ್ಥಿಯು ೦೨ ಜುಲೈ ೮೭ ಮತ್ತು ೦೧ ಜುಲೈ ೮೮ರ ಅವಧಿಯಲ್ಲಿ ಜನಿಸಿರಬೇಕು ಹಾಗೂ ೯ನೇ ತರಗತಿಗೆ ೦೨ ಜುಲೈ ೮೪ ಮತ್ತು ೦೧ ಜುಲೈ ೮೫ರ ಅವಧಿಯಲ್ಲಿ ಜನಿಸಿರಬೇಕು ಹಾಗೂ ಮಾನ್ಯತೆ ಪಡೆದ ಶಾಲೆಯಲ್ಲಿ ೮ನೇ ತರಗತಿ ಓದುತ್ತಿರಬೇಕು. ಪ್ರವೇಶ ಪರೀಕ್ಷೆ : ದಿನಾಂಕ ೧೫ನೇ ಫೆಬ್ರವರಿ ೯೮ರಂದು ರಾಜ್ಯದ ವಿವಿಧ ಕೇಂದ್ರಗಳಲ್ಲಿ ನಡೆಸಲಾಗುವುದು. ವಿವರಣ ಪತ್ರ ಮತ್ತು ಅರ್ಜಿ: ೬ನೇ ತರಗತಿಗಾಗಿ ರೂ. ೧೧೦-೦೦ ಸಾಮಾನ್ಯ ವರ್ಗದವರು ಹಾಗೂ ರೂ. ೮೫-೦೦ ಪ.ಜಾ. ಪ.ಪಂ.ದವರು ಮತ್ತು ೯ನೇ ತರಗತಿಗಾಗಿ ರೂ. ೧೧೫-೦೦ ಸಾಮಾನ್ಯ ವರ್ಗದವರು ಹಾಗೂ ರೂ. ೯೦.೦೦ ಪ.ಜಾ. ಪ.ಪಂ.ದವರು ಅಂಚೆ ಆದೇಶಗಳನ್ನು ಕಳಿಸುವುದರ ಮೂಲಕ ಪ್ರಾಚಾರ್ಯರು, ಸೈನಿಕ ಶಾಲೆ, ಬಿಜಾಪುರ ಇವರಿಂದ ಪಡೆಯಬಹುದು. ಜೊತೆಗೆ ಸ್ವ-ವಿಳಾಸವುಳ್ಳ ರೂ. ೮.೦೦ ಅಂಚೆ ಚೀಟಿ ಲಗತ್ತಿಸಿರ್ಸಿ ಮತ್ತು ೭ ಇಂಚುಗಳುಳ್ಳ ಲಕೋಟೆಯನ್ನು ಕಳಿಸಬೇಕು. ಹಾಗೂ ಮಾಧ್ಯಮವನ್ನು ತಿಳಿಸಬೇಕು. ಅರ್ಜಿ ಕಳಿಸುವ ಕೊನೆಯ ದಿನಾಂಕ : ಪೂರ್ಣ ಭರ್ತಿ ಮಾಡಿದ ಅರ್ಜಿ ಫಾರಂಗಳನ್ನು ೩೧ನೇ ಡಿಸೆಂಬರ್ ೯೭ರ ವರೆಗೆ ಪ್ರಾಚಾರ್ಯರು, ಸೈನಿಕ ಶಾಲೆ, ಬಿಜಾಪುರ - ೫೮೬ ೧೦೨ ಇವರಿಗೆ ತಲುಪುವಂತೆ ಕಳಿಸಬೇಕು.

# ಎಸ್‌ಎಸ್‌ಎಲ್‌ಸಿ ನಂತರ ಏನು?

ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ವೃತ್ತಿಯ ಆಯ್ಕೆ ತುಂಬಾ ಮುಖ್ಯವಾದ ಅಂಶ. ಪ್ರತೀ ವ್ಯಕ್ತಿಯೂ ತನ್ನ ಜೀವನದ ಒಂದು ಹಂತದಲ್ಲಿ ಯಾವುದಾದರೊಂದು ವೃತ್ತಿಯನ್ನು ಆಯ್ದುಕೊಳ್ಳಬೇಕಾಗಿ ಬರುತ್ತದೆ. ವ್ಯಕ್ತಿಯೊಬ್ಬ ಪ್ರತಿಯೊಂದನ್ನು ಆಯ್ದುಕೊಳ್ಳುವುದು ಎರಡು ಅಂಶಗಳನ್ನು ಆಧರಿಸಿ.

೧. **ವೈಯಕ್ತಿಕ ಅಂಶ :** ಉತ್ತೇಜನ, ಆಸಕ್ತಿ, ಬುದ್ಧಿವಂತಿಕೆ, ಶಾಲೆಯಲ್ಲಿ ಅವರ ಸಾಧನೆ, ಸೃಜನಶೀಲತೆ ಮುತ್ತು ಸಾಮಾನ್ಯ ಜ್ಞಾನ.

೨. **ಪಾರಿಸಾರಿಕ ಅಂಶ :** ಕೌಟುಂಬಿಕ ಹಿನ್ನೆಲೆ (ಕುಟುಂಬದ ಸಾಮಾಜಿಕ, ಆರ್ಥಿಕ ಮತ್ತು ವಿದ್ಯಾಭ್ಯಾಸದ ಹಿನ್ನೆಲೆ)

ಹಿಂದೆ ವಿದ್ಯಾರ್ಥಿಗೆ ಇದ್ದದ್ದು ಕೆಲವೇ ಕೆಲವು ಆಯ್ಕೆಗಳು. ವಿಜ್ಞಾನ, ಕಲೆ, ವಾಣಿಜ್ಯ, ವೈದ್ಯಕೀಯ, ತಾಂತ್ರಿಕ ಶಿಕ್ಷಣ. ಆದರೆ ಇಂದು ವಿದ್ಯಾರ್ಥಿಯೊಬ್ಬನಿಗೆ ವಿಪುಲ ಅವಕಾಶಗಳಿವೆ. ಅಷ್ಟೇ ಅಲ್ಲ, ವಿದ್ಯಾರ್ಥಿಗಳು ತಾವೇನಾಗಬೇಕು ಎಂಬುದನ್ನು ಪ್ರಾಥಮಿಕ ಹಂತದಲ್ಲೇ ನಿರ್ಧರಿಸಿ, ಅದಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಾರೆ. ಇದರಿಂದಾಗಿ ವಿದ್ಯಾಕ್ಷೇತ್ರದಲ್ಲಿ ಇಂದು ಅಸಂಖ್ಯಾತ ವಿಷಯಗಳು ಹುಟ್ಟಿಕೊಂಡಿವೆ. ಚಲನಚಿತ್ರ ನಿರ್ಮಾಣ, ಪುಸ್ತಕ ಉತ್ಪಾದನೆ, ಫ್ಯಾಷನ್, ಛಾಯಾಗ್ರಹಣ, ಸಾರ್ವಜನಿಕ ಸಂಪರ್ಕ, ಸಮೂಹ ಸಂವಹನ, ನಾಟಕ ಕಲೆ... ಇವೆಲ್ಲ ಮೊದಲು ಕೇಳಿಯೇ ಇರದ ವೃತ್ತಿಗಳಾಗಿವೆ.

ಪ್ರತೀ ವ್ಯಕ್ತಿ ವೃತ್ತಿಯೊಂದನ್ನು ಆಯ್ದುಕೊಳ್ಳುವುದು ೨ ಹಂತಗಳ ನಂತರ. ಒಂದು ಎಸ್.ಎಸ್.ಎಲ್.ಸಿ. ಅಥವಾ ಪದವಿಪೂರ್ವ ಶಿಕ್ಷಣದ ನಂತರ, ಇಲ್ಲವೇ ಪದವಿ ಮುಗಿಸಿದ ನಂತರ.

ಎಸ್‌ಎಸ್‌ಎಲ್‌ಸಿ ಅಥವಾ ಪದವಿಪೂರ್ವ ಶಿಕ್ಷಣದ ನಂತರ ಇರುವ ಆಯ್ಕೆಗಳು ಅನೇಕ. ಅವುಗಳು-ಹೋಟೆಲ್ ನಿರ್ವಹಣೆ, ಲೆಕ್ಕಪತ್ರ ನಿರ್ವಹಣೆ, ಕಂಪನಿ ಕಾರ್ಯದರ್ಶಿ, ಫ್ಯಾಷನ್ ನಿರ್ಮಾಣ, ಕುಂಭ ಕಲೆ, ಒಳಾಂಗಣ ಕಲ್ಪನೆ, ವಸ್ತ್ರ ಕಲ್ಪನೆ, ರಕ್ಷಣಾ ಸೇವೆ (ರಾಷ್ಟ್ರೀಯ ರಕ್ಷಣಾ ಅಕಾಡೆಮಿಯ ಪರೀಕ್ಷೆಯಲ್ಲಿ ತೇರ್ಗಡೆಯಾದವರಿಗೆ), ವಿದೇಶೀ ಭಾಷಾ ಕಲಿಕೆ, ದೈಹಿಕ ಶಿಕ್ಷಣ, ನಾಟಕ/ನೃತ್ಯ ಕಲೆ, ಖಾಸಗಿ ವಿಮಾನ ಚಾಲನೆ ತರಬೇತಿ, ಗೃಹ ವಿಜ್ಞಾನ, ಪೀಠೋಪಕರಣ ಕಲ್ಪನೆ, ವಿವಿಧ ಪದವಿಗಳು, ತಾಂತ್ರಿಕ ತರಬೇತಿ.

ಪದವಿಪೂರ್ವ ತರಗತಿಯಲ್ಲಿ ವಿಜ್ಞಾನ ವಿಷಯವನ್ನು ಓದಿದವರು-ತಾಂತ್ರಿಕ ಶಿಕ್ಷಣ, ವೈದ್ಯಕೀಯ, ಫಿಸಿಯೋಥೆರಪಿ, ದಂತ ವಿಜ್ಞಾನ, ಅಕ್ಯುಪೇಶನಲ್ ಥೆರಪಿ, ವೈದ್ಯಕೀಯ ಪ್ರಯೋಗಾಲಯ ತಂತ್ರಜ್ಞಾನ, ಕೃಷಿ, ಔಷಧ ಶಾಸ್ತ್ರ, ಗೃಹ ವಿಜ್ಞಾನ, ಶ್ರವಣ ಮತ್ತು ವಾಕ್ ಥೆರಪಿ, ಒಳಾಂಗಣ ಕಲ್ಪನೆ, ಹೈನುಗಾರಿಕಾ ತಂತ್ರಜ್ಞಾನ, ಐಟಿಐ, ನೌಕಾಪಡೆ.... ಇತ್ಯಾದಿ ವೃತ್ತಿಗಳನ್ನು ಆಯ್ದುಕೊಳ್ಳಬಹುದು.

ಈ ಎಲ್ಲ ವಿಷಯಗಳ ಓದು ವಿದ್ಯಾರ್ಥಿಗಳಿಗೆ ಡಿಪ್ಲೊಮಾ ಅಥವಾ ಪದವಿಯನ್ನು ಗಳಿಸಿ ಕೊಡುತ್ತವೆ. ಇದರ ನಂತರ ಅವೇ ವಿಷಯಗಳಲ್ಲೇ ಸ್ನಾತಕೋತ್ತರ ಪದವಿ ಗಳಿಸಬಹುದು. ವಿಜ್ಞಾನವನ್ನು ಆಧರಿಸಿದ ಎಲ್ಲ ಕೋರ್ಸ್‌ಗಳಿಗೆ ಪ್ರವೇಶವು ಒಂದೋ ವಿದ್ಯಾರ್ಥಿ ಗಳಿಸಿದ ಅಂಕಗಳನ್ನು ಆಧರಿಸಿ ಇಲ್ಲವೇ ಪ್ರವೇಶ ಪರೀಕ್ಷೆ ಮೂಲಕ ಆಗುವಂತದ್ದು. ಎಲ್ಲ ವಿದ್ಯಾರ್ಥಿಗಳಿಗೂ (ವಿಜ್ಞಾನ, ಕಲೆ, ವಾಣಿಜ್ಯ) ಪ್ರವೇಶ ಸಿಗುವ ಕೋರ್ಸ್‌ಗಳಿಗೆ ಇರುವ ಪ್ರವೇಶ ಪರೀಕ್ಷೆಗಳಲ್ಲಿ ಸಾಮಾನ್ಯ ಇಂಗ್ಲೀಷ್, ಗಣಿತ, ಸಾಮಾನ್ಯಜ್ಞಾನ ಮೊದಲಾದ ಪತ್ರಿಕೆಗಳಿದ್ದು ಸಂದರ್ಶನದ ನಂತರ ಪ್ರವೇಶ ಸಿಗುತ್ತದೆ.

ಪದವಿ ಮುಗಿಸಿದ ವಿದ್ಯಾರ್ಥಿಗಳಿಗೆ ಮ್ಯಾನೇಜ್‌ಮೆಂಟ್, ಸಮೂಹ ಸಂವಹನಶಾಸ್ತ್ರ, ಬ್ಯಾಂಕ್, ಜೀವವಿಮೆ, ಭಾರತೀಯ ಆಡಳಿತ ಸೇವೆ, ರಾಜ್ಯ ಆಡಳಿತ ಸೇವೆ, ಕಂಪ್ಯೂಟರ್ ಬಳಕೆ, ವಿದೇಶೀ/ಅಂತರಾಷ್ಟ್ರೀಯ ವ್ಯಾಪಾರ, ಸಿದ್ಧ ಉಡುಪು ಉತ್ಪಾದನಾ ತಂತ್ರಜ್ಞಾನ, ಶಿಕ್ಷಣ ಕ್ಷೇತ್ರ, ಚಲನಚಿತ್ರ ಮತ್ತು ದೂರದರ್ಶನ, ರಕ್ಷಣಾ ಸೇವೆ, ಸಮಾಜ ಸೇವೆ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ.... ಹೀಗೆ ಇರುವ ಆಯ್ಕೆಗಳು ಅಗಣಿತ.... ವಿದ್ಯಾರ್ಥಿ ಸ್ನಾತಕೋತ್ತರ ಪದವಿಯ ನಂತರ ಎಂ.ಫಿಲ್. ಅಥವಾ ಡಾಕ್ಟರೇಟ್ ಮಾಡಬಹುದು.

ಇಂದಿನ ಪ್ರಪಂಚದಲ್ಲಿ ಒಂದಕ್ಕಿಂತ ಹೆಚ್ಚು ಅವಕಾಶಗಳಿವೆ. ವಿದ್ಯೆಯ ಗುರಿ ಯಶಸ್ಸು ಮಾತ್ರವಲ್ಲ, ಬದಲಿಗೆ ವಿದ್ಯೆಯು ವ್ಯಕ್ತಿಯೊಬ್ಬನ ಸಂಪೂರ್ಣ ಸಾಮರ್ಥ್ಯವನ್ನು ಹೊರಹಾಕುವಲ್ಲಿ ಸಹಾಯ ಮಾಡಬೇಕು. ವ್ಯಕ್ತಿಯೊಬ್ಬ ತನಗೊಪ್ಪುವ ವೃತ್ತಿಯನ್ನು ಸರಿಯಾದ ಸಮಯದಲ್ಲಿ, ಸರಿಯಾಗಿ ನಿರ್ಣಯಿಸಿ ಆಯ್ದುಕೊಳ್ಳಬೇಕು. ನಿರಂತರ ಕೌಶಲ್ಯದ ಹೆಚ್ಚಳದಿಂದಾಗಿ ವ್ಯಕ್ತಿ ತಾನು ಕೆಲಸ ಮಾಡುತ್ತಿರುವ ಸಂಸ್ಥೆಯಲ್ಲಿ ಅವಿಭಾಜ್ಯ ಅಂಗವೆನಿಸಿಕೊಳ್ಳುತ್ತಾನೆ, ಯಶಸ್ಸು ಗಳಿಸುತ್ತಾನೆ. ಅದೇ ಬದುಕಿನ ಸಾರ್ಥಕ್ಯ.

○ ಎಂ.ಎ


## ಆಕ್ಸ್‌ಫರ್ಡ್‌ನಲ್ಲಿ ಓದಬೇಕೆ?

ವಿಶ್ವದಲ್ಲಿಯೇ ಅತ್ಯಂತ ಮಾನ್ಯತೆ ಪಡೆದ ಒಂದು ವಿಶ್ವವಿದ್ಯಾಲಯವೆಂದರೆ ಆಕ್ಸ್‌ಫರ್ಡ್ ವಿ.ವಿ. ಎಂದು ಧಾರಾಳವಾಗಿ ಹೇಳಬಹುದು. ಪ್ರತಿಭಾವಂತ ವಿದ್ಯಾರ್ಥಿಯ ಮಹಾತ್ವಾಕಾಂಕ್ಷೆ ಎಂದರೆ ಆಕ್ಸ್‌ಫರ್ಡ್ ವಿ.ವಿ.ದಂಥ ಸಂಸ್ಥೆಯನ್ನು ಸೇರಿ ಸ್ನಾತಕೋತ್ತರ ಪದವಿಯನ್ನೋ ಅಥವಾ ಪಿ.ಎಚ್.ಡಿ. ಪದವಿಯನ್ನೋ ಸಂಪಾದಿಸುವದು. ಬುದ್ಧಿವಂತ ವಿದ್ಯಾರ್ಥಿಗಳು ಒಳ್ಳೆಯ ವಿಶ್ವವಿದ್ಯಾಲಯವನ್ನು ನೋಡುವ ರೀತಿಯಲ್ಲಿಯೇ ಮೇಲ್ಪಂಕ್ತಿಯ ವಿಶ್ವವಿದ್ಯಾಲಯಗಳು ಬುದ್ಧಿವಂತ ವಿದ್ಯಾರ್ಥಿಗಳನ್ನು ಆಕರ್ಷಿಸುವಲ್ಲಿ ಸಾಕಷ್ಟು ಪ್ರಯತ್ನ ಮಾಡುತ್ತವೆ. ಇಂಥ ವಿದ್ಯಾರ್ಥಿಗಳು ವಿಶ್ವದ ಯಾವ ದೇಶದಿಂದಾದರೂ ಬರಬಹುದು. ಇಂಥ ಒಂದು ಪ್ರಯತ್ನದ ಛಾಯೆಯನ್ನು ಈ ಅಂಕಿ-ಸಂಖ್ಯೆಗಳಲ್ಲಿ ನೋಡಬಹುದು. ಸ್ನಾತಕೋತ್ತರ ಪದವಿಗಾಗಿ ಅಧ್ಯಯನ ಮಾಡುತ್ತಿರುವ ೪೪೧೩ ವಿದ್ಯಾರ್ಥಿಗಳಲ್ಲಿ ಸುಮಾರು ೧೯೬೨ ವಿದ್ಯಾರ್ಥಿಗಳು ಬೇರೆ ಒಂದು ನೂರು ದೇಶಗಳಿಂದ ಬಂದವರಾಗಿರುತ್ತಾರೆ. ಇಂಥ ಒಂದು ಬಲವಾದ ಕಾರಣಕ್ಕಾಗಿಯೇ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ಅಂತರಾಷ್ಟ್ರೀಯ ಖ್ಯಾತಿಯನ್ನು ಪಡೆದಿದೆ. ಅನೇಕ ವಿದ್ಯಾರ್ಥಿಗಳು ವಿಕಾಸಶೀಲ ದೇಶಗಳಿಂದ ಹೋಗಿರುವದರಿಂದ ಅವರಿಗೆ ಆರ್ಥಿಕ ಸಹಾಯದ ಆವಶ್ಯಕತೆ ಎನಿಸುತ್ತಿದೆ. ಅದಕ್ಕಾಗಿಯೇ ಅನೇಕ ಪಿ.ಎಚ್.ಡಿ. ಪೂರ್ವ ಮತ್ತು ಪಿ.ಎಚ್.ಡಿ. ನಂತರದ ಫೆಲೋಶಿಪ್‌ಗಳಿದ್ದು ಅವುಗಳ ಲಾಭವನ್ನು ನಮ್ಮ ವಿದ್ಯಾರ್ಥಿಗಳು ಪಡೆದುಕೊಳ್ಳಬೇಕು. ಆರ್ಥಿಕ ಸಹಾಯಕ್ಕೆಂದೇ ಅನೇಕ ಸಹಾಯಕ ಹುದ್ದೆಗಳಲ್ಲಿ ನಮ್ಮ ವಿದ್ಯಾರ್ಥಿಗಳು ಕೆಲಸ ಮಾಡುತ್ತಿರುತ್ತಾರೆ.

ಪಿ.ಎಚ್.ಡಿ. ನಂತರದ ಅನೇಕ ಫೆಲೋಶಿಪ್‌ಗಳು ಸಾಗರೋತ್ತರದ ವಿದ್ಯಾರ್ಥಿಗಳಿಗೂ ಸಿಗಬಹುದಾಗಿದೆ. ಆದರೆ ಪ್ರತಿಭೆಯೊಂದೇ ಆವಶ್ಯಕ ಅಂಶವಾಗಿರುವದರಿಂದ ಅಂಥ ವಿದ್ಯಾರ್ಥಿಗಳೇ ಪ್ರಯತ್ನ ಮಾಡುವದು ಸೂಕ್ತವಾಗುವದು.

ಹೆಚ್ಚಿನ ವಿವರಗಳಿಗಾಗಿ ಡಾ.ನಾರಾಯಣ್ ಮಹಿಷಿಯವರನ್ನು, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಆಲಮ್ನೈ ಅಸೋಸಿಯೇಶನ್, ಬೆಂಗಳೂರು-೧೨ ಕಾಣಬಹುದು.

# ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಬಹು ಆಯ್ಕೆ ರೂಪದ ಪ್ರಶ್ನೆಗಳು



## ಕಲೆ, ಸಾಹಿತ್ಯ

೧. 'ಕನ್ನಡ ಕುಲ ಪುರೋಹಿತ' ಎಂದು ಪ್ರಶಂಸೆಗೆ ಪಾತ್ರರಾದವರು?
ಅ. ಆ.ನ. ಕೃಷ್ಣರಾಯ
ಬ. ಬಿ.ಎಂ.ಶ್ರೀ
ಕ. ದೆ. ಜವರೇಗೌಡ
ಡ. ಆಲೂರು ವೆಂಕಟರಾಯರು

೨. ಹಲ್ಮಿಡಿ ಶಾಸನ ರೂಪುಗೊಂಡ ಕಾಲ
ಅ.ಕ್ರಿ.ಶ. ೪೬೦ ಬ. ಕ್ರಿ.ಶ. ೫೪೦
ಕ. ಕ್ರಿ.ಶ. ೫೩೦ ಡ. ಕ್ರಿ.ಶ. ೪೮೦

೩. ಕನ್ನಡದ ಮೊದಲ ಗದ್ಯಕೃತಿ
ಅ. ಅಜಿತಪುರಾಣ ಬ. ವಡ್ಡಾರಾಧನೆ
ಕ. ಕವಿರಾಜ ಮಾರ್ಗ ಡ. ಪಂಚತಂತ್ರ

೪. 'ದಾನ ಚಿಂತಾಮಣಿ' ಎಂದು ಅನ್ವರ್ಥಕ ನಾಮ ಪಡೆದವರು
ಅ. ಸಂಚಿ ಹೊನ್ನಮ್ಮ
ಬ. ಜಯದೇವಿ ತಾಯಿ ಲಿಗಾಡೆ
ಕ. ಅತ್ತಿಮಬ್ಬೆ
ಡ. ಅಕ್ಕಮಹಾದೇವಿ

೫. 'ಆದಿಕವಿ' ಎಂದು ಹೆಸರು ಹೊಂದಿದವರು
ಅ. ಪೊನ್ನ ಬ. ರನ್ನ
ಕ. ಜನ್ನ ಡ. ಪಂಪ

೬. ಕರ್ನಾಟಕದ ವಾಸ್ತುಶಿಲ್ಪಕ್ಕೆ ಮೂಲಭೂತ ಕೊಡುಗೆ ನೀಡಿದವರು
ಅ. ಹೊಯ್ಸಳರು ಬ.ಚಾಲುಕ್ಯರು
ಕ. ಗುಪ್ತರು ಡ. ರಾಷ್ಟ್ರಕೂಟರು

೭. ಪ್ರತಿಷ್ಠಿತ ಪಂಪ ಪ್ರಶಸ್ತಿ ಮೊದಲ ಬಾರಿ ಪಡೆದವರು
ಅ. ಎ.ಎನ್. ಮೂರ್ತಿರಾಯರು
ಬ. ಪು.ತಿ.ನ.
ಕ. ಕುವೆಂಪು
ಬ. ಕೆ.ಎಸ್. ನರಸಿಂಹಸ್ವಾಮಿ

೮. 'ಕಥಕ್ಕಳಿ' ಈ ನೃತ್ಯ ಯಾವ ರಾಜ್ಯಕ್ಕೆ ಸೇರಿದುದು?
ಅ. ಬಿಹಾರ ಬ. ಗುಜರಾತ್
ಕ. ಕೇರಳ ಡ. ಒರಿಸ್ಸಾ

೯. ಸಂಗೀತ ಸಾಮ್ರಾಟ ತಾನ್‌ಸೇನ್ ಯಾವ ರಾಜ್ಯದವರು
ಅ. ಮಹಾರಾಷ್ಟ್ರ ಬ. ಹರಿಯಾಣ
ಕ. ಪ.ಬಂಗಾಲ ಡ. ಉತ್ತರ ಪ್ರದೇಶ

೧೦. ೧೯೪೯ರಲ್ಲಿ ಆಗಿನ ಮದರಾಸು ಸರಕಾರ 'ರಾಷ್ಟ್ರಕವಿ'ಯೆಂದು ಯಾರಿಗೆ ಬಿರುದು ನೀಡಿದೆ?
ಅ. ಪಂಜೆ ಮಂಗೇಶರಾಯರು
ಬ. ಕುವೆಂಪು
ಕ. ಎಂ. ಗೋವಿಂದ ಪೈ
ಡ. ಡಿ.ವಿ.ಜಿ.

## ಇತಿಹಾಸ

೧೧. ಫತ್ತೆಪುರ ಸಿಕ್ರಿಯಲ್ಲಿ ಪಂಚಮಹಲ್ ನಿರ್ಮಿಸಿದವರು
ಅ. ಅಕ್ಬರ್
ಬ. ಷಾಜಹಾನ್
ಕ. ಔರಂಗಜೇಬ
ಡ. ಗುರು ಗೋವಿಂದ ಸಿಂಗ್

೧೨. ವಾಸ್ಕೋಡಿಗಾಮಾ ಕೇರಳದ ಕಾಲಿಕಟ್‌ನ್ನು ತಲುಪಿದ ವರ್ಷ
ಅ. ೧೪೯೦ ಬ. ೧೪೯೮
ಕ. ೧೫೪೦ ಡ. ೧೪೬೦

೧೩. ಶಿಖ್ ಮತಸ್ಥಾಪಕರು
ಅ. ಗುರುನಾನಕ್ ಬ. ಗುರುಗೋವಿಂದ
ಕ. ಚರಣಸಿಂಗ್

೧೪. ಗಾಂಧಿ-ಇರ್ವಿನ್ ಒಪ್ಪಂದ ನಡೆದದ್ದು
ಅ. ೧೯೩೦ ಬ. ೧೯೩೧
ಕ. ೧೯೪೦ ಡ. ೧೯೩೨

೧೫. ಇಂಕ್ವಿಲಾಬ್ ಜಿಂದಾಬಾದ್ ಇದು ಯಾರ ಘೋಷಣೆ
ಅ. ಮೌಲಾನಾ ಅಬುಲ್ ಕಲಾಂ
ಬ. ಮಹಮದ್ ಅಲಿ ಜಿನ್ನಾ
ಕ. ಇಕ್ಬಾಲ್
ಡ. ಕುತುಬ್ ಷಾ

೧೬. ಎರಡನೆ ಮಹಾಯುದ್ಧದಲ್ಲಿ ಬ್ರಿಟೀಷ್ ಪ್ರಧಾನಿ ಯಾರಾಗಿದ್ದರು?
ಅ. ವಿನ್‌ಸ್ಟನ್ ಚರ್ಚಿಲ್
ಬ.ಇರ್ವಿನ್
ಕ. ಲಾರ್ಡ್‌ಬ್ರೆಂಟ್ ಫೋರ್ಡ್
ಡ. ಜನರಲ್ ಸ್ಮಟ್ಸ್

೧೭. 'ಮದರ್ ಆಫ್ ಪಾರ್ಲಿಮೆಂಟ್' ಎಂದು ಯಾವ ದೇಶದ ಪಾರ್ಲಿಮೆಂಟ್‌ಗೆ ಹೇಳುತ್ತಾರೆ?
ಅ. ಅಮೆರಿಕಾ ಬ. ಫ್ರಾನ್ಸ್
ಕ. ಭಾರತ ಡ. ಇಂಗ್ಲೆಂಡ್

೧೮. ಬಂಗಾಲವನ್ನು ವಿಭಜಿಸಿದ ವೈಸ್ರಾಯ್
ಅ. ಲಾರ್ಡ್ ಮೌಂಟ್ ಬ್ಯಾಟಾನ್
ಬ. ಲಾರ್ಡ್ ವೆಲ್ಲೆಸ್ಲಿ
ಕ. ಲಾರ್ಡ್ ಕರ್ಜನ್
ಡ. ಲಾರ್ಡ್ ಡಾಲ್‌ಹೌಸಿ

೧೯. ಮಹೆಂಜೊದಾರ, ಹರಪ್ಪ ನಾಗರಿಕತೆ ಪ್ರದೇಶಗಳು ಪ್ರಸ್ತುತ ಯಾವ ದೇಶದಲ್ಲಿವೆ?
ಅ. ಭಾರತ ಬ. ನೇಪಾಳ
ಕ. ಭೂತಾನ್ ಡ. ಪಾಕಿಸ್ತಾನ

೨೦. ಜಲಿಯನ್ ವಾಲ್‌ಬಾಗ್ ಯಾವ ನಗರದಲ್ಲಿದೆ?
ಅ. ಚಂಡೀಗಡ ಬ. ಅಮೃತಸರ
ಕ. ಸಿಮ್ಲಾ ಡ. ಅಹಮದಾಬಾದ್

## ರಾಜ್ಯಶಾಸ್ತ್ರ

೨೧. ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಪ್ರಥಮ ಮಹಿಳಾ ಅಧ್ಯಕ್ಷರು
ಅ. ಸುಚೇತ ಕೃಪಲಾನಿ
ಬ. ವಿಜಯಲಕ್ಷ್ಮೀ ಪಂಡಿತ
ಕ. ಕಮಲಾ ನೆಹರು
ಡ. ಸರೋಜಿನಿ ನಾಯಿಡು

೨೨. ಇಲ್ಲಿಯವರೆಗೆ ನಮ್ಮ ದೇಶದಲ್ಲಿ ಎಷ್ಟು ಬಾರಿ ತುರ್ತು ಪರಿಸ್ಥಿತಿ ಘೋಷಿಸಲಾಗಿದೆ?
ಅ. ಎರಡು ಬಾರಿ ಬ. ಒಂದು ಬಾರಿ
ಕ. ಮೂರು ಬಾರಿ ಡ. ನಾಲ್ಕು ಬಾರಿ

೨೩. ನರ್ಮದಾ ಉಳಿಸಿ ಚಳುವಳಿ ಯಾವ ರಾಜ್ಯಕ್ಕೆ ಸೇರಿದ್ದು?
ಅ. ಮಹಾರಾಷ್ಟ್ರ ಬ. ಗುಜರಾತ್
ಕ. ರಾಜಸ್ಥಾನ ಡ. ಮಧ್ಯಪ್ರದೇಶ

೨೪. 'ಸಾರ್ಕ್' ಸಂಸ್ಥೆಯ ಸದಸ್ಯ ರಾಷ್ಟ್ರಗಳ ಸಂಖ್ಯೆ
ಅ. ಆರು ಬ. ಐದು
ಕ. ಎಂಟು ಡ. ಏಳು

೨೫. 'ಡಿಸ್ಕವರಿ ಆಫ್ ಇಂಡಿಯಾ' ಪುಸ್ತಕ ಬರೆದವರು
ಅ. ಎಸ್. ರಾಧಾಕೃಷ್ಣನ್
ಬ. ಜಯಪ್ರಕಾಶ ನಾರಾಯಣ
ಕ. ನೆಹರು
ಡ. ಮಹಾತ್ಮಾ ಗಾಂಧೀಜಿ

೨೬. 'ಗೂರ್ಖಾ ಲ್ಯಾಂಡ್' ಸಮಸ್ಯೆ ಯಾವ ರಾಜ್ಯಕ್ಕೆ ಸೇರಿದ್ದು?
ಅ. ಪ.ಬಂಗಾಲ ಬ. ಓರಿಸ್ಸಾ
ಕ. ಬಿಹಾರ ಡ. ಮಧ್ಯಪ್ರದೇಶ

೨೭. ಬಜೆಟ್ ಪಾರ್ಲಿಮೆಂಟಿನಲ್ಲಿ ಮಂಡಿಸಲು ಯಾರ ಅನುಮತಿ ಅಗತ್ಯ?
ಅ. ಲೋಕಸಭಾ ಅಧ್ಯಕ್ಷರು
ಬ. ಪ್ರಧಾನ ಮಂತ್ರಿ
ಕ. ರಾಷ್ಟ್ರಪತಿ
ಡ. ಹಣಕಾಸು ಮಂತ್ರಿ

೨೮. ಸ್ವತಂತ್ರ ಭಾರತದ ಮೊದಲ ಗೃಹ ಮಂತ್ರಿ
ಅ. ರಾಜ್ ಗೋಪಾಲಾಚಾರಿ
ಬ. ಚರಣ ಸಿಂಗ್
ಕ. ವಲ್ಲಭಭಾಯಿ ಪಟೇಲ್
ಡ. ಲಾಲ್‌ಬಹದ್ದೂರ ಶಾಸ್ತ್ರಿ

೨೯. ನಮ್ಮ ರಾಜ್ಯಾಂಗದ ಪ್ರಕಾರ ರಾಷ್ಟ್ರಪತಿಯಾಗಿ ಎಷ್ಟು ಬಾರಿ ಆಯ್ಕೆಯಾಗಬಹುದು?
ಅ. ಎರಡು ಬಾರಿ ಬ. ನಾಲ್ಕು ಬಾರಿ
ಕ. ಆರು ಬಾರಿ ಡ. ಮಿತಿ ಇಲ್ಲ

೩೦. 'ಭಾರತದ ಪ್ರಥಮ ಪ್ರಜೆ' ಎಂದು ಯಾರನ್ನು ಕರೆಯುತ್ತಾರೆ?
ಅ. ಪ್ರಧಾನ ಮಂತ್ರಿ
ಬ. ಸುಪ್ರಿಂ ಕೋರ್ಟ್ ಮುಖ್ಯ ನ್ಯಾಯಾಧೀಶ
ಕ. ರಾಷ್ಟ್ರಪತಿ
ಡ. ಉಪರಾಷ್ಟ್ರಪತಿ

## ಅರ್ಥಶಾಸ್ತ್ರ

೩೧. ಯಾವುದೇ ಬ್ಯಾಂಕ್ ತಮ್ಮ ಶಾಖೆಯನ್ನು ಸ್ಥಾಪಿಸಲು ಯಾವುದರ ಅನುಮತಿ ಪಡೆಯಬೇಕು?
ಅ. ಹಣಕಾಸು ಇಲಾಖೆ ಬ. ಗೃಹ ಇಲಾಖೆ
ಕ. ರಿಜರ್ವ್ ಬ್ಯಾಂಕ್ ಡ. ವಿಶ್ವ ಬ್ಯಾಂಕ್

೩೨. ನಬಾರ್ಡ್ ಬ್ಯಾಂಕ್ ಯಾವಾಗ ಸ್ಥಾಪಿಸಲಾಯಿತು?
ಅ. ೧೯೮೨ ಬ. ೧೯೮೦
ಕ. ೧೯೮೫ ಡ. ೧೯೮೮

೩೩. ನಬಾರ್ಡ್ ಬ್ಯಾಂಕ್‌ನ ಅಧ್ಯಕ್ಷರು ಯಾರು?
ಅ. ಪಿ. ಕೋಟ್ರಯ್ಯ ಬ. ಬ್ರಹ್ಮಾನಂದ
ಕ. ರಂಗರಾಜನ್ ಡ. ಆಬಿದಾ ಹುಸೇನ್

೩೪. ೧೯೯೧ರ ಪ್ರಕಾರ ಭಾರತ ದೇಶದ ಜನಸಾಂದ್ರತೆ (ಸಾವಿರಕ್ಕೆ)ಎಷ್ಟು?
ಅ. ೨೩೦ ಚ.ಕಿ.ಮೀ. ಬ. ೨೬೦ ಚ.ಕಿ.ಮೀ.
ಕ. ೨೫೦ ಚ.ಕಿ.ಮೀ. ಡ. ೨೪೦ ಚ.ಕಿ.ಮೀ.

೩೫. 'ಫಾಸ್ಟ್ ಎಕಾನಮಿ ಫಾರ್ ಇಂಡಿಯಾ' ಗ್ರಂಥ ಬರೆದವರು
ಅ. ಜವಾಹರ್‌ಲಾಲ್ ನೆಹರು
ಬ. ಎಂ. ವಿಶ್ವೇಶ್ವರಯ್ಯ
ಕ. ಆರ್. ವೆಂಕಟರಾಮನ್
ಡ. ರಾಜಾಜಿ

೩೬. ಪ್ರಪಂಚದಲ್ಲಿ ಅತ್ಯಧಿಕ ಪಶು ಸಂಪತ್ತು ಹೊಂದಿದ ದೇಶ
ಅ. ಭಾರತ ಬ. ಹಾಲೆಂಡ್
ಕ. ಸ್ವೀಡನ್

೩೭. 'ವಿಶ್ವ ಆಹಾರ ದಿನ'ವನ್ನು ಯಾವ ದಿನಾಂಕದಂದು ಆಚರಿಸುತ್ತಾರೆ?
ಅ. ಅಕ್ಟೋಬರ್ ೧೬ ಬ. ಸಪ್ಟೆಂಬರ್ ೧೦
ಕ. ಎಪ್ರಿಲ್ ೧೫ ಡ. ಜೂನ್ ೧೦

೩೮. ದೇಶದ ಯಾವ ರಾಜ್ಯದಲ್ಲಿ ಪುರುಷರಿಗಿಂತ ಸ್ತ್ರೀಯರು ಹೆಚ್ಚು ಇದ್ದಾರೆ?
ಅ. ಬಿಹಾರ ಬ. ಮಹಾರಾಷ್ಟ್ರ
ಕ. ಕೇರಳ ಡ. ಕರ್ನಾಟಕ

೩೯. ಐ.ಎಂ.ಎಫ್. ಪ್ರಧಾನ ಕಛೇರಿ ಎಲ್ಲಿದೆ?
ಅ. ನ್ಯೂಯಾರ್ಕ್ ಬ. ವಾಷಿಂಗ್ಟನ್
ಕ. ಮಾಸ್ಕೋ ಡ. ಪ್ಯಾರಿಸ್

೪೦. ಗೋಲ್ಡ್ ಬ್ರಾಂಡ್ ಸ್ಕೀಂ ಯಾವಾಗ ಆರಂಭಿಸಿದರು?
ಅ. ೧೯೯೨-೯೩ ಬ. ೧೯೯೩-೯೪
ಕ. ೧೯೮೯-೯೦ ಡ. ೧೯೯೦-೯೧

## ಭೂಗೋಳ ಶಾಸ್ತ್ರ

೪೧. ಥಾರ್ ಮರುಭೂಮಿ ಯಾವ ರಾಜ್ಯದಲ್ಲಿದೆ?
ಅ. ಪಂಜಾಬ ಬ. ಹಿಮಾಚಲ ಪ್ರದೇಶ
ಕ. ರಾಜಸ್ಥಾನ ಡ. ಗುಜರಾತ್

೪೨. ಗಂಗಾನದಿ ಎಷ್ಟು ರಾಜ್ಯಗಳಲ್ಲಿ ಹರಿಯುತ್ತದೆ?
ಅ. ಮೂರು ಬ. ನಾಲ್ಕು
ಕ. ಎರಡು ಡ. ಒಂದು

೪೩. ಲಕ್ಷದ್ವೀಪಗಳಲ್ಲಿ ಎಷ್ಟು ದ್ವೀಪಗಳಿವೆ?
ಅ. ೩೦ ಬ. ೧೫
ಕ. ೨೭ ಡ. ೨೦

೪೪. ಸಾರ್ಕ್ ಪ್ರಧಾನ ಕಚೇರಿ ಎಲ್ಲಿದೆ?
ಅ. ಇಸ್ಲಾಮಬಾದ್ ಬ. ಥಿಂಪು
ಕ. ದೆಹಲಿ ಡ. ಕಾಠ್ಮಂಡು

೪೫. 'ಲಾಂಡ್ ಆಫ್ ವೈಟ್ ಎಲಿಫೆಂಟ್' ಯಾವುದಕ್ಕೆ ಕರೆಯುತ್ತಾರೆ?
ಅ. ಥೈಲಾಂಡ್ ಬ. ನಾರ್ವೆ
ಕ. ಸಿಂಗಾಪುರ ಡ. ಜಪಾನ್

೪೬. 'ಹಿಂದಿ'ಯ ನಂತರ ಹೆಚ್ಚು ಜನ ಮಾತನಾಡುವ ಭಾಷೆ?
ಅ. ಮರಾಠಿ ಬ. ತಮಿಳು
ಕ. ಮಲಯಾಳಂ ಡ. ತೆಲುಗು

೪೭. 'ಪ್ಲೇ ಗ್ರೌಂಡ್ ಆಫ್ ಯುರೋಪ್' ಯಾವ ದೇಶಕ್ಕೆ ಕರೆಯುತ್ತಾರೆ?
ಅ. ಸ್ವಿಟ್ಜರ್‌ಲ್ಯಾಂಡ್ ಬ. ಸ್ವೀಡನ್
ಕ. ಶ್ರೀಲಂಕಾ ಡ. ನೇಪಾಳ

೪೮. ಹಜಾರಿಬಾಗ್ ನ್ಯಾಷನಲ್ ಪಾರ್ಕ್ ಎಲ್ಲಿದೆ?
ಅ. ಪ.ಬಂಗಾಲ ಬ. ಓರಿಸ್ಸಾ
ಕ. ಬಿಹಾರ ಡ. ಜಮ್ಮು ಮತ್ತು ಕಾಶ್ಮೀರ

೪೯. ಭಾರತ ದೇಶದಲ್ಲಿ ಮೊದಲ ನೌಕಾ ನಿರ್ಮಾಣ ಕೇಂದ್ರ ಎಲ್ಲಿ ಸ್ಥಾಪಿಸಲಾಯಿತು?
ಅ. ಕೊಚ್ಚಿನ್ ಬ. ಕಲಕತ್ತಾ
ಕ. ವಿಶಾಖ ಪಟ್ಟಣ ಡ. ನಾಗಪುರ

೫೦. ಪಾದರಸ ಉತ್ಪತ್ತಿಯಲ್ಲಿ ಪ್ರಸಿದ್ಧಿ ಹೊಂದಿದ ರಾಷ್ಟ್ರ ಯಾವುದು?
ಅ. ಇಟಲಿ ಬ. ಇರಾಕ್
ಕ. ಆಫ್‌ಘಾನಿಸ್ತಾನ ಡ. ಲಿಬಿಯಾ

## ಉತ್ತರಗಳು


೧. ಡ, ೨. ಅ, ೩. ಬ, ೪. ಕ, ೫. ಡ, ೬. ಬ, ೭. ಕ, ೮. ಕ, ೯. ಡ, ೧೦. ಕ, ೧೧. ಅ, ೧೨. ಬ, ೧೩. ಅ, ೧೪. ಬ, ೧೫. ಕ, ೧೬. ಅ, ೧೭. ಡ, ೧೮. ಕ, ೧೯. ಡ, ೨೦. ಬ, ೨೧. ಡ, ೨೨. ಕ, ೨೩. ಬ, ೨೪. ಡ, ೨೫. ಕ, ೨೬. ಅ, ೨೭. ಕ, ೨೮. ಕ, ೨೯. ಡ, ೩೦. ಕ, ೩೧. ಕ, ೩೨. ಅ, ೩೩. ಬ, ೩೪. ಬ, ೩೫. ಬ, ೩೬. ಅ, ೩೭. ಅ, ೩೮. ಕ, ೩೯. ಅ, ೪೦. ಅ, ೪೧. ಕ, ೪೨. ಅ, ೪೩. ಕ, ೪೪. ಡ, ೪೫. ಅ, ೪೬. ಡ, ೪೭. ಅ, ೪೮. ಕ, ೪೯. ಕ, ೫೦. ಅ.

## ಪ್ರಬಂಧ ಸ್ಪರ್ಧೆ

ರಾಜ್ಯ ವಿಜ್ಞಾನ ಪರಿಷತ್ತು ೧೯೯೭ನೇ ಸಾಲಿನ ರಾಜ್ಯಮಟ್ಟದ ಶೇಷಾಚಲಂ ಪ್ರಶಸ್ತಿಗಾಗಿ ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆ ಏರ್ಪಡಿಸಿದೆ.

'ದೈನಂದಿನ ಅನುಭವದಲ್ಲಿ ನಾನು ಗುರುತಿಸಿದ ವಿಜ್ಞಾನ ಪರಿಕಲ್ಪನೆಗಳು', 'ನಾನು ಮೆಚ್ಚಿದ ಭಾರತೀಯ ವಿಜ್ಞಾನಿ ಮತ್ತು ಅವರ ಸಾಧನೆ', 'ಜಾಗತಿಕ ಬಿಸಿಯಾಗುವಿಕೆ' ಹಾಗೂ 'ಸಾಗರ-ಸಂಪತ್ತಿನ ಆಗರ' ಈ ವಿಷಯಗಳಲ್ಲಿ ಯಾವುದಾದರೂ ಒಂದರ ಬಗ್ಗೆ ಕನ್ನಡ ಅಥವಾ ಇಂಗ್ಲೀಷ್‌ನಲ್ಲಿ ಪ್ರಬಂಧ ರಚಿಸಿ ಶಾಲೆಯ ಮುಖ್ಯೋಪಾಧ್ಯಾಯರ ಮೂಲಕ ಜ. ೧೫ ರೊಳಗೆ ಕಾರ್ಯದರ್ಶಿ, ರಾಜ್ಯ ವಿಜ್ಞಾನ ಪರಿಷತ್ತು, ಭಾರತೀಯ ವಿಜ್ಞಾನ ಸಂಸ್ಥೆಯ ಆವರಣ, ಬೆಂಗಳೂರು - ೫೬೦ ೦೧೨ ಇವರಿಗೆ ಕಳುಹಿಸಲು ಪ್ರಕಟಣೆ ತಿಳಿಸಿದೆ.

# ಸ್ಪರ್ಧಾ ಪರೀಕ್ಷೆಗಳಿಗೆ ಸಿದ್ಧರಾಗಿ !



೧. ಇತ್ತೀಚೆಗೆ ನೇಮಕಗೊಂಡ ಹಿಮಾಚಲ ಪ್ರದೇಶದ ಗವರ್ನರ್ ಯಾರು?
೨. ಕೇಂದ್ರ ಸರಕಾರ ಯಾವ ದೂರದರ್ಶನ ಸೇವೆ ನಿಷೇಧಿಸಿದೆ?
೩. ೧೯೯೭ರ ಸಾರ್ವಜನಿಕ ಸೇವೆಗೆ ಮ್ಯಾಗ್ಸಸ್ಸೆ ಪ್ರಶಸ್ತಿ ಪಡೆದವರು ಯಾರು?
೪. ಮಹಾಕಾಳಿ ಒಪ್ಪಂದ ಯಾವ ದೇಶಗಳ ಮಧ್ಯೆ ನೆರವೇರಿತು?
೫. ಅಂತರಾಷ್ಟ್ರೀಯ ಹಣಕಾಸು ನಿಧಿ ಮುಖ್ಯ ಕೇಂದ್ರ ಎಲ್ಲಿದೆ?
೬. ಪಥೇರ್ ಪಾಂಚಾಲಿ ಎಂಬ ಪ್ರಪಂಚ ಪ್ರಖ್ಯಾತ ಚಿತ್ರದ ನಿರ್ದೇಶಕರು ಯಾರು?
೭. ಉಪರಾಷ್ಟ್ರಪತಿಯನ್ನು ಯಾರು ಆಯ್ಕೆ ಮಾಡುತ್ತಾರೆ?
೮. ಭೂಕಂಪಗಳ ತೀವ್ರತೆಯನ್ನು ಅಧ್ಯಯನ ಮಾಡುವ ಶಾಸ್ತ್ರವನ್ನು ಏನೆಂದು ಕರೆಯುತ್ತಾರೆ?
೯. ರಾಜ್ಯ ಸರಕಾರಗಳನ್ನು ರದ್ದು ಮಾಡುವ ಸಂವಿಧಾನದ ಕಲಂ ಎಷ್ಟನೇಯದು?
೧೦. ಶ್ರೀ ಪೆರಂಬದೂರ ಯಾರ ಜನ್ಮಸ್ಥಳ?
೧೧. ಭಾರತದಲ್ಲಿ ಆರಂಭಗೊಂಡ ಪ್ರಥಮ ಪತ್ರಿಕೆ ಯಾವುದು?
೧೨. ಭಾರತದಲ್ಲಿ ಟೆಲಿವಿಜನ್ ಪ್ರಸಾರಗಳು ಯಾವ ವರ್ಷದಲ್ಲಿ ಆರಂಭಗೊಂಡವು?
೧೩. ಅಮೆರಿಕಾ ದೇಶದ ಚುನಾವಣೆ ಎಷ್ಟು ವರ್ಷಗಳಿಗೊಮ್ಮೆ ನಡೆಯುತ್ತದೆ?
೧೪. ಅಣು ಇಂಧನ ಅಭಿವೃದ್ಧಿಯಲ್ಲಿ ಮೂರನೆ ಇಂಧನವೆಂದು ಯಾವುದಕ್ಕೆ ಕರೆಯುತ್ತಾರೆ?
೧೫. ರೇಷ್ಮೆ ಉತ್ಪಾದನೆಯಲ್ಲಿ ಮೊದಲ ಸ್ಥಾನ ಹೊಂದಿದ ದೇಶ ಯಾವುದು?
೧೬. ಭಾರತ ದೇಶದ ಮೊದಲ ವಿದೇಶಾಂಗ ಸಚಿವ ಯಾರು?
೧೭. ಅಂತರಾಷ್ಟ್ರೀಯ ಖ್ಯಾತ ಮಹಿಳಾ ವೆಯಿಟ್ ಲಿಪ್ಟರ್ ಕುಂಜರಾಣಿ ದೇವಿ ಯಾವ ರಾಜ್ಯದವರು?
೧೮. ಹಾಂಗ್‌ಕಾಂಗ್ ಎಷ್ಟು ವರ್ಷ ಬ್ರಿಟಿಷರ ಆಧೀನದಲ್ಲಿದ್ದಿತು?
೧೯. ಇತ್ತೀಚೆಗೆ ಶತಜಯಂತಿ ಆಚರಿಸಿದ ಮಾಜಿ ಪ್ರಧಾನಿ ಯಾರು?
೨೦. ಯುನೆಸ್ಕೋದ ಸದಸ್ಯ ರಾಷ್ಟ್ರಗಳ ಸಂಖ್ಯೆ ಎಷ್ಟು?
೨೧. ೮೩ನೇ ಸಂವಿಧಾನ ತಿದ್ದುಪಡಿ ಯಾವುದಕ್ಕೆ ಸಂಬಂಧಿಸಿದ್ದು?
೨೨. ಇತ್ತೀಚೆಗೆ ಅಂಗಾರಕ ಗ್ರಹದ ಮೇಲೆ ಹೋಗಿ ಪರೀಕ್ಷೆ ನಡೆಸಿದ ವ್ಯೋಮನೌಕೆ ಯಾವುದು?
೨೩. ೧೯೯೬ರ ರಾಜೀವ್ ಗಾಂಧಿ ಸದ್ಭಾವನಾ ಪ್ರಶಸ್ತಿ ಪಡೆದವರು ಯಾರು?
೨೪. ಸೂರ್ಯನಲ್ಲಿರುವ ವಾಯು ಯಾವುದು?
೨೫. ಬಿಳಿ ಕಲ್ಲಿದ್ದಲು ಎಂದು ಯಾವುದಕ್ಕೆ ಕರೆಯುತ್ತಾರೆ?
೨೬. ಪ್ರಪಂಚದಲ್ಲಿ ಅತಿ ಚಿಕ್ಕ ದೇಶ ಯಾವುದು?
೨೭. ಭಾರತೀಯ ರಿಜರ್ವ್ ಬ್ಯಾಂಕ್‌ನ ಪ್ರಧಾನ ಕೇಂದ್ರ ಎಲ್ಲಿದೆ?
೨೮. ಗಾಳಿಮರಗಳ ಮೂಲಕ ವಿದ್ಯುತ್ ಉತ್ಪಾದನೆ ಮಾಡುವಲ್ಲಿ ಯಾವ ರಾಜ್ಯ ಮೊದಲ ಸ್ಥಾನದಲ್ಲಿದೆ?
೨೯. ಆಂಧ್ರಪ್ರದೇಶದ ರಾಜ್ಯಪಾಲರಾಗಿ ಇತ್ತೀಚೆಗೆ ನೇಮಕಗೊಂಡವರು ಯಾರು?
೩೦. ಭಾರತೀಯ ರಿಜರ್ವ್ ಬ್ಯಾಂಕ್‌ನ ನೂತನ ಗವರ್ನರ್ ಯಾರು?
೩೧. ದಾದಾಸಾಹೇಬ ಫಾಲ್ಕೆ ಪ್ರಶಸ್ತಿ ಯಾವಾಗ ಸ್ಥಾಪಿಸಲಾಗಿದೆ?
೩೨. ಭಾರತದಲ್ಲಿ ಮೊದಲ ಬಾರಿ ಸಾರ್ವತ್ರಿಕ ಚುನಾವಣೆ ಯಾವ ವರ್ಷ ಜರುಗಿತು?
೩೩. ಮಧ್ಯಪ್ರದೇಶದ ೧೯೯೭ರ ಸರಸ್ವತಿ ಸಮ್ಮಾನ್ ಪ್ರಶಸ್ತಿ ಯಾರಿಗೆ ಲಭಿಸಿದೆ?
೩೪. ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣಗೊಂಡ ವರ್ಷ ಯಾವುದು?
೩೫. ಮೊದಲ ಬಾರಿ ಭಾರತ ರತ್ನ ಪ್ರಶಸ್ತಿ ಪಡೆದವರು ಯಾರು?
೩೬. ೧೯೯೫ ಜವಾಹರಲಾಲ್ ನೆಹರು ಅಂತರಾಷ್ಟ್ರೀಯ ಪ್ರಶಸ್ತಿ ಯಾರಿಗೆ ಕೊಡಲಾಗಿದೆ?
೩೭. ಪ್ರಸ್ತುತ ಕರ್ನಾಟಕದ ಜಿಲ್ಲೆಗಳು ಎಷ್ಟು?
೩೮. ಬಂಗಾಳ ವಿಭಜನೆಯಾದದ್ದು ಯಾವ ವರ್ಷ?
೩೯. ರಾಮಕೃಷ್ಣ ಮಠದ ಸ್ಥಾಪಕರು ಯಾರು?
೪೦. ಯೋಜನಾ ಆಯೋಗ ಪ್ರಾರಂಭವಾದದ್ದು ಯಾವ ವರ್ಷ?
೪೧. ಯೋಜನಾ ಆಯೋಗದ ಪ್ರಥಮ ಉಪಾಧ್ಯಕ್ಷರು ಯಾರು?
೪೨. ಪಂಚಶೀಲ ಒಪ್ಪಂದ ಯಾವ ರಾಷ್ಟ್ರಗಳಿಗೆ ಸಂಬಂಧಿಸಿದ್ದು?
೪೩. ಗುಜರಾತ್ ರಾಜ್ಯದ ನೃತ್ಯ ಯಾವುದು?
೪೪. ಕಚ್ ಮರುಭೂಮಿ ಯಾವ ರಾಜ್ಯಕ್ಕೆ ಸೇರಿದ್ದು?
೪೫. ನೈನಿತಾಲ್ ಗಿರಿಧಾಮ ಯಾವ ರಾಜ್ಯಕ್ಕೆ ಸೇರಿದ್ದು?
೪೬. ಇತ್ತೀಚೆಗೆ ಬೂಕರ್ ಪ್ರಶಸ್ತಿ ಪಡೆದ ಭಾರತೀಯ ಲೇಖಕಿ ಹೆಸರೇನು?
೪೭. ವಂದೇ ಮಾತರಂ ಗೀತೆಯನ್ನು ಆಯ್ದುಕೊಂಡ ಆನಂದಮಠ ಕಾದಂಬರಿಯ ಕರ್ತೃ ಯಾರು?
೪೮. ಭಾರತ ರಾಷ್ಟ್ರೀಯ ಕ್ರೀಡೆಯೆಂದು ಯಾವುದಕ್ಕೆ ಕರೆಯುತ್ತಾರೆ?
೪೯. ಭುವನದ ಭಾಗ್ಯ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕೃತ ಕೃತಿಯ ಕರ್ತೃ ಯಾರು?
೫೦. ನೇಪಾಳದ ನೂತನ ಪ್ರಧಾನಿ ಯಾರು?

## ಉತ್ತರಗಳು :

೧.ವಿ.ಎಸ್. ರಮಾದೇವಿ, ೨. ಡಿ.ಟಿ.ಎಚ್. (ಡೈರೆಕ್ಟ್ ಟು ಹೋಮ್), ೩. ಮಹೇಶ ಚಂದ್ರ ಮೆಹತಾ, ೪. ಭಾರತ-ನೇಪಾಳ, ೫. ವಾಷಿಂಗ್ಟನ್, ೬. ಸತ್ಯಜಿತ್ ರೇ, ೭. ಸಂಸತ್ತಿನ ಉಭಯ ಸದಸ್ಯರು, ೮. ಸಿಸ್ಮೋಲಾಜಿ, ೯. ೩೫೬, ೧೦. ರಾಮಾನುಜಚಾರ್ಯ, ೧೧. ಬೆಂಗಾಲ್ ಗೆಜೆಟ್, ೧೨. ೧೯೫೯, ೧೩. ೪ ವರ್ಷ, ೧೪. ಥೋರಿಯಂ, ೧೫. ಚೀನಾ, ೧೬. ಮೌಲಾನಾ ಅಬ್ದುಲ್ ಕಲಾಂ ಆಜಾದ್, ೧೭. ಮಣಿಪುರ, ೧೮. ೧೫೬ ವರ್ಷ, ೧೯. ಗುಲ್ಜಾರಿಲಾಲ್ ನಂದಾ, ೨೦. ೧೫೬, ೨೧. ಪ್ರಾಥಮಿಕ ಶಿಕ್ಷಣ ಮೂಲಭೂತ ಹಕ್ಕು, ೨೨. ಪಾತ್‌ಫೈಂಡರ್, ೨೩. ಲತಾ ಮಂಗೇಶ್ಕರ್, ೨೪. ಹೈಡ್ರೋಜನ್ ಹೀಲಿಯಂ, ೨೫. ಯುರೇನಿಯಂ, ೨೬. ವ್ಯಾಟಿಕನ್, ೨೭. ಮುಂಬಯಿ, ೨೮. ತಮಿಳುನಾಡು, ೨೯. ಸಿ. ರಂಗ ರಾಜನ್, ೩೦. ಬಿಮಲ್ ಜಲಾನಿ, ೩೧. ೧೯೭೬, ೩೨. ೧೯೫೨, ೩೩. ಷಮ್‌ಕ್ಷೀರ್ ಫರಮಾನ್ ಫರೂಕಿ, ೩೪. ೧೯೭೩, ೩೫. ಚಕ್ರವರ್ತಿ ರಾಜಗೋಪಾಲಚಾರಿ, ೩೬. ಈಜಿಪ್ತ ಅಧ್ಯಕ್ಷ ಹೊನ್ನಿ ಮುಬಾರಕ್, ೩೭. ೨೭, ೩೮. ೧೯೫೦, ೩೯. ಸ್ವಾಮಿ ವಿವೇಕಾನಂದ, ೪೦. ೧೯೫೦, ೪೧. ಗುಲ್ಜಾರಿಲಾಲ್ ನಂದಾ, ೪೨. ಭಾರತ, ಚೀನಾ, ೪೩. ಗಾರ್ಭಾ, ೪೪. ಗುಜರಾತ್, ೪೫. ಉತ್ತರ ಪ್ರದೇಶ, ೪೬. ಅರುಂಧತಿ ರಾಯ್, ೪೭. ಬಂಕಿಮ ಚಂದ್ರ ಚಟರ್ಜಿ, ೪೮. ಹಾಕಿ, ೪೯. ಜಿ.ಎಸ್. ಆಮೂರ, ೫೦. ಲೋಕೇಂದ್ರ ಚಾಂದ್

# ನೀವೂ ಇಂಗ್ಲಿಷ್ ಕಲಿಯಿರಿ | ಭಾಗ-೨

## ಸಾಮಾನ್ಯರೂ ಸುಲಭವಾಗಿ ಇಂಗ್ಲಿಷ್ ಕಲಿಯಬಹುದಾದ ಸರಳ ಮಾರ್ಗ ಇಲ್ಲಿದೆ

ಜಾನ್ : ಜಾನಕಿ, ಕಳೆದ ಸಲ ಇಂಗ್ಲಿಷ್ ಕಲಿತಿದ್ದು ನೆನಪಿದೆಯಾ?

ಜಾನಕಿ : ಏನೋ, ನಾನು ಅಷ್ಟು ದಡ್ಡಿ ಅಂತ ತಿಳಿದಿಯಾ.

ಜಾನ್ : ಹಾಗಾದರೆ, ನಾವು ಏನು ಕಲಿತೆವು, ಹೇಳು?

ಜಾನಕಿ : ಅದ, ಹೌದಲ್ಲೊ Sentence, clause ಮತ್ತss....

ಜಾನ್ : ನಾನು ಹೇಳಲಿಲ್ಲ. ನೀನು ಲಕ್ಷ ಕೊಟ್ಟಿಲ್ಲ ಅಂತ. ಇನ್ನೊಂದು ಪದ phrase

ಜಾನಕಿ : ನೆನಪಾಗಿತ್ತು. ನಾನು ಹೇಳಬೇಕೆನ್ನುವಷ್ಟರಲ್ಲಿ, ನೀನೇ ಹೇಳಿದಿ. ಮುಂದಿನ ಪ್ರಶ್ನೆಗೂ ಉತ್ತರಾ ಹೇಳ್ತೇನೆ, ಕೇಳು. Sentence ಅಂದರ Group of words which gives sense ಅಂದರ ಸರಿಯಾಗಿ ಅರ್ಥವನ್ನು ಕೊಡುವಂತಹ ಶಬ್ದಗಳ ಸಮೂಹ. ಉದಾಹರಣೆ ಹೇಳ್ತೇನೆ-you teach English to Janaki.

ಜಾನ್ : ಏನದು? ಗೂಡ್ಸ್‌ಗಾಡಿ ಹೋದ ಹಾಗೆ ಹೋಗ್ತಿ. ಸಾವಕಾಶ.

ಜಾನಕಿ : ದಡ್ಡಿ ಅಂದರ ಸಿಟ್ಟು ಬರುವದಿಲ್ಲೇನು? Clause ಅಂದರ ಮತ್ತೊಂದು sentence ಮೇಲೆ ಅವಲಂಬಿಸಿದ್ದರೂ ಅರ್ಥ ಕೊಡುವ ವಾಕ್ಯಾಂಗ ಅನ್ನಬಹುದ! ಮತ್ತss Phrase ಅಂದ್ರ group of words which gives no sense.

ಜಾನ್ : ಜಾನಕಿ, ನೀನು ಹೇಳಿದ್ದೆಲ್ಲ ಸರಿ. ನೀನು ಇಷ್ಟು ಜಾಣೆ ಅಂತಾ ಗೊತ್ತಿದ್ದಿಲ್ಲ. ಇನ್ನೊಂದು ವಿಷಯ ಬಿಟ್ವಿ

ಜಾನಕಿ : ನೀನೆ ಹೇಳೊ ಮರೆತದ.

ಜಾನ್: ವಾಕ್ಯದಾಗ ಎರಡು ಭಾಗ. 1. Subject ಯಾವ ವಿಷಯ, ವಸ್ತು, ವ್ಯಕ್ತಿ ಕುರಿತು ಹೇಳುತ್ತೇವೆ. 2. Predicate ಅಂದರ Subject ಬಗ್ಗೆ ಏನು ಹೇಳುತ್ತೇವೆ.

ಜಾನಕಿ : ಆತು ಬಿಡೊss... ಮುಂದಿನ ವಿಷಯ ಹೇಳು.

ಜಾನ್: ಶಬ್ದಗಳಿಗೆಲ್ಲ ವ್ಯಾಕರಣದಲ್ಲಿ ಹೆಸರನ್ನು ಕೊಟ್ಟಿದ್ದಾರೆ. ಕೇವಲ ಇಂಗ್ಲಿಷ್ ಮಾತ್ರವಲ್ಲ, ಎಲ್ಲ ಭಾಷೆಗಳಲ್ಲಿಯೂ ಇವುಗಳನ್ನು ಕಾಣುತ್ತೇವೆ.

ಜಾನಕಿ : ಭಾಷಣ ನೆನಪಿನಲ್ಲಿ ಉಳಿಯುವದಿಲ್ಲ. ಸಣ್ಣ ಸಣ್ಣ ವಾಕ್ಯದಲ್ಲಿ ಹೇಳಿದರ ನೆನಪಿನಲ್ಲಿ ಉಳಿಯುವದು.

ಜಾನ್ : ಜಾನಕಿ, ನಿನ್ನ ಹೆಸರು ಏನು? (What is your name?)

ಜಾನಕಿ : ಇದೆಂತಹ ಪ್ರಶ್ನೆ. ನನ್ನ ಹೆಸರು ಜಾನಕಿ.

ಜಾನ್ : ''ಜಾನಕಿ'' ಅನ್ನುವ ಈ ಶಬ್ದ ವ್ಯಾಕರಣದಲ್ಲಿ ನಾಮಪದ (Noun) ಅಂತಾರ. Exactly ಹೇಳೊದಾದರ ಅದಕ್ಕ ಅಂಕಿತನಾಮ ಅಂದರ Proper Noun ಅಂತಾ ಕರೆಯುತ್ತಾರೆ. ಹಾಗಾದರ Noun ಮತ್ತು Proper Noun ಉದಾಹರಣೆ ಹೇಳು?

ಜಾನಕಿ : ಪುಸ್ತಕ (Book) ಪೆನ್ (Pen) ಕಪಾಟು (Cupboard) ಇವು ನಾಮಪದಗಳು ಮತ್ತು ಸೀತಾ, ರಾಮ, ಕಲಕತ್ತಾ, ಚೆನ್ನೈ ಸಾಕೊ ಅಥವಾ ಇನ್ನು ಬೇಕೊ?

ಜಾನ್: ಜಾನಕಿ, ರಾಮ ಇವು ಅಂಕಿತ ನಾಮ ಪದಗಳು. Proper Noun ಆದರೆ, ಹುಡುಗಿ-girl ಹುಡುಗ-Boy ಇವು Common Noun. (ಸಾಮಾನ್ಯ ನಾಮಪದ ಅಥವಾ ರೂಢನಾಮಪದ) ಅಂತ ಹೇಳಬಹುದು.

ಜಾನಕಿ : ಹಾಗಾದರೆ ಗುಂಪು, ಸಂಸತ್ತು ಇವಕ್ಕೆ ಯಾವ ಹೆಸರು?

ಜಾನ್ : ನಿನ್ನದು ಭಾರಿ ಹುರುಪು.... ಇಲ್ಲ ಅವಸರ. ಗುಂಪು-Group, ಸಂಸತ್ತು-Parliament, ಸೈನ್ಯ-Army, ಕುಟುಂಬ-Family, ಇವುಗಳಿಗೆ Collective Noun (ಸಾಮೂಹಿಕ ನಾಮಪದ) ಎಂದು ಹೇಳುವರು. ಸರಿ, ನೀನು ಕೆಲವು Collective Noun ಹೇಳು.

ಜಾನಕಿ : ವರ್ಗ (Class), ಸಮಿತಿ (Committee), ಆಟದ ತಂಡ (Team), ಹಡಗುಪಡೆ (Fleet).

ಜಾನ್ : ಸಾಕು ಬಿಡು. ಮತ್ತೆ ಕೇಳು, ಪ್ರಾಮಾಣಿಕತನ (Honesty), ಒಳ್ಳೇತನ (Goodness), ಬಾಲ್ಯ (Childhood) ಸತ್ಯ (Truth) ಗುಣ, ಸ್ಥಿತಿ ಮುಂತಾದವುಗಳನ್ನು ಹೇಳುವ ಇವು ಕಾಣಲಾರವು. ಆದುದರಿಂದ ಇವುಗಳನ್ನು ಅಮೂರ್ತ ನಾಮಪದ (Abstract Noun) ಎಂದು ಕರೆಯುವರು.

ಜಾನಕಿ : ಇನ್ನೂ ಎಷ್ಟು ಇರುವವು ಮಾರಾಯಾ.

ಜಾನ್ : ನೀನು ಹೇಳು. ಈಗ ಕೇಳಿರುವವುಗಳನ್ನ.

ಜಾನಕಿ : Noun ನಾಮಪದ, ಅಂಕಿತನಾಮ-Proper Noun, Collective Noun ಸಾಮೂಹಿಕ ನಾಮಪದ, Common Noun-ಸಾಮಾನ್ಯ ನಾಮಪದ. Abstract Noun-ಅಮೂರ್ತನಾಮಪದ.

ಜಾನ್ : ಹೀಂಗ ನೀನು ಕಲಿತರ, ಬೇಗನೆ ಇದೆಲ್ಲ ಮುಗಿತದ.

ಜಾನಕಿ : ನಿನ್ನ ಪಾಠ ನಡಿಲಿ. ಎಕಪಾರಿ ಅಂತ ಹೆಸರಿಟ್ಟಿ ನನಗ ನೆನಪಿದೆಯಾ?

ಜಾನ್ : ಒಂದು ವಾಕ್ಯದಾಗ ಒಂದೇ ನಾಮಪದ. ಅದು Proper Noun ಇರಬಹುದು, ಅಥವಾ Common Noun ಅಥವಾ Collective Noun ಅಥವಾ Abstract Noun ಇರಬಹುದು-ಎರಡು ಅಥವಾ ಹೆಚ್ಚು ಸಲ ಉಪಯೋಗ ವಾಗುತ್ತಿದ್ದರೆ, ಪ್ರತಿಸಲ ಅದನ್ನೇ ಉಪಯೋಗಿಸುವದು ಸಹಜವೆನಿಸಲಾರದಲ್ಲವೆ? ಉದಾಹರಣೆ-

ರಾಮನು[1] ಬಂದನು ಮತ್ತು ರಾಮನು[2] ಹಣ್ಣನ್ನು ತಿಂದನು.

ಎರಡನೆ-ಸಲ ರಾಮನ ಬದಲಾಗಿ ಅವನು ಅಂತ ಬರೆಯುವುದು ರೂಢಿ. ''ಅವನು ಹಣ್ಣನ್ನು ತಿಂದನು. ಜಾನಕಿ ಇಂಗ್ಲಿಷ್ ಕಲಿತಳು. ಜಾನಕಿ ಇಂಗ್ಲಿಷ್ ಬರೆದಳು. Janaki, who learnt English wrote it. ಇಲ್ಲಿ ಜಾನಕಿ ಬದಲಾಗಿ ಯಾರು (who) ಅಂತಲೂ ಮತ್ತು ಇಂಗ್ಲಿಷ ಬದಲಾಗಿ it ಉಪಯೋಗಿಸಲಾಗಿದೆ. ಇವುಗಳಿಗೆ Pronoun ಸರ್ವನಾಮ ಎನ್ನುವರು. ಅಂದರೆ ನಾಮಪದಗಳ ಬದಲಾಗಿ ಅವಕ್ಕೆ ಸರಿಸಮಾನಾರ್ಥದಲ್ಲಿ ಉಪಯೋಗಿಸುವ ಶಬ್ದಗಳಿಗೆ ಸರ್ವನಾಮ ಎಂದು ಕರೆಯುವರು.

ನೀನು ಏಕಪಾಠಿ ಅಂತ ತಿಳಿದು ಇಷ್ಟು ವಿವರವನ್ನು ಒಂದೇ ಸಲ ಹೇಳಿದೆ.

ಜಾನಕಿ : ನೀನು ಅಣಕಿಸಬೇಡಪಾ. ಸುಮ್ಮನೆ ಅರ್ಥ ಹೇಳು ಸಾಕು. ನಾನೆಲ್ಲ ಸಾವಕಾಶ.ಕಲಿಯುತ್ತೇನೆ.

ಜಾನ್ : Personal Pronoun ಮೂರು, ಅದರಲ್ಲಿ ಏಕವಚನ ಮತ್ತು ಬಹುವಚನ.

| | Singular ಏಕವಚನ | Plural ಬಹುವಚನ |
|---|---|---|
| First Person | I | We |
| Second Person | you | you |
| Third Person | He | They |
| | She | They |
| | It | They |

ಒಟ್ಟಿನ ಮೇಲೆ ನಿನಗೆ ಹೇಳಬೇಕೆಂದರ Personal Pronoun ಇವು - I, We, You, You, He, She, It They.

ಜಾನಕಿ : Noun, Pronoun.......... ಕಲಿಸಿದೆ. ಇವೆಲ್ಲಕ್ಕೂ ಏನಂತಾರ? ಮತ್ತು ಅವು ಎಷ್ಟು ಆದಾವು?

ಜಾನ್ : ಇವು ಮುಖ್ಯವಾಗಿ ಎಂಟು.

(೧) Noun-ನಾಮಪದ

(೨) Pronouns-ಸರ್ವನಾಮ

(೩) Adjective-ವಿಶೇಷಣ

(೪) Verb-ಕ್ರಿಯಾಪದ

(೫) Adverb-ಕ್ರಿಯಾ ವಿಶೇಷಣ

(೬) Conjunction-ಸಮುಚ್ಚಯ, ಕೂಡಿಸುವುದು (ಶಬ್ದ, ವಾಕ್ಯ)


(೭) Interjection-ಆಶ್ಚರ್ಯ ವಾಚಕ.

(೮) Preposition-ಉಪಸರ್ಗಾವ್ಯಯ.

ಇವೆಲ್ಲವುಗಳಿಗೆ "Parts of Speech" ಅಂತಾರ.

ಜಾನಕಿ : ಈಗ ನಾವು Noun Pronoun ಕಲಿತೆವು ಅಲ್ಲವೆ?

ಜಾನ್ : ಹೌದು. ಮತ್ತೆ ಮುಂದುವರಿಯೋಣ. ಈಗ ಜಾನಕಿ, ರೂಢಿಯಲ್ಲಿರುವಂತ ಶಬ್ದಗಳ ಬಗ್ಗೆ ಪ್ರಶ್ನೆ ಕೇಳಿದರ ಉತ್ತರ ಹೇಳಬಹುದಲ್ಲವೆ?



ಜಾನಕಿ : ನೀನು ಕೇಳುವಂತೆ ಕೇಳು. ಗೊತ್ತಿದ್ದರೆ ಹೇಳುತ್ತೇನೆ. ಇಲ್ಲಾ ನಾನು ದಡ್ಡಿ ಅಂತ ತಿಳಿದುಕೊ.

### ಕೊನೆ ಹನಿ

ಜಾನ್ : Black-ಇದಕ್ಕ ನಾನು ೩ ಶಬ್ದ ಹೇಳುತ್ತೇನೆ. ವಿರುದ್ಧ ಯಾವುದು ಹೇಳು.

1. Dark 2. Day 3. White

ಜಾನಕಿ : White

ಜಾನ್ : Wise

1. Dull 2. Short 3. Simple

ಜಾನಕಿ : Dull

ಜಾನ್ : Stand

1. Run 2. Sit 3. Sleep

ಜಾನಕಿ : Sit

ಜಾನ್ : Tall

1. Long 2. High 3. Short

ಜಾನಕಿ : Short.

[ಮುಂದಿನ ತಿಂಗಳು ಮುಂದುವರಿಯುವದು]

## ಹೇಳುತ್ತೀರಾ?

೧. ಭಾರತದ ರಾಷ್ಟ್ರ ಪ್ರಾಣಿ ಯಾವುದು?
೨. 'ವಂದೇ ಮಾತರಂ'ನ ರಚನೆಕಾರರು ಯಾರು?
೩. ಕಾರ್‌ಬೆಟ್ ನ್ಯಾಷನಲ್ ಪಾರ್ಕ್ ಯಾವ ರಾಜ್ಯದಲ್ಲಿದೆ?
೪. ನಮ್ಮ ದೇಶದ 'ರಾಷ್ಟ್ರ ಪುಷ್ಪ' ಯಾವುದು?
೫. ಮದರಾಸಿನ ಇತ್ತೀಚಿನ ಹೆಸರೇನು?
೬. ಭಾರತದ ಎರಡನೆಯ ಕೃತಕ ಉಪಗ್ರಹದ ಹೆಸರೇನು?
೭. ನಮ್ಮ ದೇಶದ ಅತಿ ಪ್ರಾಚೀನವಾದ ಲಿಪಿ ಯಾವುದು?
೮. ಭಾರತದ ರಾಷ್ಟ್ರ ಮುದ್ರೆ ಯಾವುದು?
೯. ಭಾರತದಲ್ಲಿ ಮೊದಲ ಬಾರಿಗೆ ಸಿಮೆಂಟ್ ಉತ್ಪಾದನೆ ಯಾದದ್ದು ಯಾವಾಗ? ಎಲ್ಲಿ?
೧೦. ಕುತುಬ್‌ಮಿನಾರ್ ಎಲ್ಲಿದೆ?

### ಉತ್ತರಗಳು

೧. ಹುಲಿ, ೨. ಬಂಕಿಮಚಂದ್ರ ಚಟ್ಟೋಪಧ್ಯಾಯ, ೩. ಉತ್ತರ ಪ್ರದೇಶ, ೪. ಕಮಲ, ೫. ಚೆನ್ನೈ, ೬. ಭಾಸ್ಕರ, ೭. ಬ್ರಾಹ್ಮಿ, ೮. ನಾಲ್ಕು ತಲೆಗಳುಳ್ಳ ಸಿಂಹ, ೯. ೧೯೦೪ರಲ್ಲಿ-ಮದರಾಸಿನಲ್ಲಿ, ೧೦. ದೆಹಲಿ.

– ಟಿ.ವಿ. ವೆಂಕಟರಮಣಯ್ಯ

ವಿನಾಯಕ ಕುಮಾರ, ಕೊಪ್ಪಳ


**ನಾನು ಪಿ.ಯು.ಸಿ. ದ್ವಿತೀಯ ವರ್ಷ (ವಿಜ್ಞಾನ)ದಲ್ಲಿ ಓದುತ್ತಿದ್ದೇನೆ. ನಾನು ಹೋಟೆಲ್ ಮ್ಯಾನೇಜ್‌ಮೆಂಟ್ ಕೋರ್ಸ್‌ನಲ್ಲಿ ಪದವಿ ಪಡೆಯಲು ಇಚ್ಛಿಸಿದ್ದೇನೆ. ಸಾಧ್ಯವೇ ತಿಳಿಸಿರಿ. ಇದಕ್ಕೆ ಪಿ.ಯು.ಸಿ.ಯಲ್ಲಿ ಎಷ್ಟು ಅಂಕಗಳನ್ನು ಪಡೆದಿರಬೇಕು ಮತ್ತು ಪ್ರವೇಶ ಪರೀಕ್ಷೆ ಇರುತ್ತದೆಯೆ ತಿಳಿಸಿರಿ. (Bachelor of Hotel Management-B.H.M.) ವಿವರಗಳೊಂದಿಗೆ ತಿಳಿಸುವಿರೆಂದು ನಂಬಿರುವೆ.**

ನೀವು ಅಗತ್ಯವಾಗಿ ಹೋಟೆಲ್ ಮ್ಯಾನೇಜ್‌ಮೆಂಟ್ ಕೋರ್ಸನ್ನು ಮಾಡಬಹುದು. ಪ್ರವಾಸೋದ್ಯಮ ಇಲಾಖೆಯವರು National Council for Hotel Management and Catoring technology ಕೋರ್ಸನ್ನು ೧೭ centreಗಳಲ್ಲಿ ಪ್ರವೇಶ ಪರೀಕ್ಷೆಯ ಮೂಲಕ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುತ್ತಾರೆ. ಈ ೧೭ ಕೇಂದ್ರಗಳಲ್ಲಿ ಬೆಂಗಳೂರು, ಹೈದ್ರಾಬಾದ್, ಮದ್ರಾಸ್, ದೆಹಲಿ ಮುಂತಾದವುಗಳು ಇವೆ. ಈ ಎಲ್ಲಾ ಕೇಂದ್ರಗಳಿಗೆ ಸರಕಾರ ಮಾನ್ಯತೆ ನೀಡಿರುತ್ತದೆ. ಇದಲ್ಲದೆ ಹಲವಾರು ಖಾಸಗಿ ಸಂಸ್ಥೆಗಳು ಈ ಕೋರ್ಸನ್ನು ನಡೆಸುತ್ತವೆ. ಇದಕ್ಕೆ ಅರ್ಹತೆ ಪಿ.ಯು.ಸಿ. ತತ್ಸಮಾನ ೫೦% ಅಂಕಗಳೊಂದಿಗೆ ತೇರ್ಗಡೆಯಾಗಿರಬೇಕು. ಲಿಖಿತ ಪರೀಕ್ಷೆಯ ಮೂಲಕ ಆಯ್ಕೆ ಮಾಡಲಾಗುವುದು. ಇದು ಮುಗಿಸಿದ ನಂತರ ಒಳ್ಳೆಯ ಅವಕಾಶಗಳು ಕಾದಿರುತ್ತವೆ.

ಮುಮ್ತಾಜಬೇಗಂ ಮುಧೋಳ, ಗಂಗಾವತಿ

**ನಾನು ಈ ವರ್ಷ ಬಿ.ಎ. ಅಂತಿಮ ಓದುತ್ತಿದ್ದೇನೆ. ಅಂಚೆ ಮೂಲಕ ಲೈಬ್ರರಿ ಸೈನ್ಸ್ ಮಾಡಲು ಬರುತ್ತದೆಯೇ? ನಾನು ಮುಂದೆ ಲೈಬ್ರೆರಿಯನ್ ಆಗಿ ಕೆಲಸ ಮಾಡಬೇಕೆಂಬ ಆಸೆಯಿದೆ. ಮಾಡಲು ಬರುತ್ತದೆಂದಾದರೆ ವಿಳಾಸ ತಿಳಿಸಿ. ಮತ್ತು ಅದರಲ್ಲಿ ಯಾವ ಯಾವ ವಿಷಯಗಳು ಅಧ್ಯಯನಕ್ಕಿರುತ್ತವೆ ತಿಳಿಸಿ.**

ಬ್ಯಾಚುಲರ್ ಆಫ್ ಲೈಬ್ರರಿ ಸೈನ್ಸ್ ಮತ್ತು ಇನ್‌ಫಾರ್‌ಮೇಶನ್ ಕೋರ್ಸನ್ನು ನೀವು ಅವಶ್ಯ ವಾಗಿ ಅಂಚೆ ತೆರಪಿನ ಮೂಲಕ ಮುಂದುವರಿಸ ಬಹುದು. ಇದಕ್ಕೆ ಅರ್ಹತೆ ಕನಿಷ್ಠ ಪದವಿಯಾಗಿರಬೇಕು. ಇದು ಒಂದು ವರ್ಷ ಅವಧಿಯ ಕೋರ್ಸ್ ಆಗಿರುತ್ತದೆ. ಅರ್ಜಿ ಮತ್ತು ಹೆಚ್ಚಿನ ವಿವರಗಳಿಗಾಗಿ ರೂ. ೨೫, D.D.ಯೊಂದಿಗೆ, Director, Directorate of Distance Education, Annamalai University, Annamalainagar - 608 002. ಇವರನ್ನು ಸಂಪರ್ಕಿಸಬಹುದು.



# ಮಾರ್ಗದರ್ಶಿ

○ ಡಾ. ಎಸ್.ಸಿ. ಶರ್ಮಾ

ಪ್ರಾಧ್ಯಾಪಕರು

ಆರ್.ವಿ. ಇಂಜಿನಿಯರಿಂಗ್ ಕಾಲೇಜು,

ಮೈಸೂರು ರಸ್ತೆ, ಬೆಂಗಳೂರು - ೫೬೦ ೦೫೯

ಕೆ. ಪರಶುರಾಮ, ಜನಗಾ

**ನಾನು ಬಿ.ಎ. ದ್ವಿತೀಯ ವರ್ಷದಲ್ಲಿ ಓದುತ್ತಿದ್ದು, ಮುಂದೆ ನನಗೆ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಆಗುವ ಆಸೆಯಿದೆ. ಆ ಹುದ್ದೆಗೆ ಇರುವ ದೈಹಿಕ ಅರ್ಹತೆಗಳು ಮತ್ತು ಶೈಕ್ಷಣಿಕ ಅರ್ಹತೆಗಳನ್ನು ದಯವಿಟ್ಟು ತಿಳಿಸಿ.**

ನೀವು Police Sub-Inspector ಆಗಬೇಕಾದಲ್ಲಿ ಕನಿಷ್ಠ ಪದವಿಯನ್ನು ಒಳ್ಳೆಯ ಅಂಕಗಳಲ್ಲಿ ತೇರ್ಗಡೆಯಾಗಿರಬೇಕು. ವಯಸ್ಸು ೧೮-೨೫. NCC (B & C) Outstanding sport certificateಗಳು ಇದ್ದಲ್ಲಿ ಒಳ್ಳೆಯದು. SSCರವರು ನಡೆಸುವ Police Sub-inspectors Examination ಪರೀಕ್ಷೆಯನ್ನು ಬರೆಯಬೇಕಾಗುವುದು. ಹಾಗೂ ದೈಹಿಕವಾಗಿ ಚೆನ್ನಾಗಿ ಇರಬೇಕು.

ಆನಂದ ಕುಲಕರ್ಣಿ, ಮುರಡಿ

**M.Com., LLB, C.A. ಹಾಗೂ MBA ಈ ನಾಲ್ಕರ ಬಗ್ಗೆ ವಿಸ್ತಾರವಾಗಿ ತಿಳಿಸಬೇಕೆಂದು ಕೋರುವೆ. ವಿಸ್ತಾರವಾಗಿ ಆಗದಿದ್ದರೆ ನಮಗೆ ತಿಳಿಯುವಂತೆ ಸಂಕ್ಷಿಪ್ತವಾಗಿ ತಿಳಿಸಬೇಕೆಂದು ಕೇಳಿಕೊಳ್ಳುವೆ.**

M.Com., LLB, C.A.ಮಾಡಲು ಕನಿಷ್ಠ ಪದವಿಯಾಗಿರಬೇಕು. M.Com. ಮತ್ತು C.A. ಮಾಡಬೇಕಾದಲ್ಲಿ ಪದವಿಯಲ್ಲಿ ಕನಿಷ್ಠ ೫೦% ಅಂಕಗಳೊಂದಿಗೆ ತೇರ್ಗಡೆಯಾಗಿರಬೇಕು. LLB ಮಾಡಲು ಪಾಸಾಗಿದ್ದರೆ ಸಾಕು. MBA ಮಾಡಲು ವಿಶ್ವವಿದ್ಯಾಲಯ ಅಥವಾ ಸಂಸ್ಥೆಗಳು ನಡೆಸುವ ಲಿಖಿತ ಪರೀಕ್ಷೆಯನ್ನು ಬರೆಯಬೇಕಾಗುವುದು.

ಕೆ. ಮತಿರಾಜ್, ಬೆಂಗಳೂರು

**ನಾನು U.V.C.ಯಲ್ಲಿ Mechanical Engineering ಮಾಡುತ್ತಿದ್ದೇನೆ. ಈ course ಬಗ್ಗೆ ನಿಮ್ಮ ಅಭಿಪ್ರಾಯವೇನು?**

**ನಾನು Mechanical ಮಾಡಿ Aeronatical (Aeromechanical) ಮಾಡಬೇಕೆಂದಿದ್ದೇನೆ. ದಯವಿಟ್ಟು ಇದರ ಬಗ್ಗೆ ತಿಳಿಸಿ.**

ನೀವು ಒಳ್ಳೆಯ ವಿಷಯವನ್ನೇ ತೆಗೆದುಕೊಂಡಿದ್ದೀರಿ. ಈ ವಿಷಯವು Broad Scope ಹೊಂದಿದ್ದು ಒಳ್ಳೆಯ ಅವಕಾಶಗಳು ಇವೆ. Aeronatical Engineering ಮಾಡಲು ಯಾವುದೇ Engineer-ing Departmentನಲ್ಲಿ ಪದವಿ ಹೊಂದಿದ್ದು ೫೫% ಅಂಕಗಳನ್ನು ತೆಗೆದುಕೊಂಡಿರಬೇಕು.

ಲಲಿತಾ, ಬೆಂಗಳೂರು

**ನಾನು ಈ ವರ್ಷ ಬಿ.ಬಿ.ಎಂ. ಎರಡನೇ ವಿಭಾಗದಲ್ಲಿ ಓದುತ್ತಿದ್ದೇನೆ. ನಾನು ಮುಂದೆ ಎಂ.ಬಿ.ಎ. ಮಾಡಲು ಬಯಸಿದ್ದೇನೆ. Indian Institute of Managementನಲ್ಲಿ ಸೇರ ಬೇಕಾದರೆ ಎಷ್ಟು percentage ಗಳಿಸಿರಬೇಕು. ಈ ಸಂಸ್ಥೆಯಲ್ಲಿ ಸೇರಲು ಅರ್ಹತೆಗಳೇನು. ನನಗೆ Bangalore Universityಯಲ್ಲಿ ಎಂ.ಬಿ.ಎ. ಮಾಡಲು ಇಷ್ಟವಿಲ್ಲ. ಎಂ.ಬಿ.ಎ. ಮಾಡಲು S.C., S.T.ಯವರಿಗೆ ಸರಕಾರವೇನಾದರೂ ಸಹಾಯ ಧನ ಒದಗಿಸುವುದೇ? Ahmadabad ಅಥವಾ Pune Universityಯಲ್ಲಿ ಎಂ.ಬಿ.ಎ. ಮಾಡ ಬೇಕಾದರೆ ಯಾರನ್ನು ಮತ್ತು ಹೇಗೆ ಸಂಪರ್ಕಿಸಬೇಕು?**

ನೀವು ಎಂ.ಬಿ.ಎ. ಕೋರ್ಸನ್ನು IIM ನಿಂದ ಮಾಡಬೇಕಾದಲ್ಲಿ ಇವರು ನಡೆಸುವ ಲಿಖಿತ ಪರೀಕ್ಷೆಯನ್ನು ಬರೆಯ ಬೇಕಾಗುವುದು. ಇದರಲ್ಲಿ ತೇರ್ಗಡೆಯಾದಲ್ಲಿ MBA ಕೋರ್ಸನ್ನು ಮುಂದುವರಿಸಬಹುದು. ಅಂಗೀಕೃತ ಬ್ಯಾಂಕಿನವರು Sc/Stಯವರಿಗೆ ಸಾಲ ರೂಪವಾಗಿ ಧನ ಸಹಾಯ ಮಾಡುತ್ತಾರೆ. ಮುಂದುವರಿಸಿ.

ಆರ್. ಮುನಿಲಕ್ಷ್ಮಯ್ಯ, ಬೆಂಗಳೂರು

**ನಾನು ಬಿ.ಕಾಂ. ಪಾಸು ಮಾಡಿದ್ದೇನೆ. ಮುಂದೆ ಆಡಿಟರ್ ಆಗಲು ನನಗೆ ಇಷ್ಟ, ಆದ್ದರಿಂದ ಅದಕ್ಕೆ ಬೇಕಾದ ಅರ್ಹತೆ ಮತ್ತು ಯಾವ ಸಂಸ್ಥೆಯನ್ನು ಸಂಪರ್ಕಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.**

ನೀವು Auditor ಆಗಬೇಕಾದಲ್ಲಿ Staff Selection Commission ರವರು ನಡೆಸುವ Divisional Accountant/Auditors/UDC

ಪರೀಕ್ಷೆಯನ್ನು ಬರೆಯಬೇಕಾಗಬಹುದು. ಇದಕ್ಕೆ ಕನಿಷ್ಠ ವಯೋಮಿತಿ ೨೧-೨೫. ಕನಿಷ್ಠ ವಿದ್ಯಾರ್ಹತೆ ಪದವಿಯಾಗಿರಬೇಕು.

ರಘುನಂದನ್, ಮಳವಳ್ಳಿ

**ನಾನು ಕಾರಣಾಂತರಗಳಿಂದಾಗಿ ಹತ್ತನೇ ತರಗತಿಗೇ ವಿದ್ಯಾಭ್ಯಾಸ ನಿಲ್ಲಿಸಿಬಿಟ್ಟೆ. ಈಗ ನನಗೆ ಹದಿನೆಂಟು ವರ್ಷ ತುಂಬಿದೆ. ನಾನೀಗ ಬಿ.ಎ.ಯನ್ನು ಖಾಸಗಿಯಾಗಿ ತೆಗೆದುಕೊಳ್ಳಲು ಬಯಸಿದ್ದೇನೆ. ಐಚ್ಛಿಕ ವಿಷಯವಾಗಿ Philosophy ಮತ್ತು Psychologyಯನ್ನು ತೆಗೆದುಕೊಳ್ಳಬೇಕೆಂದಿದ್ದೇನೆ. ಇದು ಸಾಧ್ಯವೇ? ಹೇಗೆ?**

ನೀವು ಅಗತ್ಯವಾಗಿ Psychology ವಿಷಯವನ್ನು ಮುಕ್ತ ವಿಶ್ವವಿದ್ಯಾಲಯದ ಮೂಲಕ ಮಾಡಬಹುದು. ಇದಕ್ಕೆ ೧೮ ವರ್ಷ ವಯಸ್ಸಾಗಿದ್ದರೆ ಸಾಕು. ಇದಕ್ಕಾಗಿ ನೀವು Preparatory ಪರೀಕ್ಷೆ ಪಾಸಾಗಬೇಕು. ಹೆಚ್ಚಿನ ವಿವರಗಳಿಗಾಗಿ Director, Diroctorate of Distance Education, Annamalai University, Annamalainagar - 508 002. ಇವರನ್ನು ಸಂಪರ್ಕಿಸಬಹುದು.

ಸುಧಾಕರ, ಯಾದಗಿರಿ

**ನಾನು ಪಿಯುಸಿ ವಿಜ್ಞಾನ ವಿಭಾಗದಲ್ಲಿ ಶೇ. ೪೫ ಅಂಕಗಳಿಂದ ಪಾಸಾಗಿದ್ದೇನೆ. ಈಗ ಸರಕಾರಿ ಸೇವೆಯಲ್ಲಿದ್ದೇನೆ. ನನಗೆ B.E. Civil ಮಾಡಬೇಕೆಂಬ ಗುರಿ ಇದೆ. ಕಾರಣ ದಯವಿಟ್ಟು ಇದಕ್ಕೆ ಮಾರ್ಗದರ್ಶನ ನೀಡಬೇಕಾಗಿ ಕೋರಿಕೆ.**

ನೀವು B.E.ಗೆ ಸಮಾನವಾದ A.M.I.E. ಕೋರ್ಸನ್ನು Civil ವಿಭಾಗದಲ್ಲಿಯೇ ಮಾಡಬಹುದು. ಹೆಚ್ಚಿನ ವಿವರಗಳಿಗಾಗಿ Institute of Engineers, No. 7, Gokale Road, Culcutta ಇವರನ್ನು ಸಂಪರ್ಕಿಸಬಹುದು.

ರವಿಕುಮಾರ್, ಮಂಡ್ಯ

**ನಾನು ತೃತೀಯ ಬಿ.ಎಸ್.ಸಿ. ಎ.ಜಿ. (B.Sc., AG) ಓದುತ್ತಿದ್ದೇನೆ. ನಾನು ಮುಂದೆ I.F.S. ಸ್ಪರ್ಧಾತ್ಮಕ ಪರೀಕ್ಷೆಯನ್ನು ತೆಗೆದುಕೊಳ್ಳಬೇಕೆಂದಿದ್ದೇನೆ. ಇದಕ್ಕೆ ಯಾವ ಅರ್ಹತೆಗಳು ಇರಬೇಕು. ಹಾಗೂ ಇದಕ್ಕೆ ಅನುಕೂಲವಾಗುವಂತಹ ಯಾವುದಾದರೂ ಪುಸ್ತಕವಿದೆಯೇ ದಯವಿಟ್ಟು ತಿಳಿಸಿರಿ.**

**ಹಾಗೂ ನನ್ನ ತಮ್ಮನು ಪ್ರಥಮ ಪಿ.ಯು.ಸಿ. ಕಲಾ ವಿಭಾಗದಲ್ಲಿ ಓದುತ್ತಿದ್ದಾನೆ. ಇವನು ಡಿ.ವೈ.ಎಸ್.ಪಿ. ಪರೀಕ್ಷೆಯನ್ನು ತೆಗೆದುಕೊಳ್ಳಬೇಕೆಂದಿದ್ದಾನೆ. ಇದಕ್ಕೆ ಯಾವ ಅರ್ಹತೆ ಇರಬೇಕು ಹಾಗೂ ಇದಕ್ಕೆ ಅನುಕೂಲವಾಗುವಂತಹ ಯಾವುದಾದರೂ ಪುಸ್ತಕವಿದೆಯೇ? ದಯವಿಟ್ಟು ತಿಳಿಸಿರಿ.**

I.F.S. ಮಾಡಲು ಕನಿಷ್ಠ ವಿದ್ಯಾರ್ಹತೆ ಪದವಿಯನ್ನು ಕೆಳಗಿನ ಒಂದು ವಿಷಯವನ್ನು ಐಚ್ಛಿಕವಾಗಿ ತೆಗೆದುಕೊಂಡಿರಬೇಕು. Botany, Chemistry, Geology, Mathamatics, Physics and Zoology ಅಥವಾ ಯಾವುದೇ ಪದವಿಯನ್ನು Agriculture/engineering ನಲ್ಲಿ ಮಾಡಿರಬೇಕು. ವಯಸ್ಸು ೨೧-೨೬. Sc/Stಯವರಿಗೆ ೨೧-೩೧ರ ವರೆಗೆ ಇರುತ್ತದೆ. ಪುಸ್ತಕಗಳು Marketನಲ್ಲಿ ಲಭ್ಯವಿರುತ್ತದೆ. ವಿಚಾರಿಸಿ.

ವಿರೇಶ, ಗುಲಬರ್ಗಾ

**ನಾನು ಪಿಯುಸಿ (ವಿಜ್ಞಾನ) ಪಾಸಾಗಿರುತ್ತೇನೆ. ಮನೆಯಲ್ಲಿ ಆರ್ಥಿಕ ತೊಂದರೆಯಿರುವುದರಿಂದ ಹೈದರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ B.Com., one sitting course ಮಾಡಬೇಕೆಂದು ಇಚ್ಛಿಸಿದ್ದೇನೆ. ಇದರಿಂದ ನಾನು I.A.S. ಪರೀಕ್ಷೆ ಬರೆಯಲು ಅರ್ಹನಾಗುತ್ತೇನೆಯೇ?**

ಅಗತ್ಯವಾಗಿ ನೀವು Osmánia University ಯವರು ನಡೆಸುವ one sitting ಪರೀಕ್ಷೆಯನ್ನು ತೆಗೆದುಕೊಳ್ಳಬಹುದು. ಇದರಲ್ಲಿ ತೇರ್ಗಡೆಯಾದಲ್ಲಿ ನೀವು ಅವಶ್ಯವಾಗಿ I.A.S. ಪರೀಕ್ಷೆಯನ್ನು ತೆಗೆದುಕೊಳ್ಳಬಹುದು.

ಎಂ.ಕೆ. ಲಕ್ಷ್ಮೀನಾರಾಯಣ್, ಮೈಸೂರು

**'ಬಿಸಿಲ ಬದುಕು' ಪತ್ರಿಕೆ ಓದಿದಾಗಿನಿಂದ ನನಗೂ ಆದಾಯ ತೆರಿಗೆ ಅಧಿಕಾರಿ ಆಗಬೇಕೆಂದು ಆಸೆಯಾಗಿದೆ. ನಾನು ೧ರಿಂದ ೧೦ನೇ ತರಗತಿವರೆಗೆ ಕನ್ನಡ ಮಾಧ್ಯಮದಲ್ಲಿ ಓದಿದ್ದು ಈಗ ಪಿ.ಯು.ಸಿ.ಯಲ್ಲಿ 'ವಿಜ್ಞಾನ' ಆರಿಸಿಕೊಂಡಿದ್ದೇನೆ. ನನಗೆ ಇಂಗ್ಲೀಷ್ ಸರಿಯಾಗಿ ಬರುವುದಿಲ್ಲ. ಆದ್ದರಿಂದ ಈ ಪರೀಕ್ಷೆಯನ್ನು ಕನ್ನಡದಲ್ಲಿ ಬರೆಯಬಹುದೇ?**

ಈ ಪರೀಕ್ಷೆಯನ್ನು ನೀವು ಕನ್ನಡದಲ್ಲಿ ಬರೆಯಲು ಆಗುವದಿಲ್ಲ. ಆದರೆ ಇದರಲ್ಲಿ Objective type ಪ್ರಶ್ನೆಗಳು ಇರುವದರಿಂದ ಸ್ವಲ್ಪವೆ ಇಂಗ್ಲೀಷ್ ಜ್ಞಾನವಿದ್ದಲ್ಲಿ ಬರೆಯಬಹುದು. ಈ ಬಗ್ಗೆ ಕೆಲವು ಸಂಸ್ಥೆಗಳು ತರಬೇತಿಯನ್ನು ಕೊಡುತ್ತವೆ. ಅದರ ಸದುಪಯೋಗವನ್ನು ನೀವು ಪಡೆದುಕೊಳ್ಳಬಹುದು.

ಎಲ್.ಆರ್. ನಾಯಕ್, ನವಲಿತಾಂಡ

**೨೧ರ ಹರೆಯದ ನಾನು ಬಿ.ಎ. ಮೊದಲ ವರ್ಷದಲ್ಲಿ ಓದುತ್ತಿದ್ದೇನೆ. ಆದರೆ ನಮ್ಮ ಕಾಲೇಜಿನಲ್ಲಿ ಸರಿಯಾಗಿ ಪಾಠಗಳು ನಡೆಯುತ್ತಿಲ್ಲ. ಆದ್ದರಿಂದ ಬಿ.ಎ. ಬಿಟ್ಟು ಐ.ಟಿ.ಐ. ಮಾಡಬೇಕೆಂದಿರುವೆ. ಆದರೆ ಅದಕ್ಕೆ ಡೊನೇಷನ್ ಕಟ್ಟಲು ಹಣವಿಲ್ಲ. ನನ್ನಂತಹ ಬಡ ವಿದ್ಯಾರ್ಥಿಯ ಸಮಸ್ಯೆಗೆ ಪರಿಹಾರವೇನು?**

ನೀವು ಒಳ್ಳೆಯ ಅಂಕಗಳು ತೆಗೆದುಕೊಂಡಿದ್ದಲ್ಲಿ ಯಾವುದೇ ತರಹದ ಡೊನೇಷನ್ ಕೊಡಬೇಕಾಗಿಲ್ಲ. ಏಕೆಂದರೆ ಸರಕಾರದವರೇ ಸೀಟುಗಳನ್ನು ವಿತರಿಸುತ್ತಾರೆ. ನೀವು ಐ.ಟಿ.ಐ. ಕೋರ್ಸನ್ನು ಮುಂದುವರಿಸಬಹುದು.

ಎಂ.ನಾಸಿರ್, ಎಚ್.ಎಂ. ಅಂಬರೀಶ್, ಹಿರೇಜಂತಕಲ್ಲು

**ಪಿ.ಯು.ಸಿ. ನಂತರ ಬಿ.ಬಿ.ಎಂ. ಮಾಡಲು ಬರುತ್ತದೆಯೋ? ಅಥವಾ ಇದನ್ನು ಡಿಗ್ರಿ ಆದ ಮೇಲೆ ಮಾಡಬೇಕೆ? ಎಷ್ಟು ಅಂಕ ಪಡೆದಿರಬೇಕು?**

ನೀವು ಅವಶ್ಯವಾಗಿ P.U.C.ಯಲ್ಲಿ ೫೦% ಅಂಕಗಳು ತೆಗೆದುಕೊಂಡಿದ್ದಲ್ಲಿ ನೇರವಾಗಿ Bacholor in Business Management Courseನ್ನು ಮಾಡಬಹುದು. ಇದು ಸುಮಾರಾಗಿ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಲಭ್ಯವಿರುತ್ತದೆ. ಮುಂದುವರಿಸಿ.

ಎ.ಡಿ. ಶಿರಹಟ್ಟಿ, ಐನಾಪೂರ

**ನಾನು ಪಿ.ಯು.ಸಿ. (ಕಾಮರ್ಸ್) ಎರಡನೇ ವರ್ಷದ ವಿದ್ಯಾರ್ಥಿ. ಪೊಲೀಸ್ ಸಬ್ ಇನ್ಸ್‌ಪೆಕ್ಟರ್ (ಪಿ.ಎಸ್.ಐ.) ಆಗುವುದು ನನ್ನ ಜೀವನದ ಗುರಿ. ನಾನು ಎಸ್.ಪಿ. ಆಗುವುದಾಗಿ ಭವಿಷ್ಯ ಹೇಳುವವರೂ ಖಾತರಿ ಪಡಿಸಿದ್ದಾರೆ. ಅದಕ್ಕಾಗಿ ಈಗ ನಾನು ಏನು ಮಾಡಬೇಕು? ಬಿ.ಕಾಂ. ಮಾಡಲೇ? ಬಿ.ಎ. ಮಾಡಲೇ? ಮಾರ್ಗದರ್ಶನ ಮಾಡಿ.**

ನೀವು ಯಾವುದೇ ಪದವಿಯನ್ನು ಮಾಡಿ Union Public Service Commissionರವರು ನಡೆಸುವ ಪರೀಕ್ಷೆಯನ್ನು ಬರೆಯಬೇಕಾಗುವುದು. ಹಾಗೂ ದೈಹಿಕವಾಗಿ ಚೆನ್ನಾಗಿ ಇರಬೇಕು. Ranking ವಿಧಾನದ ಮೇಲೆ ಹುದ್ದೆಗಳಿಗಾಗಿ ಆಯ್ಕೆ ಮಾಡಲಾಗುವುದು. ಈ ಕುರಿತು ಜಾಹಿರಾತು ಎಲ್ಲಾ ದಿನಪತ್ರಿಕೆಗಳಲ್ಲಿ ಕಾಲ ಕಾಲಕ್ಕೆ ಪ್ರಕಟಿಸಲಾಗುವುದು.

ಮಾರ್ಗದರ್ಶಿ ವಿಭಾಗಕ್ಕೆ ಬರೆದ ನಿಮ್ಮ ಪತ್ರಗಳನ್ನು ಈ ವಿಳಾಸಕ್ಕೆ ಕಳುಹಿಸಿರಿ :

ವಿಳಾಸ :

**ಬಿಸಿಲ ಬದುಕು** ಮಾಸಪತ್ರಿಕೆ

**ಮಾರ್ಗದರ್ಶಿ** ವಿಭಾಗ, ಅಂಚೆ ಪೆಟ್ಟಿಗೆ ೭೯೫೧

ಬಸವೇಶ್ವರನಗರ, ಬೆಂಗಳೂರು - ೫೬೦ ೦೭೯

# ಕೆ. ಓ. ಎಫ್: ಒಂದು ಯಶೋಗಾಥೆ

**ಕು**ರಿಯನ್ ಗುಜರಾತ್‌ನ ಆನಂದ್‌ನಲ್ಲಿ 'ಅಮುಲ್' ಎಂಬ ಹೆಸರಿನಲ್ಲಿ ಹೈನು ಕ್ರಾಂತಿ ನಡೆಸಿದ್ದು ಈಗ ಇತಿಹಾಸ. ಕುರಿಯನ್ ಅವರ ಸಾಧನೆ ಸಹಕಾರಿ ಕ್ಷೇತ್ರದ ಅದ್ಭುತ ಸಾಧನೆಗಳಲ್ಲೊಂದು. ಅದೇ ಮಾದರಿಯನ್ನು ಆಧರಿಸಿ ಕರ್ನಾಟಕ ಸರ್ಕಾರ ೧೯೮೪ರಲ್ಲಿ 'ಖಾದ್ಯತೈಲ/ಎಣ್ಣೆ ಬೀಜದ ಉತ್ಪಾದನೆ ಮತ್ತು ಮಾರಾಟದ ಪುನರ್ ವ್ಯವಸ್ಥೆಗಾಗಿ ಕಾರ್ಯಕ್ರಮವೊಂದನ್ನು ರೂಪಿಸಿತು. ಆ ಕಾರ್ಯಕ್ರಮವನ್ನು ಜಾರಿಗೊಳಿಸಲು ಸೃಷ್ಟಿಯಾದ ಸಂಸ್ಥೆ ಕೆಓಎಫ್ (KOF). ೯ ಜಿಲ್ಲೆಗಳನ್ನು ಆವರಿಸಿದ್ದ ಈ ಯೋಜನೆಯ ಮೊದಲ ಹಂತದಲ್ಲಿ (೧೯೮೪-೮೯) ರೂ. ೧೭.೨೭ ಕೋಟಿ ಹಣವನ್ನು ಒದಗಿಸಲಾಗಿತ್ತು. ೨ನೇ ಹಂತದಲ್ಲಿ '೯೦ರ ನಂತರ ಇಡೀ ಯೋಜನೆಯನ್ನು ೩ ವಿಭಾಗಗಳನ್ನಾಗಿ ವಿಭಾಗಿಸಲಾಯ್ತು. ಇಂದು ಫೆಡರೇಶನ್ ಗ್ರಾಮ ಮತ್ತು ಪ್ರಾಂತ್ಯ ಮಟ್ಟದಲ್ಲಿ ಬೆಳೆದ ಎಣ್ಣೆ ಬೀಜಗಳನ್ನು ಸಂಗ್ರಹಿಸಿ, ಸಂಸ್ಕರಿಸಿ ಮಾರಾಟ ಮಾಡುತ್ತಿದೆ.

ಕರ್ನಾಟಕ ಎಣ್ಣೆ ಒಕ್ಕೂಟ (KOF)ದ ಮೂಲ ಉದ್ದೇಶ - ಬೆಳೆಗಾರರ ಉತ್ಪನ್ನಗಳಿಗೆ ಸೂಕ್ತ ಮಾರಾಟ ವ್ಯವಸ್ಥೆಯ ಸೃಷ್ಟಿ, ಉತ್ಪಾದನೆ ಹೆಚ್ಚಳ/ಸಂಗ್ರಹ ಮತ್ತು ಸಂಸ್ಕರಣೆ ಮೂಲಕ ಬೆಳೆಗಾರರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವುದು, ಎಣ್ಣೆ ಬೀಜಗಳ ಉತ್ಪಾದನೆಗೆ ಸಹಕಾರಿಯಾಗುವ ಎಲ್ಲ ವ್ಯವಸ್ಥೆಗಳನ್ನು ಉತ್ತೇಜಿಸುವುದು.


ಕರ್ನಾಟಕದಾದ್ಯಂತ ಒಕ್ಕೂಟದ ಸದಸ್ಯರ ಸಂಖ್ಯೆ ೧,೪೬,೬೪೫ ಇದ್ದು ಇವರು ೩,೦೪೧ ಗ್ರಾಮಗಳಲ್ಲಿನ ೩೬೭ ಸಹಕಾರಿ ಸಂಘಗಳಲ್ಲಿ ಹಂಚಿಹೋಗಿದ್ದಾರೆ. ಇಂದು ೩,೫೭,೮೮೦ ಹೆಕ್ಟೇರ್ ಪ್ರದೇಶದಲ್ಲಿ ಎಣ್ಣೆ ಕಾಳಿನ ಬೆಳೆ ಬೆಳೆಯಲಾಗುತ್ತಿದೆ. ಸಹಕಾರಿ ಸಂಘಗಳು ತಮ್ಮ ಸದಸ್ಯರಿಗೆ ಸೂಕ್ತ ತಾಂತ್ರಿಕ ಸಲಹೆ/ಸಹಕಾರ ನೀಡುವುದರ ಮೂಲಕ ಉತ್ಪಾದನೆ ಹೆಚ್ಚಿಸಲು ನೆರವಾಗುತ್ತವೆ, ಬೆಳೆದ ಕಾಳುಗಳನ್ನು ಸ್ಥಳದಲ್ಲೇ ಸಂಸ್ಕರಿಸುವುದಲ್ಲದೆ, ಸೂಕ್ತ ಮಾರಾಟ ವ್ಯವಸ್ಥೆಯನ್ನೂ ಸಹಕಾರಿ ಸಂಘ ಸೃಷ್ಟಿಸಿದೆ.

ಹೊಸಪೇಟೆಯಲ್ಲಿರುವ ಸಂಸ್ಕರಣಾಗಾರವು ದಿನವಹಿ ೨೫೦ ಟನ್ ಕಡಲೆಕಾಯಿ ಬೀಜವನ್ನು, ೫೦ ಟನ್ ಸೂರ್ಯಕಾಂತಿ ಬೀಜವನ್ನು ಅರೆಯುವ ಸಾಮರ್ಥ್ಯ ಹೊಂದಿದೆ. ದಿನವಹಿ ೧೦೦ ಟನ್ ಎಣ್ಣೆಯನ್ನು ಉತ್ಪಾದಿಸುವ ಮತ್ತು ೫೦ ಟನ್ ಎಣ್ಣೆಯನ್ನು ಶೋಧಿಸುವ ಸಾಮರ್ಥ್ಯ ಈ ಸಂಸ್ಕರಣಾಗಾರಕ್ಕಿದೆ. ರಾಯಚೂರಿನ ಸಂಸ್ಕರಣಾಗಾರವನ್ನು ರೂ. ೨.೪೬ ಕೋಟಿ ಕೊಟ್ಟು ಕರ್ನಾಟಕ ಆಗ್ರೋ ಪ್ರೋಟಿನ್ಸ್ ಸಂಸ್ಥೆಯಿಂದ ಒಕ್ಕೂಟ ಕೊಂಡುಕೊಂಡಿದೆ. ೧.೨೫ ಕೋಟಿ ರೂ.ನ ದಾವಣಗೆರೆಯ ತೈಲ ಸಂಕೀರ್ಣ ಎಪ್ರಿಲ್ '೯೩ರಿಂದ ಕಾರ್ಯನಿರ್ವಹಿಸುತ್ತಿದೆ.

ವೈಟ್‌ಫೀಲ್ಡ್‌ನ ಘಟಕದಲ್ಲಿ ಎಣ್ಣೆಯನ್ನು ಪೊಟ್ಟಣ ಮಾಡುವ ಸೌಲಭ್ಯವಿದೆ. ಒಕ್ಕೂಟವು 'ಸಫಲ್' ಹೆಸರಿನಲ್ಲಿ ಕಡಲೆಕಾಯಿ ಮತ್ತು ಕೊಬ್ಬರಿ ಎಣ್ಣೆಯನ್ನು, 'ಸಫಲ್ ಸನ್‌ಗೋಲ್ಡ್' ಹೆಸರಿನಲ್ಲಿ ಸೂರ್ಯಕಾಂತಿ ಎಣ್ಣೆಯನ್ನು 'ಉತ್ತಮ್' ಹೆಸರಿನಲ್ಲಿ ತಾಳೆಎಣ್ಣೆಯನ್ನು 'ಉತ್ತಮ್ SFO' ಹೆಸರಿನಲ್ಲಿ ಸಂಸ್ಕರಿಸಿದ ಸೂರ್ಯಕಾಂತಿ ಎಣ್ಣೆಯನ್ನು ಒಕ್ಕೂಟ ಮಾರಾಟ ಮಾಡುತ್ತಿದೆ. ತಮ್ಮ ಶುದ್ಧತೆ ಮತ್ತು ಗುಣಮಟ್ಟಕ್ಕಾಗಿ ಈ ಉತ್ಪನ್ನಗಳು 'ಆಗ್‌ಮಾರ್ಕ್' ಅನ್ನು ಭಾರತ ಸರಕಾರದಿಂದ ಪಡೆದಿವೆ.

ಉತ್ಪಾದನಾ ಕ್ಷೇತ್ರದಲ್ಲಿನ ತನ್ನ ಸಾಧನೆಗಾಗಿ ರಾಷ್ಟ್ರೀಯ ಉತ್ಪಾದನಾ ಕೌನ್ಸಿಲ್‌ನಿಂದ ೧೯೮೬ರಲ್ಲಿ ಮತ್ತು ೧೯೮೭-೮೮ರಲ್ಲಿ ಎಣ್ಣೆ ಕಾಳಿನ ಕ್ಷೇತ್ರದಲ್ಲಿನ ಸಮಗ್ರ ಬೆಳವಣಿಗೆಗೆ 'ಉತ್ತಮ ಉತ್ಪನ್ನ ಪ್ರಶಸ್ತಿ'ಯನ್ನು ಒಕ್ಕೂಟ ತನ್ನ ಮಡಿಲಿಗೆ ಹಾಕಿಕೊಂಡಿದೆ. ಇದಲ್ಲದೆ ಮೆಕ್ಸಿಕೋನ ರಾಷ್ಟ್ರೀಯ ಮಾರಾಟ ಸಂಸ್ಥೆಯಿಂದ 'ಅಂತರಾಷ್ಟ್ರೀಯ ಡೈಮಂಡ್ ಸ್ಟಾರ್' ಪುರಸ್ಕಾರವನ್ನು ಒಕ್ಕೂಟ ಪಡೆದಿದೆ. ಸೇವೆ, ಗುಣಮಟ್ಟ ಮತ್ತು ವೃತ್ತಿಕೌಶಲ್ಯದಿಂದ ಉನ್ನತ ಗುಣಮಟ್ಟವನ್ನು ಸಾಧಿಸಿದ್ದಕ್ಕಾಗಿ ಈ ಪ್ರಶಸ್ತಿಯನ್ನು ಕೊಡಲಾಗುತ್ತದೆ.

ಗ್ರಾಮೀಣ ಕ್ಷೇತ್ರದಲ್ಲಿ ಒಳ್ಳೆಯ ಸೇವೆ ಸಲ್ಲಿಸುತ್ತಿರುವ ಒಕ್ಕೂಟವು ರೈತರಿಗೆ ವರದಾನವಾಗಿದ್ದು, ಅವರ ಆರ್ಥಿಕಾಭಿವೃದ್ಧಿಯಲ್ಲಿ ತನ್ನ ಪಾಲನ್ನು ಸಲ್ಲಿಸುತ್ತಿದೆ.




ಭೂಮಿಕೆಯಲ್ಲಿ ಮುಖ್ಯ ಪಾತ್ರ : ವೀರಪ್ಪನ್, ಗೋಪಾಲನ್, ಕೃಪಾಕರ ಸೇನಾನಿ, ಪಟೇಲ್, ಬೇಗ್, ಗುರುಪಾದ, ಕರುಣಾನಿಧಿ. ಆದರೆ ಈ ದಿನ ರಜೆ!

ಮನೆಮದ್ದು

## ಹೊಟ್ಟೆನೋವಿಗೆ


**ಕೆ**ಲವರಿಗೆ ಈ ಹೊಟ್ಟೆ ನೋವು ಬಹಳ ದಿನಗಳಿಂದ ಇರುವದು. ಇದನ್ನು ಪರಿಣಿತ ವೈದ್ಯರಿಗೆ ತೋರಿಸಿದರೂ ಯಾವುದೇ ತರಹದ ಔಷಧಿ ಗುಳಿಗೆ ಸೇವಿಸಿದರೂ, ಈ ಖಾಯಿಲೆ ವಾಸಿಯಾಗುವದಿಲ್ಲ. ಈ ರೋಗವಿದ್ದವರಿಗೆ ಹಸಿವೆಯಾಗುವದಿಲ್ಲ ಮತ್ತು ಭೇದಿ ಸರಿ ಹೋಗುವದಿಲ್ಲ. ನಮ್ಮ ಮನೆಗಳಲ್ಲಿ ಸಿಗುವ ಈ ವನಸ್ಪತಿಗಳಿಂದ ನಿವಾರಣೆ ಮಾಡಿಕೊಳ್ಳಬಹುದು.

ಗಜುಗದ ಕುಡಿ ಒಂದು ಹಿಡಿ, ಬಳ್ಳೊಳ್ಳಿ ಬೆಳೆ-೨ ಮತ್ತು ಮೂರೂ ಬಟ್ಟಿಗೆ ಬರುವಷ್ಟು ಸೈಂದ್ರ ಲವಣದ ಪುಡಿ. ಈ ಮೂರನ್ನು ಚೆನ್ನಾಗಿ ಅರೆದು ಸ್ವಚ್ಛವಾದ ಬಿಳಿ ಅರವಿಯಲ್ಲಿ ಹಾಕಿ. ಒಂದು ಕಪ್ಪು ಬಿಸಿನೀರಿನಲ್ಲಿ ಹಿಂಡಿ ಕುಡಿಸಬೇಕು. ಹೀಗೆ ಮೂರು ದಿನ ಹೊಟ್ಟೆ ನೋವು ಇದ್ದವರಿಗೆ ಕೊಡಬೇಕು. ಪತ್ಯ : ಹಾಲು, ಮೊಸರು, ಮಜ್ಜಿಗೆ, ಅನ್ನ ಊಟ ಮಾಡಬೇಕು. ಬೇರೆ ಏನನ್ನೂ ತಿನ್ನಬಾರದು.

**– ಜ.ಮ. ಅರ್ಕಚಾರಿ,** ಕುಂದೂರ

## ಕ್ವಿಜ್-೬ ಬಹುಮಾನ ವಿಜೇತರು

### ಪ್ರಥಮ ಬಹುಮಾನ
### ರೂ. ೫೦೦-೦೦



**ಜೆ.ಪಿ. ಶಿವಾರೆಡ್ಡಿ**
ನಂ. ೪೯೮, ೧೩ನೇ ಮುಖ್ಯ ರಸ್ತೆ, ೧ನೇ ಹಂತ,
೩ನೇ ವಿಭಾಗ, ವೆಸ್ಟ್ ಆಫ್ ಕಾರ್ಡ್ ರೋಡ್,
ಮಂಜುನಾಥ ನಗರ, ಬೆಂಗಳೂರು - ೧೦

### ದ್ವಿತಿಯ ಬಹುಮಾನ
### ರೂ. ೨೦೦-೦೦



**ಪ್ರಿಯದರ್ಶಿನಿ ಮಂಜುನಾಥ ಹೆಗಡೆ**
ಹಲಸಿನಹಳ್ಳಿ, ಕೋಡಿಮಸಿ,
ಪೋಸ್ಟ್: ಊರತೋಟ-೫೮೧ ೪೫೦
ತಾ. ಸಿರಸಿ, ಉತ್ತರ ಕನ್ನಡ

### ಸಮಾಧಾನಕರ ಬಹುಮಾನ
### ತಲಾ ರೂ. ೧೦೦/-

**ಮೊಹಮ್ಮದ್ ನಜೀರುದ್ದೀನ್**
ಶಿಕ್ಷಕರು,
ಸರಕಾರಿ ಶಿಕ್ಷಣ ಮಹಾವಿದ್ಯಾಲಯ
ಚಿತ್ರದುರ್ಗ- ೫೭೭ ೫೦೧

**ಕೆ. ಸಾವಿತ್ರ**
C/o ಬಾಲಪ್ಪ ಹೆಚ್.ವಿ., ಸಿಂಡಿಕೇಟ್ ಬ್ಯಾಂಕ್,
ಹರಪನಹಳ್ಳಿ - ೫೮೩ ೧೩೧
ದಾವಣಗೆರೆ ಜಿಲ್ಲೆ

**ಸುವರ್ಣ ಚಿದಂಬರ ಸೋದೆ**
ಪೋ. ಎಡಜಿಗಳೇ ಮನೆ - ೫೭೭ ೪೦೧
ತಾ. ಸಾಗರ ಜಿ. ಶಿವಮೊಗ್ಗ

## ಕ್ವಿಜ್ - ೬ರ ಸರಿಯುತ್ತರ

೧. ಪಿ. ಲಂಕೇಶ್
೨. ಹಾಸನ
೩. ಉಡುಪಿ
೪. ವೈ.ಎಸ್.ಕೃಷ್ಣಮೂರ್ತಿ
೫. ಸುಜಿತ್ ಸೋಮಸುಂದರ್ ಅಥವಾ ಅನಿಲ್ ಕುಂಬ್ಳೆ

**ಕ್ವಿಜ್ ೭ರ ವಿವರ :**

- ಕೆಳಗೆ ಕೇಳಿದ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆಯಾ ಪ್ರಶ್ನೆಯ ಕೆಳಗೆ ನೀಡಲಾದ ಸ್ಥಳದಲ್ಲಿ ಬರೆಯಿರಿ.
- ಒಬ್ಬರು ಎಷ್ಟು ಪ್ರವೇಶ ಪತ್ರಗಳನ್ನಾದರೂ ಕಳಿಸಬಹುದು. ಮುದ್ರಿತ ಕೂಪನ್ನೇ ಬಳಸಬೇಕು. ಜೆರಾಕ್ಸ್ ಪ್ರತಿ ಪರಿಗಣಿಸುವುದಿಲ್ಲ.
- ಪ್ರಥಮ ಬಹುಮಾನ ಪಡೆದವರ ಭಾವಚಿತ್ರ ಪ್ರಕಟಿಸಲಾಗುವುದು.
- ಸರಿಯುತ್ತರಗಳ ಪ್ರವೇಶ ಪತ್ರಗಳನ್ನೆಲ್ಲಾ ಸೇರಿಸಿ ಲಾಟರಿ ಮೂಲಕ ಬಹುಮಾನಗಳನ್ನು ನಿರ್ಧರಿಸಲಾಗುವುದು.
- ಪ್ರವೇಶ ಪತ್ರ ತಲುಪಲು ಅಂತಿಮ ದಿನಾಂಕ **೧-೧-೧೯೯೮**

# ಕ್ವಿಜ್ - ೭

೧. ಕೇಂದ್ರದಲ್ಲಿ ಗುಜ್ರಾಲ್ ಸರ್ಕಾರ ಬೀಳಲು ಕಾರಣವಾದ ವರದಿ ಯಾವುದು?

..............................................................

೨. ೬೬ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾರು?

..............................................................

೩. ಭಾರತ-ಶ್ರೀಲಂಕಾ ನಡುವಿನ ೨ನೇ ಟೆಸ್ಟ್ ಪಂದ್ಯದಲ್ಲಿ ಒಂದು ರನ್‌ನಿಂದ ಶತಕ ವಂಚಿತನಾದ ಭಾರತದ ಆಟಗಾರ ಯಾರು?

..............................................................

೪. ಸುಭಾಸ್‌ಚಂದ್ರ ಬೋಸ್‌ರ ಜನನದ ತಿಂಗಳು ಯಾವುದು?

..............................................................

೫. ಹರಿಹರ ಯಾವ ಜಿಲ್ಲೆಗೆ ಸೇರಿದೆ?

..............................................................

ಹೆಸರು..............................................................
ವಿಳಾಸ..............................................................
..............................................................
..............................................................
ಪಿನ್ ಕೋಡ್.............................. ದೂರವಾಣಿ..............................
ಪ್ರವೇಶ ಪತ್ರಗಳನ್ನು ಕಳುಹಿಸಬೇಕಾದ ವಿಳಾಸ :
ಸಂಪಾದಕರು, **ಬಿಸಿಲ ಬದುಕು**, ಅಂಚೆ ಪೆಟ್ಟಿಗೆ ೭೯೫೧, ಬಸವೇಶ್ವರ ನಗರ, ಬೆಂಗಳೂರು-೭೯.

# ನಿರುದ್ಯೋಗಿ ಯುವಕರಿಗೆ ಬದುಕು ನೀಡುತ್ತಿರುವ ಅಪರೂಪದ ಸಂಸ್ಥೆ

# ರುಡ್‌ಸೆಟ್

ಇಂದಿನ ಶಿಕ್ಷಣ ಪದ್ಧತಿ ನಿರುದ್ಯೋಗ ಸಮಸ್ಯೆಯನ್ನು ಉಲ್ಬಣ ಮಾಡುತ್ತಿರುವುದು ಎಲ್ಲರಿಗೂ ತಿಳಿದುದೇ ಆಗಿದೆ. ಈ ಸಮಸ್ಯೆಯು ಗ್ರಾಮೀಣ ಪ್ರದೇಶದಲ್ಲಿ ಇನ್ನೂ ತೀವ್ರ. ಈ ಕಾರಣದಿಂದ ಪಟ್ಟಣಕ್ಕೆ ವಲಸೆ ಹೋಗುತ್ತಿರುವುದು ಏರುತ್ತಿದೆ. ಬೆಳೆಯುತ್ತಿರುವ ಪಟ್ಟಣದ ಜೀವನ ದುರ್ಭರವಾಗುತ್ತಿದೆ. ಈ ಸಂಕೀರ್ಣತೆಗಳಿಂದ ಸಮಾಜದಲ್ಲಿ ಸಾಮರಸ್ಯ ಹಾಗೂ ಶಾಂತಿಗೆ ಕೊರತೆಯುಂಟಾಗುತ್ತದೆ. ಈ ಸಮಸ್ಯೆಗಳ ಪರಿಹಾರದ ತೀವ್ರ ಕಾಳಜಿಯುಳ್ಳವರೂ, ದೇಶದ ಧೀಮಂತ ಚಿಂತಕರೂ ಆದ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರು, ಗ್ರಾಮಾಭಿವೃದ್ಧಿಯ ಬಗ್ಗೆ ತೀವ್ರ ಕಾಳಜಿಯುಳ್ಳ ಸಿಂಡಿಕೇಟ್ ಮತ್ತು ಕೆನರಾ ಬ್ಯಾಂಕಿನ ಸಹಯೋಗದೊಡನೆ ಈ ಸಂಸ್ಥೆಯನ್ನು ಸ್ಥಾಪಿಸಿದರು. ಈ ಬ್ಯಾಂಕುಗಳ ಸಹ ಸಂಸ್ಥೆಗಳಾದ ಸಿಂಡಿಕೇಟ್ ಕೃಷಿ ಮತ್ತು ಗ್ರಾಮಾಭಿವೃದ್ಧಿ ಪ್ರತಿಷ್ಠಾನ ಹಾಗೂ ಕೆನರಾ ಬ್ಯಾಂಕ್ ಪ್ಲಾಟಿನಂ ಜ್ಯುಬಿಲಿ ರೂರಲ್ ಡೆವಲಪ್‌ಮೆಂಟ್ ಟ್ರಸ್ಟ್‌ಗಳೂ ಸಹ ಈ ಸಂಸ್ಥೆಯ ಪ್ರಾಯೋಜಕರಾಗಿದ್ದಾರೆ.

ರುಡ್‌ಸೆಟ್ ಸಂಸ್ಥೆಯಲ್ಲಿ ಹಸಿದವರಿಗೆ ಮೀನು ಕೊಡುವುದಿಲ್ಲ. ಮೀನು ಹಿಡಿಯುವ ರೀತಿಯನ್ನು ಕಲಿಸಿ ಕೊಡಲಾಗುವುದು. ಸ್ವಉದ್ಯೋಗ ಆಕಾಂಕ್ಷೆಯುಳ್ಳ ಯುವ ಜನತೆಗೆ ತಮ್ಮ ಕಾಲ ಮೇಲೆ ನಿಲ್ಲುವ ದಾರಿ ತೋರಿಸಿ ಬಿಟ್ಟರಷ್ಟೇ ಸಾಲದು. ಸ್ವ ಉದ್ಯೋಗದಲ್ಲಿ ಬರುವ ಹಲವು ಹತ್ತು ಸಮಸ್ಯೆಗಳನ್ನು ನಿವಾರಿಸಲು, ಎಡವಿದವರಿಗೆ ಕೈ ಆಸರೆ ಕೊಟ್ಟು ಮುನ್ನುಗ್ಗಲು ಪ್ರೇರೇಪಿಸುವ ಹಿರಿಯಣ್ಣ ಬೇಕು. ಈ ಕಾಯಕವನ್ನು ಪ್ರಾಮಾಣಿಕವಾಗಿ ಮಾಡಿರುವುದರಿಂದಲೇ ತರಬೇತಿ ಪಡೆದ ಪ್ರತಿ ನೂರು ಶಿಬಿರಾರ್ಥಿಗಳಲ್ಲಿ ೬೪ ಜನ ಸ್ವ ಉದ್ಯೋಗಿಗಳಾಗಿ ಸ್ವಂತಿಕೆ ಪಡೆಯುವಂತಾಯಿತು.

ಯಾವುದೇ ಕಾರ್ಯಕ್ರಮದ ಯಶಸ್ಸಿನ ಮಾನದಂಡ ಉದ್ದೇಶಗಳ ಈಡೇರಿಕೆಯ ಮಟ್ಟ. ಈ ದೃಷ್ಟಿಯಿಂದ ರುಡ್‌ಸೆಟ್ ಸಂಸ್ಥೆಯ ಫಲಿತಾಂಶ ಗಣನೀಯ. ದೇಶದ ಹಿರಿಯ ಮುತ್ಸದ್ದಿಗಳು, ಶಿಕ್ಷಣವೇತ್ತರು, ಸಮಾಜ ಸೇವಕರು, ಅಂತಾರಾಷ್ಟ್ರೀಯ ಸಂಸ್ಥೆಗಳು ಹಾಗೂ ವಿಶ್ವವಿದ್ಯಾನಿಲಯಗಳು ಈ ಸಾಧನೆಯನ್ನು ಗುರುತಿಸಿವೆ. ಇಲ್ಲಿನ ವಿನೂತನ ತರಬೇತಿ ಮತ್ತು ಮಾರ್ಗದರ್ಶನ ಮಾದರಿ ಎಂದು ಪರಿಗಣಿಸಲಾಗಿದೆ.

### ಧ್ಯೇಯೋದ್ದೇಶ

ಸ್ವಾವಲಂಬಿ ಸ್ವತಂತ್ರ ಜೀವನ ನಡೆಸಲು ಸಹಾಯಕವಾಗುವಂತೆ ಯುವಕ ಯುವತಿಯರನ್ನು

- ✦ ಗುರುತಿಸುವುದು
- ✦ ಪ್ರೇರೇಪಿಸುವುದು
- ✦ ತರಬೇತಿ ನೀಡುವುದು
- ✦ ಸ್ವ ಉದ್ಯೋಗ ಪ್ರಾರಂಭಿಸಲು ನೆರವು ಮಾರ್ಗದರ್ಶನ ನೀಡುವುದು.

### ಚಟುವಟಿಕೆಗಳು


- ✦ ಉದ್ಯಮಶೀಲತೆ ಹಾಗೂ ಸ್ವ ಉದ್ಯೋಗದ ಬಗ್ಗೆ ತರಬೇತಿ ಮತ್ತು ಮಾರ್ಗದರ್ಶನ.
- ✦ ಸ್ವ ಉದ್ಯೋಗದ ವಿಪುಲ ಅವಕಾಶಗಳನ್ನು ಮನದಟ್ಟು ಮಾಡುವುದು.
- ✦ ಗ್ರಾಮಾಭಿವೃದ್ಧಿಯಲ್ಲಿ ಪಾಲ್ಗೊಳ್ಳುವ ವಿವಿಧ ಸಂಘ ಸಂಸ್ಥೆಗಳ ಕಾರ್ಯಕರ್ತರನ್ನು ವಿಶಿಷ್ಟ ತರಬೇತಿಯಿಂದ ಸಜ್ಜುಗೊಳಿಸುವುದು.
- ✦ ಗ್ರಾಮೀಣ ಜನಜೀವನ ಉತ್ತಮವಾಗಲು ಔಚಿತ್ಯಪೂರ್ಣವಾದ ತಂತ್ರಜ್ಞಾನ ಸಂಶೋಧನೆಗಳ ಪ್ರದರ್ಶನ ಮತ್ತು ಪರಿಚಯ.

### ತರಬೇತಿಗೆ ಅರ್ಹತೆ

- ✦ ಸ್ವ-ಉದ್ಯೋಗ ಕೈಗೊಳ್ಳಲು ಆಸಕ್ತಿ ಇರುವ ೧೮ರಿಂದ ೩೫ ವರ್ಷ ವಯೋಮಿತಿಯೊಳಗಿನ ಓದು ಬರಹ ತಿಳಿದಿರುವ ನಿರುದ್ಯೋಗಿ ಯುವಕ ಯುವತಿಯರು.
- ✦ ತಾಂತ್ರಿಕ ತರಬೇತಿ ಕಾರ್ಯಕ್ರಮಗಳಲ್ಲಿ ಪ್ರಾಥಮಿಕ ಜ್ಞಾನ.

### ತರಬೇತಿಯ ವೈಶಿಷ್ಟ್ಯಗಳು

- ✦ ನುರಿತ ತರಬೇತುದಾರರು
- ✦ ಪ್ರಾಕ್ಟಿಕಲ್ಸ್ ಕಲಿಕೆಗೆ ಪ್ರಾಮುಖ್ಯತೆ.
- ✦ ವೈಜ್ಞಾನಿಕ ತರಬೇತಿಯ ಪದ್ಧತಿ
- ✦ ತಂತ್ರಜ್ಞಾನ ಮಾಹಿತಿ, ಆಪ್ತ ಸಮಾಲೋಚನೆ
- ✦ ಉತ್ತಮ ಕಲಿಕೆಯ ಸಾಮಗ್ರಿಗಳು
- ✦ ಗುಂಪು ಚರ್ಚೆ ಹಾಗೂ ಕ್ಷೇತ್ರ ದರ್ಶನ
- ✦ ಯೋಜನಾ ವರದಿ ತಯಾರಿ
- ✦ ಸರಕಾರ/ ಬ್ಯಾಂಕುಗಳ ಯೋಜನೆ ಪರಿಚಯ
- ✦ ಯಶಸ್ವಿ ಉದ್ಯಮಿಗಳೊಡನೆ ಸಂವಾದ
- ✦ ಹಣಕಾಸು ಸೌಲಭ್ಯ ಪಡೆಯಲು ಮಾರ್ಗದರ್ಶನ



"ಮೂರು ವರ್ಷ ಸತತ ಕಾಲೇಜು ವ್ಯಾಸಂಗ ಮಾಡಿ ಇತರರ ಲೆಕ್ಕ ಬರೆಯುವ ನೌಕರಿಗೆ ಹೋಗುವ ಬದಲು ಸ್ವ-ಉದ್ಯೋಗ ಮಾಡಿ ನಮ್ಮ ಲೆಕ್ಕ ಬರೆಯುವುದು ಹೆಚ್ಚು ಅರ್ಥಪೂರ್ಣವಾದದ್ದು."

-ಡಾ। ಡಿ. ವಿರೇಂದ್ರ ಹೆಗ್ಗಡೆಯವರು

ದೇಶದ ವಿವಿಧ ಭಾಗಗಳಲ್ಲಿ ಇಂತಹ ೧೨ ಕೇಂದ್ರಗಳಿದ್ದು ಅವುಗಳಲ್ಲಿ ಕರ್ನಾಟಕದಲ್ಲಿರುವ ೭ ಕೇಂದ್ರಗಳ ವಿಳಾಸ ಹಾಗೂ ಕಾರ್ಯಕ್ಷೇತ್ರ ಈ ಕೆಳಗಿನಂತಿವೆ :

| ಕೇಂದ್ರ ಹಾಗೂ ಅದರ ವಿಳಾಸ | ಕಾರ್ಯಕ್ಷೇತ್ರ |
|---|---|
| ೧. ಸಿದ್ಧವನ, ಉಜಿರೆ - ೫೭೪ ೨೪೦ ಬೆಳ್ತಂಗಡಿ ತಾಲೂಕು ಫೋನ್ : ೦೮೨೫೬-೬೧೪೦೪ | ಚಿಕ್ಕಮಗಳೂರು, ಹಾಸನ ಕೊಡಗು ಜಿಲ್ಲೆಗಳು ಹಾಗೂ ದ.ಕ. ಜಿಲ್ಲೆಯ ಮಂಗಳೂರು ಬಂಟ್ವಾಳ, ಸುಳ್ಯ, ಪುತ್ತೂರು ಹಾಗೂ ಬೆಳ್ತಂಗಡಿ ತಾಲೂಕುಗಳು. |
| ೨. ಶಿವಳ್ಳಿ ಉಡುಪಿ - ೫೭೬ ೧೦೨ ಫೋನ್ : ೦೮೨೫೨-೭೦೫೮೨ | ಉ.ಕ. ಜಿಲ್ಲೆ, ಶಿವಮೊಗ್ಗ ಜಿಲ್ಲೆ ಹಾಗೂ ದ.ಕ. ಜಿಲ್ಲೆಯ ಉಡುಪಿ, ಕುಂದಾಪುರ, ಕಾರ್ಕಳ ತಾಲೂಕುಗಳು |
| ೩. ಚಿತ್ರದುರ್ಗ ಬನಶಂಕರಿ ಬಡಾವಣೆ, ಹೌಸಿಂಗ್ ಬೋರ್ಡ್ ಕಾಲನಿ ಹಿಂಭಾಗ, NH-4 ಚಿತ್ರದುರ್ಗ - ೫೭೭ ೫೦೨ ಫೋನ್ : ೦೮೧೯೪-೨೩೫೦೫ | ಚಿತ್ರದುರ್ಗ, ಬಳ್ಳಾರಿ ಹಾಗೂ ತುಮಕೂರು ಜಿಲ್ಲೆಯ ಚಿಕ್ಕ ನಾಯಕನ ಹಳ್ಳಿ, ಶಿರಾ ತಾಲೂಕುಗಳು |
| ೪. ಧಾರವಾಡ ಜೆ.ಎಸ್.ಎಸ್. ವಠಾರ ವಿದ್ಯಾಗಿರಿ, ಧಾರವಾಡ - ೫೮೦ ೦೦೪ ಫೋನ್ : ೦೮೩೬-೪೪೮೯೬ | ಧಾರವಾಡ, ಬೆಳಗಾವಿ ರಾಯಚೂರು ಜಿಲ್ಲೆ |
| ೫. ಮೈಸೂರು ಕುರುಬರ ಹಳ್ಳಿ ಅಂಜಲಿ ಆಶ್ರಮದ ಎದುರು ಮೈಸೂರು - ೫೭೦ ೦೧೧ ಫೋನ್ : ೦೮೨೧-೨೫೮೬೩ | ಮೈಸೂರು ಹಾಗೂ ಮಂಡ್ಯ ಜಿಲ್ಲೆ |
| ೬. ಬಿಜಾಪುರ ವಿವೇಕ ನಗರ ರೈಲ್ವೇ ಗೇಟ್ (ಈಸ್ಟ್) ಬಿಜಾಪುರ - ೫೮೬ ೧೦೧ ಫೋನ್ : ೦೮೨೩೨-೫೩೨೪೫ | ಬೀದರ್, ಗುಲ್ಬರ್ಗಾ ಬಿಜಾಪುರ ಜಿಲ್ಲೆ |
| ೭. ನೆಲಮಂಗಲ ಅರಸಿನಕುಂಟೆ ನೆಲಮಂಗಲ ೫೬೨ ೧೨೩ ಬೆಂಗಳೂರು ಗ್ರಾಮಾಂತರ ಜಿಲ್ಲೆ ಫೋನ್ : ೦೮೧೧೮-೨೩೧೨೬ | ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕೆಲವು ಭಾಗ ಬೆಂಗಳೂರು ನಗರ ಜಿಲ್ಲೆ ತುಮಕೂರು ಜಿಲ್ಲೆಯ ಕೆಲವು ಭಾಗ |

- ✦ ಕ್ಷೇತ್ರ ಸಂದರ್ಶನ
- ✦ ವ್ಯವಹಾರದಲ್ಲಿ ಅನುಭವ ಪಡೆಯಲು ಅವಕಾಶ ಮತ್ತು ಮಾರ್ಗದರ್ಶನ.
- ✦ ಸ್ವ ಉದ್ಯೋಗ ಸ್ಥಾಪಿಸಲು ಅವಲೋಕನ (Follow up)

## ಸಂಸ್ಥೆಯಲ್ಲಿನ ಸೌಕರ್ಯಗಳು

- ✦ ಯೋಗಾಭ್ಯಾಸ
- ✦ ಉಚಿತ ತರಬೇತಿ, ಊಟ ಮತ್ತು ವಸತಿ
- ✦ ಕಲಿಕೆಗೆ ಸೂಕ್ತ ಪರಿಸರ
- ✦ ಸ್ವ-ಉದ್ಯೋಗಿಗಳಿಂದ ಮಾಹಿತಿ ಹಂಚಿಕೆ - ಸಂಪರ್ಕ
- ✦ ಗ್ರಂಥಾಲಯ/ಟಿ.ವಿ./ವಿಡಿಯೋ ಸೌಲಭ್ಯ
- ✦ ಪ್ರಾಯೋಗಿಕ ತರಬೇತಿ
- ✦ ವ್ಯವಹಾರ ಯೋಜನೆಗಳು/ಮಾಹಿತಿಗಳ ಭಂಡಾರ

## ತರಬೇತಿಗಳು :

ನಿರುದ್ಯೋಗಿ ಯುವ ಜನತೆಯಲ್ಲಿ ಅತೀ ದೊಡ್ಡ ಗುಂಪು ಗ್ರಾಮೀಣ ಪ್ರದೇಶದ ಕೆಳಮಧ್ಯಮ ವರ್ಗದವರು. ಸಾಮಾನ್ಯವಾಗಿ ಹೈಸ್ಕೂಲ್ ಅಥವಾ ಕಾಲೇಜು ಶಿಕ್ಷಣವನ್ನು ಮಧ್ಯದಲ್ಲಿ ಬಿಡುವ ಅನಿವಾರ್ಯ ಪರಿಸ್ಥಿತಿಯಲ್ಲಿರುವವರು. ರುಡ್‌ಸೆಟ್ ಸಂಸ್ಥೆಗಳ ತರಬೇತಿಗಳ ಸದುಪಯೋಗ ಪಡೆಯುವವರಲ್ಲಿ ಈ ಗುಂಪು ಅತೀ ಹೆಚ್ಚಿನದು. ಅತಿ ಬಡವರು ಈ ಸಂಸ್ಥೆಯ ಸೇವೆ ಪಡೆಯಲು ಅನುಕೂಲವಾಗುವಂತೆ ತರಬೇತಿ, ಊಟ, ವಸತಿಯನ್ನು ಉಚಿತವಾಗಿ ನೀಡಲಾಗುತ್ತಿದೆ.

ಪ್ರತೀ ಸಂಸ್ಥೆಯು ಸಮೀಪದ ಮೂರು ನಾಲ್ಕು ಜಿಲ್ಲೆಗಳ ಕಾರ್ಯಕ್ಷೇತ್ರವನ್ನು ಹೊಂದಿದೆ. ತನ್ನ ಕಾರ್ಯಕ್ಷೇತ್ರದಲ್ಲಿರುವ ಸ್ವ-ಉದ್ಯೋಗದ ಅವಕಾಶಗಳಿಗನುಗುಣವಾಗಿ ತರಬೇತಿಯನ್ನು ರೂಪಿಸಲಾಗುತ್ತಿದೆ. ಈ ಕಾರಣದಿಂದಲೇ ಸುಮಾರು ೫೦ಕ್ಕೂ ಮಿಕ್ಕಿ ತರಬೇತಿ ಕಾರ್ಯಕ್ರಮಗಳನ್ನು ಯೋಜಿಸಲಾಗಿದೆ.

## ತರಬೇತಿ ಕ್ರಮ

ಪ್ರತೀ ತರಬೇತಿ ಕಾರ್ಯಕ್ರಮದಲ್ಲಿ ಸ್ವ ಉದ್ಯೋಗ ಯಶಸ್ವಿಯಾಗಲು ಅತ್ಯಗತ್ಯವಾದ ಪ್ರೇರೇಪಣೆ, ತಾಂತ್ರಿಕ ಕೌಶಲ್ಯ ಮತ್ತು ವ್ಯವಹಾರ ನಿರ್ವಹಣೆಯನ್ನು ತಿಳಿಸಲಾಗುತ್ತದೆ. ಇಲ್ಲಿ ಕಲಿಕೆ ಒಂದು ಆಟ. ನೀರಸ ಪ್ರವಚನಗಳಿಗೆ ಅವಕಾಶವಿಲ್ಲ. ತಮ್ಮ ವೃತ್ತಿಗಳಲ್ಲಿ ಅನುಭವಿಗಳಾದ ಹಲವು ಸ್ವ ಉದ್ಯೋಗಿಗಳು ಈ ಸಂಸ್ಥೆಗಳ ಗೌರವ ಉಪನ್ಯಾಸಕರು. ಪ್ರತಿ ಸಂಸ್ಥೆಗಳು ಇಂತಹ ನೂರಕ್ಕೂ ಮಿಕ್ಕಿ ಗೌರವ ಉಪನ್ಯಾಸಕರುಗಳ ಸೇವೆಯನ್ನು ಪಡೆಯುತ್ತವೆ. ಇವರಲ್ಲಿ ಈ ಸಂಸ್ಥೆಯಿಂದ ಹಿಂದೆ ತರಬೇತಿ ಪಡೆದವರದೇ ಸಿಂಹಪಾಲು.

ಪ್ರಾತ್ಯಕ್ಷಿಕೆ- ಅನುಭವಗಳಿಂದ ಕಲಿಯುವುದರಿಂದಲೇ ತರಬೇತಿ ಪರಿಣಾಮಕಾರಿಯಾಗಿದೆ. ಇದಕ್ಕೆ ಅಗತ್ಯವಾದ ಅನುಕೂಲತೆಗಳನ್ನು ಸಾಕಷ್ಟು ಮಾಡಿಕೊಳ್ಳಲಾಗುತ್ತದೆ. ಈ ದಿಸೆಯಲ್ಲಿ ಸ್ಥಳೀಯರ ಮನೆ ಉಪಕರಣ, ಯಂತ್ರಗಳ ಉಚಿತ ರಿಪೇರಿ ಶಿಬಿರ ವಿನೂತನವಾದದ್ದು. ಉಚಿತ ಸೇವೆ ನಾಗರೀಕರಿಗೆ ದೊರೆಯುವಾಗ ಶಿಬಿರಾರ್ಥಿಗಳು ಸ್ವ ಉದ್ಯೋಗದ ನಿಜ ಜೀವನದ ಕ್ಷಣಗಳನ್ನು ಅನುಭವಿಸುತ್ತಾರೆ. ಉದಾಹರಣೆಗೆ : ವಸ್ತ್ರ ವಿನ್ಯಾಸ ತರಬೇತಿ ಶಿಬಿರದಲ್ಲಿ ಶಿಬಿರಾರ್ಥಿಗಳು

ಕೊನೆಯಲ್ಲಿ ತಾವು ವಿನ್ಯಾಸಗೊಳಿಸಿದ ಉಡುಪುಗಳ ಪ್ರದರ್ಶನ ಏರ್ಪಡಿಸುತ್ತಾರೆ. ತುಂಬಾ ಜನಪ್ರಿಯಗೊಳ್ಳುತ್ತಿರುವ ಈ ಪ್ರದರ್ಶನದಲ್ಲಿ ತಾವೇ ವಿನ್ಯಾಸಗೊಳಿಸಿದ ಉಡುಪುಗಳು ಲಾಭಕರ ಬೆಲೆಯಲ್ಲಿ ಮಾರಾಟವಾಗುತ್ತಿರುವುದು ಅವರ ಸಾಮರ್ಥ್ಯದ ಅರಿವನ್ನು ಮಾಡಿ ಆತ್ಮವಿಶ್ವಾಸವನ್ನು ವೃದ್ಧಿಸುತ್ತದೆ. ಈ ಕಾರಣಗಳಿಂದ ಶಿಬಿರಾರ್ಥಿಗಳು ಬೆಳಗ್ಗಿನ ತನಕ ಹುಮ್ಮಸ್ಸಿನಿಂದ ಪ್ರಾಯೋಗಿಕ ಕಾರ್ಯಗಳನ್ನು ಮಾಡುವುದು ಸಾಮಾನ್ಯ, ಅಚ್ಚರಿಯ ವಿಷಯವೂ ಹೌದು. ತರಬೇತಿಯ ಕಾರ್ಯಕ್ರಮಗಳ ಬಗ್ಗೆ ತೀವ್ರ ಕಾಳಜಿ, ಆಸಕ್ತಿಯುಳ್ಳ ರುಡ್‌ಸೆಟ್ ಸಂಸ್ಥೆಗಳ ಅಧ್ಯಕ್ಷರಾದ ಡಾ. ಡಿ. ವೀರೇಂದ್ರ ಹೆಗ್ಗಡೆಯವರು ಆಗಾಗ್ಗೆ ಶಿಬಿರಾರ್ಥಿಗಳನ್ನು ಉದ್ದೇಶಿಸಿ ಪ್ರೇರೇಪಣೆ, ಮಾರ್ಗದರ್ಶನ ನೀಡುತ್ತಿರುವುದು ಶಿಬಿರಾರ್ಥಿಗಳಿಗೆ ಹುಮ್ಮಸ್ಸನ್ನು ನೂರ್ಮಡಿಗೊಳಿಸುತ್ತದೆ. ಶ್ರೀ ಹೆಗ್ಗಡೆಯವರು ಹೇಳುತ್ತಾರೆ ''ಈ ಹುಡುಗರ ಹುಮ್ಮಸ್ಸು ಕಠಿಣ ಶ್ರಮದೆಡೆಗೆ ಪ್ರೇರೇಪಣೆ ನಿಜಕ್ಕೂ ವಿಸ್ಮಯಪಡುವಂತಹದು''. ಪೂರಕವಾಗಿ ಸಿಂಡಿಕೇಟ್ ಮತ್ತು ಕೆನರಾ ಬ್ಯಾಂಕಿನ ವರಿಷ್ಠಾಧಿಕಾರಿಗಳು ಶಿಬಿರಾರ್ಥಿಗಳೊಡನೆ ಸಂವಾದಿಸಿ ಹುರುಪು, ಚೈತನ್ಯ ತುಂಬುತ್ತಾರೆ.

ತರಬೇತಿ ಮುಕ್ತಾಯದ ಹಂತ ಬರುವುದರೊಳಗೆ ಸ್ವ ಉದ್ಯೋಗ ಸ್ಥಾಪಿಸಲು ಇರುವ ಅವಕಾಶಗಳು ಸರಕಾರದ ನಿಯಮಗಳ ಅರಿವಿನಿಂದ ತಮ್ಮ ಮುಂದಿನ ಗುರಿ ಏನು ಎಂಬುದು ಶಿಬಿರಾರ್ಥಿಗಳಿಗೆ ಸ್ಪಷ್ಟವಾಗುತ್ತದೆ. ಸಂಸ್ಥೆಯ ಮಾರ್ಗದರ್ಶನದಲ್ಲಿ ಇದಕ್ಕೆ ಬೇಕಾಗುವ ನೀಲ ನಕಾಶೆಯನ್ನು ಸಿದ್ಧಪಡಿಸುತ್ತಾರೆ.

ತರಬೇತಿಯ ನಂತರ ವಿದ್ಯಾರ್ಥಿಗಳಿಗೆ ಇನ್ನೂ ಹೆಚ್ಚಿನ ಅನುಭವದ ಅವಶ್ಯಕತೆಯಿದ್ದಲ್ಲಿ, ಸಂಸ್ಥೆಯ ಹಳೆಯ ವಿದ್ಯಾರ್ಥಿಗಳ ಮುಖಾಂತರ ಈ ಅವಶ್ಯಕತೆಯನ್ನು ಪೂರೈಸಲಾಗುತ್ತದೆ. ಆರ್ಥಿಕ ಅನುಕೂಲಕ್ಕಾಗಿ ವಿದ್ಯಾರ್ಥಿಗಳು ತಯಾರಿಸಿದ ಯೋಜನಾ ವರದಿಯನ್ನು ಬ್ಯಾಂಕುಗಳಿಗೆ ಶಿಫಾರಸ್ಸುಗೊಳಿಸಿ ಸಾಲವನ್ನು ಪಡೆಯಲು ಸಂಸ್ಥೆ ಸಹಾಯ ನೀಡುತ್ತದೆ.

### ಅವಲೋಕನ

ಸ್ವ ಉದ್ಯೋಗ ತರಬೇತಿ ಸ್ವಾವಲಂಬನೆಯತ್ತ ಒಂದು ಪ್ರಮುಖ ಮೆಟ್ಟಿಲು. ಈ ದಿಸೆಯಲ್ಲಿ ಸಂಸ್ಥೆಯ ಪ್ರಯತ್ನಕ್ಕೆ ಗಟ್ಟಿತನ ದೊರಕಿರುವುದು ತರಬೇತಿ ಪಡೆದ ನಂತರ ಶಿಬಿರಾರ್ಥಿಗಳ ಫಾಲೋಅಪ್. ಒಮ್ಮೆ ಶಿಬಿರದಿಂದ ತನ್ನ ಸ್ಥಳಕ್ಕೆ ವಾಪಸ್ಸಾದ ಶಿಬಿರಾರ್ಥಿಗಳಿಗೆ ಸ್ವ ಉದ್ಯೋಗವನ್ನು

## ರುಡ್‌ಸೆಟ್ ಸಂಸ್ಥೆಗಳ ಸಾಧನೆ

**ದೇಶಾದ್ಯಂತ ಈವರೆಗೆ ರುಡ್‌ಸೆಟ್ ಸಂಸ್ಥೆಗಳು ೫೬೬೩೬ ನಿರುದ್ಯೋಗಿ ಯುವ ಜನರನ್ನು ತರಬೇತಿಗೊಳಿಸಿವೆ. ಇವರಲ್ಲಿ ೩೪೪೮೫ ಜನ ಸ್ವ ಉದ್ಯೋಗ ಕೈಗೊಂಡು ಯಶಸ್ವಿಯಾಗಿದ್ದಾರೆ. ಯಶಸ್ವಿಗೊಂಡವರಲ್ಲಿ ೧೫೩೦೭ ಜನರು ಬ್ಯಾಂಕುಗಳ ಆರ್ಥಿಕ ನೆರವನ್ನು ಪಡೆದಿದ್ದಾರೆ.**

**ಕರ್ನಾಟಕದ ಏಳು ರುಡ್‌ಸೆಟ್ ಸಂಸ್ಥೆಗಳು ೨೮೯೨೫ ನಿರುದ್ಯೋಗಿ ಯುವ ಜನರನ್ನು ತರಬೇತಿಗೊಳಿಸಿವೆ. ಇವರಲ್ಲಿ ೧೯೫೨೭ ಜನ ಸ್ವ ಉದ್ಯೋಗ ಕೈಗೊಂಡು ಯಶಸ್ವಿಯಾಗಿದ್ದಾರೆ. ಯಶಸ್ವಿಗೊಂಡವರಲ್ಲಿ ೬೯೯೧ ಜನರು ಬ್ಯಾಂಕುಗಳ ಆರ್ಥಿಕ ನೆರವನ್ನು ಪಡೆದಿದ್ದಾರೆ.**

## ತರಬೇತಿಗೆ ಹೇಗೆ ಸೇರುವುದು?

ತರಬೇತಿ ಪಡೆಯಲು ಅಪೇಕ್ಷೆ ಪಡುವವರು ಕೆಳಗಿನ ಅರ್ಜಿ ನಮೂನೆಯಲ್ಲಿ ಅರ್ಜಿಯನ್ನು ಸಲ್ಲಿಸಬಹುದು :

ಇವರಿಗೆ,

**ನಿರ್ದೇಶಕರು,**
**ರುಡ್‌ಸೆಟ್ ಸಂಸ್ಥೆ**
**ಅರಿಶಿನಕುಂಟೆ, ನೆಲಮಂಗಲ - ೫೬೨ ೧೨೩**

೧. ಹೆಸರು ಮತ್ತು ವಿಳಾಸ :

೨. ವಯಸ್ಸು :

೩. ವಿದ್ಯಾರ್ಹತೆ :

೪. ತಂದೆ/ ರಕ್ಷಕರ ಹೆಸರು :

೫. ಕುಟುಂಬದ ವೃತ್ತಿ :

೬. ಈಗ ಮಾಡುತ್ತಿರುವ ಉದ್ಯೋಗ :

೭. ಪಡೆಯಲಿಚ್ಛಿಸುವ ತರಬೇತಿ :

೮. ಈ ತರಬೇತಿ ಯಾಕೆ ಬೇಕು?

೯. ಬ್ಯಾಂಕಿನ ಮೂಲಕ ಬರುವವರಾದರೆ
ಬ್ಯಾಂಕಿನ ಹೆಸರು ಮತ್ತು ವಿಳಾಸ :

ಸ್ಥಳ : ಅಭ್ಯರ್ಥಿಯ ಸಹಿ

ತಾರೀಕು :

ಸ್ಥಾಪಿಸಲು ಹಲವು ಸಾಮಾಜಿಕ, ಆರ್ಥಿಕ ಸಮಸ್ಯೆಗಳು ಎದುರಾಗಬಹುದು. ಇವುಗಳನ್ನು ನಿವಾರಿಸುವಲ್ಲಿ ಆತನಿಗೆ ಸಹಾಯ ಮಾಡಲು ಈ ಫಾಲೋಅಪ್ ತುಂಬಾ ಪರಿಣಾಮಕಾರಿ. ತರಬೇತಿ ಪಡೆದ ಒಂದು ತಿಂಗಳಿಂದ ಕಾಲಕಾಲಕ್ಕೆ ಶಿಬಿರಾರ್ಥಿಗಳ ಭೇಟಿ ತಾಲೂಕು ಯಾ ಜಿಲ್ಲಾ ಮಟ್ಟದ ಸಭೆಗಳಲ್ಲಿ ಅಥವಾ ಶಿಬಿರಾರ್ಥಿಗಳ ಸ್ಥಳ ಭೇಟಿಯ ಮೂಲಕ ಮತ್ತು ಪತ್ರ ವ್ಯವಹಾರದ ಮೂಲಕ ಮಾಡಲಾಗುತ್ತದೆ. ಪ್ರಾಯೋಜಕ ಬ್ಯಾಂಕಿನ ಸ್ಥಳೀಯ ಮ್ಯಾನೇಜರುಗಳು, ಲೀಡ್ ಬ್ಯಾಂಕ್ ಮ್ಯಾನೇಜರ್‌ಗಳು, ಕೆಲವೊಮ್ಮೆ ಸರಕಾರಿ ಅಧಿಕಾರಿಗಳು ಈ ಫಾಲೋಅಪ್‌ದಲ್ಲಿ ಪಾಲ್ಗೊಳ್ಳುತ್ತಾರೆ. ಶಿಬಿರಾರ್ಥಿಗಳ ಹಲವು ಸಮಸ್ಯೆಗಳು ಈ ಮೂಲಕ ಪರಿಹಾರಗೊಂಡು ತನ್ನ ಸ್ವ ಉದ್ಯೋಗ ಪ್ರಾರಂಭಿಸುವಲ್ಲಿ ಆತ ಸಶಕ್ತನಾಗುತ್ತಾನೆ. ಈ ಫಾಲೋಅಪ್‌ನ್ನು ಸಂಸ್ಥೆ ತರಬೇತಿ ಪಡೆದ ೨ರಿಂದ ೩ ವರ್ಷದ ತನಕ ಮಾಡುತ್ತದೆ. ಇದರಿಂದ ಸಂಸ್ಥೆಗೂ, ವ್ಯಾವಹಾರಿಕ ಜಗತ್ತಿನ ಇತಿಮಿತಿಗಳು, ಸ್ವಉದ್ಯೋಗದ ನೂತನ ಅವಕಾಶಗಳು, ಯಶೋಗಾಥೆಗಳ ಕಾರಣಗಳ ಬಗ್ಗೆ ಅಮೂಲ್ಯವಾದ ಪ್ರಥಮ ಮಾಹಿತಿ ಲಭ್ಯವಾಗುತ್ತದೆ.

## ಲಭ್ಯವಿರುವ ತರಬೇತಿ ಕಾರ್ಯಕ್ರಮಗಳು

### ಕೃಷಿ ಸಂಬಂಧಿ

- ಕೃಷಿ ಹಾಗೂ ಕೃಷಿಯೇತರ ಚಟುವಟಿಕೆ (೧೩ ದಿನ)
- ಹೈನುಗಾರಿಕೆ (೮ ದಿನ)
- ತೋಟಗಾರಿಕೆ (೧೩ ದಿನ)
- ಕೋಳಿ ಸಾಕಾಣಿಕೆ (೬ ದಿನ)
- ಕೃತಕ ಗರ್ಭದಾರಣೆ (೧೩ ದಿನ)
- ಕರು ಸಾಕಾಣಿಕೆ (೫ ದಿನ)
- ರೇಷ್ಮೆ ಕೃಷಿ (೬ ದಿನ)

### ತಾಂತ್ರಿಕ ತರಬೇತಿ

- ಸಿದ್ಧ ಉಡುಪು ತಯಾರಿಕೆ (೧೫ ದಿನ) (ಮಹಿಳೆಯರಿಗೆ ಹಾಗೂ ಯುವಕರಿಗೆ ಪ್ರತ್ಯೇಕ)
- ಪಂಪ್ ಸೆಟ್ ಮತ್ತು ಮೋಟಾರ್ ರಿವೈಂಡಿಂಗ್ (೩೦ ದಿನ)
- ರೇಡಿಯೋ, ಟಿ.ವಿ. ರಿಪೇರಿ (೩೦ ದಿನ)
- ಗೃಹೋಪಯೋಗಿ ವಿದ್ಯುತ್ ಉಪಕರಣ ದುರಸ್ತಿ (೧೩ ದಿನ)
- ಸ್ಕ್ರೀನ್ ಪ್ರಿಂಟಿಂಗ್ (೧೩ ದಿನ)
- ಫೋಟೋಗ್ರಫಿ (೧೩ ದಿನ)
- ವಿಡಿಯೋಗ್ರಫಿ (೧೫ ದಿನ)
- ರೆಫ್ರಿಜರೇಟರ್ ಮತ್ತು ಏರ್‌ಕಂಡೀಷನರ್ ದುರಸ್ತಿ (೧೩ ದಿನ)
- ಬ್ಯೂಟಿಷಿಯನ್ (೩೦ ದಿನ)
- ಬಿಲ್ಡಿಂಗ್/ಮೆಟಲ್ ಪೈಂಟಿಂಗ್ (೧೮ ದಿನ)
- ದ್ವಿಚಕ್ರ ವಾಹನ ದುರಸ್ತಿ (೩೦ ದಿನ)
- ಅಗರಬತ್ತಿ ತಯಾರಿಕೆ (೧೦ ದಿನ)
- ಆಹಾರ ಸಂಸ್ಕರಣೆ (೧೫ ದಿನ)
- ಫ್ಯಾನ್ಸಿ ವಸ್ತು ತಯಾರಿ (೬ ದಿನ)
- ಫಿನೈಲ್ ತಯಾರಿ (೬ ದಿನ)

### ಇತರ ತರಬೇತಿಗಳು

- ಸಣ್ಣ ವ್ಯಾಪಾರ, ಚಿಕ್ಕಪುಟ್ಟ ಕೈಗಾರಿಕೆ - ಸೇವಾ ತರಬೇತಿ (REDP) (೧೫-೨೦ ದಿನ)
- ಉದ್ಯಮ-ಶೀಲತಾ ಅಭಿವೃದ್ಧಿ ತರಬೇತಿ ಕೈಗಾರಿಕೆ (EDP) (೨೦ ದಿನ)

ವರ್ಷವಿಡೀ ಕೇಂದ್ರದಲ್ಲಿ ತರಬೇತಿ ನಡೆಯುತ್ತಲಿದ್ದು, ಆಯಾ ತರಬೇತಿ ನಡೆಯುವಾಗ ಅರ್ಜಿದಾರರನ್ನು ಸಂಬಂಧಿಸಿದ ತರಬೇತಿಗೆ ಕರೆಯಲಾಗುವುದು

ಬ್ಯಾಂಕುಗಳ ಮೂಲಕ ಅರ್ಜಿಗಳು ಶಿಫಾರಸು ಮಾಡಿದರೆ ಪ್ರಾಶಸ್ತ್ಯ ನೀಡಲಾಗುವುದು.

ಶಿಬಿರಾರ್ಥಿಗಳ ಆಯ್ಕೆಯನ್ನು ಅಗತ್ಯವಾದಾಗ ಸಂದರ್ಶನ ಅಥವಾ ಲಿಖಿತ ಪರೀಕ್ಷೆಯ ಆಧಾರದ ಮೇಲೆ ಮಾಡಲಾಗುವುದು.

### ಕಾರ್ಯಕ್ರಮಗಳ ಪರಿಚಯ

ಸಂಘ, ಸಂಸ್ಥೆಗಳು, ಬ್ಯಾಂಕುಗಳ ಸಹಯೋಗದೊಂದಿಗೆ ಯುವ ಜನತೆಯ ನೆರವಿಗೆ 'ಸ್ವ-ಉದ್ಯೋಗ ಮತ್ತು ಉದ್ಯಮ ಶೀಲತಾ' ಮಾಹಿತಿ ಶಿಬಿರವನ್ನು ಏರ್ಪಡಿಸುವುದು.

## ಮಹಿಳೆಯರಿಗೆ ಉದ್ಯಮದಲ್ಲಿ ತರಬೇತಿ

**ಬೆಂ**ಗಳೂರಿನ ಸಮೀಪ ಅರಿಶಿನಕುಂಟೆಯಲ್ಲಿ ನೂತನವಾಗಿ ಸ್ಥಾಪಿಸಲಾಗಿರುವ ಗ್ರಾಮಾಭಿವೃದ್ಧಿ ಹಾಗೂ ಸ್ವ-ಉದ್ಯೋಗ ತರಬೇತಿ ಸಂಸ್ಥೆಯು ಡಿಸೆಂಬರ್ ತಿಂಗಳಲ್ಲಿ ಬೆಂಗಳೂರು ಗ್ರಾಮಾಂತರ ಹಾಗೂ ನಗರ ಜಿಲ್ಲೆಯ 'ಮಹಿಳೆಯರಿಗಾಗಿ' ಎರಡು ಪ್ರತ್ಯೇಕ ಉದ್ಯಮಶೀಲತಾ ತರಬೇತಿಗಳನ್ನು ನಡೆಸಲಿದೆ. ಸ್ವಂತ ಉದ್ಯೋಗವನ್ನು ಪ್ರಾರಂಭಿಸಲು ಇಚ್ಛಿಸುವ ಮಹಿಳೆಯರು ತಮ್ಮ ವಯಕ್ತಿಕ ವಿವರಗಳೊಡನೆ ಸಂಸ್ಥೆಗೆ ಅರ್ಜಿ ಸಲ್ಲಿಸಬಹುದು. ೨೦ ದಿನಗಳ ಈ ತರಬೇತಿಯು ಪೂರ್ಣವಾಗಿ ಉಚಿತವಾಗಿದ್ದು, ಉಚಿತ ಊಟ ಹಾಗೂ ವಸತಿ ಸೌಲಭ್ಯವನ್ನು ವ್ಯವಸ್ಥೆ ಮಾಡಲಾಗುತ್ತದೆ.

ತರಬೇತಿಯಲ್ಲಿ ವ್ಯಾಪಾರ, ಕೈಗಾರಿಕೆ ಹಾಗೂ ಸೇವಾ ಕೇಂದ್ರಗಳನ್ನು ಪ್ರಾರಂಭಿಸಲು ಬೇಕಾದ ಪೂರ್ಣ ಮಾಹಿತಿ, ಉದ್ಯಮ ಶೀಲತೆ, ಬ್ಯಾಂಕುಗಳಿಂದ ಸಾಲ, ಯೋಜನಾ ವರದಿ ತಯಾರಿಸುವದು, ಮಾರುಕಟ್ಟೆ ಸಮೀಕ್ಷೆ, ಮಾರಾಟದ ಕಲೆ, ಲೆಕ್ಕಪತ್ರಗಳ ಬಗ್ಗೆ ಮಾಹಿತಿ ಅವಕಾಶಗಳನ್ನು ಗುರುತಿಸುವಿಕೆ ಉದ್ಯಮ, ವ್ಯಾಪಾರ ನಿರ್ವಹಣೆ ಇತ್ಯಾದಿ ವಿಷಯಗಳ ಬಗ್ಗೆ ತರಬೇತಿಯನ್ನು ಕೊಡಲಾಗುವುದು. ಮಹಿಳೆಯರು ಸಮರ್ಥ ಉದ್ಯಮಿಗಳಾಗಲು ಸಹಾಯಕವಾಗುವಂತೆ, ಈ ತರಬೇತಿಯನ್ನು ತಯಾರು ಮಾಡಲಾಗಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹಾಗೂ ನಗರ ಜಿಲ್ಲೆಯ ೧೮ರಿಂದ ೩೫ ವರ್ಷದ ವಯಸ್ಸಿನ ಆಸಕ್ತ ಮಹಿಳೆಯರು: ಯುವತಿಯರು ತಮ್ಮ ಹೆಸರು, ವಿಳಾಸ, ಅನುಭವ, ಶಿಕ್ಷಣ ಮತ್ತಿತರ ಎಲ್ಲಾ ವಿವರಗಳನ್ನೊಳಗೊಂಡ ಅರ್ಜಿಯನ್ನು ಈ ಕೂಡಲೇ ನಿರ್ದೇಶಕರು, ಗ್ರಾಮಾಭಿವೃದ್ಧಿ ಹಾಗೂ ಸ್ವ-ಉದ್ಯೋಗ ತರಬೇತಿ ಕೇಂದ್ರ, ಅರಿಶಿನಕುಂಟೆ, ನೆಲಮಂಗಲ-೫೬೨ ೧೨೩ ಇವರಿಗೆ ಕಳುಹಿಸಬೇಕು. ಹೆಚ್ಚಿನ ಮಾಹಿತಿಗಾಗಿ ಫೋನ್ ನಂ. ೦೮೧೧೮-೨೩೧೬೬ಗೆ ಸಂಪರ್ಕಿಸಬಹುದು. ಕನ್ನಡ ಓದಲು ಮತ್ತು ಬರೆಯಲು ಬರುವವರಿಗೆ ಮಾತ್ರ ತರಬೇತಿಯನ್ನು ನೀಡಲಾಗುವುದು.

# ಅಡುಗೆಮನೆ

## ಮಾವಿನಕಾಯಿ ಚಟ್ನಿ

**ಬೇಕಾಗುವ ಸಾಮಗ್ರಿಗಳು**



೧-೨ ಸಿಹಿ ಮಾವಿನ ಕಾಯಿ (ಸಿಪ್ಪೆ-ಬೀಜ ತೆಗೆದಿರಬೇಕು), ೧ ಈರುಳ್ಳಿ, ೩-೪ ಹಸಿ ಮೆಣಸಿನಕಾಯಿ, ೧/೨ ತೆಂಗಿನಕಾಯಿ (ಹರೆ ದದ್ದು), ೧ ಅಂಗುಲ ಹಸಿ ಶುಂಠಿಯ ತುಂಡು, ರುಚಿಗೆ ಬೇಕಾಗುವಷ್ಟು ಉಪ್ಪು, ಒಂದು ಚಮಚ ಜೀರಿಗೆ, ಕರಿಬೇವು, ಕೊತ್ತಂಬರಿ ಸೊಪ್ಪು.

**ಮಾಡುವ ವಿಧಾನ**

ಈ ದಿನಸುಗಳನ್ನು ನೀರು ಸೇರಿಸದೆ ಸಣ್ಣಗೆ (ರುಬ್ಬಿ) ಅರೆಯಿರಿ. ಸ್ವಲ್ಪ ಬೆಲ್ಲವನ್ನು ಹಾಕಿರಿ. ರುಬ್ಬಿದ ನಂತರ ಸ್ವಲ್ಪ ಎಣ್ಣೆ ಕಾಯಿಸಿ ಸಾಸಿವೆ ಹಾಕಿ ಒಗ್ಗರಣೆ ಕೊಡಿ, ಆಗ ಮಾವಿನಕಾಯಿ ಚಟ್ನಿ ತಯಾರಾಗುತ್ತದೆ.

**- ಅನುಪಮಾ ಹುಂಬಿ**, ಬ್ಯಾಡಗಿ

## ಜೋಳದ ಶಾವಿಗೆ ಉಪ್ಪಿಟ್ಟು

**ಬೇಕಾಗುವ ಸಾಮಗ್ರಿಗಳು**

ಜೋಳದ ಹಿಟ್ಟು ೨೫೦ ಗ್ರಾಂ, ೨ ಚಮಚ ಕೆಂಪು ಮೆಣಸಿನ ಪುಡಿ, ರುಚಿಗೆ ತಕ್ಕಷ್ಟು ಉಪ್ಪು, ಜೀರಿಗೆ, ಸಾಸಿವೆ, ಬಳ್ಳೊಳ್ಳಿ, ೨ ಉಳಾಗಡ್ಡಿ, ಸೇಂಗಾ.



**ಮಾಡುವ ವಿಧಾನ**

ಜೋಳದ ಹಿಟ್ಟನ್ನು ಗಟ್ಟಿಯಾಗಿ ನಾದಿಕೊಳ್ಳಿ. ಕುದಿಯುವ ನೀರಿನ ಮೇಲೆ ಜಾಣಗಿಯನ್ನು ಇಟ್ಟು ಆ ಗಟ್ಟಿಯಾದ ಜೋಳದ ಹಿಟ್ಟನ್ನು ಸೇವಿನ ಮನೆಯಲ್ಲಿ ಹಾಕಿ ಸಣ್ಣಗೆ ಜಾಣಗಿಯ ಮೇಲೆ ಬಿಡಬೇಕು. ನಂತರ ಅದರ ಮೇಲೆ ಮುಚ್ಚಿ ೫ ನಿಮಿಷ ಹೀಗೆ ಒಲೆಯ ಮೇಲೆ ಬಿಡಬೇಕು.

ನಂತರ ತೆಗೆದು ಎಣ್ಣೆಯನ್ನು ಕಾಯಿಸಿ ಜೀರಿಗೆ ಸಾಸಿವೆ, ಬಳ್ಳೊಳ್ಳಿ, ಉಳ್ಳಾಗಡ್ಡಿ, ಸೇಂಗಾ ಹಾಕಿ, ಆಮೇಲೆ ಜೋಳದ ಶಾವಿಗೆಯನ್ನು ಹಾಕಿ, ಕಾರ ರುಚಿಗೆ ತಕ್ಕಷ್ಟು ಉಪ್ಪು ಹಾಕಬೇಕು.

ಇದನ್ನು ಮಾಡಿ ಒಮ್ಮೆ ತಿಂದು ನೋಡಿ.

**- ಭಾರತಿ ನ್ಯಾಮಗೌಡ**, ಬೆಂಗಳೂರು

## ಪಾಲಕ್ ಪನ್ನೀರ್ ಬಿರಿಯಾನಿ

**ಬೇಕಾಗುವ ಸಾಮಗ್ರಿಗಳು**

ಅಕ್ಕಿ ೨ ಕಪ್, ೪೦೦ ಗ್ರಾಂ ಪನ್ನೀರ್, ೪೦೦ ಗ್ರಾಂ ಪಾಲಕ್, ಹಸಿಖಾರದ ಪೇಸ್ಟ್, ೧ ಕಪ್ ಈರುಳ್ಳಿ, ಟೊಮೇಟೋ ಹಣ್ಣು ಅರ್ಧ ಕಪ್, ಗರಂ ಮಸಾಲ ಚೂರುಗಳು, ಟೊಮೇಟೋ ಪ್ಯೂರೆ ಅರ್ಧ ಕಪ್, ೧ ಚಮಚ ಕಾರದ ಪುಡಿ, ಮುಕ್ಕಾಲು ಕಪ್ ಕ್ರೀಮ್, ಶುಂಠಿ ೧, ಅರ್ಧ ಕಪ್ ಮೊಸರು, ಪುದೀನಾ ಎಲೆ, ದ್ರಾಕ್ಷಿ, ಗೋಡಂಬಿ.



**ಮಾಡುವ ವಿಧಾನ :**

ಬಾಸುಮತಿ ಅಕ್ಕಿಯನ್ನು ೩ ಸಾರಿ ತೊಳೆದು ನೀರು ಬಸಿದು ಇಡಿ. ಒಗ್ಗರಣೆಗೆ ತುಪ್ಪ ಹಾಕಿ ಗರಂ ಮಸಾಲೆ ಚೂರುಗಳು ಹಾಕಿ ಹುರಿಯಿರಿ. ಅದಕ್ಕೆ ಹೆಚ್ಚಿದ ಈರುಳ್ಳಿ ೪ ಚಮಚ ಹಾಕಿ. ತೊಳೆದ ಅಕ್ಕಿ ಹಾಕಿ ಹುರಿದು ಅದಕ್ಕೆ ಹಿಡಿಸುವಷ್ಟು ನೀರು ಹಾಕಿ, ಉಪ್ಪು, ದ್ರಾಕ್ಷಿ, ಗೋಡಂಬಿ ಹಾಕಿ ಬೇಯಿಸಿ.

ಒಗ್ಗರಣೆಗೆ, ತುಪ್ಪ ೨ ಚಮಚ ಹಾಕಿ ಈರುಳ್ಳಿ ಹುರಿದು ಬೆಳ್ಳುಳ್ಳಿ ಚೂರು, ಟೊಮೇಟೋ ಹಣ್ಣು ಹಾಕಿ ಬೇಯಿಸಿದ ಪಾಲಕ್ ಸೊಪ್ಪು ನೀರು ಬಸಿದು ಹಾಕಿ. ಹಸಿಮೆಣಸಿನಕಾಯಿ ಪೇಸ್ಟ್, ಕ್ರೀಮ್ ೨ ಚಮಚ, ಉಪ್ಪು ಖಾರದ ಪುಡಿ ಅರ್ಧ ಚಮಚ ಹಾಕಿ. ಟೊಮೇಟೋ ಪ್ಯೂರೆ ಹಾಕಿ ಕೆದಕಿ. ನಂತರ ಪನ್ನೀರ್ ತುಂಡುಗಳು ಹಾಕಿ ಹುರಿದು ೨ ನಿಮಿಷ ಬೇಯಿಸಿ.

ಓವನ್ ಬಿಸಿ ಮಾಡಿ, ಬೇಕಿಂಗ್ ತಟ್ಟೆಯಲ್ಲಿ ಒಳಗೆ ಬೆಣ್ಣೆ ಹಚ್ಚಿ. ದುಂಡಗೆ ಹೆಚ್ಚಿದ ಟೋಮೇಟೋ ತುಂಡುಗಳು ದುಂಡಗೆ ಹರಡಿ. ಬೆಂದ ಬಿರಿಯಾನಿ ಅನ್ನ ಸ್ವಲ್ಪ ಹರಡಿ ನಂತರ ಅದರ ಮೇಲೆ ಪಾಲಕ್ ಪನ್ನೀರ್ ಹರಡಿ ನಂತರ ಗರಂ ಮಸಾಲ ಪುಡಿ ಉದುರಿಸಿ, ಕ್ರೀಮ್ ೨ ಚಮಚ ಹರಡಿ ನಂತರ ಪನ್ನೀರ್ ಬಿರಿಯಾನಿ ಅನ್ನ, ಕ್ರೀಮ್, ಮೊಸರು ಮತ್ತು ಶುಂಠಿ ತುಂಡುಗಳು ಹರಡಿ ಫಾಯಲ್ ಹಾಳೆಯಿಂದ ಮುಚ್ಚಿ ೧೦ ನಿಮಿಷ ಬಿಸಿ ಮಾಡಿದ ಓವನ್‌ನಲ್ಲಿ ಬೇಯಿಸಿ. ಬಿರಿಯಾನಿಯ ಬಟ್ಟಲನ್ನು ೧ ತಟ್ಟೆಯೊಳಗೆ ಮೊಗುಚಿ ತಿನ್ನಲು ಕೊಡಿ, ಪಾಲಕ್ ಮತ್ತು ಪನ್ನೀರ್ ನಸು ವಾಸನೆಯಿಂದ ಕೂಡಿದ ಬಿರಿಯಾನಿ ಸಿದ್ಧವಾಗಿರುತ್ತದೆ.

**- ಪದ್ಮಿನಿ ಕೆ.**, ದಾವಣಗೆರೆ

## ಹಾಗಲಕಾಯಿ ಚಟ್ನಿ



**ಬೇಕಾಗುವ ಸಾಮಗ್ರಿಗಳು**

ಹಾಗಲಕಾಯಿ ಕಾಲು ಕೆ.ಜಿ., ಬಳ್ಳೊಳ್ಳಿ ೨, ಉಪ್ಪು ರುಚಿಗೆ ತಕ್ಕಷ್ಟು, ಖಾರದಪುಡಿ ರುಚಿಗೆ ತಕ್ಕಷ್ಟು, ಎಣ್ಣೆ ೨ ದೊಡ್ಡ ಚಮಚ.

**ಮಾಡುವ ವಿಧಾನ :**

ಹಾಗಲಕಾಯಿಯನ್ನು ಚೆನ್ನಾಗಿ ತೊಳೆದು ಚಿಕ್ಕ ಚಿಕ್ಕ ತುಂಡುಗಳನ್ನಾಗಿ ಹೆಚ್ಚಬೇಕು. ಇದನ್ನು ಬಾಣಲೆಯಲ್ಲಿ ಎಣ್ಣೆಹಾಕಿ ಚೆನ್ನಾಗಿ ಹುರಿಯಬೇಕು. ಹುರಿಯುವಾಗ ಇದಕ್ಕೆ ಉಪ್ಪು ಹಾಕಬೇಕು. ಕೆಳಗಿಳಿಸುವಾಗ ಖಾರದ ಪುಡಿ ಹಾಕಿ ಕೈಯಾಡಿಸಿ (ಚಮಚದಿಂದ) ಇಳಿಸಬೇಕು. ಇದು ಆರಿದ ಮೇಲೆ ಬಳ್ಳೊಳ್ಳಿಯ (೨) ತುಂಡುಗಳನ್ನು ಹಾಕಿ ಕುಟ್ಟಿರಿ ಇಲ್ಲಾ ಮಿಕ್ಸರ್‌ನಲ್ಲಿ ನುಣ್ಣಗೆ ಮಾಡಿ. ತಿನ್ನಲು ರುಚಿಯಾಗಿರುತ್ತೆ, ಮತ್ತೆ ಕಹಿಯು ಕಡಿಮೆಯಾಗಿರುತ್ತದೆ. ಸಿಹಿಮೂತ್ರ ರೋಗದವರಿಗೆ ಇದು ಒಳ್ಳೆಯದು.

**- ಅನಿತಾ ಎನ್.ಎಸ್.**, ರಾಣೆಬೆನ್ನೂರು

## ಜ್ಞಾನ ಸಂಪದ

(ಸ್ಪರ್ಧಾತ್ಮಕ ಪರೀಕ್ಷಾರ್ಥಿಗಳ ದಾರಿದೀಪ)

ಪ್ರ : ಜ್ಞಾನೋದಯ ಪಬ್ಲಿಕೇಷನ್ಸ್, ನಂ.೧೩೩, ಶಾರದಾ ಕಾಲೋನಿ, ಕೆ.ಹೆಚ್.ಬಿ.ಸಿ.ಎಸ್. ಲೇಔಟ್, ೩ನೇ ಹಂತ, ೪ನೇ ವಿಭಾಗ, ಬಸವೇಶ್ವರ ನಗರ, ಬೆಂಗಳೂರು - ೭೯. ಬೆಲೆ : ರೂ. ೧೮೦/-




ಇಂದು ದೇಶದ ನಾನಾ ಕ್ಷೇತ್ರಗಳಲ್ಲಿ ಕೆಲಸ ಮಾಡಲು ಸಹಸ್ರಾರು ವಿದ್ಯಾವಂತರ ಅವಶ್ಯಕತೆ ಇದೆ. ಅಲ್ಲದೆ ಒಂದು ಹುದ್ದೆಗೆ ಸಾವಿರಾರು ಜನ ಸ್ಪರ್ಧಿಸುವುದುಂಟು. ಆಗ ಪರೀಕ್ಷೆ ಹಾಗೂ ಸಂದರ್ಶನಗಳು ನಡೆಯ ಬೇಕಾಗುತ್ತವೆ. ಕೇಂದ್ರದ ಯು.ಪಿ.ಎಸ್.ಸಿ. ಮತ್ತು ರಾಜ್ಯದ ಪಿ.ಎಸ್.ಸಿ.ಗಳು, ಬ್ಯಾಂಕುಗಳು, ಅನೇಕ ಇಲಾಖೆಗಳು ಸ್ಪರ್ಧಾ ಪರೀಕ್ಷೆಗಳನ್ನು ಭಾರಿ ಪ್ರಮಾಣದಲ್ಲಿ ನಡೆಸುತ್ತಿವೆ; ಅದರಲ್ಲಿ ಉತ್ತೀರ್ಣರಾದವರನ್ನು ಸಂದರ್ಶಿಸಿ ಅವರ ದೇಹದಾರ್ಢ್ಯ, ವಾಚಾಳಿತನ, ದಿನನಿತ್ಯದ ವ್ಯವಹಾರದಲ್ಲಿ ಇರಬೇಕಾದ ತಿಳುವಳಿಕೆ ಇತ್ಯಾದಿಗಳನ್ನು ನೋಡಿ ಆಯ್ಕೆ ಮಾಡಲಾಗುತ್ತಿದೆ. ಹೀಗಿರುವಾಗ ಸ್ಪರ್ಧಿಗಳು ಅನೇಕ ವಿಷಯಗಳಲ್ಲಿ ತಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳುವ ಅವಶ್ಯಕತೆ ಕಂಡುಬರುತ್ತಿದೆ. ಅದರಲ್ಲಿಯೂ ಗ್ರಾಮೀಣ ಪ್ರದೇಶದಿಂದ ಬಂದವರಿಗೆ ಇದು ತೀರಾ ಅವಶ್ಯಕ. ಇದಕ್ಕಾಗಿ ಒಂದು ಕೈಪಿಡಿಯ ಅವಶ್ಯಕತೆ ಇತ್ತು. ಅದನ್ನು ಇವರುಗಳು ಪೂರೈಸಿದ್ದಾರೆ. ಇದರಲ್ಲಿ ಹೇಳಿರುವುದೆಲ್ಲ ಸರಿಯಾಗಿದೆಯೆಂದು ನನ್ನ ಭಾವನೆ.


**- ಎಚ್.ಎಲ್.ನಾಗೇಗೌಡ**

## ಮನದಲ್ಲಿ ನೆಲೆ ನಿಂತವರು

(ವ್ಯಕ್ತಿ ಚಿತ್ರಗಳು)

ಲೇ : **ಶಾರದಾ ಹೆಮ್ಮಿಗೆ**

ಪ್ರ : ಯಕ್ಷ ಪ್ರಕಾಶನ, ಧಾರವಾಡ. ಮುದ್ರಣ : ೧೯೯೭ ಪುಟ : ೧೩೬ ಬೆಲೆ : ರೂ. ೪೦/-



ನಾನೇನೂ ಮಹಾ ವಿದ್ಯಾವಂತೆಯಲ್ಲ ಎಂಬ ವಿನಯವಿದ್ದರೂ ಜೀವನವೆಂಬ ಟಂಕಸಾಲೆಯಲ್ಲಿ ಮುದ್ರೆಗೊಂಡ ನಾಣ್ಯ ಎಂಬ ಭಾವ, ನನ್ನದು. ಮೈಸೂರು ಜಿಲ್ಲೆಯ ಹಳ್ಳಿಯ ಹಿನ್ನೆಲೆಯಿಂದ ಬಂದವಳು ನಾನು; ನಗರ ಜೀವನವನ್ನೂ ಅನುಭವಿಸಿದವಳು.



## ಮುನ್ನುಡಿಯಿಂದ

ಬಾಲ್ಯದ ನೆನಹುಗಳು ಈ ಎಪ್ಪತ್ತರ ಎದೆಯಲ್ಲಿ ಅಚ್ಚಳಿಯದೇ ಉಳಿದಿರುವುದೇ ಒಂದು ಆಶ್ಚರ್ಯ. ವಾರದ ಕೆಳಗೆ, ಆಸ್ಪತ್ರೆಯಿಂದ ಬಂದೆ. 'ಕ್ಲಿಕ್' 'ಕ್ಲೀಂಕ್' ಎಂಬ ಎದೆ ಬಡಿತ ಪರೀಕ್ಷೆಯ ಯಂತ್ರ ಮಾಡುವ ಸದ್ದಿನ ಗದ್ದಲದಲ್ಲೂ, ಎಳವೆಯ ಒಡನಾಡಿಗಳ ಮಾತುಗಳೂ ಚಿತ್ರಗಳೂ ಸುಳಿಯುತ್ತಿದ್ದವು. ಮಕ್ಕಳು ತೋಳು ಹಿಡಿದು, ನನ್ನ ಮಂಚದ ಬಳಿ ಕರೆತಂದು ಬಿಟ್ಟು, ಚರ್ಚಿಸಲೆಂದು ಹೊರಗೆ ಹೋದರು. ಕಾತರದಿಂದ ಕಿಟಕಿ ತೆರೆದು ನೋಡಿದೆ. ಅದೇ ಪನ್ನೇರಳೆ ಗಿಡ!

ಕಿಟಕಿ ತೆರೆದುದ ನೋಡಿ
ಅಚ್ಚರಿಯ ಗೆಳತಿ
ನಿನ್ನ ಕಾಣುತ ಕಂಡೆನಾ
ಕೊರಡೊಳೂ ಸ್ಫೂರ್ತಿ - ಅಂದುಕೊಂಡೆ.

ಇದು, ನನ್ನ ಐದು ವರ್ಷದ ನಿಡುಗಾಲದ ಸ್ನೇಹಿತೆ. ನನ್ನ ನಲಿವು ಬೇನೆ-ಬೇಸರಿಕೆಗಳ ಸಾಕ್ಷಿ. ಬಿಳಿಯ ಹೂವು, ನಸುನಕ್ಕಂತೆನಿಸಿತು. 'ಅಜ್ಜಮ್ಮಾ ಆಸ್ಪತ್ರೆಯ ಅರೆ ಮಂಪರು, ಅರೆ ಎಚ್ಚರದ ನಡುವಣ ಸ್ಥಿತಿಯ ಚಿತ್ರಗಳನ್ನ ಕಾಗದದ ಮೇಲೆ ಮೂಡಿಸು' ಎಂದ ಹಾಗಾಯಿತು. ತಲೆಯಲುಗಿಸಿದ ನಾನು, ಇದನ್ನ ಕಲೆ ಹಾಕಿಕೊಟ್ಟೆ. ಮಗಳು ಪುಸ್ತಕ ರೂಪದಲ್ಲಿ ಜೋಡಿಸುತ್ತಿದ್ದಾಳೆ.

**- ಶಾರದಾ ಹೆಮ್ಮಿಗೆ**


## ಹಣತೆಗಳು

(ವ್ಯಕ್ತಿ ಚಿತ್ರಗಳು)

ಲೇ : **ಡಾ. ಹೆಚ್. ಚಂದ್ರಶೇಖರ್**

ಪ್ರ : ಮಹಾಕವಿ ಹರಿಹರ ಸ್ಮಾರಕ ಸಂಶೋಧನ ಕೇಂದ್ರ, ಹಂಪಿ, ಬಳ್ಳಾರಿ ಜಿಲ್ಲೆ, ಮುದ್ರಣ : ೧೯೯೭ ಪುಟ : ೯೫ ಬೆಲೆ : ರೂ. ೪೫/-

ವಿವಿಧ ಕ್ಷೇತ್ರಗಳಲ್ಲಿಯ ತಮ್ಮ ಉತ್ಕೃಷ್ಟ ಸಾಧನೆಯಿಂದ ನಾಡಿನ ಸಾಂಸ್ಕೃತಿಕ ಜೀವನವನ್ನು ಸಮೃದ್ಧಗೊಳಿಸಿ ಆದರ್ಶ ಪ್ರಾಯರಾಗಿರುವ ಒಂಬತ್ತು ಜನ ಪ್ರತಿಭಾವಂತ ವ್ಯಕ್ತಿಗಳನ್ನು ಕುರಿತ ಈ ಲೇಖನಗಳು ಆಯಾ ವ್ಯಕ್ತಿಗಳ ಜೀವನದ ಉಪಯುಕ್ತ ವಿವರಣೆಗಳೊಂದಿಗೆ ಒಳ್ಳೆಯ ವ್ಯಕ್ತಿ ಚಿತ್ರಗಳಾಗಿಯೂ ಪರಿಣಮಿಸಿವೆ. ಆಯಾ ವಿಷಯಗಳಲ್ಲಿ ಸ್ವತಃ



ಚಂದ್ರಶೇಖರರಿಗಿರುವ ಅಪಾರ ಆಸಕ್ತಿಯಿಂದಾಗಿ ಈ ಚಿತ್ರಗಳು ಆಪ್ತತೆಯನ್ನು ಪಡೆದು ಹೃದಯಂಗಮವಾಗಿವೆ. ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಕಾಲೋಚಿತವಾಗಿ ಇವು ಪತ್ರಿಕೆಗಳಲ್ಲಿ ಪ್ರಕಟಗೊಂಡಿದ್ದರೂ ಈಗ ಸಂಗ್ರಹ ರೂಪದಲ್ಲಿಯೂ ಇವು ತಮ್ಮ ತಾಜಾತನವನ್ನು ಉಳಿಸಿಕೊಂಡಿರುವುದು ಲೇಖಕರ ಆತ್ಮೀಯ ಶೈಲಿಗೆ ಬಹು ಉತ್ತಮ ನಿದರ್ಶನವೂ ಹೌದು.

ಅನೇಕ ವರ್ಷಗಳಿಂದ ಲೇಖನ ವ್ಯವಸಾಯದಲ್ಲಿ ತೊಡಗಿದ್ದರೂ ಇದೀಗ ಪ್ರಥಮವಾಗಿ ಪುಸ್ತಕವನ್ನು ಹೊರತರಲು ಮನಸ್ಸು ಮಾಡಿರುವ ಲೇಖಕರ ಸಂಯಮ ಮೆಚ್ಚತಕ್ಕದ್ದು. ಇತಿಹಾಸ, ಕಲೆ, ಸಾಹಿತ್ಯ, ಸಂಶೋಧನೆಗೆ ಸಂಬಂಧಪಟ್ಟ ಅವರ ಇನ್ನುಳಿದ ಹಲವಾರು ಮಹತ್ವದ ಲೇಖನಗಳು ಬೇಗ ಪುಸ್ತಕ ರೂಪದಲ್ಲಿ ಪ್ರಕಟವಾದರೆ ಆಯಾ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಉಪಕಾರವೆನಿಸುವುದರಲ್ಲಿ ಸಂದೇಹವಿಲ್ಲ.


**- ಚನ್ನವೀರ ಕಣವಿ**

## ಹೊಸ ಹೆಜ್ಜೆ

(ಕವನ ಸಂಕಲನ)

ಲೇ : **ಮನೋಹರ ಕಾಂಬಳೆ**

ಪ್ರ : ಕಮಲ ಪ್ರಕಾಶನ, ಬಸ್ತವಾಡ - ೫೯೧ ೩೧೭ ಮುದ್ರಣ : ೧೯೯೫ ಪುಟ : ೩೬ ಬೆಲೆ : ರೂ. ೧೫/-




**ಶ್ರೀ** ಮನೋಹರ ಅ.ಕಾಂಬಳೆ ಅವರು ಇನ್ನೂ ಯುವ ವಿದ್ಯಾರ್ಥಿಗಳು ಕಾವ್ಯದಲ್ಲಿ ಅಭಿರುಚಿ ಬೆಳೆಸಿಕೊಂಡು, ಅದರಂತೆ ಆ ಕೃಷಿಗೆ ತೊಡಗಿದ್ದಾರೆ. ಚಿಕ್ಕ ವಯಸ್ಸಿನಲ್ಲಿಯೆ ಬದುಕಿನ ಬಗೆಗೆ ಶ್ರದ್ಧೆಯನ್ನಿರಿಸಿಕೊಂಡು ಕಾವ್ಯ ರಚಿಸುತ್ತಲಿದ್ದಾರೆ. ಅವರ ಕವಿತೆಗಳಲ್ಲಿಯ ವಿಷಯ ವೈವಿಧ್ಯ ಮೆಚ್ಚುವಂಥದ್ದು. ಸಮಾಜದ ಬಗೆಗೆ ಕಳಕಳಿಯನ್ನಿರಿಸಿಕೊಂಡು ಸಾಮಾಜಿಕ ಜೀವನದ ಎಲ್ಲ ಮುಖಗಳನ್ನು ಅನಾವರಣಗೊಳಿಸಲು ಯತ್ನಿಸಿದ್ದಾರೆ. ಗಂಭೀರ ವಿಷಯಗಳ ಜತೆ ಲಘು ವಿಷಯಗಳು ಮುದದ ಸಂಗತಿಗಳಾಗಿ ಇವರ ಕಾವ್ಯಕ್ಕೆ ವಸ್ತುಗಳಾಗಿವೆ. ಈಗ ಕಾವ್ಯ ಕ್ಷೇತ್ರ ಪ್ರವೇಶಿಸುತ್ತಿರುವ ಈ ಯುವ ಕವಿಗಳು ಸಾಮಾಜಿಕ ಬದುಕು ಹಾಗೂ ಇಂದಿನ ಜನಸಾಮಾನ್ಯರ ಬದುಕನ್ನು ಆವರಿಸಿಕೊಂಡ ದುಷ್ಪಶಕ್ತಿ ಹಾಗೂ ಪ್ರವೃತ್ತಿಗಳ ಬಗೆಗೆ ಆಳವಾಗಿ ಚಿಂತನ ಮಾಡಬೇಕಾಗಿದೆ. ಇನ್ನೂ ತೆರೆದ ಕಣ್ಣಿನಿಂದ ಸುತ್ತಲಿನ ಸಾಮಾಜಿಕ ಪರಿಸರವನ್ನು ನೋಡಬೇಕಾಗಿದೆ. ಭಾಷೆ ಹಾಗೂ ಶೈಲಿಯನ್ನು ಚೆನ್ನಾಗಿ ದುಡಿಸಿಕೊಳ್ಳಬೇಕಾಗಿದೆ.

**- ದು. ನಿಂ. ಬೆಳಗಲಿ**

## ನನ್ನ ಮನಸ್ಸು - ನನ್ನ ನಂಬುಗೆ

(ನಿವೃತ್ತೋತ್ತರ ಆತ್ಮಾವಲೋಕನ))

ಲೇ: **ಕೋ.ಚನ್ನಬಸಪ್ಪ**, ಪ್ರ: ಶ್ರೀ ಅರವಿಂದ ಪ್ರಕಾಶನ, ೧೭೨, ವೆಸ್ಟ್ ಆಫ್ ಕಾರ್ಡ್ ರೋಡ್, ಬೆಂಗಳೂರು, ಪುಟ:೨೪೪ ಬೆಲೆ: ರೂ. ೧೨೦/-



"**ಈ** ನಿವೃತ್ತೋತ್ತರ ಆತ್ಮಾವಲೋಕನದಲ್ಲಿ... ಕಳೆದ ಕಾಲು ಶತಮಾನದ ನಮ್ಮ ರಾಜ್ಯದ ನ್ಯಾಯಾಂಗ, ಕಾರ್ಯಾಂಗ, ಶಾಸಕಾಂಗಗಳ ಸ್ಥಿತ್ಯಂತರ, ರಾಜ್ಯದ ರಾಜಕೀಯ, ಸಾಮಾಜಿಕ, ಸಾಹಿತ್ಯಿಕ... ಬೆಳವಣಿಗೆಯ ಸ್ಥೂಲ ರೂಪುರೇಷೆಯೆ ಮೂಡಿದೆ... ಈ ಕಾಲಾವಧಿಯಲ್ಲಿ ನಮ್ಮ ನಾಡಿನ ವಿಚಾರವಾಗಿ ಯಾರು ಬರೆದರೂ ಸ್ವಲ್ಪ ಹೆಚ್ಚು ಕಡಿಮೆ ಹೀಗೆಯೆ ಬರೆದಾರು... ಅನುಭವವುಳ್ಳವರೆಲ್ಲರೂ ಬರೆಯಲಾರರು. ಬರೆಯಬಲ್ಲವರು ಎಲ್ಲರ ಅನುಭವಗಳಿಗೆ ತಮ್ಮ ಅನುಭವದ ಲೇಪನ ಮೂಡಿ ಬರೆಯುತ್ತಾರೆ.


ಇದರಲ್ಲಿ ಬರುವ ಘಟನೆಗಳಲ್ಲಿ ಕಾಣುವ ವ್ಯಕ್ತಿಗಳ ಬಗ್ಗೆ ನಾನು ಸ್ಪಷ್ಟವಾಗಿ ನಿಷ್ಠುರವಾಗಿ ಅಭಿಪ್ರಾಯಗಳನ್ನೂ ವ್ಯಕ್ತಪಡಿಸಿದ್ದೇನೆ. ಇದನ್ನು ಬಹುಕಾಲದ ಮೇಲೆ ನಾನಿಲ್ಲದಾಗಲೂ ಇದನ್ನು ಸಾಹಿತಿಯ ಆತ್ಮಾವಲೋಕನ ಎಂಬ ದೃಷ್ಟಿಯಿಂದಲಾದರೂ ಓದುವವರಿಗೆ ತಪ್ಪು ಕಲ್ಪನೆ ಬಾರದಿರಲೆಂದು ನಿಜವಲ್ಲದ ಸಂಗತಿಯನ್ನು ದಾಖಲಿಸಿಯೆ ಇಲ್ಲ... ಕೆಲವರಿಗೆ ಅದು ಹಿಡಿಸದಿರಬಹುದು. ಉಪಾಯವಿಲ್ಲ. ಕೋಚಿ ಹಾಗಲ್ಲದೆ ಮತ್ತೆ ಇನ್ನಾವ ರೀತಿಯಲ್ಲೂ ಬರೆಯಲಾರ."

**- ಕೊ. ಚನ್ನಬಸಪ್ಪ**

## ...ನಾತಿಚರಾಮಿ

(ಕಾದಂಬರಿ)

ಲೇ : **ಡಾ. ಆರ್.ಆರ್. ಪಾಂಗಾಳ್**, ಪ್ರ : ಶಿವರಾಮ ಕಾರಂತ ವೇದಿಕೆ, ೩೦೭, ೨ನೇ ಬ್ಲಾಕ್, ೧೭ನೇ ಅಡ್ಡ ರಸ್ತೆ, ಆರ್.ಟಿ.ನಗರ, ಬೆಂಗಳೂರು - ೫೬೦ ೦೩೨. ಮುದ್ರಣ : ೧೯೯೭ ಪುಟ : ೨೫೮ ಬೆಲೆ : ರೂ. ೯೦/-



**ಒಮ್ಮೆ** ಓದಿ ಎಸೆದು ಬಿಡುವ ಕೃತಿಯಲ್ಲ ಇದು. ಈ ಕೃತಿ ನಮ್ಮನ್ನು ಚಿಂತನೆಗೆ ಒಡ್ಡುತ್ತದೆ. ಮನೋವೈಜ್ಞಾನಿಕ ಸಮಸ್ಯೆಗಳನ್ನು ತಮ್ಮ ಕಾದಂಬರಿಗಳಿಗೆ ಅಳವಡಿಸಿಕೊಂಡು ಬರುತ್ತಿರುವ ಸಫಲ ವೈದ್ಯ ಡಾಕ್ಟರ್ ಪಾಂಗಾಳರ ಈ ಕೃತಿಯನ್ನು ಕನ್ನಡ ಜನತೆ ಆದರದಿಂದ ಬರಮಾಡಿಕೊಳ್ಳುತ್ತದೆ ಎನ್ನುವ ಭರವಸೆ ನಮಗಿದೆ. ಶಿವರಾಮ ಕಾರಂತ ವೇದಿಕೆಯ ಪ್ರಥಮ ಪ್ರಕಟಣೆಯಾಗಿ ಇದೇ ಲೇಖಕರ 'ಕರ್ಮಣ್ಯೇ...'ಯನ್ನು ನಾವು ಕಳೆದ ವರ್ಷ ಪ್ರಕಟಿಸಿದ್ದು ಇದೀಗ ಅವರ ಇನ್ನೊಂದು ಕೃತಿ "...ನಾತಿಚರಾಮಿ"ಯನ್ನು ಕನ್ನಡ ಸಾರಸ್ವತ ಪ್ರಪಂಚಕ್ಕೆ ಸಂತೋಷದಿಂದ ಅರ್ಪಿಸುತ್ತಿದ್ದೇವೆ.

**- ಪಾ. ಚಂದ್ರಶೇಖರ ಚಡಗ**

## ಕಿಲ ಕಿಲ
## ಕೂಪನ್ - ೭

ಹೆಸರು........................................................................

ತರಗತಿ........................................................................

ವಯಸ್ಸು........................................................................

ತಂದೆ........................................................................

ತಾಯಿ........................................................................

ವಿಳಾಸ........................................................................

........................................................................

........................................................................

........................................................................

ಕಿಲ ಕಿಲ - ೭

# ಹೊಸ ವರ್ಷಕ್ಕೆ ಸ್ವಾಗತ

ಮಕ್ಕಳೇ,

ನೋಡು ನೋಡುತ್ತಿದ್ದಂತೆ ೧೯೯೭ನೇ ಇಸವಿ ಮುಗಿದು ಹೋಗುತ್ತಿದೆ. ಹೊಸ ವರುಷ ಹೊಸ ಹೊಸ ಭರವಸೆಗಳನ್ನು ಹೊತ್ತು ಬರುತ್ತಿದೆ. ನೀವು ಹೊಸ ವರ್ಷವನ್ನು ಹೇಗೆ ಸ್ವಾಗತಿಸುತ್ತೀರಿ? ಹೊಸ ವರ್ಷದಲ್ಲಿ ಏನೇನು ಮಾಡಬೇಕೆಂದಿರುವಿರಿ? ಈ ಬಗ್ಗೆ ಕೆಲವೇ ಸಾಲುಗಳಲ್ಲಿ ಬರೆದು ಕಳುಹಿಸಿ. ನಿಮ್ಮ ಬರಹಗಳು ಮುಂದಿನ ತಿಂಗಳು ಪ್ರಕಟವಾಗುತ್ತವೆ.

***ವಿಶೇಷ ಸೂಚನೆ :***

- ❑ ನಿಮ್ಮ ವಯಸ್ಸು ೧೫ ವರ್ಷ ಮೀರಿರಬಾರದು.
- ❑ ನಿಮ್ಮ ಅನಿಸಿಕೆಯನ್ನು ಬಿಳಿ ಹಾಳೆಯಲ್ಲಿ ಬರೆದು ಪಕ್ಕದಲ್ಲಿರುವ ಕಿಲಕಿಲ ಕೂಪನ್-೭ನ್ನು ಲಗತ್ತಿಸಿ ಈ ಕೆಳಗಿನ ವಿಳಾಸಕ್ಕೆ ಅಂಚೆಯಲ್ಲಿ ಕಳಿಸಿ.
- ❑ ನಿಮ್ಮ ಬರಹ ನಮಗೆ ತಲುಪಲು ಕೊನೆಯ ದಿನಾಂಕ : ೧-೧-೧೯೯೮.

ವಿಳಾಸ :

ಸಂಪಾದಕರು, **ಬಿಸಿಲ ಬದುಕು** ಅಂಚೆ ಪೆಟ್ಟಿಗೆ ೭೯೫೧,
ಬಸವೇಶ್ವರನಗರ, ಬೆಂಗಳೂರು-೭೯.

## ಮನೆ - ೪

**ಮನೆ** ಎಂದರೆ........................................................................

ಹೆಸರು :

ವಿಳಾಸ :

ಸಹಿ

# ಮನೆ ಎಂದರೆ ಏನು?

ಕಳೆದ ಮೂರು ತಿಂಗಳಲ್ಲಿ ಈ ಸವಾಲಿಗೆ ಸಾವಿರಾರು ಜನ ಉತ್ತರ ಕಳಿಸಿದ್ದಾರೆ. ಓದುಗರ ಉತ್ತರಗಳು ವೈವಿಧ್ಯಮಯವಾಗಿದ್ದು 'ಮನೆ' ಕುರಿತು ಹೊಸ ಹೊಸ ಒಳನೋಟ ಬೀರಿವೆ. ಆದರೆ 'ಬಿಸಿಲ ಬದುಕು' ಬಯಸಿದ ಸರಿಯುತ್ತರವನ್ನು ಊಹಿಸಲು ಮಾತ್ರ ಯಾರಿಂದಲೂ ಸಾಧ್ಯವಾಗಿಲ್ಲ. ಅಂತೆಯೇ ಈಗ ಸರಿಯುತ್ತರ ಊಹಿಸಲು ನೆರವಾಗುವಂತೆ ಎರಡು 'ಸುಳಿವು' ನೀಡುತ್ತಿದ್ದೇವೆ. ಈ ಸುಳಿವಿನ ನಂತರ ಸರಿಯುತ್ತರ ಊಹಿಸಿದವರಿಗೆ ರೂ. ೫೦೦/- ಬಹುಮಾನ ಸಿಗಲಿದೆ. ಹಾಗೇ ಸರಿಯುತ್ತರ ನೀಡಲು ವಿಫಲರಾದರೂ 'ಮನೆ' ಬಗ್ಗೆ ಆಕರ್ಷಕ ವಿವರಣೆ ನೀಡಿದ ಆಯ್ದ ಓದುಗರ ವಾಕ್ಯ ಹಾಗೂ ಹೆಸರುಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

**ಸುಳಿವು - ೧**

**ಮನೆ** - ಇದು ಅಂಕುರ ಪ್ರಕಾಶನಕ್ಕೆ ಸಂಬಂಧಿಸಿದ್ದು.

**ಸುಳಿವು - ೨**


**ಮನೆ** - ಇದು 'ಬಿಸಿಲ ಬದುಕು' ಪತ್ರಿಕೆಯ ಸಹೋದರ

- ○ ಪಕ್ಕದಲ್ಲಿರುವ ಮನೆ-೪ ಕೂಪನ್ ಭರ್ತಿ ಮಾಡಿ ಕಳಿಸಿ. ಒಬ್ಬರು ಎಷ್ಟಾದರೂ ಕೂಪನ್ ಕಳಿಸಬಹುದು.

**ಬಿಸಿಲ ಬದುಕು** ಮಾಸ ಪತ್ರಿಕೆ

**ಅಂಚೆ ಪೆಟ್ಟಿಗೆ : ೭೯೫೧, ಬಸವೇಶ್ವರನಗರ, ಬೆಂಗಳೂರು - ೫೬೦ ೦೭೯**

# ಪದಬಂಧ - ೧




***ಎಡದಿಂದ ಬಲಕ್ಕೆ***

೧. ನಾಟಕಕಾರನ ಸುಖದುಃಖ ನಿರೂಪಿಸಿದ ದಿ। ಪುಟ್ಟಣ್ಣನವರ ಚಿತ್ರ ........................ (೫)
೪. ಅಜರಾಮರವಾಗಿರುವಂತಹ ಮರೆಯಲಾರದ ಜ್ಯೋತಿ.... (೫)
೭. ಎಲ್ಲಾ ಲೋಹಗಳನ್ನು ಸೇರಿಸಿ, ಕರಗಿಸಿ ಹಾಕಿದ ಅಚ್ಚು..... (೩)
೯. ವಧೆ ಮಾಡುವದಕ್ಕಾಗಿಯೇ ವಿಷ್ಣು ಧರಿಸಿದ ಮತ್ತೊಂದು ರೂಪ ........................ (೩)
೧೦. ಶಾಲಿವಾಹನನೊಂದಿಗೆ ಬಂದ ಸಂವತ್ಸರ, ಕೊನೆಗೆ ಕೊಂಬು ಅಲ್ಪಗೊಂಡಿದೆ........................ (೨)
೧೧. ರವಿಯು ಜಾತ್ರೆಗೆ ಹೋದ ಸೂಟಿಯ ದಿನ.............. (೫)
೧೪. ದೂರದಿಂದ ಗುಡ್ಡದಂತೆ ಕಾಣುವ ಎತ್ತರದ ಭೂಮಿ ತಿರುಗಿಕೊಂಡಿದೆ........................ (೨)
೧೬. ರಸವನ್ನೂ ಕೆಡಿಸಿದ ಹಾಳು ಹೊಲಸು.................... (೨)
೧೮. ನಾರುಮಡಿಯನ್ನುಟ್ಟು ಪೂಜೆ ಮಾಡಿದ ಕಟ್ಟಾ ಶೀಲಾಚಾರ........................ (೫)
೨೧. ಎಲ್ಲ ಬಲ್ಲವನಾದ ರಾಮನ ಪುತ್ರ...................... (೨)
೨೨. ಹರನನ್ನು ಕೂಡ್ರಿಸಿ ಪೂಜೆ ನಡೆಸಿದ ಒಳಾಂಗಳ........... (೩)
೨೩. ಸರಸರನೆ ವಾಹನದಿಂದ ಕೆಳಗಿಳಿಸಿದ ಸರಂಜಾಮು........ (೩)
೨೪. ದನ ಕಾಯುವವನಿಗೂ ಸಿಕ್ಕ ಹಣ ಸಾಲದ ಅನುಕೂಲ.... (೫)
೨೫. ರಜೆಯ ದಿನ ಗತಿ ಕೆಡದೆ ನೋಡಿದ ಪ್ರಸಿದ್ಧ ಪಕ್ಷಿಧಾಮ... (೫)


***ಮೇಲಿನಿಂದ ಕೆಳಕ್ಕೆ***

೨. ಗಣಪತಿಯು ಪೂಜೆಗೊಂಡು ಪ್ರಜೆಗಳ ಮುಖಂಡನೆನಿಸಿದ್ದಾನೆ........................ (೫)
೩. ಎಂದೂ ಬರದ ನರಕಾಧಿಪತಿಯ ಸೇವಕ ಇಂದು ಭಯಂಕರನಾಗಿ ಬಂದಿದ್ದಾನೆ........................ (೫)
೫. ಮರೆತು ಹೋದ ಎರಡನೆಯ ದಿನ..................... (೫)
೬. ದಿಢೀರನೆ ಪದಗಳೊಂದಿಗೆ ಜ್ಯೋತಿ ಬೆಳಗಿಸಲು ಬಂದ ದೀಪಾವಳಿ........................ (೫)
೮. ದಿನ ಬಿಟ್ಟು ಬಿಡದೇ ತುಂಬಿ ಹರೆಯುವ ಹೊಳೆ.......... (೨)
೧೦. ಶಂಕೆಗೊಂಡಾಗಲು ಬಾರಿಸಿದ ನೂರು ಓಟಗಳ ಮೊತ್ತ... (೩)
೧೨. ಝೇಂಕಾರ ಎಬ್ಬಿಸುವ ಅರಣ್ಯದಲ್ಲಿಯ ಹುಳು........... (೩)
೧೩. ಸವತಿಗೆ ಉಳಿದುಕೊಳ್ಳಲು ಕೊಟ್ಟ ಸ್ಥಳ.................. (೩)
೧೫. ವಾರಕ್ಕೊಮ್ಮೆ ರವಾನಿಸಿದ ಸುದ್ದಿ ಸಂಗ್ರಹ ತಲೆ ಕೆಳಗಾಗಿದೆ........................ (೩)
೧೭. ಸಹಚರರೆಲ್ಲರೂ ಕೂಡಿ ಮಾಡಿದ ಊಟ................ (೫)
೧೮. ಮರದ ಕೆಳಗೆ ಕುಳಿತರೂ ಬಿಡದ ಬಂದ ಸಾವಿನ ಸಮಯ.. (೫)
೧೯. ಒಂದು ಮಗನಿಂದಾದರೂ ಬೆಳೆಯಬೇಕೆನ್ನುವ ಕುಲ...... (೨)
೨೦. ಕೆಲಸಗಾರರು ಜಾಲಾಡಿದ ಮಣ್ಣು ನೀರಿನ ಹೊಲಸು ಸ್ಥಳ. (೫)
೨೧. ಕುಲುಕುಲು ನಗುತ್ತ ಮನ ಮಿಡಿಯುವ ಲಕ್ಷ್ಮಿಯ ಒಡೆಯ........................ (೫)

**ಜವಳಿ ವೀರಣ್ಣ**

**(ಉತ್ತರ : ಮುಂದಿನ ಸಂಚಿಕೆ)**

# FAIR PRICE ಬೋರ್ಡುಗಳು




○ ಎಸ್. ಕೆ. ಕುಲಕರ್ಣಿ
''ಪರಿಮಳ''
ರೇಲ್ವೆಗೂಡ್ಸ್ ಶೆಡ್ ಬಳಿ, ಧಾರವಾಡ - ೭

ನನ್ನ ಮಿತ್ರ ಗೋಪಾಳ ಪ್ರತಿ ವರುಷವೂ ತಾನು ಜನರಲ್ ಸೆಕ್ರೆಟರಿ ಆಗಿರುವ ವಾಙ್ಮಯ ಪರಿಷತ್ತಿಗೆ ಅನುದಾನ ತರಲು ಬೆಂಗಳೂರಿಗೆ ಹೋದರೆ ಅನುದಾನ ಪಡೆದುಕೊಂಡು, ಪ್ರತಿದಾನಗಳನ್ನು ಎಲ್ಲ . ಟೇಬಲ್‌ಗಳಿಗೂ ಮುಟ್ಟಿಸಿ ನಗದು ಹಣದೊಂದಿಗೆ ನಗುನಗುತ್ತ ಬರಬೇಕಾದರೆ ಹರ್ಮಾಗಾಲ!

ಚೆಕ್ ಇವನ ಕೈಸೇರುವವರೆಗೆ ಅದೆಷ್ಟು ಸಲ ಆ ಸೌಧದ ಸುತ್ತ ಚಕ್ಕರ್ ಹೊಡೆಯಬೇಕು, ಅದೆಷ್ಟು ಜೇಬುಗಳನ್ನು, ಬೊಗಸೆಗಳನ್ನು, ಬಗಲಬಂಡಿ ಅಂಗಿಗಳನ್ನು ಬೆಚ್ಚಗೆ ಮಾಡಬೇಕು, ಅದೆಷ್ಟು ಬಾಯಿಗಳನ್ನು ಸಿಹಿ ಮಾಡಬೇಕು, ಚೌಚೌ ಮಾಡಬೇಕು-ಎಲ್ಲದಕ್ಕೂ 'ಗೋಪಾಳ' ತನ್ನ ಖಾಸ ಕಿಸೆಯಿಂದಲೆ ಖರ್ಚು ಮಾಡಬೇಕು. ಆಮೇಲೆ ಹೇಗೊ ರಿಇಂಬರ್ಸ್‌ಮೆಂಟ್ ಪರಿಷತ್ತಿನಿಂದ ಗಿಟ್ಟುತ್ತದೆ ಅಂತ ಇಟ್ಟುಕೊಳ್ಳಿ, ಆದರೆ, ಗೋಪಾಳನಿಗೆ ಆತಿ ತಲೆ ಬೇನೆ ತಂದುದು ಚೆಕ್ ಸಹಿಮಾಡಿಸಿ ತಂದುಕೊಟ್ಟ ದೈತ್ಯನಿಗೆ, ಅಲ್ಲಲ್ಲ ದೂತನಿಗೆ ಬಿಸಿ ಮಾಡಿದ್ದಲ್ಲದೆ, ಚೆಕ್ ಎನ್‌ಕ್ಯಾಶ್‌ಮೆಂಟ್ ಪಡೆಯುವುದಕ್ಕೂ ಬೆಣ್ಣೆ ಸವರಬೇಕೆ? ಮಾಡುವುದೇನು, ಅಂದೇ ಮಾರ್ಚ್, 31 ಬೇರೆ! ಅಂತೂ ಪ್ರತಿವರುಷ ಐದು ಸಾವಿರ ಅನುದಾನ ಕಾಗದದ ಮೇಲೆ; ಕೈಗೋ ನಗದು ರೂಪದಲ್ಲಿ ಸಿಗುವುದು ಅಳುವ ರೂಪದ ಮೂರು ಸಾವಿರದ ಏಳೂವರೆ (ಈ ಏಳೂವರೆ ಅನ್ನೋದು ಮಹಾ ಅನಿಷ್ಟದ್ದು, ಏಳೂವರೆ 'ಸಾಡೇಸಾತ್' ಕಾಟ ಗೊತ್ತಿಲ್ಲವೆ?) ರೂಪಾಯಿ ಮಾತ್ರ! ಇನ್ನು ದಕ್ಷಿಣೆ ರೂಪದಲ್ಲಿ ಸಾವಿರದ ಎರಡುನೂರಾ ಐವತ್ತಕ್ಕೆ ವೆಚ್ಚ-ವೋಚರ್ ಹುಟ್ಟಿಸುವುದು ಹೇಗೆ? ಸೂಪರಿಂಟೆಂಡೆಂಟ್‌ರಿಗೆ ಲಂಚಕೊಟ್ಟದ್ದು ಒಂದು ಸಾವಿರದ ಒಂದು ಅಂತ ವೋಚರ್ ಪಡೆಯಲು ಅದು ಹೇಗೆ ಸಾಧ್ಯ? ಈ ಗಡಿಬಿಡಿಯಲ್ಲಿ ಒಂದು ನೂರು ರೂಪಾಯಿಯ ನೋಟೇ ಕಳೆದುಹೋದಾಗ ಅದರ ವೋಚರ್ ಯಾರು ಕೊಡಬೇಕು?

ಹೇಳಿದೆನಲ್ಲ, ನನ್ನ ಮಿತ್ರನ ಹೆಸರೇ 'ಗೋಪಾಳ'. ಗೋಪಾಳ ಎಂದರೆ ಅರ್ಥವಾಯಿತಲ್ಲವೆ? 'ಗೋಪಾಳಬುಟ್ಟಿ ಹಿಡಿಯುವುದಕ್ಕೆ ಹಿಂದೆ ಮುಂದೆ ನಾಚುತಲಿದ್ದೆ' ಎಂದು ಪುರಂದರದಾಸರು ಹೇಳಿಲ್ಲವೆ? ಗೋಪಾಳ ಬುಟ್ಟಿಯಲ್ಲಿ ಅಕ್ಕಿ ಗಿಟ್ಟಿಸುವಂತೆ ಇನ್‌ಕಂ ಟ್ಯಾಕ್ಸ್, ಕಮರ್ಷಿಯಲ್ ಟ್ಯಾಕ್ಸ್, ಎಕ್ಸಾಯಿಜ್ ಇಲಾಖೆಗಳಲ್ಲೆಲ್ಲಾ ಕೆಲಸ ಮಾಡುವವರಿಗೆ 'ಗೋಪಾಳ'ದ ಅರ್ಥ ಸಂಪೂರ್ಣವಾಗಿ ಗೊತ್ತು. ನನ್ನ ಮಿತ್ರ 'ಗೋಪಾಳ', ಸಬ್ ರಿಜಿಸ್ಟ್ರಾರ್ ಆಫೀಸರ್ ಆಗಿ ನಿವೃತ್ತಿ ಹೊಂದಿದ ಮೇಲೆ ವಾಙ್ಮಯ ಪರಿಷತ್ತಿನ ಖಜಾಂಚಿಯಾಗಿ ಚುನಾಯಿಸಲ್ಪಟ್ಟಿದ್ದ. ಗೋಪಾಳವನ್ನು ಸ್ವಾಹಾ ಮಾಡಿ ಪಳಗಿದವರಿಗೆ, ಮುಂದೆ ಗೋಪಾಳ ಕೊಟ್ಟು ಸ್ವಕಾರ್ಯ ಹೇಗೆ ಸಾಧಿಸುವುದು ಎಂಬುದೂ ಗೊತ್ತು. ನಮ್ಮೂರಲ್ಲಿ 'ಗೋಪಾಳಪುರ' ಎಂಬ ವಿಸ್ತರಣವೊಂದಿದೆ. ಅಲ್ಲಿರುವ ನಿವಾಸಿಗಳೆಲ್ಲಾ ರೆವೆನ್ಯೂ, ರಿಜಿಸ್ಟ್ರೇಶನ್ ಇಲಾಖೆಗಳಲ್ಲಿ ಆಫೀಸರರಾಗಿ ಕೆಲಸ ಮಾಡಿ ಗೋಪಾಳ ಬುಟ್ಟಿ ತುಂಬಿಕೊಂಡವರೇ ಆದುದರಿಂದ ಆ ವಿಸ್ತರಣಕ್ಕೆ ''ಗೋಪಾಳಪುರ'' ಎಂಬ ಹೆಸರು. ಅದು ಕಾರ್ಪೋರೇಶನ್‌ನವರಿಂದ ಬಂದದ್ದಲ್ಲ ರೂಢಿಗತವಾಗಿ ಬಂದದ್ದು. ಈಗೀಗ ಮಾತ್ರ ಕಾರ್ಪೋರೇಶನ್‌ನವರು ಕವಿ ಆನಂದಕಂದರು ಅಲ್ಲಿಯೆ ನಿವಾಸಿಗಳಾಗಿದ್ದು ಈಗ ಸ್ವರ್ಗೀಯರಾದ ಮೇಲೆ ''ಗೋಪಾಳಪುರ'' ಹೋಗಿ 'ಆನಂದಕಂದ ನಗರ' ಆಗಿದೆ. ಕವಿಗಳಿಗೂ 'ಗೋಪಾಳ'ಕ್ಕೂ ಎಲ್ಲಿಂದೆಲ್ಲಿ ಸಂಬಂಧ! ಕವಿ ಮುದ್ದಣ ಹೇಳುವಂತೆ ಕವಿ ಕುಲವೆಲ್ಲಾ 'ಸಪ್ತಾಕ್ಷರೀ ಬೀಜಮಂತ್ರ' (ಭವತಿ ಭಿಕ್ಷಾಂ ದೇಹಿ)ದವರೆ. ಇರಲಿ, ಗೋಪಾಳ-ಗೋಪಾಳಪುರ ಆಮೇಲೆ ಕವಿನಗರವಾದ



ಸಂದರ್ಭ ವಿವರಣೆ ನಿಮಿತ್ತ ಇಷ್ಟೆಲ್ಲಾ ಹಿನ್ನೆಲೆ ಹೇಳಬೇಕಾಯಿತು.

ಇನ್ನು ಅನುದಾನ ಪಡೆದುಕೊಂಡು ಬಂದ ನಮ್ಮ ಖಜಾಂಚಿ ಗೋಪಾಳ ಸೌಧದ ಎಲ್ಲ ಮಹಡಿಯ ಎಲ್ಲ ಟೇಬಲ್‌ಗಳಿಗೂ ಸಲಾಂ ನೊಂದಿಗೆ ದಕ್ಷಿಣೆಗಳನ್ನೂ ಮುಟ್ಟಿಸಿ ಆಮೇಲೆ ಆ ದಕ್ಷಿಣೆ ರೂಪದಲ್ಲಿ ಕಳೆದುಕೊಂಡ ಹಣದ ಭರಣ ಇನ್ನೇನೊ ರೀತಿ, ರೂಪಗಳಲ್ಲಿ ಮಾಡಿ ಕೊಂಡ-ಏಕೆಂದರೆ ಪ್ರತಿವರ್ಷವೂ ಸರಕಾರೀ ಅನುದಾನ ಪಡೆಯುವ ಸಂಸ್ಥೆಗಳ ಹಣೆಬರಹ ಸಾರ್ವಜನಿಕರಿಗೆಲ್ಲಾ ಗೊತ್ತಿದ್ದ ಬಿಡಿ. ಈಗ ನಮ್ಮ ಗೋಪಾಳನ ಮುಖ್ಯ ತಕರಾರು ಎಂದರೆ ದಕ್ಷಿಣೆ ತೆತ್ತ ಬೇಕಾದ ರೇಟುಗಳ ಒಂದು ಬೋರ್ಡ್ ಯಾಕೆ ಹಚ್ಚ ಬಾರದು ಈ ವಿವಿಧ ಇಲಾಖೆ ಗಳವರು-ಎಂಬುದು!

> **ವಿವಿಧ ಬಾಬತ್ತುಗಳಿಗೆ ಸಲ್ಲಿಸಬೇಕಾದ ದಕ್ಷಿಣೆ (ಬೇಕಾದರೆ ಅದಕ್ಕೆ 'ಲಂಚ' ಎಂದು ಹೆಸರಿಸುವುದನ್ನು ಬಿಡಿ)ಗಳ ಒಂದು ಫೇರ್‌ಪ್ರೈಸ್ ಬೋರ್ಡ್ ಬೇಡವೆ? ಅದಿದ್ದರೆ ಮತ್ತೊಂದು ಮಾತಿಲ್ಲದೆ ಮಾಮೂಲಿ ದಕ್ಷಿಣೆಯನ್ನು ಟೇಬಲ್ ಮೇಲಿಂದಲೊ, ಕೆಳಗಿಂದಲೊ (under hand dealings ಅಂದರೆ ಮೇಜಿನ ಕೆಳಗಡೆಯಿಂದ ಮಾಡಬೇಕಾದ ಉತ್ತರ ಅಲ್ಲ, ಪೂರ್ವ ಕ್ರಿಯೆಗಳು) ನಡೆಯಲು ಸುಲಭವಾಗುವುದಿಲ್ಲವೆ?**

ಈಗ ಒಂದು ಫೇರ್ ಪ್ರೈಸ್ ಶಾಪ್‌ಗೆ ಹೋಗುತ್ತೀರಿ- ಅಕ್ಕಿಯ ರೇಟ್, ಜೋಳ, ಗೋಧಿ ಮೊದಲಾದ ಧಾನ್ಯಗಳ ರೇಟ್, ಸಕ್ಕರೆ ರೇಟ್, ಚಿಮಣಿ ಎಣ್ಣೆ ರೇಟ್ ಎಲ್ಲಾ ಫೇರ್ ಇರಲಿ ಬಿಡಲಿ 'ಫಿಕ್ಸ್' ರೇಟ್ ಆದರೂ ಇರುತ್ತದಷ್ಟೆ? ಈಗ ಪೆಟ್ರೋಲ್, ಸಕ್ಕರೆ, ಸೀಮೆಎಣ್ಣೆ ರೇಟ್‌ಗಳೆಲ್ಲಾ ಮುಗಿಲೆತ್ತರ ನೆಗೆದಿದ್ದರೂ ಅವು 'ಫೇರ್‌ಪ್ರೈಸ್' ಎಂದೇ ಕರೆಯಲ್ಪಡುವುದಿಲ್ಲವೆ? ಇದರಲ್ಲಿ fairness ಇದ್ದರೆ ಅವುಗಳು ಸರಕಾರಿ ಎಂದೇಕೆ ಇರುತ್ತಿದ್ದವು? ಆದರೆ ಬೋರ್ಡಿನ ಮೇಲೆ ಬರೆದಷ್ಟೇ fixed rateಗಳನ್ನು ಚಾರ್ಜ್ ಮಾಡುತ್ತಾರಷ್ಟೇ? ಅದೇ ರೀತಿ ಅನುದಾನ, ಪೆನ್ಷನ್, ಟೆನನ್ಸಿ ಕಾಂಪೆನ್‌ಶೇಷನ್, ಸರ್ವೇ ಉತಾರ, ಜನನ-ಮರಣ ಉತಾರ (ಹೌದು ಸಾರ್! ಮೊನ್ನೆ ಒಬ್ಬ ವಿಧವೆಗೆ ತನ್ನ ಗತಿಸಿದ ಪತಿಯ ಮರಣದ ಉತಾರ ಫ್ಯಾಮಿಲಿ ಪೆನ್‌ಶನ್‌ಗಾಗಿ ಹಾಜರ್ ಪಡಿಸಲೇಬೇಕಾದ ಆಕೆಗೆ ಪತಿವಿಯೋಗಕ್ಕಿಂತಲೂ ಹೆಚ್ಚಾದ ಕಂಬನಿ ಈ ಮರಣದ ಉತಾರದ ಇಲಾಖೆ ತರಿಸಿಬಿಟ್ಟಿತು! ನನ್ನ ಮಾತು ನಂಬಿ.) ಹೀಗೆ ವಿವಿಧ ಬಾಬತ್ತುಗಳಿಗೆ ಸಲ್ಲಿಸಬೇಕಾದ ದಕ್ಷಿಣೆ (ಅದಕ್ಕೆ 'ಲಂಚ' ಎಂದು ಹೆಸರಿಸುವುದನ್ನು ಬಿಡಬೇಕಾದರೆ)ಗಳ ಒಂದು ಫೇರ್‌ಪ್ರೈಸ್ ಬೋರ್ಡ್ ಬೇಡವೆ? ಅದಿದ್ದರೆ ಮತ್ತೊಂದು ಮಾತಿಲ್ಲದೆ ಮಾಮೂಲಿ ದಕ್ಷಿಣೆಯನ್ನು ಟೇಬಲ್ ಮೇಲಿಂದಲೊ, ಕೆಳಗಿಂದಲೊ (under hand dealings ಅಂದರೆ ಮೇಜಿನ ಕೆಳಗಡೆಯಿಂದ ಮಾಡಬೇಕಾದ ಉತ್ತರ ಅಲ್ಲ, ಪೂರ್ವ ಕ್ರಿಯೆಗಳು) ನಡೆಯಲು ಸುಲಭ ವಾಗುವುದಿಲ್ಲವೆ? ಇದರಿಂದ ಎಲ್ಲಿಲ್ಲದ ಹಿಗಲ್ ಹ್ಯಾಗಲಿಂಗ್ ತಪ್ಪುತ್ತದೆ.

ಒಂದು ಹೋಟೆಲ್‌ಗೆ ಹೋಗುತ್ತೀರಿ- ಮಸಾಲೆ ದೋಸೆ ಇಷ್ಟು, ರವೆ ದೋಸೆ ಇಷ್ಟು, ಎಕ್ಸ್‌ಟ್ರಾ ಚಟ್ನಿ ಚಮಚೆಗೆ ೨೫ ಪೈಸೆ, ಎಕ್ಸ್‌ಟ್ರಾ ಸಕ್ಕರೆ ಚಮಚೆಗೆ ೧೫ ಪೈಸೆ, ಬೋಂಡಾ, ದಹಿವಡಾ, ಇಡ್ಲಿ-ರವೆ ಇಡ್ಲಿ, ಅಂಟಿನ ಉಂಡಿ, ಬಾದಾಮ ಪುರಿ ಇತ್ಯಾದಿ ಇತ್ಯಾದಿ ರೇಟ್ ನೋಡುತ್ತೀರಿ. ನಿಮ್ಮ ಜೇಬು ಮುಟ್ಟಿಕೊಂಡು ಜಲೇಬಿ, ಜಾಮೂನ್, ಚೌಚೌ ಇತ್ಯಾದಿ ಆರ್ಡರ್ ಕೊಡುತ್ತೀರಿ. ತಿರುಪತಿಗೊ, ಮಂತ್ರಾಲಯಕ್ಕೊ ಹೋಗುತ್ತೀರಿ. ಮಂಗಳಾರತಿ ಯಿಂದ ಮಹಾಪೂಜೆಯವರೆಗಿನ ಎಲ್ಲಾ ಪೂಜಾ ಪ್ರಕಾರಗಳ ಫೇರ್‌ಪ್ರೈಸ್ ಅರ್ಥಾತ್ ಭಕ್ತಿ ಪೂರ್ವಕ ಅಲ್ಲ ಭಕ್ತಿಪೂರಕ ಪ್ರೈಸ್ ಬೋರ್ಡ್ ನೋಡಿ ನಿಮ್ಮ ಅಳಿಲು ಸೇವೆ ಅಳುತ್ತೀರಿ. ಇನ್ನು ಸಿನಿಮಾ ರೇಟುಗಳು (ಕನ್ನಡಕ್ಕೆ Tax Free ರೇಟುಗಳು, ಹಿಂದೀ ಚಿತ್ರಗಳಿಗೆ ಭರ್ತಿ tax ರೇಟುಗಳು! ಆದರೆ ಕನ್ನಡ tax free rateನಲ್ಲೇನು 'ಸೆಕ್ಸ್' ಕಡಿಮೆ ಇರುತ್ತದೆಯೆ? 'ಚೋಲಿಕೆ ಪೀಛೆ' ಬದಲು ಇನ್ನಾವುದೋ ನೀಚೆ-ಪೀಛೆ ಮಾದರಿ ಇದ್ದೇ ಇರುತ್ತದೆ. ಆ ಮಾತು ಬೇರೆ.) fixed rates ನೋಡಿ ಕ್ಯೂ ಹಚ್ಚುತ್ತೀರಿ.

ಹಾಗೆ ಸಾರ್, ಹಾಗೆ ಎಲ್ಲಾ ಸಾರ್ವಜನಿಕ ಅಥವಾ ಸರಕಾರೀ ಕಚೇರಿಗಳಲ್ಲಿ ಈ ಗಿಂಬಳ ಗಳ ಬೋರ್ಡ್ ಇದ್ದುಬಿಟ್ಟರೆ ಸುಸೂತ್ರವಾಗಿ ರುವುದಿಲ್ಲವೆ? ಇದು ನಮ್ಮ ಗೋಪಾಳನ ಗೊಣಗು. ಬೇಕಾದರೆ ಅವಶ್ಯ ಬಿದ್ದರೆ ಈ 'ದಕ್ಷಿಣೆ' ಊರ್ಫ್ 'ಗಿಂಬಳ' ಊರ್ಫ್ 'ಗೋಪಾಳ', ಊರ್ಫ್ ಇನ್ನೂ ಏನೇನೊ ಬಹಿರಂಗವಾಗಿ rateಗಳನ್ನು fix ಮಾಡುವ ಒಂದು amendment ಯಾಕೆ ತರಬಾರದು? ಇಷ್ಟಾಗಿಬಿಟ್ಟರೆ ವಿಶ್ವಾಸಮತ ಯಾಚನೆಗೆ ಇಷ್ಟು, ವಿವಿಧ scamsಗಳ ಹಗರಣಗಳಿಂದ ಹರಣ ಗಳನ್ನುಳಿಸಿಕೊಳ್ಳುವ, ಗೌರವ ಘನತೆಗಳನ್ನುಳಿಸಿ ಕೊಳ್ಳುವ ವಿಧಾನಗಳೂ ಶಾಸನಬದ್ಧವಾಗಬಹು ದಲ್ಲವೆ? ಈಗ ನೋಡಿ, ಈ ಪಕ್ಷಾಂತರ ಪ್ರತಿ ಬಂಧಕದ ಬಿಗಿ ಶಾಸನ (ಇದುವರೆಗೆ ಅದು ಶಿಥಿಲ ಶಾಸನವಾದ್ದರಿಂದ U.P.ಯಲ್ಲಿ ups and downs ನಡೆದು ಬಿಟ್ಟವು) ಬರಲಿದೆಯಷ್ಟೆ? ಎಲ್ಲೆಲ್ಲಿ ಒಂದೊಂದು ಶಾಸನವೊ, ಎಲ್ಲೆಲ್ಲಿ ಒಂದೊಂದು ವೆಲ್‌ಫೇರ್ ಯೋಜನೆಯೊ ಅಲ್ಲಲ್ಲಿ ಒಂದೊಂದು ಲಂಚದ ಲೂಪ್‌ಹೋಲ್ ಸಿದ್ಧತೆ ಇರುತ್ತದೆ. ಇಂಥ ಲೂಪ್‌ಹೋಲ್ಸ್ ಎಲ್ಲಾ ಪ್ಲಗ್ ಮಾಡುತ್ತ ಕೂಡುವುದಕ್ಕಿಂತ ಅಧ್ವಾನ ಗಳನ್ನೆಲ್ಲಾ ಶಾಸನಬದ್ಧ ಮಾಡಿ ಬಿಟ್ಟರೆ ಬಹಿರಂಗವಾಗಿ fair price ಅರ್ಥಾತ್ ದಕ್ಷಿಣಾ ಫಲಕಗಳನ್ನು ತಯಾರಿಸಿ ಪ್ರದರ್ಶಿಸಲು ಅನುಕೂಲವಾಗುವುದಿಲ್ಲವೆ?

ನಮ್ಮ ಸೋದರ ಮಾವನಿದ್ದ. ಆತ ಒಬ್ಬ ಕೋರ್ಟಿನ ಸಾದಾ ಗುಮಾಸ್ತ. ಒಂದು 'ಅಫಿಡೆವಿಟ್'ಗೆ ನಾಲ್ಕಾಣೆ ಮಾತ್ರ ಆತನ ಗೋಪಾಳ! ಅದರಲ್ಲೂ ಒಂದಾಣೆ ಮಂತ್ರಾ ಲಯದ ರಾಯರ ಹೆಸರಿನಲ್ಲಿ ತೆಗೆದಿಟ್ಟು, ಮೂರಾಣೆ ಜೇಬಿಗೆ ಸೇರಿಸುತ್ತಿದ್ದ. ಪಾಪ, ಸ್ಥೂಲಕಾಯ, ನಡೆದಾಡಲು ಶ್ರಮ. ಅಂತೇ ಮೂರಾಣೆಗೆ ಒಂದು ಟಾಂಗಾ ಮಾಡಿಕೊಂಡು ಕಚೇರಿಗೆ ಹೋಗುತ್ತಿದ್ದ. ಸ್ವಾಮೀ, ಆತನ ಗಿಂಬಳ ಸ್ವೀಕೃತಿಯಲ್ಲೂ ಒಂದು ಸೇವಾಭಾವ ಭಕ್ತಿ! ನಮ್ಮ ಮಾವ ಈ 'ಗೋಪಾಳ'ಕ್ಕೆ 'ಸೇವಾ ಶುಲ್ಕ' ಎಂದು ಕರೆಯುತ್ತಿದ್ದ. (ಇಂಗ್ಲಿಷ್‌ನಲ್ಲಿ euphimism ಎಂಬ ಸುಂದರ ಶಬ್ದವಿದೆ. ಈ ಸೇವಾ ಶುಲ್ಕ ಆ ಯುಫಿಮಿಜಂ)


ನನ್ನ ಸೋದರಮಾವನ ಕಾಲಕ್ಕೆ ಎಂದರೆ ಆ ಸೋವಿಕಾಲಕ್ಕಿದ್ದ ಸೇವಾ ಶುಲ್ಕ ದರಗಳು negligible ಆಗಿದ್ದವು. ಆದರೆ ಈಗಿನ ಗಗನ ದೆತ್ತರದ ಏರಿಕೆ ಕಾಲಕ್ಕೆ ಈ fair price ಬೋರ್ಡುಗಳು ಅಗತ್ಯ ಎಂಬುದು ನಮ್ಮ ಗೋಪಾಳನ ಇರಾದೆ. ●

# ವ್ಯಕ್ತಿತ್ವ ಸುಧಾರಣೆಯಲ್ಲಿ ಅಭ್ಯಾಸಗಳ ಪಾತ್ರ

## ಹೆಜ್ಜೆ - ೬

○ 'ಕೃಶಾಂಗ'

ವ್ಯಕ್ತಿತ್ವ ಸುಧಾರಣೆಯಲ್ಲಿ
ಅಭ್ಯಾಸಗಳ ಪಾತ್ರವನ್ನರಿಯಲು
ಈಗ ಸುಸಮಯ. ಬನ್ನಿ,
ಹೆಜ್ಜೆ ಹಾಕಿ.




### ಅಭ್ಯಾಸಗಳ ಅರ್ಥ ಮತ್ತು ಮಹತ್ವ

'ಅಭ್ಯಾಸ' ಅಥವಾ 'ಚಟ' ನಾವಾಗಿ ಕಲಿತು ಪುನರಾವರ್ತನೆಯ ಮೂಲಕ ಸ್ವಯಂಚಾಲಿತವಾಗಿಸಿಕೊಂಡ ನಡಾವಳಿಯೆಂದೆನ್ನಬಹುದು. ಅವು ನಮ್ಮ ಚಟುವಟಿಕೆಗಳನ್ನು ನಿಯಂತ್ರಿಸುತ್ತವೆ. ಪಶುಪಕ್ಷಿಗಳು ಹಾಗೂ ಮಾನವನಿಗೆ ಇರುವ ಮುಖ್ಯ ಅಂತರ ಪರಿಸರದೊಡನೆ ಹೊಂದಾಣಿಕೆ. ತನ್ನ ವರ್ಗದ ಮೊಟ್ಟ ಮೊದಲ ಸಂತತಿ ಮಾಡಿದಂತೆಯೇ ಇಂದಿನ ಪಕ್ಷಿ ಸಹ ಪೂರ್ವ ಶಿಕ್ಷಣವಿಲ್ಲದೇ ಹಾರುತ್ತದೆ; ಗೂಡು ಕಟ್ಟುತ್ತದೆ ಒಂದೇ ತೆರನಾದ ಆಹಾರ ಶೋಧನೆಯಲ್ಲಿ ಪ್ರತಿದಿನ ತೊಡಗುತ್ತದೆ. ಜಾತ್ಯಾರ್ಜಿತವಾದ ಈ ಹುಟ್ಟು ಸ್ವಭಾವದ ಬೇಕುಗಳನ್ನು ತೃಪ್ತಿಪಡಿಸಲು ಅಸಾಧ್ಯವಾದಾಗ ಅದು ನಾಮಾವಶೇಷವಾಗುತ್ತದೆ. ಮನುಷ್ಯನ ರೀತಿ ಬೇರೆ. ಆತ ಎಲ್ಲ ಚಟುವಟಿಕೆಗಳನ್ನು ಕಲಿಯಬೇಕು. ಈ ಕಲಿಕೆ ಬದಲಾಗುತ್ತಿರುವ ಪರಿಸರ, ಪರಿಸ್ಥಿತಿಗಳೊಡನೆ ಆತನಿಗೆ ಹೊಂದಾಣಿಕೆಯ ತರಬೇತಿ ನೀಡುತ್ತದೆ. ಹೊಸ ಹೊಸ ಅಭ್ಯಾಸಗಳನ್ನೂ ರೂಢಿಸಿಕೊಳ್ಳಬಲ್ಲವನಾದುದರಿಂದಲೇ ಮಾನವ ಹುಟ್ಟರಿವಿನ ಲಾಭಗಳನ್ನಷ್ಟೇ ಉಪಯೋಗಿಸಿಕೊಳ್ಳಲು ಸಮರ್ಥನಾಗುತ್ತಾನೆ. ಇಂದಿಗೂ ಸಹ ನಾಶವಾಗಿರದ ಸರ್ವಶ್ರೇಷ್ಠ ತಳಿಯಾಗಿ ಆತ ಉಳಿದಿರಲು ಇದೇ ಕಾರಣ. ಆದರೆ ಮೇಲೆ ವರ್ಣಿಸಿದ 'ಪಶುಗುಣ' ಮೂಲರೂಪದ ಪಶುಗಳಿಗೆ ಮಾತ್ರ ಅನ್ವಯಿಸುತ್ತದೆಂಬುದನ್ನೂ ನಾವು ತಿಳಿದಿರಬೇಕು. ಏಕೆಂದರೆ ಮುಂದುವರಿದ ಅಥವಾ ಅಭಿವೃದ್ಧಿ ವರ್ಗದ ಕೆಲ ಪ್ರಾಣಿಗಳಿಗೆ ನಮ್ಮಂತೆ ಕೆಲ ಪ್ರತಿಕ್ರಿಯೆಗಳನ್ನು ತರಬೇತಿಯ ಮೂಲಕ ಅಭ್ಯಾಸ ಮಾಡಿಸಬಹುದು.

ವ್ಯಕ್ತಿತ್ವದಲ್ಲಿ ಅಭ್ಯಾಸಗಳ ಪಾತ್ರವನ್ನು ಕಡೆಗಣಿಸಲಾಗದು. ವ್ಯಕ್ತಿಯ ಗುಣಾವಗುಣಗಳು, ವೃತ್ತಿ ಕ್ಷಮತೆ ಮತ್ತು ವ್ಯಕ್ತಿಗತ ಭಿನ್ನತೆಗಳು ಆತನ ಅಭ್ಯಾಸಗಳ ಮೂಲಕ ತೋರ್ಪಡುವದರಿಂದ ವ್ಯಕ್ತಿತ್ವವನ್ನು ಅಭ್ಯಾಸಗಳ ಮೂಲಕವೂ ವ್ಯಾಖ್ಯಾಯಿಸಲಾಗಿದೆ. ಅಭ್ಯಾಸಗಳ ಪರಿಣಾಮ ದೈಹಿಕ ಮತ್ತು ಮಾನಸಿಕ ಆರೋಗ್ಯದ ಮೇಲೆ ಉಂಟಾಗುತ್ತದೆ. ವ್ಯಕ್ತಿಯೊಬ್ಬನ ಖ್ಯಾತಿ, ಅಪಖ್ಯಾತಿಗಳ ಕಾರಣ, ಆತನ ಅಭ್ಯಾಸಗಳು. ಹಾಗಾಗಿ, ಅಭ್ಯಾಸಗಳು ವ್ಯಕ್ತಿತ್ವದ ಮಾಪನದ ಸಾಧನಗಳಾಗುತ್ತವೆ. ನಿಮಗೆ ಸುಲಭಾಳನ್ನು ಕಂಡರಾಗುವದಿಲ್ಲ; ಆದರೆ ಸುಬ್ಬಣ್ಣ ಇಷ್ಟವಾಗುತ್ತಾನೆ. ಮಾಲತಿಯ ಮೇಲೆ ನಿಮ್ಮ ಪೂರ್ಣ ನಂಬುಗೆಯಿದೆ; ಆದರೆ ಮಾರುತಿಯನ್ನೆಂದೂ ನೀವು ನಂಬುವದಿಲ್ಲ. ಆನಂದ ಜೀವನದಲ್ಲಿ ಸೋತಿದ್ದಾನೆ; ಆರತಿ ಸಂಪೂರ್ಣ ಯಶಸ್ವಿ ಹುಡುಗಿ. ಈ ಭಿನ್ನತೆಗಳಿಗೆ ಕಾರಣ: ಅವರವರ ಅಭ್ಯಾಸಗಳು.

### ಅಭ್ಯಾಸಗಳು ಮತ್ತು ವ್ಯಕ್ತಿ ವೈಶಿಷ್ಟ್ಯ

ನಮ್ಮ ಮತ್ತು ಸಮಾಜದ ಆರೋಗ್ಯಕರ ರಕ್ಷಣೆಗಾಗಿ ಅನೇಕ ಅಭ್ಯಾಸಗಳನ್ನು ಹಾಕಿಕೊಳ್ಳುತ್ತೇವಷ್ಟೇ. ವ್ಯಕ್ತಿಗಳು ರೂಢಿಸಿಕೊಂಡ ಇಂಥ ಅಭ್ಯಾಸಗಳು (ಅವು ಒಳ್ಳೆಯವಾಗಿದ್ದರೆ) ಅವರ ವ್ಯಕ್ತಿತ್ವಕ್ಕೆ ಮೆರುಗು ಅಥವಾ ವಿಶೇಷತೆಯನ್ನು ಒದಗಿಸುತ್ತವೆ. ಆ ವೈಶಿಷ್ಟ್ಯದಿಂದಲೇ (trait) ಆ ವ್ಯಕ್ತಿ ಗುರುತಿಸಲ್ಪಡುತ್ತಾನೆ. 'ಅಯ್ಯೋ ಬಿಡಿ, ಆತನನ್ನು ನಾನು ನೋಡುವುದು ಇಂದಲ್ಲ; ಮೊದಲಿನಿಂದಲೂ ಆತ ಕಟ್ಟು-ನಿಟ್ಟು' ಎನ್ನುತ್ತೇವೆ. ಅಂದರೆ ಆತನ ಎಲ್ಲ ಚಟುವಟಿಕೆಗಳಲ್ಲೂ ಎದ್ದು ಕಾಣುವ 'ಸೊಗಸು' ಇದು, ಎಂದರ್ಥ. ಎಲ್ಲ ಅಭ್ಯಾಸಗಳೂ (habits) ಸೇರಿ ಇದು ಆಗಿದೆ. 'ಮಗೂ, ಹಿರಿಯರಿಗೆ ದಾರಿ ಬಿಡಬೇಕು; ಉಪಕೃತನಾದಾಗ 'ಕೃತಜ್ಞತೆ' ಹೇಳಬೇಕು; ತಪ್ಪಿದಾಗ 'ಕ್ಷಮಿಸಿ' ಎನ್ನಬೇಕು' ಎಂದೆಲ್ಲ ತರಬೇತಿ ನೀಡುತ್ತೇವೆ. ಈ ಮಗು ಬೆಳೆಯುತ್ತ ಈ ಅಭ್ಯಾಸಗಳ ಸಾಮಾಜಿಕ ಲಾಭಗಳನ್ನು ಗುರುತಿಸಿ, ಬೇಕೆಂದೇ ಅವುಗಳಿಗಂಟಿಕೊಳ್ಳುತ್ತ ನಡೆದು ತನ್ನ ವ್ಯಕ್ತಿತ್ವದಲ್ಲಿ ಅರಗಿಸಿಕೊಂಡಾಗ ನಾವು ಉದ್ಗರಿಸುತ್ತೇವೆ: 'ಅವಳೇ, ನೂರಕ್ಕೆ ನೂರು ಸೌಜನ್ಯಶೀಲಳು! ಬಾಲ್ಯದಿಂದಲೂ ನಾನವಳನ್ನು ಬಲ್ಲೆ. ಸದಭ್ಯಾಸ ಸಮೂಹದ ಕರಗತಿಯ ಫಲ, ಈ ವ್ಯಕ್ತಿ ವೈಶಿಷ್ಟ್ಯ. ತದ್ವಿರುದ್ಧ ಉದಾಹರಣೆಗಳೂ ಸಾಕಷ್ಟಿವೆ.

### ಅಭ್ಯಾಸಗಳ ಇನ್ನೊಂದು ಮುಖ


ಪ್ರಾಣಿಗಳಿಗಿರುವ ಬಹಳಷ್ಟು ಸ್ವಭಾವಜನ್ಯ ಪ್ರತಿಕ್ರಿಯೆಗಳನ್ನು ಇಲ್ಲವಾಗಿಸಿಕೊಂಡ ಮಾನವನಿಗೆ ಅಭ್ಯಾಸಗಳೂ ಇಲ್ಲವಾಗಿದ್ದರೆ ಆತನ ಕಾರ್ಯಕ್ಷಮತೆ ಕನಿಕರಪಡುವ ಮಟ್ಟಕ್ಕಿಳಿಯಬಹುದಾಗಿದ್ದಿತು. ಆತನು ಅಭ್ಯಾಸಗಳ ಮೂಲಕ ಅನೇಕ ಕೆಲಸಗಳನ್ನು ಏಕಕಾಲಕ್ಕೆ ಪೂರೈಸಬಹುದಾದ ಅನುಕೂಲಗಳನ್ನವು ಒದಗಿಸಿದರೂ ಅವೂ ಸಹ ಸ್ವಾಭಾವಿಕ ಅನಾನುಕೂಲಗಳಿಂದ ಮುಕ್ತವಾಗಿಲ್ಲ.

ಅಪ್ರಜ್ಞಾಪೂರ್ವಕವಾಗಿ ನಿರ್ವಹಿಸಲ್ಪಡುವ ಇಂಥ ಚಟುವಟಿಕೆಗಳು ಯಾವಾಗಲೂ ಏಕರೂಪದವಾಗಿರುವದರಿಂದ ಸತ್ವಹೀನ ನಡವಳಿಕೆಗೆ ಅವು ಕಾರಣವಾಗಬಹುದು. ಅಭ್ಯಾಸಾಧೀನ ನಡಾವಳಿಯು ಚಲನಶೀಲತೆಯ ವೈರಿಯೂ ಹೌದು; ಬದಲಾವಣೆಯ

# ವ್ಯಕ್ತಿತ್ವ ವಿಕಾಸ

ವಿರೋಧಿಯೂ ಹೌದು. ಈಗೊಂದು ಉದಾಹರಣೆ. ತಾಂತ್ರಿಕ ವಿಷಯದಲ್ಲಿ ಪರಿಣತಿ ಪಡೆದು ನೀವೀಗ ನಿಮ್ಮ ಕಾರಖಾನೆಯ ಧುರೀಣತ್ವ ವಹಿಸಿಕೊಳ್ಳಲಿರುವಿರೆಂದು ಕಲ್ಪಿಸಿಕೊಳ್ಳಿ. ಇಷ್ಟು ವರ್ಷಗಳವರೆಗೆ ಕಾರಖಾನೆಯನ್ನು ಮುನ್ನಡೆಸಿದ ಹಳೆಯ ತಲೆಮಾರಿನ ನಿಮ್ಮ ತಂದೆ ಹಾಗೂ ಅವರ ಸಹಚರರ ಜೊತೆಗೆ ನೀವೀಗ ಹೆಜ್ಜೆ ಹಾಕಲಿಕ್ಕಿದೆ. ಅವರು ಈಗಲೂ ಸಹ ತಮ್ಮ ದಿನಗಳ ಆಚಾರ-ವಿಚಾರಗಳಿಂದ ಪ್ರಭಾವಿತರಾಗಿದ್ದು ಅವುಗಳೇ ಈಗಲೂ ಶ್ರೇಷ್ಠವೆಂದು ನಿಮ್ಮನ್ನು ಒತ್ತಾಯದಿಂದಲಾದರೂ ನಂಬಿಸಲೆತ್ನಿಸುವದು ನಿಮಗೆ ಬೇಸರ ತರಿಸುತ್ತದಲ್ಲವೇ? ನಿಮ್ಮ ಹೊಸ ವಿಚಾರಗಳನ್ನು ಅವರು ಒಟ್ಟಾಗಿ ವಿರೋಧಿಸುತ್ತಿದ್ದಾರೆ. ಈ ಸಂಘರ್ಷವೇ, 'ತಲೆಮಾರಿನ ಅಂತರ'ದ ಒಂದು ಮುಖ. ನಿಮ್ಮ ಮಗ ಕಾರಖಾನೆ ವಹಿಸಿಕೊಳ್ಳುವಾಗಲೂ ಇದು ತಲೆದೋರುತ್ತದೆ. ಏಕೆ? ಹಿರಿಯರು ತಮ್ಮ ಅಭ್ಯಾಸಗಳಿಗೆ ಅಂಟಿಕೊಳ್ಳುವದು ಅವರ ಲೋಪವಲ್ಲ; ಇದು ಎಲ್ಲಾ ಅಭ್ಯಾಸಗಳ ಅನಾನುಕೂಲ.

ಕೆಲವು ಚಟುವಟಿಕೆಗಳನ್ನು ಅಭ್ಯಾಸಗಳಲ್ಲಿ ಬದಲಾಯಿಸದೆ ಹೋದರೆ ಅವುಗಳನ್ನು ನಾವು ಮರೆತುಬಿಡಬಹುದು. ಆದರೆ ಅಭ್ಯಾಸ ಬಲದಿಂದಲೇ ಎಲ್ಲಾ ಕಾರ್ಯಗಳನ್ನೂ ಮಾಡುತ್ತ ಹೋದರೆ ಏನಾಗುತ್ತದೆ? ಆ ಕಾರ್ಯಗಳು 'ತಂತಾನೇ' ಜರುಗಿ ಅವುಗಳಲ್ಲಿ ನಮ್ಮ 'ಆತ್ಮವು' ಇಲ್ಲವಾಗುವ ಭಯವಿದೆ. ಆ ಕ್ರಿಯೆಗಳು ಜರುಗುವಾಗ ನಮ್ಮ ಲಕ್ಷ್ಯವೂ ಅತ್ತ ಇರದೇ ಇರುವದರಿಂದ ಅವು ಶುಷ್ಕ ಚಟುವಟಿಕೆಗಳಾಗುವ ಗಂಡಾಂತರವಿದೆ. ರೈಲಿನಲ್ಲಿ ನಿಮ್ಮ ತಾಯಿಯ ವಸ್ತುಗಳನ್ನು ಕೂಲಿಯು ಇರಿಸಹೋದಾಗ ನಿಮ್ಮ ತಾಯಿ ರೈಲುಕಟ್ಟೆಯ ಮೇಲೆ ಇಳಿದು ನಿಂತಿರುವರೆಂದುಕೊಳ್ಳಿ, ರೈಲು ಇನ್ನೇನು ಹೊರಡಲಿದೆ. ಆಗ ನೀವು ಅಭ್ಯಾಸಬಲದಿಂದ ಕೂಲಿಯ ಕಾಲು ಹಿಡಿದು ನಿಮ್ಮ ತಾಯಿಯ ಕೈಯಲ್ಲಿ ಐದು ರೂಪಾಯಿಗಳನ್ನಿರಿಸಿದರೆ ಅವರಿಗೆ ಹೇಗಾಗಬೇಡ? ನವವಿವಾಹಿತರಾದ ನೀವು ಪ್ರತಿದಿನ ಕಚೇರಿಗೆ ಹೊರಡುವಾಗ ನಿಮ್ಮವಳೊಡನೆ ಸರಸವಾಡುವದು ಸಹಜ ತಾನೇ? ಆದರೆ ಒಂದು ದಿನ, ನಿಮ್ಮವಳ ಸೀರೆಯನ್ನು ಧರಿಸಿದ ಕೆಲಸದವಳನ್ನು ಅದೇ ಕೆಲಸಕ್ಕಾಗಿ ಸಮೀಪಿಸಿದರೆ! ಅದೂ ಹೋಗಲಿ, ಕೇವಲ ಅಭ್ಯಾಸ ಬಲದಿಂದ ದೇವತಾಸ್ತುತಿ ಹೇಳುತ್ತಾ ಮನಸ್ಸನ್ನು ಎತ್ತಲೋ ಹರಿಯಬಿಟ್ಟಿದ್ದರೆ ಅದೆಂಥ ಬಗೆಯ ಭಕ್ತಿ? ಯೋಚಿಸಿ, ಚಟುವಟಿಕೆಗಳನ್ನು ಅಭ್ಯಾಸದಲ್ಲಿ ಬದಲಿಸುವಾಗ ಅನ್ಯಮನಸ್ಕತೆಯನ್ನು ದೂರ ಮಾಡಿ ಅದರಲ್ಲಿ ಅಪೇಕ್ಷಣೀಯವಾದ ಭಾವನೆಗಳನ್ನು ತುಂಬುವ ಪ್ರಯತ್ನ ಮಾಡಿದಲ್ಲಿ ಮಾತ್ರ ಈ ಅಭ್ಯಾಸ ಅರ್ಥಪೂರ್ಣವಾಗಬಲ್ಲದು.



> " ದುರಭ್ಯಾಸಗಳನ್ನು ದೂರಗೊಳಿಸುವದು ಒಳ್ಳೆಯ ಅಭ್ಯಾಸಗಳನ್ನು ರೂಢಿಸಿಕೊಳ್ಳುವದಕ್ಕಿಂತ ಕಠಿಣವಾದುದು. "

ಅಭ್ಯಾಸಗಳು ಯಾಂತ್ರಿಕತೆಯನ್ನೂ ಹೆಚ್ಚಿಸಿ ಲಕ್ಷ್ಯವನ್ನು ಕ್ಷೀಣಗೊಳಿಸುವದರಿಂದ ಶ್ರಮಿಕರಿಗಂತೂ ಅವು ಶಾಪಗಳೇ. ಏಕೆಂದರೆ ಇಂಥ ಅಭ್ಯಾಸಗಳಿಂದ ಅವರ ಕಾರ್ಯಕ್ಷಮತೆ ಒಂದೇ ಪಾತಳಿಯಲ್ಲಿ ಉಳಿದುಬಿಡುವದು. ಅವರ ಲಕ್ಷ್ಯ ಪರಿಸರದ ಬಗೆಗಾಗಲಿ ಸುತ್ತಲಿನ ಶ್ರಮಿಕರ ಕೆಲಸದ ಬಗೆಗಾಗಲಿ ಹರಿಯುವದಿಲ್ಲವಾದುದರಿಂದ, ಅಭ್ಯಾಸಗಳು ಸೂಕ್ತವಲ್ಲ. ಶ್ರಮಿಕನ ಕುತೂಹಲ ಇಂಗಿಹೋಗುವದರಿಂದ ಆತನ ಬೆಳವಣಿಗೆ ಕುಂಠಿತವಾಗುತ್ತದೆ. ಥಾಮಸ್ ಎಡಿಸನ್ ನಿದ್ದೆ ಹೋಗುತ್ತಿದ್ದುದು ತನ್ನ ಬದಲಿಗೆ ಕೆಲಸ ಮಾಡುವ ಯಂತ್ರವನ್ನು ಶೋಧಿಸಿದ್ದರಿಂದಲೇ ಅಲ್ಲವೇ? ಅದೇ ಯಂತ್ರ ಅಭ್ಯಾಸ ಬಲದಿಂದ ನೀವೇ ಆದರೆ? ಯೋಚಿಸಿ.

ವ್ಯಕ್ತಿತ್ವದ ಮೂಲ ಲಕ್ಷಣವೆಂದರೆ ಅಭ್ಯಾಸವಾಗಿಸಿಕೊಂಡ ಯಾವುದೇ ಚಟುವಟಿಕೆಯು ಬದಲಾವಣೆಯ ಕಡು ವಿರೋಧಿ ಆಗುವದು. ಆದರೆ ಚಲನಶೀಲವಾದ ಇಂದಿನ ಸಮಾಜದಲ್ಲಿ 'ನಿಂತ ನೀರಿನಂಥ' ಮನೋಭಾವವು ಕಟುಟೀಕೆಗೆ ಒಳಗಾಗುತ್ತದೆ. ಯಾವುದನ್ನು ಈ ಹಿಂದೆ 'ವಿಧೇಯತೆ' ಎಂದು ಕೊಂಡಾಡುತ್ತಿದ್ದೆವೋ ಅದನ್ನೇ ಈಗ 'ಪೂರ್ವಾಗ್ರಹ' ಎಂದು ಹೀಗಳೆಯಬಹುದು. ಈ ಕಾರಣ, ಯುಕ್ತಾಯುಕ್ತಾ ವಿವೇಚನೆಯ ಸ್ಥಾನವನ್ನು ಅತಿಕ್ರಮಿಸಲು ಪೂರ್ವಾಗ್ರಹಕ್ಕೆ ನೆರವಾಗುವ ಅಭ್ಯಾಸಗಳನ್ನು ಸಾಮಾಜಿಕ-ರಾಜಕೀಯ ಚಟುವಟಿಕೆಗಳಲ್ಲಿ ತೀವ್ರವಾಗಿ ವಿರೋಧಿಸಲಾಗುತ್ತಿದೆ. 'ಕಳೆದ ನಲವತ್ತು ವರ್ಷಗಳಿಂದಲೂ ನಾನು ಕಾಂಗ್ರೆಸ್ಸಿಗ' ಎಂಬ ಘೋಷಣೆ ಈ ದೃಷ್ಟಿಯಿಂದ ನಗೆಗೀಡಾಗಬಹುದು.

ಬದಲಾವಣೆ ಜೀವನದ ಉಸಿರು. ಅದು ಹೊಸ ಹೊಸ ಆವಿಷ್ಕಾರಗಳ ಕಾರಣವಾಗಲೀ, ಸದ್ಯದ ವಿಚಾರಗಳ ಅಪ್ರಸ್ತುತೆಯನ್ನು ಮನಗಾಣುವದರಿಂದಾಗಲೀ, ಹೆಚ್ಚು ಸ್ಪಷ್ಟ ತರ್ಕ ಸಾಧ್ಯವಾದುದರಿಂದಾಗಲೀ ಕಾರ್ಯರೂಪಕ್ಕೆ ಬರಬಹುದು. ಇಂಥ ಮುಕ್ತತೆಗೆ ಅಭ್ಯಾಸವೆಂಬ ಪರದೆ ಅಡ್ಡವಾಗಿ ನಾವು ಉಸಿರುಗಟ್ಟುವಂತಾದರೆ ಅಂಥ ಅಭ್ಯಾಸಗಳು ಸಾಮಾಜಿಕವಾಗಿ ತ್ಯಾಜ್ಯ. ಅಲ್ಲವೇ?

### ಅತ್ಯಂತ ಖಂಡನಾರ್ಹ ದುರಭ್ಯಾಸ

ಮನುಷ್ಯ ಸ್ವಭಾವದಲ್ಲಿ ಬೇರೂರಿದ

# ವ್ಯಕ್ತಿತ್ವ ವಿಕಾಸ

ಇನ್ನೊಂದು ದುರಭ್ಯಾಸ ತನ್ನೆಲ್ಲ ಕ್ರಿಯೆಗಳನ್ನೂ ಒಪ್ಪಿಟ್ಟುಕೊಳ್ಳುವದು. ಇದನ್ನೇ 'ಅಹಂಭಾವ', 'ಆತ್ಮಪ್ರತಿಷ್ಠೆ', 'ದುರಭಿಮಾನ' ಎನ್ನುವದು. ಮೆದು ಮಣ್ಣಿನಂಥ ಎಳೆಯರನ್ನು ಮೂರ್ತಿಗಳನ್ನಾಗಿ ಪರಿವರ್ತಿಸುವ ಗುರುತರ ಜವಾಬ್ದಾರಿ ಹೊತ್ತಿರುವ ಪಾಲಕರು ಮತ್ತು ಶಿಕ್ಷಕರಲ್ಲಿ ಇಂಥ ದುರಭ್ಯಾಸ ತುಂಬಿದ್ದರೆ ಅದಕ್ಕೇನು ಹೇಳಬೇಕು? ಅತ್ಯಂತ ಅಪಾಯಕಾರಿಯಾದ ಅಂಧತ್ವವೆಂದರೆ ತನ್ನ ಪ್ರಮಾದಗಳಿಗೇ ಕುರುಡಾಗಿರುವದು. ಆದರೆ ಅತ್ಯಂತ ಹೀನಾಯವಾದ ಪುಕ್ಕಲುತನದ ಉದಾಹರಣೆಯೆಂದರೆ ತನ್ನ ವ್ಯಕ್ತಿತ್ವದ ಋಣಾತ್ಮಕ ಅಂಶಗಳ ಅರಿವಿದ್ದೂ ಸಹ ತನ್ನ ಸಾಮಾಜಿಕ ಪ್ರಭಾವ ಅಥವಾ ಅಂತಸ್ತುಗಳು ಕಡಿಮೆಗೊಳ್ಳಬಹುದೆಂಬ ಅಂಜಿಕೆಯಿಂದ, ಅವುಗಳನ್ನೂ ಒಪ್ಪಿಕೊಳ್ಳದಿರುವದು. ಮಗುವು ಮನೆಯಲ್ಲಿ ಅಥವಾ ಶಾಲೆಯಲ್ಲಿ ನಮ್ಮ ಲೋಪಗಳನ್ನು ಬಹಿರಂಗಪಡಿಸಿದಾಗ ಅದಕ್ಕಾಗಿ ಆ ಮಗವನ್ನು ಅಭಿನಂದಿಸದೇ ನಮ್ಮನ್ನೇ ಸಮರ್ಥಿಸಿಕೊಳ್ಳಲೆತ್ನಿಸುವದು ತೀರ ಖಂಡನಾರ್ಹವಾದ ದುರಭ್ಯಾಸ. ಇದರಿಂದ ಮಗುವಿನ ವಿಮರ್ಶಾತ್ಮಕ ಬುದ್ಧಿಯನ್ನೇ ನಾವು ಹೊಸಕಿಹಾಕುತ್ತೇವೆಂಬುದು ನಮಗೆ ತಿಳಿಯದು. ಅಲ್ಲದೇ ನಾವು ಮಗುವಿಗೆ ನಮ್ಮ ಬಗೆಗಿರುವ ಒಳ್ಳೆಯ ಅಭಿಪ್ರಾಯ ಕಳೆದುಕೊಳ್ಳುತ್ತೇವೆ. ನಮ್ಮನ್ನೇ ವಂಚಿಸಿಕೊಳ್ಳುವದೂ ನಿಜ. ಕ್ಷಮಿಸಿ, ಇಂಥ ನಡಾವಳಿ ಪಾಲಕ, ಶಿಕ್ಷಕರದ್ದಷ್ಟೇ ಅಲ್ಲ; ಬಹುತೇಕ ದೊಡ್ಡವರದೂ ಕೂಡ. ಇದನ್ನು ತಿಳಿದು ತಿದ್ದಿಕೊಂಡವರು ಅಥವಾ 'ಅಹಂ'ನ್ನು ಜಯಿಸಿದವರು 'ನಿಜವಾದ ದೊಡ್ಡವರು'; ಪೂಜ್ಯರು. ಏಕೆಂದರೆ ಅವರು ಸತ್ಯನಿಷ್ಠರು. 'ನಾವು ತಪ್ಪು ಮಾಡುವವರೇ ಅಲ್ಲ' ಎಂದು ಭಾವಿಸುವ ತಪ್ಪನ್ನು ನಾವು ಎಸಗದಿರೋಣ!

## ದುರಭ್ಯಾಸ ದೂರ ಮಾಡುವ ಬಗೆ

ಇದಕ್ಕೆ ಬೇಕು ಅದಮ್ಯ ಇಚ್ಛಾಶಕ್ತಿ, ಅಚಲ ನಿರ್ಧಾರ ಹಾಗೂ ಕೊನೆ ಮುಟ್ಟಿಸುವ ಜಿಗುಟುತನ. ತ್ಯಜಿಸಬೇಕಾದ ದುರಭ್ಯಾಸದ ಪುನರಾವರ್ತನೆಯನ್ನು ತಡೆಗಟ್ಟುವದು, ಎರಡನೆಯ ಪಾವಟಿಗೆ. ತ್ಯಜಿಸಿದ ದುರಭ್ಯಾಸ ಸ್ವಕ್ಷೇತ್ರವನ್ನೂ ಪುನಃ ಪ್ರವೇಶಿಸದಂತೆ ಅದರ ಸ್ಥಳದಲ್ಲಿ ಬೇರೊಂದು ಸ್ವಾಗತಾರ್ಹ ಚಟುವಟಿಕೆಯನ್ನು ಕೈಕೊಳ್ಳುವದು ನಂತರದ್ದು. ನೀವು ಇಸ್ಪೀಟು ಜೂಜನ್ನು ತಪ್ಪಿಸಬೇಕಲ್ಲವೇ? ಕ್ಲಬ್‌ಗೆ ದೊಡ್ಡ ನಮಸ್ಕಾರ ಹೇಳಿ! ಆ ಸಮಯದಲ್ಲಿ ಸಂಗೀತವನ್ನಾಲಿಸಿ ಅಥವಾ 'ಬಿಸಿಲು ಬದುಕಿ'ನಂಥ ನಿಯತಕಾಲಿಕೆಗಳನ್ನೋದುವ ಅಭಿರುಚಿ ಬೆಳೆಸಿಕೊಳ್ಳಿ! ಕ್ಲಬ್ ಸದಸ್ಯರ ಸಹವಾಸವನ್ನು ಪ್ರಯತ್ನಪೂರ್ವಕ ತಪ್ಪಿಸಿ, ಸಾಹಿತ್ಯ-ಸಂಗೀತ ಸಂಘಟನೆಗಳ ಸದಸ್ಯತ್ವ ಪಡೆದುಕೊಳ್ಳಿ.

ಯಾವ ಚಟುವಟಿಕೆಯನ್ನೂ ಪುನಃ ಪುನಃ ಕೈಕೊಳ್ಳುವದರಿಂದ ನಮಗೆ ತೃಪ್ತಿ-ಆನಂದ ಸಿಗುತ್ತವೆಯೋ ಅದನ್ನೂ ನಾವು ಅಭ್ಯಾಸ ಮಾಡಿಕೊಳ್ಳುತ್ತೇವೆ. ಒಳ್ಳೆಯ ಅಭ್ಯಾಸಗಳನ್ನೂ ನಿರ್ಮಿಸಿಕೊಳ್ಳುವಾಗ ನಮ್ಮ ತೃಪ್ತಿ ಆನಂದಗಳನ್ನು ಉಚಿತ ದಿಕ್ಕಿನಲ್ಲಿ ನಿರ್ದೇಶಿಸುವ ಹಿತೈಷಿಗಳು ನಮಗೆ ಬೇಕು. ಆ ಚಟುವಟಿಕೆ ತೃಪ್ತಿ ಆನಂದ ನೀಡುತ್ತದೆಯೆಂಬ ಖಾತರಿ ಕೇವಲ ನಮಗೆ ಇರುವದಷ್ಟೇ ಮುಖ್ಯವಲ್ಲ. ನಮ್ಮ ಹಿತೈಷಿಗಳೂ ಅದಕ್ಕೆ ದನಿಗೂಡಿಸಬೇಕಲ್ಲದೆ ಅಂಥ ಅಭ್ಯಾಸಗಳನ್ನು ರೂಢಿಸಿಕೊಳ್ಳಲು ನಮಗೆ ಸಹಾಯ ಸಹಕಾರ ನೀಡಬೇಕು.

> “ವ್ಯಕ್ತಿತ್ವವೆಂದರೆ 'ವ್ಯಕ್ತಿಯೊಬ್ಬ ನಿರ್ಮಿಸಿಕೊಂಡ ಅಭ್ಯಾಸಗಳ ಮೊತ್ತ'”

ಆದರೂ ಸಹ ಒಂದು ಮಾತು ನಿಜ. ದುರಭ್ಯಾಸಗಳನ್ನು ದೂರಗೊಳಿಸುವದು ಒಳ್ಳೆಯ ಅಭ್ಯಾಸಗಳನ್ನು ರೂಢಿಸಿಕೊಳ್ಳುವದಕ್ಕಿಂತ ಕಠಿಣವಾದುದು. ಆದುದರಿಂದಲೇ ಕೆಟ್ಟ ಅಭ್ಯಾಸಗಳ ಸಹವಾಸವೇ ಬೇಡ ಎಂದು ನಿರ್ಧರಿಸುವದು ಕ್ಷೇಮ.

## ಅಭ್ಯಾಸಗಳ ಪ್ರಭೇದಗಳು

ವ್ಯಕ್ತಿಯ ಯಾವದೇ ಬಹಿರ್ಮುಖ ಅಥವಾ ಅಂತರ್‌ಮುಖ ನಡಾವಳಿ ಅಭ್ಯಾಸವಾಗಿ ಮಾರ್ಪಡಬಹುದು. ಆದುದರಿಂದ ಸ್ನಾಯು ನಿಯಂತ್ರಿತ ಅಥವಾ ರೂಪಾಂತರ ಹೊಂದುವ, ಭಾವನೆಗಳ ಮೇಲೆ ಅವಲಂಬಿತವಾದ ಅಥವಾ ಮಾನಸಿಕ ಅಭ್ಯಾಸಗಳನ್ನು ನಾವು ತೋರ್ಪಡಿಸಬಹುದು. ನಮಗೆ ಸಾಮಾನ್ಯವಾಗಿ ನೆನಪಾಗುವದು ಹಸಿವಿನ ಬಾಧೆ; ಮಾದಕ ದ್ರವ್ಯಗಳ ದಾಸ್ಯ; ತಂಬಾಕಿನ ಚಟ. ಇದರ ಜೊತೆಗೇ ಕಲೆಯ ಒಲವು; ಸಾಹಿತ್ಯದ ಗೀಳು; ಸಂಗೀತದ ಗುಂಗು; ಕ್ರಿಕೆಟ್ ಹುಚ್ಚು-ಇವೂ ಆಗಬಹುದು. ಎಲ್ಲಿಂದಲೋ ಬರುವ ಕಡುಕೋಪ, ಉನ್ಮಾದ ಸಹ ಅದಮ್ಯ ಅಭ್ಯಾಸಗಳಾಗಿರಬಹುದು. ಆದರೆ ಇವೆಲ್ಲವೂ ಕಲಿತು ರೂಢಿಸಿಕೊಂಡ ಅಭ್ಯಾಸಗಳೇ ಎಂಬುದನ್ನು ನಾವು ಮರೆಯಬಾರದು.

ಅಂತೂ ನಾಲ್ಕು ವಿಧವಾಗಿ ಅಭ್ಯಾಸಗಳನ್ನು ವಿಂಗಡಿಸಬಹುದು; ರೂಪಾಂತರಗೊಳಿಸಲು ಸಾಧ್ಯವಾದ ಸ್ನಾಯು ನಿಯಂತ್ರಿತ ಅಭ್ಯಾಸಗಳು; ಇಂದ್ರಿಯ ಜನ್ಯ ಅಭ್ಯಾಸಗಳು; ಭಾವನಾ ಸಂಬಂಧೀ ಅಭ್ಯಾಸಗಳು; ಮಾನಸಿಕ ಅಭ್ಯಾಸಗಳು.

ವ್ಯಕ್ತಿತ್ವವೆಂದರೆ 'ವ್ಯಕ್ತಿಯೊಬ್ಬ ನಿರ್ಮಿಸಿಕೊಂಡ ಅಭ್ಯಾಸಗಳ ಮೊತ್ತ' ಎಂಬ ವ್ಯಾಖ್ಯೆಯೂ ಇತರ ವ್ಯಾಖ್ಯೆಗಳಂತೆಯೇ ಅರ್ಥಪೂರ್ಣವಾಗಿದೆಯಲ್ಲವೇ?

●

**ಸಂಸಾರ**

*ಮೋಡಗಳಿಗೆ*
*ಎಂಥ ಮೋಹ!*
*ಅಲೆಯುತ್ತವೆ*
*ಪೋಲಿ ಹುಡುಗರಂತೆ,*
*ಸುರಿದು, ಹರಿದು*
*ಸಾಗರವಾಗುತ್ತವೆ;*
*ನಿಶ್ಚಲಗೊಳ್ಳುತ್ತವೆ*
*ಸಂಸಾರದಂತೆ*

– ಶಶಿಧರ ಸೂರ್ಯ

# ಕೆಂಪು ಬಸ್ಸಿನ ಮುಷ್ಕರ

❑ ಪ್ರಯಾಣದ ವೇಳೆಯಲ್ಲಿ ಊಟ ತಿಂಡಿಯ ಸಮಯ ಬಂದಾಗ ಡ್ರಾಯವರ್ ಕಂಡಕ್ಟರುಗಳು ತಮಗೆ ಬೇಕಾದ ಹೋಟೇಲುಗಳ ಮುಂದೆ ಬಸ್ಸು ನಿಲ್ಲಿಸಿ, ಅಲ್ಲಿ ನೀಡುವ ದುಬಾರಿ ಬೆಲೆಯ ಕಳಪೆ ಊಟವನ್ನು ಪ್ರಯಾಣಿಕರಿಗೆ ತಿನ್ನಿಸಿ, ಹೊಟೇಲ್‌ನ ಪ್ರತ್ಯೇಕ ಚೇಂಬರಿನಲ್ಲಿ ತಾವು ಕುಳಿತು ಮೃಷ್ಟಾನ್ನ ಭೋಜನ ಮಾಡುವ ಭಾಗ್ಯವನ್ನು ಕಳೆದುಕೊಂಡು ವಿಲಿವಿಲಿ ಒದ್ದಾಡುತ್ತಾರೆ.

❑ ತರುಣಿಯರ ಪಕ್ಕದಲ್ಲಿಯೇ ಕುಳಿತುಕೊಂಡು ಕ್ಷಣಾರ್ಧದಲ್ಲಿ ನಿದ್ದೆ ಬಂದವರಂತೆ ನಟಿಸಿ ಕೃತ್ರಿಮವಾಗಿ ತೂಕಡಿಸುತ್ತ ಪಕ್ಕ ಕುಳಿತ ತರುಣಿಯರ ಮೈಮೇಲೆ ಎಲ್ಲಿ ಬೇಕೋ ಅಲ್ಲಿ ಬೀಳುತ್ತ ಸುಖ ಪಡುವ ಅನೇಕ ಪ್ರಯಾಣಿಕರು ಆ ಸುಖ ಇಲ್ಲದೆಯೇ ಚಡಪಡಿಸುತ್ತಾರೆ.

❑ ಕಂಡಕ್ಟರರು ಟಿಕೇಟು ಕೊಡಲು ಬಂದಾಗ ''ಹಿಂದೆ ಕುಳಿತವರು ತೆಗೆದಿದ್ದಾರೆ'' ಎಂತ ಹಿಂದಕ್ಕೆ ತೋರಿಸಿ, ಹಿಂದೆ ಬಂದು ಕೇಳಿದಾಗ, ''ಮುಂದೆ ಕುಳಿತವರು ತೆಗೆದಿದ್ದಾರೆ'' ಎಂತ ಮುಂದಕ್ಕೆ ತೋರಿಸಿ ಕಂಡಕ್ಟರರಿಗೆ ಮೋಸ ಮಾಡುವ ಪ್ರಯಾಣಿಕರು ಮೋಸ ರಹಿತವಾದ ಜೀವನ ನಡೆಸಲಾಗದೇ ಒದ್ದಾಡುತ್ತಾರೆ.

❑ ಹೆಂಗಸರನ್ನು ಚಾಚಿಕೊಂಡು ಪ್ರಯಾಣಿಸುವ ಸಲುವಾಗಿ ರಶ್ ಇರುವ ಬಸ್ಸನ್ನೇ ಹತ್ತುವ ಗಂಡಸರು ಹೆಂಗಸರ ಸ್ಪರ್ಶವಿಲ್ಲದೆಯೇ ಜೋಲು ಮೋರೆ ಹಾಕಿಕೊಂಡು ದಿನ ನೂಕುತ್ತಾರೆ.

❑ ಅಲ್ಲಲ್ಲಿ ಕೆಲವರಿಗೆ ಟಿಕೇಟ್ ಕೊಡದೇ, ಪ್ರಯಾಣದುದ್ದಕ್ಕೂ ಮುಂದೆ ಎಲ್ಲಿಯಾದರೂ ಚೆಕಿಂಗ್‌ನವರು ಬಂದು ಬಿಡುತ್ತಾರೋ ಎಂತಾ ಹೆದರಿ ಹೆದರಿ ಡ್ಯೂಟಿ ಮಾಡುವ ಕಂಡಕ್ಟರುಗಳು ಈ ಸಮಯದಲ್ಲಿ ನಿಶ್ಚಿಂತೆಯಿಂದ ಮನೆಯಲ್ಲಿ ನಿದ್ದೆ ಮಾಡುತ್ತಿರುತ್ತಾರೆ.

❑ ಎಂದೂ ಆಗದ ಭರ್ಜರಿ ಕಲೆಕ್ಷನ್‌ನಿಂದ ಸಂತುಷ್ಟರಾದ ಟೆಂಪೋ ಮಾಲಿಕರು ಇಂತಹ ಮುಷ್ಕರ ಮೇಲಿಂದ ಮೇಲೆ ಮಾಡುವ ಶಕ್ತಿಯನ್ನು ಬಸ್ಸು ಸಿಬ್ಬಂದಿಗಳಿಗೆ ದೇವರು ದಯಪಾಲಿಸಲಿ ಎಂತ ದೇವರಲ್ಲಿ ಮೊರೆ ಇಡುತ್ತಾರೆ.



❑ ದಾರಿಯಲ್ಲಿ ತಾವು ಚೆಕ್ ಮಾಡಿದಾಗ ಕೆಲವು ಪ್ರಯಾಣಿಕರಿಗಾದರೂ ಟಿಕೇಟ್ ಕೊಡದೆ ಇರುವ ಕಂಡಕ್ಟರ್ ಸಿಕ್ಕು ಬಿದ್ದೇ ಬೀಳುತ್ತಾನೆ. ಅದಕ್ಕೆ ಪ್ರತಿಯಾಗಿ ಮಾಮೂಲು ಕೊಟ್ಟೇ ಕೊಡುತ್ತಾನೆ ಅಂತ ಆಲೋಚಿಸಿ ಅಲ್ಲಲ್ಲಿ ನಿಲ್ಲಿಸಿ ಚೆಕ್ ಮಾಡುವ ಟಿಕೇಟ್ ಚೆಕ್ಕಿಂಗ್ ಇನ್ಸ್‌ಪೆಕ್ಟರುಗಳು ಮಾಮೂಲು ಇಲ್ಲದೆಯೇ ನೊಂದುಕೊಳ್ಳುತ್ತಾರೆ.

**ಈ ಕೆಂಪು ಬಸ್ಸಿನವರು ಮುಷ್ಕರ ಹೂಡಿದರೆಂದರೆ ಯಾರು ಯಾರು ಯಾವ ಯಾವ ರೀತಿಯಲ್ಲಿ ಸಂಕಟಪಡುತ್ತಾರೆ, ಸಂತೋಷ ಪಡುತ್ತಾರೆ, ವಿಲಿವಿಲಿ ಒದ್ದಾಡುತ್ತಾರೆ ಎಂಬುದನ್ನು ನೀವು ಬಲ್ಲಿರಾ? ಇಗೋ ಇಲ್ಲಿದ್ದಾರೆ ನೋಡಿ ಅವರು...**

❑ ಹಬ್ಬ ಹುಣ್ಣಿಮೆಯ ದಿನದಲ್ಲಾದರೂ ಈ ಮುಷ್ಕರ ಹೂಡಿದ್ದರೆ ದೂರ ದೂರದ ಊರಿನಿಂದ ಹಬ್ಬಕ್ಕೆ ಬಂದು ದಿನಗಟ್ಟಲೆ ಬಿಡಾರ ಹೂಡಿ ಉಪದ್ರವ ಕೊಡುವ ಅಳಿಯಂದಿರ ಕಾಟವಾದರೂ ತಪ್ಪುತ್ತಿತ್ತು ಅಂತ ಎಷ್ಟೋ ಮಾವಂದಿರು ಕೈಕೈ ಹಿಸುಕಿಕೊಳ್ಳುತ್ತಾರೆ.

❑ ಅಂಚೆ ಇಲಾಖೆಯವರು ಬಸ್ಸಿನ ಒಳಗಡೆ ಹಾಕಿದ ಟಪಾಲು ಚೀಲಗಳ ರಾಶಿಯ ಮೇಲೆ ವಿವಿಧ ಭಂಗಿಗಳಲ್ಲಿ ಕುಳಿತು, ಮಲಗಿ ಸುಖವಾಗಿ ಪ್ರಯಾಣಿಸುತ್ತಿದ್ದ ಎಷ್ಟೋ ಪ್ರಯಾಣಿಕರು ಆ ಸುಖ ಪ್ರಯಾಣ ಇಲ್ಲದೇ ನರಳುತ್ತಾರೆ.

❑ ದಿನವೂ ರಶ್ ಇರುವ ಬಸ್ಸ್‌ನಲ್ಲಿ ಪ್ರಯಾಣಿಸಿ ಪ್ರಯಾಣಿಸಿ ಅಕ್ಕಪಕ್ಕದಲ್ಲಿ ನಿಂತ ಪ್ರಯಾಣಿಕರ ಬೆವರಿನ ವಾಸನೆಯನ್ನೇ ಆಘ್ರಾಣಿಸಿ ತನ್ನ ಬೆವರಿನ ವಾಸನೆಯನ್ನೇ ಮರೆತ ಮನುಜ ಅಂದು ನೆಮ್ಮದಿಯಿಂದ ತನ್ನ ಬೆವರ ವಾಸನೆಯನ್ನು ಸವಿಯುತ್ತ ಮೈಮರೆಯುತ್ತಾನೆ.

**○ ಅಂಕೋಲಾ ದೇವಿದಾಸ ಸುವರ್ಣ**
ಅಂಕೋಲಾ



# ರಾಕೆಟ್ ಮನುಷ್ಯ ಕಲಾಮ್

ಡಾ. ಅವಿಲ್ ಫಕೀರ್ ಜಲಾಉದ್ದೀನ್ ಅಬ್ದುಲ್ ಕಲಾಮ್ ಅಥವಾ ರಾಮೇಶ್ವರಮ್‌ನ ಮಸೀದಿ ರಸ್ತೆಯಲ್ಲಿ ಹುಟ್ಟಿದ, ಅಲ್ಲಿನ ಎಲ್ಲರೂ 'ರಾಕೆಟ್ ಮನುಷ್ಯ' ಎಂದು ಕರೆಯುವ ವಿಜ್ಞಾನಿ ಡಾ. ಎಪಿಜೆ ಅಬ್ದುಲ್ ಕಲಾಮ್ ಅವರಿಗೆ ಭಾರತರತ್ನ ಲಭಿಸಿದೆ, ಆ ಪ್ರಶಸ್ತಿಗೆ ಗೌರವ ಬಂದಂತಾಗಿದೆ!

ಉದ್ದದ ಕೂದಲು, ಕನಸುಗಣ್ಣಿನ, ಹಸನ್ಮುಖದ, ತೆಳುಕಾಯದ, ಅಬ್ದುಲ್ ಕಲಾಮ್ ಅವರು ತುಂಬಾ ಸಾಮಾನ್ಯ ನೆಲೆಯಿಂದ ಬಂದವರು. ರಾಮೇಶ್ವರಂನಲ್ಲಿ ಜನಿಸಿದ ಅವರನ್ನು ತಂದೆ ಸಮುದ್ರದ ಚಿಪ್ಪುಗಳನ್ನು ಮಾರಿ ಓದಿಸಿದರು. ಅಕ್ಟೋಬರ್ ೧೫, ೧೯೩೧ರಲ್ಲಿ ಜನಿಸಿದ ಕಲಾಮ್ ಅವರನ್ನು ವಿಜ್ಞಾನದ ದಾರಿಗೆ ಎಳೆದವರು ಅವರ ಗಣಿತದ ಮೇಷ್ಟ್ರು ಶಿವಸುಬ್ರಮಣ್ಯಂ ಅಯ್ಯರ್. ನಂತರ ಮದ್ರಾಸ್‌ನ ತಾಂತ್ರಿಕ ವಿದ್ಯಾಲಯ ಸೇರಿದ ಕಲಾಮ್ ಅವರನ್ನು ಗಗನಗಾಮಿ ಮತ್ತು ರಾಕೆಟ್ ತಂತ್ರಜ್ಞಾನ ಕ್ಷೇತ್ರಕ್ಕೆ ಎಳೆದವರು ಪ್ರೊ. ಪಂಡಲೈ. ಕೇವಲ ೪ ತಿಂಗಳು ಮಾತ್ರ ಅಮೆರಿಕಾದ ನಾಸಾಕ್ಕೆ ಭೇಟಿ ನೀಡಿದ್ದ ಕಲಾಂ ಶೇ. ೨೦೦ರಷ್ಟು ದೇಶೀ ಪ್ರತಿಭೆ. ನೂರಾರು ಗೌರವ ಡಾಕ್ಟರೇಟ್‌ಗಳನ್ನು ಪಡೆದಿರುವ ಅವರು ಇಂದಿಗೂ ಸಾಂಪ್ರದಾಯಿಕ ಡಾಕ್ಟರೇಟ್ ಹೊಂದಿಲ್ಲ!

ಕಲಾಮ್ ಅವರನ್ನು ರಾಕೆಟ್ ತಂತ್ರಜ್ಞಾನಕ್ಕೆಳೆದದ್ದು, ಸ್ಫೂರ್ತಿ ನೀಡಿದ್ದು ಚರಿತ್ರೆಯ ಪುಸ್ತಕಗಳು. ಶ್ರೀರಂಗಪಟ್ಟಣದಲ್ಲಿ ೧೭-೧೮ನೇ ಶತಮಾನದಲ್ಲಿ ಮೊದಲ ರಾಕೆಟ್ ಬಳಸಲಾಗಿತ್ತು. ಟಿಪ್ಪು ಹಾರಿಸಿದ್ದ ಎನ್ನಲಾದ ರಾಕೆಟನ್ನು ಹುಡುಕುತ್ತಾ ಹೊರಟ ಕಲಾಮ್‌ಗೆ ಅದು ಸಿಕ್ಕಿದ್ದು ವಾರ್ವಿಕ್ ವಸ್ತುಸಂಗ್ರಹಾಲಯದಲ್ಲಿ!

ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಗೆ ೧೯೫೮ರಲ್ಲಿ ಸೇರಿದ ಕಲಾಮ್ ೧೯೬೩ರಲ್ಲಿ ಇಸ್ರೋಗೆ ವರ್ಗಾಯಿಸಲ್ಪಟ್ಟರು. ತಿರುವನಂತಪುರದಲ್ಲಿ SLV-3ರ ಮೂಲಕ ೧೯೮೦ರ ಜುಲೈಯಲ್ಲಿ ರೋಹಿಣಿಯನ್ನು ಅಂತರಿಕ್ಷಕ್ಕೆ ಹಾರಿಸಿದರು. ಹೈದರಾಬಾದ್‌ನ ರಕ್ಷಣಾ ಪ್ರಯೋಗಾಲಯದ ಮುಖ್ಯಸ್ಥರಾದ ಕಲಾಮ್ ೧೯೮೨ರಲ್ಲಿ ನಿರ್ದೇಶಿತ ಸಿಡಿತಲೆಗಳ ಅಭಿವೃದ್ಧಿ ಕಾರ್ಯಕ್ರಮವನ್ನು ಪ್ರಾರಂಭಿಸಿದಾಗ ಎಲ್ಲರೂ ಅದನ್ನು "Kalamity" ಎಂದು ಗೇಲಿ ಮಾಡಿದ್ದರು. ಹೈದರಾಬಾದ್‌ನ ಪ್ರಯೋಗಾಲಯ ಸೇರಿದ ೧೫ ವರ್ಷದಲ್ಲಿ ಪೃಥ್ವಿ (ನೆಲದಿಂದ ನೆಲಕ್ಕೆ ಹಾರುವ ಸಿಡಿತಲೆ), ತ್ರಿಶೂಲ್ ಮತ್ತು ಆಕಾಶ್ (ವಾಯುರಕ್ಷಣಾ ಸಿಡಿತಲೆಗಳು), ನಾಗ್ (ಯುದ್ಧ ಟ್ಯಾಂಕ್‌ಗಳ ವಿರುದ್ಧ ಬಳಸುವ ಸಿಡಿತಲೆ), ಅಗ್ನಿ (ಮಧ್ಯಂತರ ದೂರವ್ಯಾಪ್ತಿಯ ಸಿಡಿತಲೆ)ಯನ್ನು ಅಭಿವೃದ್ಧಿಪಡಿಸಿದರು. ನಾಗ್, ತ್ರಿಶೂಲ್ ಮತ್ತು ಆಕಾಶ್ ಗಳ ಪ್ರಯೋಗಾರ್ಥ ಪರೀಕ್ಷೆ ಮುಗಿದಿದ್ದು, ಸನಿಹದಲ್ಲೇ ಅವುಗಳ ಉತ್ಪಾದನೆ ಪ್ರಾರಂಭವಾಗುತ್ತದೆ. ಆದರೆ ಅಗ್ನಿಯ ಭವಿಷ್ಯ ರಹಸ್ಯವಾಗಿದೆ. ೩ ವರ್ಷಗಳ ಹಿಂದೆ ಅಗ್ನಿಯ ಪ್ರಯೋಗಾರ್ಥ ಪರೀಕ್ಷೆ ನಡೆದಿತ್ತು. ಬಹುಶಃ ಅಮೆರಿಕಾದ ಒತ್ತಡದಿಂದಾಗಿ ಯೋಜನೆ ನನೆಗುದಿಗೆ ಬಿದ್ದಿದೆ.

ಕಲಾಮ್ ಅವರ ಸಹೋದ್ಯೋಗಿಗಳ ಪ್ರಕಾರ ಅವರ ಶಕ್ತಿ ಇರುವುದು ತಮ್ಮ ಸಹಚರರಲ್ಲಿ ಅವರು ಹುಟ್ಟಿಸುವ ಆತ್ಮವಿಶ್ವಾಸದ ಉದ್ದೀಪನದಲ್ಲಿ. ದೇಶದ ಶ್ರೇಷ್ಠ ಬಾಹ್ಯಾಕಾಶ ವಿಜ್ಞಾನಿಗಳಾದ ವಿಕ್ರಮ್ ಸಾರಾಬಾಯ್, ಸತೀಶ್ ಧವನ್ ಮತ್ತು ಬ್ರಹ್ಮ ಪ್ರಕಾಶ್ ಅವರಿಂದ ಕಲಾಂ ಬಹಳಷ್ಟನ್ನು ಕಲಿತಿದ್ದಾರೆ, ಮತ್ತು ಆ ಮೂವರ ಪರಂಪರೆಯನ್ನು ಮುಂದುವರಿಸಿದ್ದಾರೆ. 'ಸಿಡಿತಲೆ ಅಭಿವೃದ್ಧಿ ಕಾರ್ಯಕ್ರಮ'ಕ್ಕಾಗಿ ಅವರು ದೇಶದೆಲ್ಲೆಡೆ ಸುತ್ತಿ ರಕ್ಷಣಾ ಶಾಖೆ, ಶಿಕ್ಷಣ ಕ್ಷೇತ್ರ ಮತ್ತು ಪ್ರಯೋಗಾಲಯದಲ್ಲಿ ಸೇರಿಹೋಗಿದ್ದ ೫೦೦ ಶ್ರೇಷ್ಠ ಮಿದುಳುಗಳನ್ನು ಒಂದೆಡೆ ಸೇರಿಸಿದರು. ಅವರ ಶ್ರಮ ವ್ಯರ್ಥವಾಗಲಿಲ್ಲ. 'ಸಿಡಿತಲೆ ತಂತ್ರಜ್ಞಾನ ನಿಯಂತ್ರಣ ಒಪ್ಪಂದ (MTCI) ಮತ್ತು ಪರೀಕ್ಷಾ ಸಿಡಿತದ ನಿಷೇಧದ ಒಪ್ಪಂದ (CTBT) ಎಂಬ ೧೦ ದೇಶಗಳ ದುಷ್ಟಕೂಟವನ್ನು ಧಿಕ್ಕರಿಸಿ, ಕಲಾಮ್ ಅವರ ತಂಡ ೫ ತರಹದ ಸಿಡಿತಲೆಗಳನ್ನು ಹಾರಿಸಿದೆ. ಸಂಪೂರ್ಣ ದೇಶೀ ತಂತ್ರಜ್ಞಾನವನ್ನು ಸೃಷ್ಟಿಸಿದೆ. ಇದೇನು ಸಣ್ಣ ಸಾಧನೆಯಲ್ಲ. ಸದಾ ಕಾಲು ಕೆರೆಯುತ್ತಲೇ ಇರುವ ಪಾಕಿಸ್ತಾನ ಭಾರತದ ಮೇಲೆ ಕೈಯೆತ್ತದಿರಲು ಕಾರಣ-ಈ ಆಯುಧಗಳೇ. ಇಂದು ಪಾಕಿಸ್ತಾನದ ಮುಖ್ಯ ನಗರಗಳನ್ನು ಗುರಿಯಾಗಿಟ್ಟುಕೊಂಡಿರುವ ಪೃಥ್ವಿ ಯಾವುದೇ ಕ್ಷಣದಲ್ಲಿ ಸಿಡಿಯಲು ಸಿದ್ಧವಾಗಿನಿಂತಿದೆ. ನಮ್ಮ ದೇಶ ಆಮದನ್ನು ಆಧರಿಸಿದ ಮಾತ್ರಕ್ಕೆ, ಬಡದೇಶವಲ್ಲ ಎಂಬುದನ್ನು ಸಾಧಿಸಿದಾತ ಕಲಾಮ್. ಭಾರತ ಕೆಲದಿನಗಳ ಹಿಂದೆ ರಾಸಾಯನಿಕ ಅಸ್ತ್ರಗಳ ನಿಷೇಧ ಒಪ್ಪಂದಕ್ಕೆ ಸಹಿ ಹಾಕಿದಾಗ, ಸರ್ಕಾರ ಜಾಹೀರುಪಡಿಸಿದ ದಾಸ್ತಾನು ಮಳಿಗೆಗಳನ್ನು ಮೊದಲು ಕಂಡುಹಿಡಿಯುವುದು ಯಾರಿಗೂ ಸಾಧ್ಯವಾಗಿರಲಿಲ್ಲ. ರಹಸ್ಯ ದಾಖಲೆಗಳು ಸುಲಭವಾಗಿ ಸೋರಿಹೋಗುವ ದೇಶದಲ್ಲಿ ಇದು ಸಾಮಾನ್ಯ ಸಾಧನೆಯಲ್ಲ!

೬೬ ವರ್ಷದ ಕಲಾಮ್ ಭಾರತರತ್ನ ಪಡೆದ ೨ನೇ ವಿಜ್ಞಾನಿ. ದೇಶದ ಶ್ರೇಷ್ಠ ಸಾರ್ವಜನಿಕ ಪ್ರಶಸ್ತಿಯನ್ನು ಯುದ್ಧಯಂತ್ರದ ಕೀಲುಗಳನ್ನು ಸರಿಮಾಡುವ ಮನುಷ್ಯನಿಗೆ ಕೊಟ್ಟಿರುವುದು ಆಶ್ಚರ್ಯ. ವೈಯಕ್ತಿಕವಾಗಿ ಕಲಾಮ್ ಅವರನ್ನು ಕೇಳಿದ್ದರೆ, ಭಾರತ ರತ್ನದ ಬದಲು ಅಗ್ನಿಯನ್ನು ಹಾರಿಸಲು ಬೇಕಾದ ಎಲ್ಲ ನೆರವನ್ನು ಬೇಡುತ್ತಿದ್ದರೇನೋ. ಕಲಾಮ್ ಅವರ ಬಾಯಿ ಮುಚ್ಚಿಸಲು ಈ ಪ್ರಶಸ್ತಿಯನ್ನು ಸರ್ಕಾರ ಕೊಟ್ಟಿದೆ ಎನ್ನುವ ಗುಮಾನಿ ಇದೆ.

ಅರ್ಜುನ ಯುದ್ಧ ಟ್ಯಾಂಕ್ ಮತ್ತು ಲಘು ಹೋರಾಟ ವಿಮಾನ - ಅವರ ಮಹಾತ್ವಾಕಾಂಕ್ಷೆಯ ಯೋಜನೆಗಳು. ೨೦೦೩ರಲ್ಲಿ ಲಘು ಹೋರಾಟ ವಿಮಾನದ ಉತ್ಪಾದನೆ ಪ್ರಾರಂಭವಾಗಬೇಕು. ೨೦೦೫ರೊಳಗೆ ಉನ್ನತ ತಂತ್ರಜ್ಞಾನ ಬಳಸಿ ಯುದ್ಧ ತಂತ್ರಜ್ಞಾನದಲ್ಲಿ ದೇಶವನ್ನು ಸ್ವಯಂ ಪರಿಪೂರ್ಣ ದೇಶವನ್ನಾಗಿ ಮಾಡಬೇಕು ಎನ್ನುವುದು ಅವರ ಹಂಬಲ. ಪುನರ್ ಬಳಸಬಹುದಾದ ರಾಕೆಟ್‌ಗಳ (ಸಿಡಿತಲೆಗಳನ್ನು ಸಿಡಿಸಿ ನಂತರ ವಾಪಸ್ ಬರುವ ರಾಕೆಟ್‌ಗಳು) ಅಭಿವೃದ್ಧಿ ಅವರ ಇನ್ನೊಂದು ಕನಸು.

ಜ್ಞಾನಕ್ಷೇತ್ರದಲ್ಲಿ ಅವರ ದೇಣಿಗೆ ಹೆಚ್ಚಿಗೆ ಇಲ್ಲ ಅನ್ನುವುದು ಅವರ ಮೇಲಿನ ದೂರುಗಳಲ್ಲೊಂದು. ತಂತ್ರಜ್ಞಾನ ಎಲ್ಲ ಸಮಸ್ಯೆಗಳನ್ನು ಬಗೆಹರಿಸುತ್ತದೆ ಎನ್ನುವ ಅವರ ಅಭಿಪ್ರಾಯವನ್ನು ನೀವು ಒಪ್ಪದಿರಬಹುದು. 'ಶಕ್ತಿ ಮಾತ್ರ ಶಕ್ತಿಯನ್ನು ಗೌರವಿಸುತ್ತದೆ' ಎನ್ನುವ ಮಾತು ಅಕ್ಷರಶಃ ನಿಜ. ನಾವು ಬಲಿಷ್ಠರಾದಲ್ಲಿ ಮಾತ್ರ ಬೇರೆ ದೇಶಗಳು ನಮ್ಮ ಮಾತನ್ನು ಆಲಿಸುತ್ತವೆ.

ಈ ಸರಳ ರಾಕೆಟ್ ಮನುಷ್ಯ ವೀಣೆಯನ್ನು ನುಡಿಸುತ್ತಾರೆ, ಸಂಗೀತ ಕೇಳುತ್ತಾರೆ, ಕಾವ್ಯ ಓದುತ್ತಾರೆ ಮತ್ತು ಬರೆಯುತ್ತಾರೆ. ಅವರ ಕಾವ್ಯ ಸಂಗ್ರಹವನ್ನು ಪ್ರಸಿದ್ಧ ಕವಿ ಮಣಿದರ್ಶಿ "My journey" ಎಂಬ ಹೆಸರಿನಲ್ಲಿ ಇಂಗ್ಲೀಷಿಗೆ ಭಾಷಾಂತರಿಸಿದ್ದಾರೆ. ಅವರಿಗಾಗಿ ದೆಹಲಿಯಲ್ಲಿ ಬಹುದೊಡ್ಡ ಬಂಗಲೆಯನ್ನು ಸರ್ಕಾರ ಕೊಟ್ಟಿದ್ದರೂ, ೨ ಕೊಠಡಿಗಳಲ್ಲಿ ವಾಸಿಸುತ್ತಿರುವ ಕುಡಿಯದ, ಸಿಗರೇಟ್ ಸೇದದ ಸಸ್ಯಾಹಾರಿ ಕಲಾಮ್ ವಿಜ್ಞಾನವನ್ನೇ ವರಿಸಿದಾತ.


ಎಲ್ಲ ಕ್ಷೇತ್ರದ ಶ್ರೇಷ್ಠ ಮನಸ್ಸುಗಳನ್ನು ಸೇರಿಸಿ, ಅದಕ್ಕೊಂದು ಪಥದರ್ಶನ ತೋರಿಸಿದ ಕಲಾಮ್ ಪ್ರಶಸ್ತಿ ಬಂದಾಗ ಹೇಳಿದರು-'ನಾನು ನನ್ನ ತಂದೆ/ತಾಯಿಯನ್ನು, ನನ್ನ ಗುರುಗಳನ್ನು, ನನ್ನೊಟ್ಟಿಗೆ ಕೆಲಸ ಮಾಡಿದವರನ್ನು ಈ ಕ್ಷಣದಲ್ಲಿ ನೆನೆಯುತ್ತೇನೆ. ದೇಶ ನನಗೆ ಪ್ರಶಸ್ತಿ ಕೊಟ್ಟಿದ್ದಕ್ಕೆ ನಾನು ದೇಶಕ್ಕೆ ಋಣಿಯಾಗಿದ್ದೇನೆ''

ಮಾತು ಮಾತಿಗೂ ಓ.ಕೆ. ಎನ್ನುವ ಕಲಾಮ್ ಅಂದುಕೊಂಡಿದ್ದೆಲ್ಲವೂ 'ಓ.ಕೆ.' ಆಗಲಿ.

○ ಮಾಧವ ಐತಾಳ್

# ತರಬೇತುದಾರ ಗಾಯಕವಾಡರ ತಲೆ ಉಳಿದೀತೆ?

○ ವಸಂತ ಮುರ್ಡೇಶ್ವರ



ಅಂಶುಮನ್ ಗಾಯಕವಾಡ (ಬಲತುದಿ) ಅವರು ಎಸ್.ವೆಂಕಟರಾಘವನ್ ಹಾಗೂ ಸಂದೀಪ ಪಾಟೀಲ (ನಡುವೆ) ಜೊತೆಗೆ

**'ಬೆಂ**ಕಿಯ ಉಂಡೆ'ಗಳನ್ನುರುಳಿಸಲು ಹೆಸರುವಾಸಿಯಾದ ವಿಂಡೀಜ್ ವೇಗದ ದೊರೆಗಳ ಎದುರು ಕೆಚ್ಚೆದೆಯ ಆಟ ಪ್ರದರ್ಶಿಸಿದ್ದ ಪ್ರಾರಂಭಿಕ ಬ್ಯಾಟ್ಸಮನ್ ಅಂಶುಮನ್ ಗಾಯಕವಾಡ ಈಗ ಭಾರತೀಯ ಕ್ರಿಕೆಟ್ ತಂಡದ ಹೊಸ ತರಬೇತುದಾರ. ಈಗಾಗಲೇ ಟೆಸ್ಟ್ ಆಟಗಾರರಾಗಿ, ರಾಷ್ಟ್ರೀಯ ಆಯ್ಕೆ ಸಮಿತಿ ಸದಸ್ಯರಾಗಿ, ರಾಷ್ಟ್ರೀಯ ಕಿರಿಯರ ತಂಡದ ಮ್ಯಾನೇಜರ್ ಆಗಿ ಸಮರ್ಥವಾಗಿಯೇ ಕಾರ್ಯನಿರ್ವಹಿಸಿದ್ದಾದರೂ, ಈ ಹೊಸ ಸ್ಥಾನ ಮಾತ್ರ ಅವರ ಪಾಲಿಗೆ 'ಮುಳ್ಳಿನ ಹಾಸಿಗೆ' ಎನ್ನುವುದರಲ್ಲಿ ಎರಡು ಮಾತಿಲ್ಲ.

ಲಂಕಾ ತಂಡದ ಭಾರತ ಪ್ರವಾಸದ ಪ್ರಾರಂಭದಲ್ಲಿ ರಾಷ್ಟ್ರೀಯ ತಂಡದ 'ಕೋಚ್ ಗದ್ದುಗೆ'ಗೆ ಏರಿದ ಗಾಯಕವಾಡರಿಗೆ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿ.ಸಿ.ಸಿ.ಐ.) ಸ್ಪಷ್ಟವಾಗಿ ಅವರ ಅಧಿಕಾರದ ಕಾಲಾವಧಿ ನೀಡಿಲ್ಲ. ಅವರ ಕೆಲಸ ತೃಪ್ತಿಕರವಾಗಿರದೇ ಇದ್ದಲ್ಲಿ ಮುಂದಿನ ವರ್ಷ ಸೆಪ್ಟಂಬರ್ ಒಳಗೇ ಅವರ 'ತಲೆ'ಯೂ ಉರುಳಬಹುದು; ಸಂದೀಪ, ಮದನರಂತೆ.

ನಿಜ, ಬಿ.ಸಿ.ಸಿ.ಐ. ರಾಷ್ಟ್ರೀಯ ತಂಡದ ಕೋಚ್ ಎನಿಸಿಕೊಂಡವರಿಗೆ ಕನಿಷ್ಟ ಮೂರು ವರ್ಷಗಳ ಅವಕಾಶವನ್ನಾದರೂ ನೀಡದಿದ್ದರೆ ಅದು ಅರ್ಥಹೀನ. ಅಜಿತ್ ವಾಡೇಕರ್ ಒಬ್ಬರು ಇಷ್ಟು ಅವಧಿಗೆ ಇದ್ದಿರಬಹುದು. ಅವರ ಹಿಂದೆ ಇದೇ ಸ್ಥಾನದಲ್ಲಿದ್ದ ಅಶೋಕ ಮಂಕಡ್ ಹಾಗೂ ಬಿಷನ್‌ಸಿಂಗ್ ಬೇಡಿ ಯಾವರಾಗಲೀ ಅಥವಾ ಅವರ ನಂತರ ಬಂದ ಸಂದೀಪ ಪಾಟೀಲ ಅಥವಾ ಮದನಲಾಲ ಆಗಲೀ ಒಂದು ವರ್ಷಕ್ಕಿಂತ ಅಧಿಕ ಅವಧಿ ಪಡೆಯಲಿಲ್ಲ. ಇದು ಸರಿಯಾದದ್ದಲ್ಲ ಎಂದು ಬಿ.ಸಿ.ಸಿ.ಐ.ಗೆ ಯಾರಾದರೂ ಹೇಳಬೇಕಾದ ಅವಶ್ಯಕತೆಯೇನಾದರೂ ಇದೆಯೇ ಎಂದೇ ಪ್ರಶ್ನಿಸಬೇಕಾಗುತ್ತದೆ.

ರಾಷ್ಟ್ರೀಯ ತಂಡದ ಆಟಗಾರರೇನೂ ೧೬-೧೯ ವರ್ಷಕ್ಕಿಂತ ಕಿರಿಯವರಲ್ಲ. ಈಗಾಗಲೇ ತಮ್ಮ ಆಟದಲ್ಲಿ ರಾಷ್ಟ್ರೀಯ - ಅಂತಾರಾಷ್ಟ್ರೀಯ ಮಟ್ಟದಲ್ಲಿ ಮಾನ್ಯತೆ ಸಂಪಾದಿಸಿಕೊಂಡವರು. ಅಂತಹವರು ಹೊಸ ತರಬೇತುದಾರರೊಡನೆ ಒಮ್ಮೆಲೇ ಸಲೀಸಾಗಿ ಹೊಂದಿಕೊಳ್ಳುವುದು ಸಾಧ್ಯವಾಗುವುದಿಲ್ಲ. ಆ ಸಮಯಾವಕಾಶವನ್ನು ಬಿ.ಸಿ.ಸಿ.ಐ. ನೀಡಲೇ ಬೇಕು. ಕೋಚ್ ಸಹ 'ಟ್ರಯಲ್ಸ್' (ಪರೀಕ್ಷೆ) ಮೇಲಿದ್ದಾರೆಂದು ಆಟಗಾರರಿಗೆ ಮನದಟ್ಟಾದಲ್ಲಿ ಅವರನ್ನು ಆಟಗಾರರು ಎಂದೂ ಗಂಭೀರವಾಗಿ ಪರಿಗಣಿಸುವುದೇ ಇಲ್ಲ. ಅವರ ಮಾತಿಗೆ ಮೂರು ಕಾಸಿನ ಕಿಮ್ಮತ್ತೂ ಇಲ್ಲದಂತಾಗುತ್ತದೆ. ಕೋಚ್-ಆಟಗಾರರು ಪರಸ್ಪರರನ್ನು ಅರ್ಥೈಸಿಕೊಳ್ಳಲು, ಪರಸ್ಪರರಲ್ಲಿ ತಿಳಿವಳಿಕೆ-ಸಾಮರಸ್ಯ ಬೆಳೆಯಿಸಿಕೊಳ್ಳಲು ಸ್ವಲ್ಪ ಸಮ್ಯ[ಯ] ಬೇಕೆ ಬೇಕು. ಅದನ್ನು ಒದಗಿಸುವ ದೊಡ್ಡ[ಗುಣ]ವನ್ನು ಬಿ.ಸಿ.ಸಿ.ಐ. ತೋರಲೇಬೇಕು. ಅವಸರಪಟ್ಟರೆ ಬಂಗಾರದ ತತ್ತಿ ನೀಡುವ ಕೋಳಿಯ ಕಥೆಯಾಗುತ್ತದೆ. ಸಂದೀಪ ಪಾಟೀಲ ಹಾಗೂ ಮದನಲಾಲರ ಜೊತೆಗ[ೆ] ಬಿ.ಸಿ.ಸಿ.ಐ. ವ್ಯವಹರಿಸಿದ್ದು ಹೀಗೇ ಎಂದು ವ್ಯಥೆಯಿಂದ ಹೇಳದೇ ವಿಧಿಯಿಲ್ಲ.

ಇಡೀ ತಂಡದ ಪ್ರತಿಯೊಬ್ಬ ಆಟಗಾರ[ರ]ರೊಡನೆ ಕೋಚ್ ಸೌಹಾರ್ದಯುತ ತಿಳಿವಳಿಕೆ, ಸಾಮರಸ್ಯ ಸ್ಥಾಪಿಸುವಲ್ಲಿ ಯಶಸ್ವಿಯಾಗೇ ತೀರುತ್ತಾರೆ ಎಂಬ ಮಾತು ಸುಳ್ಳು. ಆಟಗಾರರೊಡನೆ ಏನೇ ಭಿನ್ನಾಭಿಪ್ರಾಯ[ಗಳಿ]ಗಳಿದ್ದರೂ ಅದನ್ನು ಅವರೊಡನೇ ಚರ್ಚಿಸಿ ಅದಕ್ಕೊಂದು ಕೊನೆಕಾಣಿಸುವುದು ಯೋಗ್ಯ ಎನ್ನುವದನ್ನು ಗಾಯಕವಾಡ ಮನಗಂಡಿರಲೇ ಬೇಕು. ಶ್ರೀಲಂಕಾದಲ್ಲಿ ನಡೆದ ಏಷ್ಯಾ ಕಪ್ ಪಂದ್ಯಾವಳಿಯ ನಂತರ ಮದನಲಾಲ ತಮ್ಮ ಹಾಗೂ ಆಟಗಾರರ ನಡುವಿನ ಭಿನ್ನಾಭಿಪ್ರಾಯ[ವ]ವನ್ನು ಸುದ್ದಿ ಮಾಧ್ಯಮಗಳೆದುರು ತೋಡಿಕೊಂಡಿದ್ದು, ಅವರ ತಲೆಯ ಮೇಲೆ ಚಪ್ಪಡಿಯೆಳೆಯಿತು. ತಮ್ಮ ನಿರ್ದೇಶನಗಳನ್ನು ಆಟಗಾರನೊಬ್ಬ ಅನುಸರಿಸದೇ ಇದ್ದಾಗ ಸುದ್ದಿಮಾಧ್ಯಮಗಳಿಗಿಂತಲೂ ಮೊದಲು ಆಯ್ಕೆ ಸಮಿತಿ, ಕ್ರಿಕೆಟ್ ನಿಯಂತ್ರಣ ಮಂಡಳಿ, ಅದರ ಅಧ್ಯಕ್ಷರು ಇದ್ದಾರೆನ್ನುವದನ್ನು ಕೋಚ್ ಮರೆಯುವಂತಿಲ್ಲ. ಆಟಗಾರನೊಬ್ಬನ ಉಪಸ್ಥಿತಿಯಿಂದ ತಂಡದ ನೈತಿಕತೆಯ ಮೇಲೆ ಪರಿಣಾಮ ಬೀರುತ್ತಿದೆಯೆಂದಾದರೆ ಅಂತಹವರ ಮೇಲೆ [ಕ]ಕ್ರಮ ಕೈಕೊಳ್ಳುವಂತೆ ಒತ್ತಾಯಿಸುವ ಹಕ್ಕು ಕೋಚ್‌ಗೆ ಇದ್ದೇ ಇರುತ್ತದೆ. ಅದರ ಸೂಕ್ತ ಬಳಕೆ ಮಾಡಿಕೊಳ್ಳದೇ ಮದನಲಾಲ ಎಡವಿದ[ರೆಂದೆ]ರೆಂದೆನಿಸುತ್ತದೆ.

ಕನಿಷ್ಟ ಮೂರು ವರ್ಷಗಳ ಅವಧಿಯನ್ನಾದರೂ ಕೇಳುವ ಕೋಚ್ ಪೂರ್ಣಾವಧಿಯ 'ಪಕ್ಕಾ ವೃತ್ತಿನಿರತ' ಕೋಚ್ ಆಗಿರಬೇಕು ಎಂದು ಬಿ.ಸಿ.ಸಿ.ಐ. ನಿರೀಕ್ಷಿಸುತ್ತದೆ ಎಂಬ ಮಾತೂ ಕೇಳಿಬರದೇ ಇರದು. ಹಾಗಾದರೆ ಅಂತಹವರು ಲಭ್ಯರಾದದ್ದೆ ಆದರೆ ಬಿ.ಸಿ.ಸಿ.ಐ. ಅವರಿಗೆ ನೀಡುವ ಸಂಭಾವನೆ ಎಷ್ಟು ಎಂಬ

ಬಗ್ಗೆ ಪ್ರಶ್ನೆ ಮೂಡದೆ ಇರದು. ಬರಿಯ ರಾಷ್ಟ್ರೀಯ ಕ್ರಿಕೆಟ್ ತಂಡದ ಕೋಚ್ ಅಥವಾ ಆಟಗಾರರಷ್ಟೇ ಅಲ್ಲ, ನಮ್ಮ ರಾಷ್ಟ್ರದ ಇಡಿಯ ಕ್ರೀಡಾವ್ಯವಸ್ಥೆಯೇ ಈ ರೀತಿಯ 'ಪ್ರೊಫೆಷನಲಿಸಂ' ಹೊಂದಿರದೇ ಇರುವುದಕ್ಕೆ ಅವರಿಗೆ ದೊರಕುವ ತೀರ ಕಡಿಮೆ ಸೌಲಭ್ಯಗಳೆ ಕಾರಣ ಎಂದು ಬೇರೆ ಹೇಳಬೇಕಿಲ್ಲ ತಾನೇ? ನಮ್ಮಲ್ಲಿ ಈ ಬದಲಾವಣೆ ಕಾಣಬೇಕಾದರೆ ಇನ್ನೆಷ್ಟು ಯುಗಗಳುರುಳಬೇಕೊ?

ರಾಷ್ಟ್ರೀಯ ಆಯ್ಕೆ ಸಮಿತಿ ಸದಸ್ಯರಾಗಿ ಕೆಲಸ ಮಾಡಿದ್ದೂ ಈಗ ಗಾಯಕವಾಡರ ನೆರವಿಗೆ ಬರದೇ ಇರದು. ಆಯ್ಕೆದಾರರು ಕೋಚ್‌ನಿಂದ ಬಯಸುವದೇನು ಎನ್ನುವದನ್ನು ಚೆನ್ನಾಗಿಯೇ ಅರಿತಿರುವ ಅವರು ತಾವೀಗ ಆಯ್ಕೆದಾರರೊಂದಿಗೆ ಯಾವ ರೀತಿಯ ಸಂಬಂಧವಿರಿಸಿಕೊಳ್ಳಬೇಕು, ಅವರೊಂದಿಗೆ ಯಾವ ರೀತಿ ಪ್ರತಿಕ್ರಿಯಿಸಬೇಕು ಮೊದಲಾದವುಗಳನ್ನು ಇನ್ನೊಬ್ಬರಿಂದ ಹೇಳಿಸಿಕೊಳ್ಳಬೇಕಾದ ಅವಶ್ಯಕತೆಯಿಲ್ಲ.

ಲಂಕಾ ಎದುರಿನ ಮೂರು ಟೆಸ್ಟ್‌ಗಳ ಸರಣಿ ಅವರ ಪಾಲಿಗೆ ಮಹತ್ವದ್ದಿತ್ತು ಎನ್ನುವದರಲ್ಲಿ ಎರಡು ಮಾತಿಲ್ಲ. ಈ ಲೇಖನ ಸಿದ್ಧಪಡಿಸುವ ಹೊತ್ತಿಗೆ ಮೊದಲಿನೆರಡು ಟೆಸ್ಟ್‌ಗಳು ಮುಗಿದಿದ್ದು ನಿರ್ಣಯ ನೀಡುವಲ್ಲಿ ವಿಫಲವಾಗಿದ್ದವು. ನಮ್ಮವರ 'ಆಮೆ ವೇಗ'ದ ಆಟಕ್ಕಿಂತಲೂ ಹೆಚ್ಚಾಗಿ ಅರವಿಂದ ಡಿಸಿಲ್ವಾರ ಕೆಚ್ಚೆದೆಯ ಆಟದ ನೆರವಿನಿಂದ ಮೊದಲ ಟೆಸ್ಟನಲ್ಲಿ ಜಯ ಭಾರತದ ಕೈತಪ್ಪಿದ್ದರೆ, ಎರಡನೆಯದರಲ್ಲಿ ಮಳೆರಾಯನ ಆಟವೇ ಜೋರಾಯಿತು. ವೆಂಕಟೇಶ ಪ್ರಸಾದರಂತಹ ಆಟಗಾರರನ್ನು ಹೊರಗೆ ಕೂಡಿಸಿದ್ದಕ್ಕೆ ಗಾಯಕವಾಡರೂ ಪರೋಕ್ಷವಾಗಿ ಕಾರಣರೆಂಬ ಗೂಬೆಯನ್ನು ಅವರ ತಲೆಯ ಮೇಲೆ ಕೂಡಿಸುವ ಪ್ರಯತ್ನವೂ ನಡೆಯಿತು. ಆದರೆ ಅಂತಿಮ ತಂಡದ ಆಯ್ಕೆಯ ವಿಷಯದಲ್ಲಿ ತಮಗೆ ಸ್ವಾತಂತ್ರ್ಯ ನೀಡಬೇಕೆಂಬ ಸಚಿನ್‌ರ ಮಾತು ಈ ಸಂಶಯವನ್ನು ನಿವಾರಿಸಿರಲೇಬೇಕು.

ಒಂದು ಮಾತಂತೂ ಸತ್ಯ, ಬಿ.ಸಿ.ಸಿ.ಐ. ಕೋಚ್ ಅವರಿಗೆ ಸಾಕಷ್ಟು ಸಮಯಾವಕಾಶ ನೀಡಲೇಬೇಕು. ಇಲ್ಲದಿದ್ದರೆ, ಮೇಲೆ ಬರೆದಿರುವಂತೆ ಮುಂದಿನ ಸೆಪ್ಟಂಬರ್ ಹೊತ್ತಿಗೆ ಗಾಯಕವಾಡರ ತಲೆ ಉರುಳಿ ಇನ್ನೊಂದಕ್ಕಾಗಿ ಹುಡುಕಾಟ ನಡೆದೇ ನಡೆಯುತ್ತದೆ. ●

# ಭಾರತದ ಕ್ರಿಕೆಟ್ ಮಂಡಳಿಯ ಕಾರ್ಯವೈಖರಿ

ಇತ್ತೀಚೆಗೆ ಭಾರತ ಕ್ರಿಕೆಟ್ ತಂಡವು ಆಡುವ ವೈಖರಿ, ವರ್ತನೆ ಹಾಗೂ ಆದರ ಸಾಮರ್ಥ್ಯವೇನೆಂಬುದನ್ನು ತೋರಿಸಲು ಹಿಂಜರಿಯುವುದನ್ನು ಕಂಡರೆ, ಇದರ ಹಿಂದೆ ಏನೋ ಕೈವಾಡವಿದೆಯೆಂಬುದು ಎದ್ದು ಕಾಣುತ್ತದೆ. ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡು ಭಾರತ ತಂಡಕ್ಕೆ ಹಿಂದಿದ್ದ ಪ್ರತಿಷ್ಠೆಯನ್ನಾದರೂ ಕಾಪಾಡುವತ್ತ ಗಮನಹರಿಸದೆ, ಭಾರತದ ಕ್ರಿಕೆಟ್ ಮಂಡಳಿ ಸ್ವಾರ್ಥದ ಆಯ್ಕೆಯತ್ತ ಸಾಗುತ್ತಿದೆಯೆ?

ಭಾರತದ ಕ್ರಿಕೆಟ್ ಮಂಡಳಿ ಈಗೀಗ ತಾನೇನು ಮಾಡುತ್ತಿದೆ? ಏಕೆ ಮಾಡುತ್ತಿದೆ? ಎಂಬುದು ತನಗೇ ಗೊತ್ತಿಲ್ಲದಂತೆ ವರ್ತಿಸುತ್ತಿದೆ. ಭಾರತದ ತಂಡ ಪ್ರಬಲವಾಗಬೇಕಾದರೆ ಏನು ಮಾಡಬೇಕೆಂಬುದರ ಬಗ್ಗೆ ಯೋಚಿಸಿ, ತಂಡದ ಸದಸ್ಯರಿಗೆ ಉತ್ತೇಜನ, ಹುಮ್ಮಸ್ಸು ನೀಡಿ ಸಹಕರಿಸುವುದನ್ನು ಬಿಟ್ಟು ತಂಡದ ಆಯ್ಕೆಯಲ್ಲಿ ರಾಜಕೀಯ ಮಾಡುವತ್ತ ಸಾಗಿರುವುದರಿಂದಲೇ ತಂಡದಲ್ಲಿ ದುರ್ಬಲತೆ ಕಂಡು ಬರುತ್ತಿರುವುದಾಗಿ ಕ್ರಿಕೆಟ್ ಪ್ರೇಮಿಗಳ ಒಕ್ಕೊರಲಿನ ಧ್ವನಿಯಾಗಿದೆ.

ಶ್ರೀಲಂಕಾ ವಿರುದ್ಧ ಸತತ ಎರಡು ಟೆಸ್ಟ್ ಪಂದ್ಯಗಳಲ್ಲಿ ವೆಂಕಟೇಶ ಪ್ರಸಾದ್‌ಗೆ ಖೋಕ್ ನೀಡಿರುವುದರ ರಹಸ್ಯವೇನಿರಬಹುದು? ಆಯ್ಕೆ ಮಂಡಳಿಗೆ ಅವರಿಂದಾದ ಅನಾಹುತವಾದರೂ ಏನೆಂಬುದರ ಬಗ್ಗೆ ಪ್ರೇಕ್ಷಕರಲ್ಲಿ ಕಳವಳವಾದರೂ, ಮುಂಬೈನ ಅಬೆಕುರುವಿಲ್ಲ ಹಾಗೂ ಒರಿಸ್ಸಾದ ದೇಬಶಿಶ ಮೊಹಂತಿಯನ್ನು ರಕ್ಷಿಸುವತ್ತ ಇಬ್ಬರು ಆಯ್ಕೆದಾರರು ಟೊಂಕಕಟ್ಟಿ ನಿಂತಿರುವುದರ ಪ್ರತಿಫಲವಾಗಿ, ಆಟಗಾರರ ಪೈಕಿ ಶ್ರೀನಾಥರ ನಂತರ ಅತ್ಯುತ್ತಮ ಮಧ್ಯಮ ವೇಗದ ಬೌಲರ್ ಎನಿಸಿದ್ದ ವೆಂಕಟೇಶ್ ಪ್ರಸಾದ್ ಹೊರಗುಳಿಯಲು ಕಾರಣವಾಗಿದೆಯೆಂಬುದು ಪ್ರೇಕ್ಷಕರಿಗೆ ಗೊತ್ತಿಲ್ಲದಿರಲಿಲ್ಲ.

ಪಂದ್ಯದ ಆರಂಭಕ್ಕೆ ಮುನ್ನ ಹನ್ನೊಂದು ಮಂದಿ ಆಟಗಾರರ ಆಯ್ಕೆ ಸಮಿತಿ ಸದಸ್ಯರ ಮರ್ಜಿಗೆ ಒಳಪಟ್ಟಿರುವುದರಿಂದ, ತಮ್ಮ ಹಿತ ಹಾಗೂ ತಮಗೆ ಬೇಕಾದ ಕೆಲ ಆಟಗಾರರ ಹಿತ ಕಾಪಾಡುವ ದೃಷ್ಟಿಯಿಂದ ಪ್ರತಿಭೆ ಇರುವ ಪ್ರಸಾದ್‌ರಂತಹ ಆಟಗಾರರನ್ನು ಮೂಲೆ ಗುಂಪು ಮಾಡುತ್ತಿರುವುದಲ್ಲದೆ, ಸುಮ್ಮನೆ ನೆಪ ಮಾತ್ರಕ್ಕೆ ತಂಡದ ನಾಯಕ ಹಾಗೂ ತಂಡದ ನೀತಿ ರೂಪಿಸುವ ಮ್ಯಾನೇಜರ್‌ರವರನ್ನು ಸಂಪರ್ಕಿಸುವುದೇ ವಿನಾ ಸೋಲು-ಗೆಲುವಿನ ಬಗ್ಗೆ ತಂಡಕ್ಕೆ ಮಾಹಿತಿ ನೀಡಿ, ಗೆಲುವನ್ನು ಸಾಧಿಸಲೇಬೇಕಾದ್ದು ನಿಮ್ಮ ಜವಾಬ್ದಾರಿ ಎಂದು ಹೇಳಲಿಕ್ಕಿಲ್ಲ ಎಂಬ ವಿಷಯ ತಂಡದ ಸದಸ್ಯರಲ್ಲೇ ಹೊಗೆಯಾಡುತ್ತಿದೆ.

ಸಚಿನ್ ತೆಂಡೂಲ್ಕರ್ ಅವರನ್ನು ನಾಯಕತ್ವದಿಂದ ಕೆಳಗಿಳಿಸಬೇಕೆಂದು, ಕ್ರಿಕೆಟ್ ಮಂಡಳಿಯಲ್ಲಿ ಪ್ರಯತ್ನಗಳು ನಡೆಯುತ್ತಿದ್ದು, ಅದು ಯಾವ ಕ್ಷಣದಲ್ಲಾದರೂ ಬಯಲಿಗೆ ಬರಬಹುದೆಂಬುದನ್ನು ನಿರೀಕ್ಷಿಸಿರುವ ಕ್ರಿಕೆಟ್ ಅಭಿಮಾನಿಗಳು, ಹೀಗಾದಲ್ಲಿ ಆಯ್ಕೆ ಮಂಡಳಿ ವಿರುದ್ಧ ರೊಚ್ಚಿಗೇಳುವತ್ತ ಸಾಗಿದ್ದಾರೆ. ತಂಡದಲ್ಲಿ ಕೆಲವರು ಮಾತ್ರ ತಮ್ಮ ಕರ್ತವ್ಯದ ಬಗ್ಗೆ ಗಮನಹರಿಸಿ, ಆಟವಾಡಿ, ಉತ್ತಮ ಫಲಿತಾಂಶ ನೀಡಲು ಪ್ರಯತ್ನಿಸುತ್ತಾರೆ. ಅಂತಹವರನ್ನು ಒಬ್ಬೊಬ್ಬರಾಗಿ ತೆಗೆಯುವ ಹಾಗೂ ತಮಗೆ ಬೇಕಾದ ಹೊಸಬರನ್ನು ಸೇರಿಸಿಕೊಳ್ಳುವುದಷ್ಟೇ ಭಾರತ ಕ್ರಿಕೆಟ್ ಮಂಡಳಿಯ ಧ್ಯೇಯವಾಗಿರುವುದಲ್ಲದೆ, ತಂಡ ಗೆಲ್ಲಲೇಬೇಕು - ಭಾರತದ ಪ್ರತಿಷ್ಠೆ ಕಾಪಾಡಬೇಕು ಎಂಬುದನ್ನು ಗಮನದಲ್ಲಿಟ್ಟುಕೊಂಡು, ಅದಕ್ಕಾಗೇನು ಅವಶ್ಯಕತೆಯಿದೆ ಎಂಬುದನ್ನು ಪಡೆಯುವತ್ತ ಹೊರಟಿಲ್ಲ.

ಹೀಗೆಯೇ ಭಾರತದ ಕ್ರಿಕೆಟ್ ಮಂಡಳಿ ಆಯ್ಕೆಯಲ್ಲಿ ಸ್ವಾರ್ಥವನ್ನು ಬೆಳಸಿ, ತಮಗಿಷ್ಟ ಬಂದಂತೆ ವ್ಯವಹರಿಸುತ್ತಾ, ತಂಡದ ಏಳಿಗೆ-ಗೆಲುವಿನ ಬಗ್ಗೆ ಕಾಳಜಿ ವಹಿಸದಿದ್ದರೆ, ಇನ್ನು ಮುಂದೆಯೂ ಭಾರತದ ತಂಡ ಹೀನಾಯ ಸ್ಥಿತಿಗಿಳಿಯುವುದರಲ್ಲಿ ಸಂಶಯವಿಲ್ಲವೆನ್ನುವ ಕ್ರಿಕೆಟ್ ಅಭಿಮಾನಿಗಳು, ದೇಶಾಭಿಮಾನವಿಲ್ಲದ ನಾಲಾಯಕ್ ಆಯ್ಕೆದಾರರಿಗೆ ಮುಂದೆ ಬುದ್ಧಿ ಕಲಿಸಲೇಬೇಕಾಗುವುದೆಂಬ ಸವಾಲನ್ನು ಹಾಕಿದ್ದಾರೆ.

○ ಉತ್ತನೂರು ವ್ಯಾಸ್.

**ಮದುವೆ**

ಉಂಟು ಮಾರಾಯ
ನನಗು ನಿನಗು ನಂಟು
ಇಲ್ಲದಿದ್ದರೆ ಬೀಳುತ್ತಿತ್ತೆ
ಈ ಗಂಟು?

– ಕಮಲಾ ಈಶ್ವರ

# ಕಿಲ ಕಿಲ

ಚಿಣ್ಣರೆ,

ಈ ತಿಂಗಳ ಪುಟಾಣಿ ಪದ್ಯಗಳಲ್ಲಿ ಜ್ಞಾನ ಪೀಠ ಪ್ರಶಸ್ತಿ ಪಡೆದ ಕನ್ನಡದ ಆರು ಪ್ರಸಿದ್ಧ ಸಾಹಿತಿಗಳ ಹೆಸರಿವೆ- ಓದುತ್ತಿರುವಾಗಲೇ ಊಹಿಸಿದರೆ ನೀವು ತುಂಬಾ ಜಾಣರು!

**○ ಗೋಪಾಲಕೃಷ್ಣ ವಂಡ್ಸೆ**



ಚಿತ್ರ : ಎಚ್. ಗಣೇಶ್

೧

ಇಂಗ್ಲಿಷ್ ಪ್ರಾಧ್ಯಾಪಕರಾಗಿ
ಹೆಸರು ಮಾಡಿದ್ದು
'ಭಾರತ ಸಿಂಧು ರಶ್ಮಿ' ಯೆಂಬ
ಮಹಾಕಾವ್ಯ ನೀಡಿದ್ದು
ಕನ್ನಡ ನಾಡು ನುಡಿಗಾಗಿ
ಸೇವೆ ಗೈದಿದ್ದು
ಯಾರೆಂದು ಹೇಳುವಿರಾ
ಸಂತಸದಿ ಎದ್ದು!

೨

ಮೂಕಜ್ಜಿ ಕನಸು
ಕೃತಿಯ ರಚಿಸಿ
ಕಡಲ ತೀರದ
ಭಾರ್ಗವ ಎನಿಸಿ
ಗೆಜ್ಜೆಯ ಕಟ್ಟಿ
ಕುಣಿದು ಕುಣಿಸಿ
ಮೆರೆದವರು ಇವರು
ಯಾರೆಂದು ಊಹಿಸಿ!

೩

ರಾಷ್ಟ್ರ ಕವಿಯ ಪಟ್ಟವನ್ನು
ಎಂದೋ ಏರಿದ್ದಾರೆ
'ಶ್ರೀರಾಮಾಯಣ ದರ್ಶನ'ವನ್ನು
ಚೆನ್ನಾಗಿ ಬರೆದಿದ್ದಾರೆ
ಪದ್ಮ ವಿಭೂಷಣ ಪ್ರಶಸ್ತಿ
ಪಡೆದು ಮೆರೆದಿದ್ದಾರೆ
ತಕ್ಷಣ ಹೇಳು ಜಾಣೆ
ಇವರು ಯಾರೆ!?

೪

ಮಹಾರಾಷ್ಟ್ರ ರಾಜ್ಯದಿ
ಬಂದರು ಹುಟ್ಟಿ
ಧಾರವಾಡದಲಿ ಬಹಳ
ಆಗಿದ್ದರು ಗಟ್ಟಿ
ಮೆರೆದಿಹರು ಇವರು
'ನಾಕು ತಂತಿ' ಕಟ್ಟಿ
ಯಾರೆಂದು ಹಾಡಿ
ಹೊಗಳು ಪುಟ್ಟಿ!

೫

ಜೀವನ ಪತ್ರಿಕೆಯ
ಸಂಪಾದಕರಾಗಿದ್ದು
ಚಿಕವೀರ ರಾಜೇಂದ್ರ
ಕೃತಿ ರಚಿಸಿ ಕೊಟ್ಟಿದ್ದು
'ಕನ್ನಡದ ಆಸ್ತಿ' ಯೆಂಬ
ನಾಣ್ಣುಡಿ ಪಡೆದಿದ್ದು
ಯಾರೆಂದು ಹೇಳೋದು
ನಿಮಗೆ ಬಿಟ್ಟಿದ್ದು!

೬

ಕೇಂದ್ರ ಸಾಹಿತ್ಯ ಅಕಾಡೆಮಿ
ಅಧ್ಯಕ್ಷರಾಗಿಹರು
ಕೇರಳದ ವಿ.ವಿ.ಯಲಿ
ಉಪಕುಲಪತಿಯಾಗಿದ್ದರು
'ಸಂಸ್ಕಾರ' ಕಾದಂಬರಿ
ಬರೆದು ಮೆರೆದಿಹರು
ಜಾಣರೆ ಹೇಳಿರಿ
ಯಾರು ಇವರು?

## ಉತ್ತರ :

೧. ಡಾ. ವಿನಾಯಕ ಕೃಷ್ಣ ಗೋಕಾಕ
೨. ಡಾ. ಕೋಟ ಶಿವರಾಮ ಕಾರಂತ
೩. ಡಾ. ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ
೪. ಡಾ. ದತ್ತಾತ್ರೇಯ ರಾಮಚಂದ್ರ ಬೇಂದ್ರೆ
೫. ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್
೬. ಡಾ. ಉಡುಪಿ ರಾಜಗೋಪಾಲಾಚಾರ್ಯ ಅನಂತಮೂರ್ತಿ

# ಅಕ್ಟೋಬರ್ ರಜೆಯಲ್ಲಿ...

**ಅಕ್ಟೋಬರ್ ರಜೆಯಲ್ಲಿ ತಾವು ಏನೇನು ಮಾಡಿದೆವೆಂದು ಬಹಳ ಮಕ್ಕಳು ಬರೆದು ಕಳಿಸಿದ್ದಾರೆ. ಬಂದ ಬರಹಗಳನ್ನೆಲ್ಲಾ ಪ್ರಕಟಿಸಿದ್ದರೆ ಇಡೀ 'ಬದುಕು' ಪತ್ರಿಕೆ ತುಂಬುತ್ತಿತ್ತು! ಅಚ್ಚುಕಟ್ಟಾಗಿ ಬರೆದ ಕೆಲವು ಬರಹಗಳನ್ನು ಆಯ್ದು ಇಲ್ಲಿ ಪ್ರಕಟಿಸುತ್ತಿದ್ದೇವೆ. ಈ ಬಾರಿ ಅವಕಾಶ ಸಿಗದ ಮಕ್ಕಳು ನಿರಾಶರಾಗಬೇಕಿಲ್ಲ. ಮುಂದಿನ ಸಲ ಇನ್ನೂ ಚೆನ್ನಾಗಿ ಬರೆದು ಯಶಸ್ವಿಯಾಗಬಹುದು. ಈ ತಿಂಗಳು ನೀವು ಯಾವ ವಿಷಯದ ಬಗ್ಗೆ ಬರೆಯಬೇಕು ಎಂಬುದರ ವಿವರಗಳನ್ನು ೬೫ನೇ ಪುಟದಲ್ಲಿ ನೀಡಲಾಗಿದೆ.**

## ಮನೆಯಲ್ಲೇ ಓದಿದೆ

ನಾನು ಅಕ್ಟೋಬರ್ ರಜೆಯಲ್ಲಿ ಶಾಲೆಯ ಎಲ್ಲಾ ಪಾಠಗಳನ್ನು ಓದಿಕೊಂಡೆನು ಹಾಗೂ ಪ್ರಶ್ನೆ ಪತ್ರಿಕೆಗಳಿಗೆ ಉತ್ತರವನ್ನು ಬಿಡಿಸಿದೆನು. ಅದರಂತೆ ದಿನಾಲು ಒಂದೊಂದು ಪುಟ ಕನ್ನಡ, ಹಿಂದಿ, ಇಂಗ್ಲಿಷ್ ಕೈ ಬರಹ ಬರೆಯುವ ಕೆಲಸ ಮಾಡಿದೆನು. ಆದರೆ ಎಲ್ಲಿಗೂ ಪ್ರವಾಸಕ್ಕೆ ಹೋಗಲಿಲ್ಲ, ದಿನಾಲೂ ಮನೆಯಲ್ಲಿಯೇ ರೇಡಿಯೋ ಕಾರ್ಯಕ್ರಮಗಳನ್ನು ಕೇಳುತ್ತಾ, ಅನೇಕ ಪತ್ರಿಕೆಗಳಾದ ಪ್ರಜಾವಾಣಿ, ಕರ್ಮವೀರ, ಸುಧಾ, ದಿಕ್ಸೂಚಿ ಹಾಗೂ ಬಿಸಿಲ ಬದುಕು ಪತ್ರಿಕೆಗಳನ್ನು ಹೆಚ್ಚಾಗಿ ಓದಿಕೊಂಡೆನು. ಏಕೆಂದರೆ ನಮ್ಮ ಊರು ಗ್ರಾಮಾಂತರ ಪ್ರದೇಶವಾಗಿದ್ದರಿಂದಾಗಿ ಅಂತಹ ಯಾವುದೇ ರೀತಿಯ ಅನುಕೂಲ ಇಲ್ಲದೆ ಇರುವುದರಿಂದಾಗಿ, ನಾನು ರಜೆಯ ಕಾಲವನ್ನು ಹೆಚ್ಚಾಗಿ ಓದು ಮತ್ತು ಮನೆಯ ಕೆಲಸಗಳಲ್ಲಿಯೇ ಕಳೆದೆನು.

**- ಎಸ್. ವಿಜಯಲಕ್ಷ್ಮಿ** (೯ನೇ ತರಗತಿ)
ಹುಲಗಿನಾಳ

## ದುಃಖ ತಂದ ರಜೆ!

ಕಳೆದ ಅಕ್ಟೋಬರ್ ರಜೆಯಲ್ಲಿ ನಾನು 'ನನ್ನಜ್ಜಿ-ತಾತ'ನ ಬಳಿ ಧಾರವಾಡ ಜಿಲ್ಲೆಯ ಹೆಬ್ಬಳ್ಳಿಗೆ ಹೋಗಿದ್ದೆನು. ಆದರೆ ಪ್ರತೀ ವರ್ಷದಂತೆ ಈ ವರ್ಷ ನನಗೆ ರಜೆ ಖುಷಿ ತರುವ ಬದಲು ತುಂಬಾ ದುಃಖ ತಂದಿತ್ತು. ಏಕೆಂದರೆ ಈ ಸಾರಿ ನನ್ನ ಪ್ರೀತಿಯ 'ಪೊಲೀಸ್ ತಾತಾ' ಇಲ್ಲವಾಗಿದ್ದರು! ಹಿಂತಿರುಗಿಬಾರದ ದೂರದ ಲೋಕಕ್ಕೆ ಹೋಗಿದ್ದರು!

ಆದ್ದರಿಂದ ಈ ಸಾರೆಯ ರಜಾ ದಿನಗಳು ನನಗೆ ನೋವನ್ನೇ ತಂದವು. ನನ್ನ ತಾತನಿಗೆ ನಾನೆಂದರೆ ಬಹಳ ಪ್ರೀತಿ. ಅಂತಹ ತಾತ ತೀರಿಕೊಂಡದ್ದು ನನಗೆ ತುಂಬಾ ದುಃಖವನ್ನುಂಟು ಮಾಡಿದೆ.

ಕೆಲವು ದಿನ ಮಾತ್ರ ಅಜ್ಜಿಯ ಬಳಿ ಇದ್ದು, ಅಪ್ಪಾಜಿ ಜೊತೆ ಚಳ್ಳಕೆರೆಗೆ ಬಂದೆ.

**- ಕೆ.ಪಿ. ಹರೀಶಾನಂದ** (೨ನೇ ತರಗತಿ)
ಚಳ್ಳಕೆರೆ

## ಆಟ-ಪಾಠ-ಟಿ.ವಿ.

ರಜೆಯಲ್ಲಿ ನಾನು ಕಾಪಿ ಬರೆಯುವುದು, ಮಗ್ಗಿ ಓದುವುದು, ಆಟ ಆಡುವುದು, ಟಿ.ವಿ. ನೋಡುವುದು ಮಾಡಿದೆ. ರಜೆಯನ್ನು ನಾನು ತುಂಬಾ ಸಂತೋಷದಿಂದ ಕಳೆದೆನು. ರಜೆಯಲ್ಲಿ ನಾನು ನನ್ನ ತಂದೆಯ ಹತ್ತಿರ ಕೆಲವು ಪುಸ್ತಕಗಳನ್ನು ತರಲು ಹೇಳಿದೆನು. ಆಗ ನನ್ನ ತಂದೆ ಬಾಲ ಮಂಗಳ, ಚುಟುಕ, ಚಂಪಕ ಹಾಗೂ ಬಿಸಿಲ ಬದುಕು ಮುಂತಾದ ಪುಸ್ತಕಗಳನ್ನು ತಂದಿದ್ದರು. ಅದರಲ್ಲಿ ಬಿಸಿಲ ಬದುಕು ಪುಸ್ತಕ ಓದಿದಾಗ ತುಂಬ ಸಂತೋಷವಾಯಿತು. ಅದರಲ್ಲಿ ಕ್ವಿಜ್, ಕಿಲಕಿಲ, ಚೌಚೌ, ಕ್ಲಾಸ್‌ರೂಂ ಮುಂತಾದವು ತುಂಬ ಚೆನ್ನಾಗಿತ್ತು. ನಾನು ರಜೆಯಲ್ಲಿ ತುಂಬಾ ಕಡೆ ಪ್ರವಾಸಕ್ಕೆ ಹೋಗಿದ್ದೆನು.

**- ಕೆ.ಎಸ್.ಮಂಜುನಾಥ** (೬ನೇ ತರಗತಿ)
ಕೊಪ್ಪ

## ಜತೆಯಾದ 'ಬದುಕು'

ನಾನು ನನ್ನ ಸ್ವಂತ ಊರಾದ ಅಗಸನಕಟ್ಟೆಗೆ ಹೋಗುವ ಪೂರ್ವದಲ್ಲಿ ನನ್ನ ಅಣ್ಣ ತಂದಿದ್ದ ಜುಲೈದಿಂದ ಅಕ್ಟೋಬರ್‌ವರಗಿನ 'ಬದುಕು' ಪತ್ರಿಕೆಗಳನ್ನು ತೆಗೆದುಕೊಂಡು ಹೋಗಿ ಅಲ್ಲಿ ಇವುಗಳನ್ನು ತಿರುವುತ್ತಾ ಹೋದೆ. ಈ ರಜೆಯನ್ನು ಕಳೆದದ್ದೇ ಗೊತ್ತಾಗಲಿಲ್ಲ. ನಂತರ ಅಜ್ಜಿಯ ಊರಾದ ಕೊಂಡಜ್ಜಿಗೆ ಬಂದೆ. ಮತ್ತೊಂದು ಪತ್ರಿಕೆ ಇತ್ತು. ಈ ಎಲ್ಲಾ ಪುಸ್ತಕಗಳು ನನ್ನ ಮುಂದಿನ ವಿದ್ಯಾಭ್ಯಾಸಕ್ಕೆ ದಾರಿಯಂತಿವೆ.

**- ಎ.ಎನ್. ಆಶಾ** (೮ನೇ ತರಗತಿ)
ಕೊಂಡಜ್ಜಿ

## ಆಟ-ಅಭ್ಯಾಸ-ಹಬ್ಬ

ಅಕ್ಟೋಬರ್ ತಿಂಗಳೆಂದರೆ ಬಹಳ ಇಷ್ಟ. ನಾನು ಈ ತಿಂಗಳಲ್ಲಿ ಆಟವಾಡುತ್ತಾ ರಜೆ ಕಳೆಯುತ್ತೇನೆ. ನನಗೆ ಕ್ರಿಕೆಟ್ ಎಂದರೆ ಬಹಳ ಇಷ್ಟ. ನಾನು ಬೆಳಿಗ್ಗೆ ಊಟ ಮುಗಿಸಿ ಹೋದರೆ, ಒಮ್ಮೆಲೆ ಕ್ರಿಕೆಟ್ ಆಟ ಮುಗಿಸಿಕೊಂಡು ಸಾಯಂಕಾಲ ಬರುತ್ತೇನೆ. ಬಂದ ನಂತರ ಸ್ವಲ್ಪ ಅಭ್ಯಾಸದ ಕಡೆ ಲಕ್ಷ್ಯಕೊಡುತ್ತೇನೆ. ಏನಾದರೂ ತಿಳಿಯದಿದ್ದರೆ ನನ್ನ ಅಣ್ಣ ಮತ್ತು ಅಕ್ಕಳನ್ನು ಕೇಳುತ್ತೇನೆ. ಹೀಗೆ ಸ್ವಲ್ಪ ದಿವಸ ಈ ಅಕ್ಟೋಬರ್ ರಜೆಗಳನ್ನು ಕಳೆದಿದ್ದೇನೆ.

ಹಾಗೂ ಇನ್ನು ಕೆಲವು ದಿವಸಗಳನ್ನು ನನ್ನ ಅಕ್ಕ ಅಣ್ಣ ಅವರ ಜೊತೆ ಹಬ್ಬವನ್ನು ಆಚರಿಸಿ, ಸಂತೋಷದಿಂದ ಆಟವಾಡುತ್ತಾ ರಜೆಗಳನ್ನು ಕಳೆದಿದ್ದೇನೆ.

**- ನವೀನ್‌ಕುಮಾರ ಗುಡಿ** (೫ನೇ ತರಗತಿ)
ಗುಡುಗುಂಟಾ

## ಕೃಷ್ಣಾನದಿ ತೀರ

ನಾನು ಅಕ್ಟೋಬರ್ ರಜೆಯಲ್ಲಿ ಕೃಷ್ಣಾ ನದಿಗೆ ಕಟ್ಟುತ್ತಿರುವ ನಾರಾಯಣಪುರ ಗ್ರಾಮದ ಹತ್ತಿರ ಇರುವ ಬಸವಸಾಗರ ನೋಡಲು ಹೋಗಿದ್ದೆ. ದಕ್ಷಿಣ ಕರ್ನಾಟಕಕ್ಕೆ ಕಾವೇರಿ, ಮಧ್ಯ ಕರ್ನಾಟಕಕ್ಕೆ ತುಂಗಭದ್ರಾ ನದಿ ಇದ್ದಂತೆ ಉತ್ತರ ಕರ್ನಾಟಕಕ್ಕೆ ಕೃಷ್ಣಾನದಿ ಪವಿತ್ರವಾಗಿದೆ. ಬಸವಸಾಗರಕ್ಕೆ ಹತ್ತಿರದಲ್ಲಿ ಛಾಯಾ ಭಗವತಿ ಇದೆ. ಈ ಬಸವ ಸಾಗರ ಅಣೆಕಟ್ಟು ಬಿಜಾಪುರ ಗುಲಬರ್ಗಾ ರಾಯಚೂರು ಮೂರು ಜಿಲ್ಲೆಗಳ ಸಂಗಮ ದಲ್ಲಿದ್ದು ಈಗ ೧ನೇ ಹಂತ ಮುಗಿದಿದ್ದು ಕಾಲುವೆಗೆ ನೀರು ಬಿಟ್ಟಿದ್ದಾರೆ. ಆಲಮಟ್ಟಿ ಡ್ಯಾಂ ಕಟ್ಟುತ್ತಿದ್ದಾರೆ. ಈ ಎಲ್ಲಾ ಪ್ರದೇಶ ನೋಡಿದಾಗ, ನನಗೆ ನಮ್ಮ ಭಾಗ ಮುಂದಿನ ದಿನಗಳಲ್ಲಿ ಸುಖ ಸಮೃದ್ಧಿಯ ನಾಡಾಗುವದರಲ್ಲಿ ಸಂದೇಹವಿಲ್ಲ ಎನಿಸಿತು.

**- ಬಾಲನಗೌಡ ಭೀ. ಗೌಡರ್** (೫ನೇ ತರಗತಿ)
ಇಳಕಲ್ಲು

## ಅಜ್ಜಿ ಊರಿನ ಮಜ

ಅಕ್ಟೋಬರ್ ರಜದಲ್ಲಿ ನಾನು ನಮ್ಮ ಶಾಲೆಯಲ್ಲಿ ಕೊಟ್ಟಿದ್ದ ಪ್ರಶ್ನೆ ಪತ್ರಿಕೆಯನ್ನು ಬಿಡಿಸಿದೆನು. ನಮ್ಮ ತಂದೆಯವರು ನನಗೂ ನನ್ನ ಗೆಳೆಯನಿಗೂ ಪಾಠ ಮಾಡುತ್ತಿದ್ದರು. ಪಾಠದಲ್ಲಿ ಹಿಂದಿ ಅಕ್ಷರಗಳನ್ನು ಮತ್ತು ಇಂಗ್ಲಿಷ್ ಅಕ್ಷರಗಳನ್ನು ಕಲಿಯಲು ತಿಳಿಸಿದರು. ನಾನು ಬೆಳಿಗ್ಗೆ ೬.೦೦ ಘಂಟೆಗೆ ಎದ್ದು ಜಾಗಿಂಗ್ ಮಾಡಿ

ನಂತರ ಆರ್.ಎಸ್.ಎಸ್. ಶಾಖೆಗೆ ಹೋಗುತ್ತಿದ್ದೆನು. ಅಲ್ಲಿ ನಿತ್ಯದ ಕಾರ್ಯಕ್ರಮವನ್ನು ಮುಗಿಸಿಕೊಂಡು ಮರಳಿ ಮನೆ ಸೇರುವುದು ೭.೩೦ ಆಗುತ್ತಿತ್ತು. ನಂತರ ನಮ್ಮ ತಾಯಿಯವರಿಗೆ ಕೆಲಸದಲ್ಲಿ ನೆರವಾಗುತ್ತಿದ್ದೆನು. ರಜದಲ್ಲಿ ನಮ್ಮ ಅಜ್ಜ ಊರಿಗೆ ಹದಿನೈದು ದಿನಗಳ ಕಾಲ ಹೋಗಿದ್ದೆವು. ಅಲ್ಲಿ ಮಜವಾಗಿ ಆಟ ಆಡಿ ಊಟ ಮಾಡಿ ಕಾಲ ಕಳೆದೆವು.

**- ಕೆ.ಎಸ್. ಪ್ರಸನ್ನ** (೪ನೇ ತರಗತಿ)
ದಾವಣಗೆರೆ

## ಸಣ್ಣ ಹೂವಿನ ತೋಟ

ಅಕ್ಟೋಬರ್ ರಜೆ ನನಗೆ ತುಂಬಾ ತೃಪ್ತಿ ನೀಡಿತ್ತು. ರಜೆಯ ಹೆಚ್ಚಿನ ಸಮಯವನ್ನು ನನ್ನ ನೆಚ್ಚಿನ ಹವ್ಯಾಸಗಳಲ್ಲಿ ಹಾಗೂ ಕ್ರಿಕೆಟ್ ಆಡುವುದರಲ್ಲಿ ಕಳೆದಿದ್ದೇನೆ. ರಜೆಯಲ್ಲಿ ಸಣ್ಣದೊಂದು ಹೂವಿನ ತೋಟವನ್ನು ನಿರ್ಮಿಸಿದ್ದೇನೆ.

ಸಂಜೆ ಸಮಯದಲ್ಲಿ ಕಡಲು ಕಿನಾರೆಯಲ್ಲಿ ಸುತ್ತಾಡಿಕೊಂಡು ಹಾಗೆಯೇ ಹತ್ತಿರದಲ್ಲಿದ್ದ ಗ್ರಂಥಾಲಯಕ್ಕೆ ಹೋಗಿ ನನಗಿಷ್ಟವಾದ ಪುಸ್ತಕಗಳನ್ನು ಓದುತ್ತಿದ್ದೆ. ವಾರಕ್ಕೆರಡು ಬಾರಿ ನಮ್ಮೂರ ಸ್ವಾಮಿಲಿಂಗನ ದೇವಸ್ಥಾನಕ್ಕೆ ಗೆಳೆಯರೆಲ್ಲ ಕೂಡಿ ಹೋಗುತ್ತಿದ್ದೆವು. ಮನಸ್ಸು ಉಲ್ಲಾಸವಾಗಿದ್ದ ಸಮಯದಲ್ಲಿ ಪಠ್ಯ ಪುಸ್ತಕವನ್ನು ಓದುತ್ತಿದ್ದೆ.

**- ಎ.ಎಸ್.ವಿಶ್ವನಾಥ ದೇವಾಡಿಗ** (೮ನೇ ತರಗತಿ)
ಅನಗೋಡು (ದ.ಕ.)

## ಜೋಗದ ಜಲಧಾರೆ

ಈ ಸಾರಿ ಜೋಗ, ಕಾರ್ಗಲ್ ಪ್ರದೇಶಗಳಿಗೆ ಭೇಟಿ ಕೊಟ್ಟೆವು. ನಮ್ಮ ರಾಜ್ಯದಲ್ಲಿ ವಿದ್ಯುತ್ ತಯಾರಿಸುವ ಕೇಂದ್ರವಾದ ಕಾರ್ಗಲ್‌ನಲ್ಲಿ ವಿದ್ಯುತ್ ತಯಾರಿಕೆ ಉನ್ನತ ಉಪಕರಣಗಳು, ಅದರ ಚಕ್ರದಡಿಯಲ್ಲಿ ಹರಿಯುವ ನೀರು ನೋಡಿದರೆ ನಿಜಕ್ಕೂ ಆಶ್ಚರ್ಯ ಎನಿಸುತ್ತದೆ. ಅಲ್ಲಿಂದ ಜೋಗಕ್ಕೆ ಹೋದೆವು. ರಾಜಾ, ರಾಣಿ, ರೋರರ್, ರಾಕೆಟ್‌ಗಳ ವಿವಿಧ ದೃಶ್ಯಗಳ ರಮಣೀಯ ಸೌಂದರ್ಯದಿಂದ ಪ್ರವಾಸಿಗರ ಮನಸ್ಸನ್ನು ಆಕರ್ಷಿಸುತ್ತದೆ. ಅಲ್ಲಿನ ಮಲೆನಾಡಿನ ಸುಂದರ ಸೊಬಗು ನಮ್ಮ ಮನಸ್ಸು ಆಕರ್ಷಿಸುತ್ತದೆ. ಸಮಯ ಆಯಿತೆಂದು ನಮ್ಮ ಚಿಕ್ಕಪ್ಪ ಹೇಳಿದಾಗ ಮನಸ್ಸಿಲ್ಲದ ಮನಸ್ಸಿನಿಂದ ಮನೆಗೆ ವಾಪಸು ಬಂದೆವು ಶಾಲೆ ಪ್ರಾರಂಭವಾಗಿ ಒಂದು ವಾರವಾದರೂ ಅದೇ ದೃಶ್ಯ ಮನಸ್ಸಿನಲ್ಲಿ ಮೂಡಿತ್ತು.

**- ವಿದ್ಯಾನಂದ ಎಂ.ಎಸ್.** (೯ನೇ ತರಗತಿ)
ಸಾಗರ

## ಪಟಾಕ್ಷಿ ಹಬ್ಬ

ರಜೆ ಎಂದರೆ ನನಗೆ ತುಂಬಾ ಇಷ್ಟ. ಈ ಸಲದ ರಜೆಯಲ್ಲಿ ನಾನು ಅನೇಕ ಐತಿಹಾಸಿಕ ಸ್ಥಳಗಳನ್ನು ನೋಡಲು ಹೋಗಿದ್ದೆ.

ನನ್ನ ತಂದೆಯವರ ಸ್ನೇಹಿತರ ಊರುಗಳಿಗೆ ಹೋಗಿದ್ದೆ. ನಮ್ಮ ತಾತ-ಅಜ್ಜ ಊರಿಗೆ ಹೋಗಿದ್ದೆ. ನಂತರ ರಜೆಯಲ್ಲಿ ಹಬ್ಬ ಇದ್ದ ಕಾರಣ ದಸರಾ ಹಬ್ಬದ ದಿನ ಎಲ್ಲರಿಗೂ ಬನ್ನಿ ಕೊಟ್ಟು ಬಂದಿರುವೆ. ನಂತರ ಬಂದ ದೀಪಾವಳಿ ಹಬ್ಬದಂದು ಪೂಜೆಯ ದಿನ ದೀಪದ ಹಬ್ಬದ ಜೊತೆ ಪಟಾಕ್ಷಿಗಳನ್ನು ಹಚ್ಚಿ ಆನಂದ ಪಟ್ಟಿರುವೆ.

**- ಸುರೇಶ ಜಿ.** (೪ನೇ ತರಗತಿ)
ಕನಕಗಿರಿ

## ರಂಗ ತರಬೇತಿ

ಹಿಂದಿನ ಎಲ್ಲಾ ರಜೆಗಳಂತೆ ಈ ವರ್ಷದ ದಸರಾ ರಜೆಯಾಗಿರಲಿಲ್ಲ. ಸಮುದಾಯ ಸಾಂಸ್ಕೃತಿಕ ಸಂಘಟನೆಯವರು ೬-೧೫ ವರ್ಷದ ಮಕ್ಕಳಿಗೆ ಹಮ್ಮಿಕೊಂಡಿದ್ದ ಮಕ್ಕಳ ರಂಗ ತರಬೇತಿ ಶಿಬಿರದಲ್ಲಿ ಭಾಗವಹಿಸಿದ್ದೆ. ತರಬೇತಿ ಶಿಬಿರ ೪-೧೦-೯೭ ರಿಂದ ೨೯-೧೦-೯೭ರ ವರೆಗೆ ನಡೆಯಿತು.

ರಂಗಭೂಮಿ ನಿರ್ದೇಶಕ ಮಾಲತೇಶ ಬಡಿಗೇರ್ ಅವರು ನಟನೆ, ಪ್ರಸಾದನ, ಚಿತ್ರಕಲೆ, ಮುಖವಾಡ ತಯಾರಿಕೆ, ನೃತ್ಯ ಸಂಗೀತ ಕುರಿತು ನೇರ ಅನುಭವ ನೀಡುವದರೊಂದಿಗೆ, ರಂಗಗುಚ್ಛ-ನಾಟಕ ಕಲಿಸಿದ್ದರು. 'ಒಂದು ಸಿಂಹದ ಕಥೆ' ನಾಟಕ ತುಂಬಾ ಚೆನ್ನಾಗಿ ಮೂಡಿಬಂತು. ಪಾಲಕರು-ಪೋಷಕರು ಸಿಕ್ಕಾಪಟ್ಟೆ ಖುಷಿ ವ್ಯಕ್ತಪಡಿಸಿದರು. ನಾನು ನಾಟಕದಲ್ಲಿ ಮುಖ್ಯ ಪಾತ್ರ ಸಿಂಹನಾಗಿ, ಅತ್ಯುತ್ತಮವಾಗಿ ಅಭಿನಯಿಸಿದೆ. ಪ್ರೇಕ್ಷಕರು ಬೆನ್ನು ತಟ್ಟಿದರು.

ನಾನು ಶಿಬಿರದ ಮೂಲಕ ಮಾತನಾಡುವುದನ್ನು ಕಲಿತೆ, ಶಬ್ದ ಭಂಡಾರ ಹೆಚ್ಚಿಸಿಕೊಂಡೆ. ಮುಜುಗರ-ಹೆದರಿಕೆ ಕಳಕೊಂಡೆ. ಪ್ರೀತಿ-ವಿಶ್ವಾಸದಿಂದ ಬದುಕುವದನ್ನು ಕಲಿತೆ.

**- ನವೀನ ಡಿ. ಬಡಿಗೇರ** (೬ನೇ ತರಗತಿ)
ಹರಪನಹಳ್ಳಿ

## ಲಗ್ನ ಪತ್ರಿಕೆಗಳಿಂದ ಗೊಂಬೆ

ನಾನು ಅಕ್ಟೋಬರ್ ರಜೆಯಲ್ಲಿ ಲಗ್ನ ಪತ್ರಿಕೆಗಳಿಂದ ವಿಧ ವಿಧವಾದ ಗೊಂಬೆಗಳನ್ನು ಮಾಡಿದೆನು. ನಾನು ರಜೆಯನ್ನು ಕ್ರಿಕೆಟ್ ಆಡುವುದು, ಟಿ.ವಿ. ನೋಡುವುದು ಮತ್ತು ಚುಟುಕ, ಬಾಲ ಮಂಗಳಗಳನ್ನು ಓದುವುದರ ಮೂಲಕ ಕಳೆದೆನು. ನಾನು ರಜೆಯಲ್ಲಿ ಶಾಲೆಯ ಪಾಠ ಪುಸ್ತಕಗಳನ್ನು ಓದಿದೆನು. ನಾವು ಬಲಮುರಿ ಮತ್ತು ಶಿವನ ಸಮುದ್ರಕ್ಕೆ ಪ್ರವಾಸ ಹೋಗಿದ್ದೆವು.

**- ಪಿ. ಅನಿಲ್‌ಕುಮಾರ್ ಭಟ್** (೯ನೇ ತರಗತಿ)
ಹೆಚ್. ಡಿ. ಕೋಟೆ

## ಕಥೆ-ಕವನ-ಚಿತ್ರ

ಅಕ್ಟೋಬರ್ ತಿಂಗಳ ರಜೆಯಲ್ಲಿ ನಾನು ಹೆಚ್ಚಾಗಿ ನನ್ನ ಸ್ನೇಹಿತರ ಜೊತೆ ಆಟ ಆಡುತ್ತಿದ್ದೆ. ಊರಿಗೆ ಹೋಗದೇ ಇದ್ದಿದ್ದರಿಂದ ಮನೆಯಲ್ಲಿ ಕೆಲವು ಪತ್ರಿಕೆಗಳನ್ನು ಓದುತ್ತಿದ್ದೆ. ಚಿತ್ರಗಳನ್ನು ಬಿಡಿಸಿ ಅದಕ್ಕೆ ಬಣ್ಣಗಳನ್ನು ಹಚ್ಚುತ್ತಿದ್ದೆ. ಕೆಲವು ಕಥೆ, ಕವನಗಳಂತಹ ಬರಹಗಳನ್ನು ಬರೆದು ಪತ್ರಿಕೆಗೆ ಕಳುಹಿಸುತ್ತಿದ್ದೆ.

ಕೆಲವೊಮ್ಮೆ ನಮ್ಮ ಮನೆಯಲ್ಲಿದ್ದ ಹಳೆಯ, ಬೇಡವಾದ ಸಾಮಾನುಗಳಿಂದ ಕೆಲವು ಹೊಸ ಹೊಸ ಪದಾರ್ಥಗಳನ್ನು ತಯಾರಿಸುತ್ತಿದ್ದೆ. ನನ್ನ ತಂದೆ-ತಾಯಿಗಳಿಗೆ ಸಹಾಯ ಮಾಡುತ್ತಿದ್ದೆ. ಹೊಸ ಹೊಸ ಗಿಡಗಳನ್ನು ಬೆಳೆಸುತ್ತಿದ್ದೆ. ಪರಿಸರ ರಕ್ಷಣೆ ಬಗ್ಗೆ ಸ್ವಲ್ಪ ತಿಳಿದುಕೊಂಡೆ. ಹೀಗೆ ನಾನು ನನ್ನ ರಜೆಯನ್ನು ಸಂತೋಷವಾಗಿ ಕಳೆದೆ.

**- ಬಿ.ಎನ್. ಪುಷ್ಪಲತಾ** (೮ನೇ ತರಗತಿ)
ಮೈಸೂರು

## ಶೃಂಗೇರಿ ನದಿಯಲ್ಲಿ ಮೀನು

ರಜೆಯಲ್ಲಿ ನಾನು ಬೆಳಗ್ಗೆ ೬ ಗಂಟೆಗೆ ಏಳುವುದಿಲ್ಲ. ಬುತ್ತಿ, ಚೀಲ ತಕೊಂಡು ಶಾಲೆಗೆ ಹೋಗುವುದಿಲ್ಲ. ಬರಿಯುವುದಕ್ಕೆ ಮಾತ್ರ ತುಂಬಾ ಇತ್ತು. ಬೇಗ ಬೇಗ ಬರೆದಿಟ್ಟು ತಿರುಗಾಡೋದಕ್ಕೆ ಹೋದೆನು. ತಿರುಗಾಟಕ್ಕೆ ಹೋಗೋದೆಂದರೆ ತುಂಬಾ ಇಷ್ಟ. ರಜೆಯ ಎಲ್ಲಾ ದಿನದಲ್ಲಿ ತಿರುಗಾಡೋದಕ್ಕೆ ಮಾವ ಬಿಡಲಿಲ್ಲ. ಸ್ವಲ್ಪ ದಿನ ಮಾತ್ರ ಪ್ರವಾಸ ಹೋಗಿದ್ದೆ. ಕುಂದಾಪುರದಲ್ಲಿರುವ ಅತ್ತೆ ಮನೆಗೆ ಹೋಗಿದ್ದೆ. ಅಲ್ಲಿಂದ ಮತ್ತೆ ಶೃಂಗೇರಿ, ಹೊರನಾಡು ಮತ್ತು ಕುದುರೆಮುಖಕ್ಕೆ ಹೋಗಿರುವೆನು. ಶೃಂಗೇರಿ ಹೊಳೆಯಲ್ಲಿ ದೊಡ್ಡ ದೊಡ್ಡ ಮೀನನ್ನು ನೋಡಿದೆ. ಇಲ್ಲಿಯ ತನಕ ಅಂಥ ಮೀನನ್ನು ನೋಡಿರಲಿಲ್ಲ. ಕುದುರೆಮುಖದಲ್ಲಿ ಹೂವಿನ ತೋಟವನ್ನು ನೋಡಿದೆ, ಅಲ್ಲಿ ಆಟ ಆಡಿದೆ, ನನ್ನ ಜೊತೆಯಲ್ಲಿ ಪುಟ್ಟನು ಇದ್ದನು. ಅವನ ಜೊತೆಯಲ್ಲಿ ತುಂಬಾ ಆಟ ಆಡಿದೆ. ಮತ್ತೊಂದು ದಿನ ಮರವಂತೆಗೆ ಹೋದೆವು. ಅಲ್ಲಿ ಸಮುದ್ರ ನೋಡಿ ತುಂಬಾ ಸಂತೋಷವಾಯಿತು.

**- ಧನ್ಯ ಟಿ.** (೪ನೇ ತರಗತಿ)
ಸುಳ್ಯ

# ಇದು 'ವಿನಯ'ವಂತರ ಕಾಲವಂತೆ!

○ ಕೇಶವ ನಾಡಕರ್ಣಿ

ಜನರ ಸ್ಮರಣಶಕ್ತಿ ದಿನೇದಿನೇ ಕ್ಷೀಣಿಸುತ್ತಿದೆ. ನಿನ್ನೆ ಇದ್ದವರಾರು ಎನ್ನುವುದೇ ನೆನಪಾಗುವುದಿಲ್ಲ. ಅವರ ಜಾಗದಲ್ಲಿ ಇಂದು ಇನ್ನೊಬ್ಬರು ಬಂದಿದ್ದಾರೆ. ಅವರಷ್ಟೇ ಗೊತ್ತು. ಸುಧಾರಾಣಿ ಅಮೆರಿಕಾಗೆ ಹಾರಿದ ಮಾರನೇ ದಿನವೇ ಆಕೆಯ ಹೆಸರು ಸ್ಮೃತಿಪಟಲವೆಂಬ ಕಂಪ್ಯೂಟರ್‌ನಿಂದ ಅಳಿಸಿಹೋಯಿತು. ಮಾಜಿ ನಾಯಕಿಯರ ಅವಸ್ಥೆ ಹೀಗೇ ಇರುವಾಗ ವಿನಯಾಪ್ರಸಾದ್ ಮಾತ್ರ ಇಂದಿಗೂ ಸುದ್ದಿಯಲ್ಲಿದ್ದಾರೆ. ಆಕೆ ಈಗ ನಾಯಕಿಯಲ್ಲ, ಪೋಷಕನಟಿಯಾಗಿಯೂ ಆಕೆಗೆ ಸಿಗುವ ಅವಕಾಶ ಅಷ್ಟರಲ್ಲೇ ಇದೆ. ಆದರೂ ಆಕೆಯ ಬಗ್ಗೆ ಜನ ಆಗಾಗ ಮಾತಾಡುತ್ತಾರೆ, ಅಂಥ ಸಂದರ್ಭವನ್ನು ಆಕೆ ಸೃಷ್ಟಿಸುತ್ತಾರೆ ಕೂಡಾ.

ಉದಾಹರಣೆಗೆ ವಿನಯಾ ಮೊನ್ನೆ ಉದಯ ಟೀವಿಯ ವಾರ್ಷಿಕೋತ್ಸವದಲ್ಲಿ ಹಾಜರಿದ್ದರು. ಆಕೆಗೆ ಯಾವ ಪ್ರಶಸ್ತಿಯೂ ಬಂದಿರಲಿಲ್ಲ. ಆದರೆ ಕಾರ್ಯಕ್ರಮದುದ್ದಕ್ಕೂ ವೇದಿಕೆ ಮೇಲೆ ಇದ್ದವರು ಇವರು ಮಾತ್ರ. ಯಾಕೆಂದರೆ ಕಾರ್ಯಕ್ರಮವನ್ನು ನಿರೂಪಿಸಿದವರೇ ಇವರು. ಸಂಜೆ ಮನೆಗೆ ಹೋಗಿ ಟೀವಿ ಆನ್ ಮಾಡಿದರೆ ಅಲ್ಲಿ ವಿನಯ ಕಾಣುತ್ತಾರೆ. ಅದ್ಯಾವುದೋ ಸೀರಿಯಲ್ ಇರಬಹುದು, ಅಥವಾ ಇನ್ನಾವುದೋ ಸಮಾರಂಭದ ಲೈವ್ ಪ್ರಸಾರವಿರಬಹುದು. ಅಷ್ಟೇ ಅಲ್ಲ, ಡಿಸ್ಕೋ ಸಂಸ್ಕೃತಿಗಷ್ಟೇ ಮೀಸಲಾಗಿರುವ 'ವಿ' ಚಾನೆಲ್‌ನಲ್ಲೂ ಕಳೆದ ಭಾನುವಾರ ವಿನಯಾ ಹಾಜರಾದಾಗ ವೀಕ್ಷಕರು ಬೆಚ್ಚಿಬಿದ್ದರು. ಭಾರತೀಯ ನಾರಿಗೆ ಕನ್ನಡಿಯಂತಿರುವ ವಿನಯಾ ಇಲ್ಲಿ ಬರುವುದೆಂದರೆ ಏನನ್ಯಾಯ ಎಂದು ಪರಿತಪಿಸಿದವರೂ ಇದ್ದರು. ಆದರೆ ಅದಕ್ಕೂ ಕಾರಣವಿಲ್ಲದೇ ಇರಲಿಲ್ಲ. ವಿನಯಾ ಗಾಯಕಿ. ಇತ್ತೀಚೆಗಷ್ಟೇ ದಾಸರಪದದ ಎರಡು ಕ್ಯಾಸೆಟ್‌ಗಳಿಗೆ ಕಂಠ ನೀಡಿದ್ದಾರೆ. ಈ ಪೈಕಿ ಒಂದು ಕ್ಯಾಸೆಟ್ ಬಿಸಿದೋಸೆಯಂತೆ ಖರ್ಚಾಯಿತು ಅಂತ ಮ್ಯಾಗ್ನಾಸೌಂಡ್ ಕ್ಯಾಸೆಟ್ ಕಂಪೆನಿಯವರೇ ಹೇಳುತ್ತಾರೆ.

ಏನಾದರೂ ಮಾಡುತಿರು ತಂಗಿ ಎಂದು ಕವಿವಾಣಿಯನ್ನು ತನ್ನ ಅನುಕೂಲಕ್ಕೆ ತಕ್ಕಂತೆ ಬದಲಾಯಿಸಿಕೊಂಡಿರುವ ಈ ವಿನಯವಂತೆ ಕಳೆದ ೮ ವರ್ಷಗಳಿಂದ ತನ್ನ ಜನಪ್ರಿಯತೆಯ ಲೆವೆಲ್‌ನ್ನು ಕಾಪಾಡಿಕೊಂಡು ಬಂದಿದ್ದಾರೆ. ಗ್ಲಾಮರ್‌ನ್ನೇ ನೆಚ್ಚಿಕೊಂಡಿರುವ ಚಿತ್ರರಂಗದಲ್ಲಿ ವಿನಯಾರಂಥ ವಿದ್ಯಾವಂತೆ, ಬುದ್ಧಿವಂತೆ ಹೆಣ್ಣುಗಳೊಬ್ಬಳು ಇಷ್ಟು ವರ್ಷ ಏಗಿದ್ದೇ ಒಂದು ಪವಾಡ. ಮೂಲತಃ ಉಡುಪಿಯವರಾದ ಈಕೆ ಬಿ.ಕಾಂ. ಪದವೀಧರೆ. ಆಗಲೇ ಅಮೆಚ್ಯೂರ್ ಥಿಯೇಟರ್‌ನಲ್ಲಿ ಆಸಕ್ತಿವಹಿಸಿ, ಸಂಕ್ರಾಂತಿ, ಚೂ ಮಂಥರ್‌ನಂಥ ನಾಟಕಗಳಲ್ಲಿ ಗಂಭೀರ ಪಾತ್ರಗಳಲ್ಲಿ ಅಭಿನಯಿಸಿ ಮೆಚ್ಚುಗೆ ಗಳಿಸಿದವರು. ಈ ಮಧ್ಯೆ ಜಿ.ವಿ.ಅಯ್ಯರ್ ಅವರ ಕಣ್ಣಿಗೆ ಬಿದ್ದು ಅವರ ಮಧ್ವಾಚಾರ್ಯ ಚಿತ್ರದಲ್ಲಿ ಪುಟ್ಟ ಪಾತ್ರದಲ್ಲಿ ನಟಿಸಿದರು. ಇದು ಇವರ ಬೆಂಗಳೂರು ಯಾತ್ರೆಗೆ ಮುನ್ನುಡಿಯಾಯಿತು. ಅಯ್ಯರ್ ಶಿಷ್ಯ ಕೆ.ಆರ್. ಪ್ರಸಾದ್‌ಗೆ ವಿನಯಾ ಸ್ವಭಾವ ಹಿಡಿಸಿತು. ಈ ಪರಿಚಯ, ಪ್ರೇಮವಾಗಿ ಮದುವೆಯಲ್ಲಿ ಮುಕ್ತಾಯ ಕಂಡಿತು. ಈ ಮದುವೆಯಿಂದ ತನ್ನ ರಂಗಬದುಕಿಗೂ ಸಹಾಯವಾಗಬಹುದು ಎಂಬ ವಿನಯಾ ನಿರೀಕ್ಷೆ ತಲೆಕೆಳಗಾಗಲು ಹೆಚ್ಚುಕಾಲ ಹಿಡಿಯಲಿಲ್ಲ. ಅಯ್ಯರ್ ಮನೆಯಲ್ಲೇ ಠಿಕಾಣಿ ಹೂಡಿದ್ದ ಪ್ರಸಾದ್ ವೃತ್ತಿಯಲ್ಲಿ ಸಂಕಲನಕಾರರಾದರೂ ಅಷ್ಟೇನೂ ಬಿಜಿಯಾಗಿರಲಿಲ್ಲ. ಜೊತೆಗೆ ಅಯ್ಯರ್ ಪ್ರಭಾವಳಿಯಿಂದ ಹೊರಗೆ ಬರುವಂತ ಸ್ವಂತಿಕೆಯೂ ಅವರಲ್ಲಿರಲಿಲ್ಲ. ಹೀಗೆ ಉಡುಪಿಯಲ್ಲಿ ಸ್ವಚ್ಛಂದವಾಗಿ ಹಾರಾಡುತ್ತಿದ್ದ ಚಿಟ್ಟೆಗೆ ಬೆಂಗಳೂರಲ್ಲಿ ಗೃಹಬಂಧನದ ಅನುಭವವಾಯಿತು.



**ವಿನಯಾ ಪ್ರಸಾದ್ ಮೊನ್ನೆ ಉದಯ ಟೀವಿಯ ವಾರ್ಷಿಕೋತ್ಸವದಲ್ಲಿ ಹಾಜರಿದ್ದರು. ಆಕೆಗೆ ಯಾವ ಪ್ರಶಸ್ತಿಯೂ ಬಂದಿರಲಿಲ್ಲ. ಆದರೆ ಕಾರ್ಯಕ್ರಮದುದ್ದಕ್ಕೂ ವೇದಿಕೆ ಮೇಲೆ ಇದ್ದವರು ಇವರು ಮಾತ್ರ!**

ವಿನಯಾರಲ್ಲಿ ಆರಂಭದಿಂದಲೂ ಮನೆ ಮಾಡಿದ್ದ ಒಂದು ಗುಣವೆಂದರೆ ಛಲ. ಪ್ರಸಾದ್ ಪತ್ನಿಯಾದ ಬಳಿಕ ಆಕೆ ಇನ್ನಷ್ಟು ಗಟ್ಟಿಯಾದರು. ಒಂದು ದಿನ ಪತಿಯ ಮನವೊಲಿಸಿ ಅಯ್ಯರ್ ನೆರಳಿಂದ ಈಚೆ ಬಂದು, ತಮ್ಮದೇ ಸಂಸಾರವನ್ನು ಹೂಡಿದರು. ಪುಟ್ಟ ಬಾಡಿಗೆ ಮನೆಯಲ್ಲಿ ಕಷ್ಟದ ದಿನಗಳು ಆರಂಭವಾದವು. ಪ್ರಸಾದ್ ಪ್ರತಿಭಾನ್ವಿತರಾದರೂ ಕುಡಿತದ ಚಟ ಅವರ ಅರ್ಧ ಪ್ರತಿಭೆಯನ್ನು ನುಂಗಿಹಾಕಿತ್ತು. ಜೊತೆಗೆ ಪತ್ನಿ ಸಾರ್ವಜನಿಕ ಬದುಕಿಗೆ ಕಾಲಿಡಬಾರದು ಎಂಬ ಕಂಡೀಷನ್. ಹೀಗಾಗಿ ವಿನಯಾಗೆ ಕಲಾಕ್ಷೇತ್ರದ ಹಾದಿ ಗೊತ್ತಾಗಲೇ ಇಲ್ಲ. ಗಂಡ, ಮನೆ, ಮಗು-ವರ್ತುಲದಿಂದ ಈಚೆ ಬರಲು ಆಕೆ ನಡೆಸಿದ ಪ್ರಯತ್ನಕ್ಕೆ



**ಕನ್ನಡದ ನಾಯಕಿಯರ ಪೈಕಿ ಶುದ್ಧ ಕನ್ನಡದಲ್ಲಿ ಸಂಭಾಷಣೆ ಹೇಳುವ ಏಕೈಕ ನಟಿಯೆಂದರೆ ವಿನಯಾ.**

ನೆರವಾಗಿದ್ದು ಟೀವಿ ಮಾಧ್ಯಮ. ಅಗಲ ಕಣ್ಣಿನ, ಉದ್ದ ಮೂಗಿನ ಚೆಲುವೆ ದಿಢೀರ್ ಅಂತ ಟೀವಿ ಸ್ಟಾರ್ ಆಗಿಬಿಟ್ಟರು. ೯೧ರಲ್ಲಿ ಈಕೆ ೬೦ ಕಂತುಗಳಲ್ಲಿ ಕಾಣಿಸಿಕೊಂಡರು. ಇದರಲ್ಲೂ 'ಬದುಕಿನಲ್ಲಿ ಒಂದು ತಿರುವು' ಎಂಬ ಧಾರಾವಾಹಿ ವಿನಯಾ ಬದುಕಿಗೆ ನಿಜವಾದ ತಿರುವನ್ನೇ ನೀಡಿತು. ಫಣಿರಾಮಚಂದ್ರರ 'ಗಣೇಶನ ಮದುವೆ' ಚಿತ್ರದ ನಾಯಕಿ ಪಾತ್ರಕ್ಕೆ ಈಕೆ ಆಯ್ಕೆಯಾದರು.

ಸೀರಿಯಲ್‌ಗಳಲ್ಲಿ ವಿನಯಾ ನಿರ್ವಹಿಸುತ್ತಿದ್ದ ಪಾತ್ರಗಳೆಲ್ಲಾ ಮನೆಗಾಗಿ ತ್ಯಾಗಮಾಡುವ ಹಿರಿಮಗಳದ್ದು ಅಥವಾ ಹಿರಿಸೊಸೆಯದ್ದು. ಆಕೆಯ ದೈಹಿಕ ನಿಲುವು ಕೂಡಾ ಇಂಥ ಪಾತ್ರಗಳಿಗೆ ಹೊಂದಿಕೊಳ್ಳುತ್ತದೆ. ಸೀರೆಯಲ್ಲಿ ಗೌರಮ್ಮನಂತೆ ಕಾಣಿಸುವ ವಿನಯಾಗೆ ಚೂಡಿದಾರ್ ಅಥವಾ ಜೀನ್ಸ್‌ನಂಥ ಆಧುನಿಕ ವೇಷಗಳು ಒಗ್ಗೋಲ್ಲ. ಗಣೇಶನ ಮದುವೆ ಚಿತ್ರದಲ್ಲಿ ಫಣಿ ಈಕೆಗೆ ಜಗಳಗಂಟಿ ಇಮೇಜನ್ನು ನೀಡಿದರು. ಅನಂತ್‌ರಂಥ ಅಭಿಜಾತ ಕಲಾವಿದನಿಗೆ ಸರಿಸಮನಾಗಿ ನಟಿಸಿದ ವಿನಯಾ ಮಧ್ಯವರ್ಗದ ಹೆಂಗಸರ ಕಣ್ಮಣಿಯಾದರು. ಆ ಪಾತ್ರ ಎಷ್ಟು ಜನಪ್ರಿಯವಾಯಿತು ಅಂದರೆ ವಿನಯಾಗೆ ಬಾಡಿಗೆ ಮನೆ ಸಿಗೋದೇ ಸಮಸ್ಯೆಯಾಯಿತು. ಈಕೆಗೆ ಮನೆ ಕೊಟ್ಟರೆ ಎಲ್ಲಿ ಜಗಳವಾಡುತ್ತಾಳೋ ಎಂಬ ಭಯ ಮಾಲಿಕರದ್ದು. ಇನ್ನೊಂದೆಡೆ ವಿನಯಾರನ್ನು ಬೇರೆ ಪಾತ್ರದಲ್ಲಿ ಪ್ರೇಕ್ಷಕರು ಒಪ್ಪಿಕೊಳ್ಳಲೇ ಇಲ್ಲ.

ಕನ್ನಡದ ನಾಯಕಿಯ ಪೈಕಿ ಶುದ್ಧ ಕನ್ನಡದಲ್ಲಿ ಸಂಭಾಷಣೆ ಹೇಳುವ ಏಕೈಕ ನಟಿಯೆಂದರೆ ವಿನಯಾ. ಇದಕ್ಕೆ ಮುಖ್ಯ ಕಾರಣ ಇವರು ಬೆಳೆದು ಬಂದ ವಾತಾವರಣ, ವಿದ್ಯಾರ್ಹತೆ ಹಾಗೂ ಓದು. ಯಾವುದೇ ಚಿತ್ರದ ಸೆಟ್‌ನಲ್ಲೂ ಇತರೇ ಕಲಾವಿದರು ಇಸ್ಪೀಟಾಟದಲ್ಲೋ, ಕಾಡುಹರಟೆಯಲ್ಲೋ ಮಗ್ನರಾಗಿದ್ದರೆ ವಿನಯಾ ತನ್ನ ಪಾಡಿಗೆ ಪುಸ್ತಕಕ್ಕೆ ಅಂಟಿಕೊಂಡು ಕುಳಿತಿರುತ್ತಾರೆ. ಇವರಿಗೆ ಬರವಣಿಗೆಯೂ ಪ್ರಿಯವಾದ ಕೆಲಸ. ಕೆಲವು ತಿಂಗಳಿಂದ ಸಿನಿಮಾ ಮಾಸಪತ್ರಿಕೆಯೊಂದಕ್ಕೆ ವಿನಯಾ ಲೇಖನಗಳನ್ನು ಬರೆಯುತ್ತಿದ್ದಾರೆ. ಅದು ಸಿನಿಮಾಗಷ್ಟೇ ಮೀಸಲಾಗಿಲ್ಲ, ಬದುಕಿನ ಹತ್ತಾರು ಮುಖಗಳನ್ನು ತಮ್ಮದೇ ಅನುಭವದ ಹಿನ್ನೆಲೆಯಲ್ಲಿ ಹೇಳುವ ಪ್ರಯತ್ನ. ಅಲ್ಲಲ್ಲಿ ಫಿಲಾಸಫಿಯ ಸ್ಪರ್ಶವೂ ಇದೆ.

ವಿನಯಾ ಸಿನಿಮಾದಲ್ಲಿ ನಟಿಸೋದು ಅವರ ಪತಿಗೆ ಇಷ್ಟವಿಲ್ಲ ಎಂಬ ಸುದ್ದಿ ಪ್ರಚಲಿತವಿದ್ದ ಕಾಲದಲ್ಲೇ ಇವರು ಎರಡು ಮಲೆಯಾಳಂ ಚಿತ್ರಗಳಲ್ಲೂ ನಟಿಸಿದರು. ಅಶ್ಲೀಲ ದೃಶ್ಯಗಳಲ್ಲಿ ನಟಿಸಲಾರೆ ಎನ್ನುವುದು ಇವರ ಕಂಡೀಷನ್. ಅಶ್ಲೀಲದ ಮಾತು ಇರಲಿ, ಹೀರೋ-ಹೀರೋಯಿನ್ ತಬ್ಬಿಕೊಳ್ಳುವ ದೃಶ್ಯಗಳೂ ಈಕೆಯ ಚಿತ್ರಗಳಲ್ಲಿ ಇರುತ್ತಿರಲಿಲ್ಲ. ಪ್ರಸಾದ್ ಒತ್ತಡದಿಂದಾಗಿ ವಿನಯಾ ಇಷ್ಟೊಂದು ಮಡಿ ತೋರುತ್ತಿದ್ದಾರೆ ಎಂದು ಆಡಿಕೊಳ್ಳುತ್ತಿತ್ತು ಗಾಂಧಿನಗರ. ಇಂಥ ಸಂದರ್ಭದಲ್ಲೇ ಪ್ರಸಾದ್ ಸಾವನ್ನಪ್ಪಿದರು. ಅನಂತರದ ಬದುಕು ಯಾವುದೇ ಚಿತ್ರದ ಮಧ್ಯಂತರದ ನಂತರದ ಕಥೆಯಂತೆಯೇನೂ ಸಾಗಿಲ್ಲ.

ಪತಿಯ ಸಾವಿನ ನಂತರ ವಿನಯಾ ಇನ್ನಷ್ಟು ಗಟ್ಟಿಯಾದರು. ಮಗುವಿನ ಭವಿಷ್ಯದ ಜೊತೆಗೇ ತನ್ನ ಭವಿಷ್ಯವೂ ಬಾಯ್ತೆರೆದು ನಿಂತಿದ್ದು ಆಕೆಗೆ ಅರಿವಿತ್ತು. ಹಾಗಿದ್ದರೂ ಪಾತ್ರಗಳ ಮಟ್ಟಿಗೆ ರಾಜಿಯಾಗಲಿಲ್ಲ. ಆ ಹೊತ್ತಿಗೆ ನಾಯಕಿ ಪಾತ್ರಕ್ಕೆ ವಿನಯಾ ಹೊಂದಿಕೊಳ್ಳೋಲ್ಲ ಎಂದು ಚಿತ್ರರಂಗ ನಿರ್ಧರಿಸಿಯಾಗಿತ್ತು. ಅಮ್ಮನ ಪಾತ್ರಕ್ಕೆ ಇನ್ನೂ ಚಿಕ್ಕ ವಯಸ್ಸು. ಮಿಕ್ಕಂತೆ ಈಕೆಯ ಪ್ರತಿಭೆಗೆ ಸವಾಲಾಗಬಲ್ಲ ಗಂಭೀರ ಅಥವಾ ತೂಕದ ಪಾತ್ರಗಳು ಕನ್ನಡ ಚಿತ್ರಗಳಲ್ಲಿರುವುದೇ ಇಲ್ಲ. ಈ ಮಧ್ಯೆ ಮಲೆಯಾಳಂ, ತಮಿಳು, ತೆಲುಗು, ಚಿತ್ರರಂಗದಲ್ಲೂ ಒಂದು ಸುತ್ತು ಹಾಕಿ ವಾಪಸ್ ಬಂದು ಕುಳಿತಾಗಿತ್ತು. ಇಲ್ಲಿ ಸಿಗ್ತಾ ಇದ್ದದ್ದು ಅತ್ತಿಗೆ ಪಾತ್ರಗಳು. ಮಂಗಲಸೂತ್ರ ಚಿತ್ರದಲ್ಲಿ ಈಕೆ ವಿಷ್ಣು ಮುಂದೆ ನಾಯಕಿಯಾಗಿದ್ದರೂ ಜನ ಸ್ವೀಕರಿಸಲಿಲ್ಲ. ಹಾಡಿ, ಕುಣಿಯುವ ಪಾತ್ರಗಳಲ್ಲಿ ಈಕೆ ವಿಚಿತ್ರವಾಗಿ ಕಾಣಿಸ್ತಾರೆ ಎಂಬ ದೂರು.

ಅಭಿನಯದ ಮಾತು ಬಂದಾಗ ವಿನಯಾ ಸಮಸ್ಯೆಯೆಂದರೆ ತನ್ನ ಪಾತ್ರ ಸಹಜವಾಗಿರಬೇಕೂಂತ ಉದ್ದೇಶಪೂರ್ವಕವಾಗಿ ಪ್ರಯತ್ನಿಸೋದು. ಅಭಿನಯ ಕೃತಕವಾಗೋದು ಆವಾಗಲೇ. ಸಹಜನಟಿಗೂ ಸಹಜವಾಗಬೇಕೂಂತ ಪ್ರಯತ್ನಿಸುವ ನಟಿಗೂ ವ್ಯತ್ಯಾಸವಿದೆ. ಉದಾಹರಣೆಗೆ ಭೂಮಿಗೀತದಂತ ಚಿತ್ರದಲ್ಲಿ ವಿನಯಾಗೆ ಸಿಕ್ಕಿದ ಪಾತ್ರ ಸಾಕಷ್ಟು ಗಟ್ಟಿಯಾಗಿದೆ. ಕಾಡಿನ ಮಕ್ಕಳನ್ನು ಸ್ಥಳಾಂತರಿಸುವುದಕ್ಕೆ ಶಪಥಮಾಡಿರುವ ಅಧಿಕಾರಿಯ ಪತ್ನಿಯ ಪಾತ್ರ. ಚಿತ್ರದಲ್ಲಿ ಈ ಪಾತ್ರ ತನ್ನ ಪತಿಯ ಇಷ್ಟಕ್ಕೆ ವಿರುದ್ಧವಾಗಿ ವರ್ತಿಸುತ್ತದೆ. ವಿನಯಾ ಅಭಿನಯ ಫಾರ್ಮುಲಾ ನಟನೆಗಿಂತ ಭಿನ್ನವಾಗಿರಲಿಲ್ಲ. ಇದೇ ಅಪೂರ್ಣತೆ ವಿನಯಾರ ಇತರೇ

ಅಭಿರುಚಿಗಳಲ್ಲೂ ಕಾಣಿಸುತ್ತದೆ. ಈಕೆಯ ಕಂಠ ಚೆನ್ನಾಗಿದೆ, ಆದರೆ ಈಕೆಯ ಗಾಯನದಲ್ಲಿ ವೈವಿಧ್ಯದ ಕೊರತೆಯಿದೆ. ಅಚ್ಚಕನ್ನಡದಲ್ಲಿ ಮಾತಾಡುವ ಈಕೆ ಯಾವುದೇ ಕಾರ್ಯಕ್ರಮವನ್ನು ನಿರೂಪಿಸಬಲ್ಲರು. ಅದು ಅಚ್ಚುಕಟ್ಟಾಗಿರುತ್ತದೆಯೇ ವಿನಾ ರುಚಿಗಟ್ಟಾಗಿರುವುದಿಲ್ಲ. ಬರವಣಿಗೆಯಲ್ಲೂ ವಿಷಯವೇನೋ ಗಂಭೀರವಾಗಿರುತ್ತದೆ, ಒಣಶೈಲಿಯದ್ದೇ ಸಮಸ್ಯೆ.

ಕಳೆದ ೮ ವರ್ಷಗಳಲ್ಲಿ ವಿನಯಾ ನಟಿಸಿದ ಚಿತ್ರಗಳ ಸಂಖ್ಯೆ ೫೦ ದಾಟಿದೆ. ಈ ಪೈಕಿ ನೆನಪಲ್ಲುಳಿಯುವ ಪಾತ್ರಗಳೆಂದರೆ ಗಣೇಶನ ಮದುವೆಯ ಜಗಳಗಂಟಿ ಹಾಗೂ ಯಾರಿಗೂ ಹೇಳ್ಬೇಡಿ ಚಿತ್ರದಲ್ಲಿ ಸ್ವಂತ ಮನೆಗಾಗಿ ಹಂಬಲಿಸುವ ಹೆಣ್ಣಿನ ಪಾತ್ರ. ಈಕೆಯ ಅಗಲ ಕಂಗಳೇ ಕ್ಲೋಸ್‌ಅಪ್‌ನಲ್ಲಿ ಅನಾನುಕೂಲವಾಗಿ ಪರಿಣಮಿಸಿದ್ದೂ ಉಂಟು. ಇಂದಿಗೂ ಟೀವಿ ಸೀರಿಯಲ್‌ಗಳೇ ವಿನಯಾರಂಥ ಬುದ್ಧಿವಂತೆ, ವಿದ್ಯಾವಂತ, ಸುಸಂಸ್ಕೃತ ನಟಿಗೆ ಹೇಳಿ ಮಾಡಿಸಿದಂತಿದೆ. ಆದರೆ ವಿನಯಾ ಬದುಕಿನ ಕ್ಯಾನ್‌ವಾಸ್ ಈಗ ಎಲ್ಲೆಲ್ಲೋ ಹರಡಿಕೊಂಡಿದೆ. ಅದಕ್ಕೊಂದು ಸ್ಪಷ್ಟ ಆಕಾರ ಸಿಗುವ ತನಕ ಆಕೆ ಬರೀ ಸುದ್ದಿಯಲ್ಲಿರುತ್ತಾರೆ ಅಥವಾ ಚಾಲ್ತಿಯಲ್ಲಿರುತ್ತಾರೆ. ವ್ಯಾಖ್ಯಾನಕ್ಕೆ ಸಿಗದ ಅಸಂಗತ ಚಿತ್ರದಂತೆ. ಇನ್ನೂ ಮೇಲೇರುವ ಸಾಮರ್ಥ್ಯವಂತೂ ಆಕೆಗಿದೆ. ಅದು ಆಕೆಯನ್ನು ಮೆಚ್ಚುವ ಹೆಣ್ಮಕ್ಕಳ ಆಸೆಯೂ ಹೌದು.

●


**ಸಲಹೆ**

*ನಿನಗೆ ತಲೆ*
*ಇರುವುದಾದರೆ*
*ಗೆಳೆಯ -*
*ಓಡಿಸು*
*ಹೆಲ್ಮೆಟ್ ಧರಿಸಿ*
*ಗಾಡಿಯ,*
*ಇಲ್ಲವಾದರೆ*
***Hell-Meet***
*ನಿಶ್ಚಯ*

**- ಪ್ರಭಾಕರ ವಂಡ್ಸೆ**

## ರಂಗನಟ

# ಉಲುವತ್ತಿ ವೀರಣ್ಣ



**ಈ**ಗಿನ್ನೂ ರಂಗಭೂಮಿ ಮತ್ತು ರಂಗ ಕರ್ಮಿಗಳಿಗೆ ಒಲವು ಉಳಿದಿರುವ ಸಂದರ್ಭ. ಆದರೂ ಗ್ರಾಮಾಂತರದ ಅನೇಕ ರಂಗಭಾಗಿಗಳು ಸರಿಯಾಗಿ ಗುರುತಿಸಲ್ಪಡಲಿಲ್ಲ. ಅಂಥವರಲ್ಲಿ ರಂಗನಟ ಎಚ್.ಎಸ್.ವೀರಣ್ಣನವರೂ ಒಬ್ಬರು.

ಬಿಸಿಲ ಬಳ್ಳಾರಿಯ ಹಗರಿಬೊಮ್ಮನಹಳ್ಳಿಗೆ ಸೇರಿದ ಉಲುವತ್ತಿ ಗ್ರಾಮ ಇವರ ಹುಟ್ಟೂರು. ಮುಲ್ಕಿವರೆಗಿನ ಓದು ಇವರದು. ಹಣ್ಣು ಹಾಗಲಕಾಯಿಯಂಥ ಇವರ ದೇಹಕ್ಕೀಗ ಎಪ್ಪತ್ತು ಮೀರಿದ ವಯಸ್ಸು. ರಂಗ ಚಟುವಟಿಕೆಗಳಲ್ಲಿ ಈಗಲೂ ಉಳಿದಿರುವುದು ಇವರ ಮನಸ್ಸು.

ಹದಿನಾರರ ಹರೆಯದಲ್ಲಿ ಬಬ್ರುವಾಹನ ಪಾತ್ರದ ಯಶಸ್ವಿ ನಿರ್ವಹಣೆಯೊಂದಿಗೆ ರಂಗಪ್ರವೇಶ. ಅಂದಿನ ಪದ್ಧತಿಯ ಅನುಸಾರ ನಾಟಕಗಳಲ್ಲಿಯ ಸಂಗೀತದ ನಿರ್ವಹಣೆಗಾಗಿಯೇ ಸವಣೂರು ಲಿಂಗಪ್ಪ ಗವಾಯಿಗಳಲ್ಲಿ ಐದು ವರ್ಷ ಸಂಗೀತ ಕಲಿಕೆ. ಈ ಮೂಲಕ ಯಮನ್, 'ಘಾಪ, ಭೀಮಪಲಾಸ್, ಚಾಂದ್, ಪಟದೀಪ್ ಮುಂತಾದ ರಾಗಗಳ ಮನನ.

ಸಮೀಪದ ಚಿಮ್ನಳ್ಳಿ ಜಾತ್ರೆಗೆ ಬರುವ ನಾಟಕ ಕಂಪನಿಗಳು, ಚಿತ್ತರಗಿ ಕಂಪನಿ, ಚಿಂದೋಡಿ ವೀರಪ್ಪನವರ ಕಂಪನಿ ಮುಂತಾದವುಗಳಲ್ಲಿ ಕಲಾಸೇವೆಯ ಕೈಂಕರ್ಯ. ನಾಟಕದ ಗೀಳು ಇವರ ಬಾಳನ್ನು ಹಸನು ಮಾಡದಿದ್ದರೂ ಈ ಭಾಗದಲ್ಲಿ ಸಾಕಷ್ಟು ಹೆಸರು ತಂದು ಕೊಟ್ಟಿರುವುದಂತೂ ನಿಜ ಸಂಗತಿ.

ಅಶ್ವತ್ಥಾಮ, ಅರ್ಜುನ, ಬಬ್ರುವಾಹನ, ಶಕುನಿ, ಕೃಷ್ಣ, ವೇಮಣ್ಣ, ಮಲ್ಲಿಕಾರ್ಜುನ, ಬಸವೇಶ್ವರ, ರಾಮರಾಯ ಹೀಗೆ ಪೌರಾಣಿಕ ಸಾಮಾಜಿಕ ನಾಟಕಗಳ ಹತ್ತು ಹಲವು ಪಾತ್ರಗಳಲ್ಲಿ ಸಂಚರಿಸಿದರೂ ಪ್ರೇಕ್ಷಕಗಣ ಒಪ್ಪಿಕೊಂಡದ್ದು ಇವರ ಅಭಿನಯದ 'ಶಕುನಿ' ಪಾತ್ರ.

ಹೆಸರಾಂತ ನಟರಾದ ಎಲಿವಾಳ ಸಿದ್ಧಯ್ಯ ಸ್ವಾಮಿ, ದುರ್ಗಾದಾಸ್, ಏಣಗಿ ಬಾಳಪ್ಪ, ಖಾಸಿಂ ಸಾಬ್, ಜೋಳದ ರಾಶಿ ದೊಡ್ಡನಗೌಡರು, ಚಿಂದೋಡಿ ಲೀಲಾ, ಧಾರವಾಡ್ಕರ್, ಸುಭದ್ರಮ್ಮ ಮನ್ಸೂರ್ ಇವರುಗಳ ಜೊತೆ ಅಭಿನಯಿಸಿದ ಹೆಗ್ಗಳಿಕೆ ಇವರಿಗಿದೆ.

ವೀರಣ್ಣನವರು ಕಲಾವಿದರ ಗುಣಕ್ಕೆ ಅಳವಟ್ಟವರು. ಅವರ ಸರಳ ಸಜ್ಜನಿಕೆಗಳು ಪ್ರೇಕ್ಷಕರ ಸೌಜನ್ಯಕ್ಕೆ ಪಾತ್ರವಾಗಿವೆ. ನಟನೆಯೊಂದಿಗೆ ಅವರು ಬೆಳೆಸಿಕೊಂಡಿರುವ ಇನ್ನೊಂದು ಆಸಕ್ತಿ ಎಂದರೆ ಹಳ್ಳಿಗಾಡಿನ ಜನತೆಗೆ ನಾಟಕಗಳನ್ನು ಕಲಿಸುವುದು. ಅನೇಕ ಊರುಗಳನ್ನು ತಿರುಗಿ ನಾಟಕಗಳನ್ನು ಕಲಿಸಿ ಪ್ರದರ್ಶಿಸಿದ ಪ್ರಯೋಗಗಳ ಸಂಖ್ಯೆ ಸಾವಿರಾರು. ಹಳ್ಳಿಗರ ಜೀವನಮಟ್ಟಕ್ಕೆ ಹೊಂದಿಕೊಂಡು ಅವರು ಕೊಟ್ಟ ಕಡಿಮೆ ಸಂಭಾವನೆಯಲ್ಲೇ ಜೀವನ ಕ್ರಮಿಸುವ ಇವರು ತಮ್ಮ ಕೊನೆಯ ಗಳಿಗೆಯ ಭದ್ರತೆಗಾಗಿ ಏನನ್ನೂ ಗಳಿಸಿದವರಲ್ಲ. (ಅವರ ಅಭಿಮಾನಿಗಳು, ಶಿಷ್ಯರನ್ನು ಬಿಟ್ಟು)

ಆದರೇನಂತೆ ! ಸಮಾಜ ಮತ್ತು ಸರಕಾರಗಳು ಕಲಾವಿದರ ಬಗ್ಗೆ ಆಲೋಚಿಸುವಂತಾಗಬೇಕು. ಅವರನ್ನು ನೋಡಿಕೊಳ್ಳುವ ಪದ್ಧತಿ ಕ್ರಮಬದ್ಧಗೊಳಿಸಬೇಕು. ಇವರ ಶಿಷ್ಯರಿಗೆ ಈಗ ಮಾಸಾಶನ ಬರುತ್ತಿದೆ. ಆದರೆ ವೀರಣ್ಣನವರಿಗೆ ಇಲ್ಲವೇ? ಅಕಾಡೆಮಿಗಳು ತಮ್ಮ ಕಾರ್ಯಭಾರಗಳನ್ನು ವಿಸ್ತರಿಸಿಕೊಂಡು ವೀರಣ್ಣನವರಂಥ ಹಳ್ಳಿಗಾಡಿನ ಅನೇಕ ನೈಜ ಕಲಾವಿದರಿಗೆ ಸಹಾಯ ಮಾಡುವ, ಮಾಸಾಶನ ಕೊಡಿಸುವ ಪರಂಪರೆಯನ್ನು ಗಟ್ಟಿಗೊಳಿಸಬೇಕು.

○ **ಮೇಟಿ ಕೊಟ್ರಪ್ಪ**, ಬಸರಕೋಡು


ನಿನ್ನಹಾಗೆ ಪಕ್ಷಾಂತರಿ ಅಲ್ಲ, ನಾನು ಐದುವರ್ಷದ ಹುಡುಗನಿದ್ದಾಗ "ಇಂದಿರಾ ಕಾಂಗ್ರೆಸ್" ಸೇರಿದೆ. ಅಲ್ಲೇ ಇದ್ದೀನಿ ಇನ್ನೂ...
50ನೇ ಸ್ವಾತಂತ್ರ್ಯೋತ್ಸವದ ಈ ವರ್ಷದಲ್ಲಿ ನನ್ನನ್ನು ಚುನಾವಣೇಲಿ ಅಭ್ಯರ್ಥಿಯಾಗಿ ನಿಲ್ಲಿಸಿದ್ದೀರ... ಇರಿ, ಹೆಂಡತೀನ ಕೇಳಿ ಹೇಳ್ತೀನಿ...
ಮಂತ್ರಿ ಆಗಿದ್ದಾಗ ಯಾವುದಾದರೂ ರೋಗ ಬರಿಸಿಕೊಳ್ಳಿ ಅಂದ್ರೆ ಕೇಳಲಿಲ್ಲ. ಚಿಕಿತ್ಸೆಗೆ ಅಂತ ಪರದೇಶಕ್ಕೆ ಹೋಗಬಹುದಾಗಿತ್ತು.. ನೋಡಾಕೆ
ಮಾಜಿ ಮಂತ್ರಿ
ನಿದ್ದೆ ಬರಲ್ಲವಾ? ಮತ್ತೆ ಆರಿಸಿ ಬಂದು ಪಾರ್ಲಿಮೆಂಟಿಗೆ ಹೋಗುವವರೆಗೂ ಈ ರೋಗ ವಾಸಿಯಾಗಲ್ಲ..
SONIA
ಕಾಂಗ್ರೆ
ಬೆಂಬಲ ವಾಪಸ್



ಈ ವರೆಗೆ ನಿಮಗೆ ಆರೋಗ್ಯ
ಅಥವಾ ಮಿತವ್ಯಯ
ಮಾತ್ರ ಸಿಗುತ್ತಿದೆಯಾದರೆ,
ಇದೋ, ಈಗ ಎರಡನ್ನೂ
ಒಟ್ಟಿಗೇ ಪಡೆಯಿರಿ!
ಹೊಸ ಸನ್‌ಗೋಲ್ಡ್ ಶುದ್ಧೀಕೃತ ಸೂರ್ಯಕಾಂತಿ ಎಣ್ಣೆ. ಪರಿಶುದ್ಧವಾದ, ಬಂಗಾರದಂತಹ ಸೂರ್ಯಕಾಂತಿಯ ಎಣ್ಣೆಯ ಉತ್ತಮಿಕೆಯೆಲ್ಲಾ ಅದರಲ್ಲಿದೆ. ಅಲ್ಲದೆ, ಅದರಲ್ಲಿ ರುಚಿಕರವಾದ ಹೆಚ್ಚಿನ ಅಂಶಗಳೂ ಇವೆ.
ಒಂದು ಹೆಚ್ಚಿನ ಅಂಶವೆಂದರೆ, ನಿಮ್ಮ ಕುಟುಂಬದ ಆರೋಗ್ಯಕ್ಕಾಗಿ ನೀವು ಸರಿಯಾದುದನ್ನೇ ಮಾಡುತ್ತಿದ್ದೀರಿ ಎಂಬ ದೃಢ ವಿಶ್ವಾಸ ನಿಮಗಿರುತ್ತದೆ.
ಸನ್‌ಗೋಲ್ಡ್‌ನ ಬೆಲೆಯೂ ಅಷ್ಟೆ, ಒಂದು ಪರಿಶುದ್ಧವಾದ, ಆರೋಗ್ಯಯುತವಾದ, ಆಗ್‌ಮಾರ್ಕ್‌ನಿಂದ ದೃಢೀಕೃತವಾದ ಸೂರ್ಯಕಾಂತಿ ಎಣ್ಣೆಗೆ ತೆರಬೇಕಾದ್ದು.
Sun gold
PURE REFINED SUNFLOWER OIL
ಕೆಬಿಎಫ್ ಮಾತ್ರ ನೀಡಬಲ್ಲ ಬೆಲೆಯಲ್ಲಿ.
ಇಂದೇ ಸನ್‌ಗೋಲ್ಡ್ ಉಪಯೋಗಿಸಲು ಪ್ರಾರಂ
ನೀವು ಒಂದು ಅಡಿಗೆ ಎಣ್ಣೆಯಲ್ಲಿ ಏನನ್ನೆಲ್ಲಾ ಪಡೆಯಲು ಬಯಸಿದ್ದೀರೋ ಅವುಗಳನ್ನೆಲ್ಲಾ ಅದರಿಂದ ಪಡೆಯಿರಿ.
KOF
ಅತ್ಯಂತ ಪರಿಶುದ್ಧವಾದ ಎಣ್ಣೆಗಳೆಲ್ಲಾ ಅತ್ಯಧಿಕ ವೆಚ್ಚಕರವಾಗಿಯೇ ಇರಬೇಕೆಂದೇನಿಲ್ಲ.